ಮಾನವಿಕ ಕರ್ನಾಟಕ

ಸಂಪುಟ ೩೪

ಸಂಚಿಕೆ ೧

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು ೫೭೦ ೦೦೬
೨೦೦೪

ಮಾನವಿಕ ಕರ್ಣಾಟಕ

ಸಂಪುಟ ೩೪, ಸಂಚಿಕೆ ೧

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು
೨೦೦೪

MANAVIKA KARNATAKA : A Kannada Quarterly of the University of Mysore, Volume 34, Number 1, Edited by Prof. Ambalike Hiriyanna and Dr. R. Ramakrishna, Published by the Director, Prasaranga, University of Mysore, Manasagangothri, Mysore - 570 006

ಪ್ರಧಾನ ಸಂಪಾದಕರು ಹಾಗೂ ಪ್ರಕಾಶಕರು

ಪ್ರೊ. ಲಕ್ಷ್ಮೀನಾರಾಯಣ ಅರೋರಾ

ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-೫೭೦ ೦೦೬

ಸಂಪಾದಕರು

ಪ್ರೊ. ಅಂಬಳಿಕೆ ಹಿರಿಯಣ್ಣ

ಡಾ. ಆರ್. ರಾಮಕೃಷ್ಣ

ಮುದ್ರಕರು

ಚಂದ್ರಶೇಖರ ದೊಡ್ಡಮನಿ

ನಿರ್ದೇಶಕರು

ವಿಶ್ವವಿದ್ಯಾನಿಲಯ ಮುದ್ರಣಾಲಯ, ಮೈಸೂರು-೫೭೦ ೦೦೬

ಪ್ರಕಾಶಕರ ಮಾತು

'ಮಾನವಿಕ ಕರ್ನಾಟಕ'ದ ೩೪ನೆಯ ಸಂಪುಟದ ಮೊದಲನೆಯ ಸಂಚಿಕೆ ಇದೀಗ ಓದುಗರ ಕೈ ಸೇರುತ್ತಿದೆ. ಮಾನವಿಕ ವಿಭಾಗದ ಕೆಲವಾರು ಕ್ಷೇತ್ರಗಳಿಗೆ ಸಂಬಂಧಪಟ್ಟ ೧೨ ಲೇಖನಗಳು ಈ ಹೊತ್ತಗೆಯಲ್ಲಿ ಅಡಕವಾಗಿವೆ. ಸಂಶೋಧನಾತ್ಮಕ ದೃಷ್ಟಿಯಿಂದ ಲೇಖನಗಳು ಜಿಜ್ಞಾಸು ಓದುಗರ ಕುತೂಹಲವನ್ನು ತಣಿಸುವಲ್ಲಿ ಸಾಕಷ್ಟು ನೆರವಾಗುತ್ತವೆ.

ವಿಶ್ವವಿದ್ಯಾನಿಲಯದಲ್ಲಿ ಮಾತ್ರವಲ್ಲದೆ ಹೊರಗಡೆಯ ಬಗೆಬಗೆಯ ಕ್ಷೇತ್ರಗಳಲ್ಲಿ ಕಾರ್ಯನಿರತರಾಗಿರುವ ವಿದ್ವಾಂಸರಿಗೆ ಮತ್ತು ಸಂಶೋಧಕರಿಗೆ 'ಮಾನವಿಕ ಕರ್ನಾಟಕ' ಒಂದು ಮಹತ್ವದ ವೇದಿಕೆಯನ್ನು ಕಲ್ಪಿಸುವಲ್ಲಿ ಸಮರ್ಥವಾಗಿದೆ. ಈ ಸದವಕಾಶವನ್ನು ಸಮರ್ಪಕವಾಗಿ ಓದುಗ ಬಂಧುಗಳು ಬಳಸಿಕೊಳ್ಳುತ್ತಾರೆಂದು ನಿರೀಕ್ಷಿಸಲಾಗಿದೆ.

ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಯವರಾದ ಪ್ರೊ. ಜೆ. ಶಶಿಧರ ಪ್ರಸಾದ್ ಅವರು ಹಾಗೂ ಕುಲಸಚಿವರಾದ ಶ್ರೀ ಎನ್. ಡಿ. ತಿವಾರಿಯವರು ಈ ಪತ್ರಿಕೆಗಳನ್ನು ಹೊರತರುವಲ್ಲಿ ವಿಶೇಷ ಆಸ್ಥೆ ವಹಿಸಿದ್ದಾರೆ. ಅವರಿಗೂ ಈ ಹೊತ್ತಗೆಯನ್ನು ಸಂಪಾದಿಸಿಕೊಟ್ಟಿರುವ ಪ್ರೊ. ಅಂಬಳಿಕೆ ಹಿರಿಯಣ್ಣ ಮತ್ತು ಡಾ. ಆರ್. ರಾಮಕೃಷ್ಣ ಅವರಿಗೂ ಲೇಖನಗಳನ್ನು ಬರೆದುಕೊಟ್ಟು, ಸಂಶೋಧನ ಕ್ಷೇತ್ರದಲ್ಲಿ ತಮ್ಮನ್ನು ವಿಶೇಷವಾಗಿ ತೊಡಗಿಸಿಕೊಂಡಿರುವ ಲೇಖಕ ಬಂಧುಗಳಿಗೂ ಈ ಹೊತ್ತಗೆಯ ಡಿ.ಟಿ.ಪಿ. ಕೆಲಸವನ್ನು ನಿರ್ವಹಿಸಿಕೊಟ್ಟಿರುವ 'ಸಮೀರ ಪ್ರಿಂಟರ್ಸ್'ನ ಶ್ರೀ ಸಿ. ಎಚ್. ಸತ್ಯನಾರಾಯಣ ಅವರಿಗೂ ಅಚ್ಚಿಸಿಕೊಟ್ಟಿರುವ ವಿಶ್ವವಿದ್ಯಾನಿಲಯದ ಮುದ್ರಣಾಲಯದ ನಿರ್ದೇಶಕರಿಗೂ ಹಾಗೂ ಸಿಬ್ಬಂದಿ ವರ್ಗದವರಿಗೂ ಎಂದಿನಂತೆ ಈ ಕೆಲಸ ಕಾರ್ಯಗಳಲ್ಲಿ ಸಹಕರಿಸುತ್ತಿರುವ ಪ್ರಸಾರಾಂಗದ ಉಪನಿರ್ದೇಶಕರಾದ ಶ್ರೀ ಬಾ.ವೇ. ಶ್ರೀಧರ ಮತ್ತು ಇತರ ಸಹೋದ್ಯೋಗಿಗಳಿಗೂ ನನ್ನ ಹಾರ್ದಿಕ ವಂದನೆಗಳು.

ಪ್ರೊ. ಲಕ್ಷ್ಮೀನಾರಾಯಣ ಅರೋರಾ
ಪ್ರಧಾನ ಸಂಪಾದಕರು

ಸಂಪಾದಕೀಯ

೨೦೦೪ನೆಯ ಸಾಲಿನ ಮೊದಲಸಂಚಿಕೆಯನ್ನು ನಿಮ್ಮ ಕೈಗಿಡಲು ಸಂತೋಷವಾಗುತ್ತದೆ. ಈ ಸಂಚಿಕೆಯ ಒಡಲೊಳಗೆ ಧರ್ಮ, ಇತಿಹಾಸ-ಪರಂಪರೆ, ತತ್ವಶಾಸ್ತ್ರ ಹಾಗೂ ಸಾಂಸ್ಕೃತಿಕ ಅಧ್ಯಯನಗಳಿಗೆ ಸಂಬಂಧಿಸಿದ ಅತ್ಯಂತ ವೈವಿಧ್ಯಪೂರ್ಣವೂ ಅಭ್ಯಾಸಪೂರ್ಣವೂ ಆದ ಬರಹಗಳು ಹುದುಗಿಕೊಂಡಿವೆ.

ಈ ಸಂಚಿಕೆಯ ಮೊದಲ ಬರಹ 'ಪ್ಲೇಟೊ' ಅವನ ಜೀವನ ವಿವರಗಳನ್ನು ನೀಡುವುದಕ್ಕಿಂತ ಜೀವನಶ್ರದ್ಧೆಗೆ ಹೆಚ್ಚು ಒತ್ತುಕೊಟ್ಟು ಬರೆದ ಬರವಣಿಗೆ. ಎನ್. ಬಾಲಸುಬ್ರಹ್ಮಣ್ಯ ಅವರು ಪಾಶ್ಚಾತ್ಯ ಸಂಸ್ಕೃತಿಗೆ ವೈಚಾರಿಕ ಸ್ಪರ್ಶ ನೀಡಿದ ಪ್ಲೇಟೊ ಒಬ್ಬ ಬುದ್ಧಿಜೀವಿಯಾಗಿ ಬೆಳೆಯಲು ಕಾರಣವಾದ ಸನ್ನಿವೇಶ, ಆತನ ರಾಜಕೀಯ ಪ್ರವೇಶದ ತೀವ್ರ ಹಂಬಲ, ಅವನ ಜೀವನ ವಿಧಾನದ ಮೇಲೆ ಅಗಾಧವಾದ ಪ್ರಭಾವ ಬೀರಿದ ಸೊಕ್ರೆಟೀಸ್ ತತ್ವ, ಆತ ಗಳಿಸಿಕೊಂಡಿದ್ದ ಅಂದಿನ ರಾಜಕೀಯ ಮತ್ತು ಸಾಮಾಜಿಕ ವಿದ್ಯಮಾನಗಳ ಅರಿವು, ತನ್ನ ಗುರು ಸೊಕ್ರೆಟೀಸನಿಗೆ ಒದಗಿದ ದುರ್ಗತಿಯಿಂದ ಬೇಸತ್ತು ಅವನು ದೇಶಾಟನೆ ಕೈಗೊಂಡದ್ದು, ಅಥೆನ್ಸಿನಲ್ಲಿ ಶಿಕ್ಷಣ ಶಾಲೆಯನ್ನು ಸ್ಥಾಪಿಸಿ ಬರವಣಿಗೆಯಲ್ಲಿ ತೊಡಗಿದ್ದು, ಅವನ ಧರ್ಮರಾಜ್ಯದ ಕಲ್ಪನೆ – ಇವೇ ಮುಂತಾದ ಸಂಗತಿಗಳನ್ನು ಕ್ರೋಢೀಕರಿಸಿ ಪ್ಲೇಟೊ ಕುರಿತ ಒಂದು ಸಮಗ್ರ ಚಿತ್ರವನ್ನು ಕಟ್ಟಿಕೊಟ್ಟಿದ್ದಾರೆ. ಪಾಶ್ಚಾತ್ಯ ಶಾಸ್ತ್ರ ಸಾಹಿತ್ಯ ಮತ್ತು ಚಿಂತನೆಗಳ ಮೇಲೆ ಪ್ಲೇಟೊವಿನ ಪ್ರಭಾವ ಗಾಢವಾದುದು ಎಂಬ ದೃಷ್ಟಿಯಿಂದ ನೋಡಿದಾಗ ಈ ಬರಹದ ಮಹತ್ವ ಎಷ್ಟೆಂಬುದು ನಮ್ಮ ಅರಿವಿಗೆ ಬರುತ್ತದೆ. ಪ್ಲೇಟೊವಿನ ಸಂವಾದಗಳು ಗಳಿಸಿರುವ ವ್ಯಾಪಕ ಜನಪ್ರಿಯತೆಯನ್ನು ಯೂರೋಪಿನ ಇತರ ಯಾವ ಶಾಸ್ತ್ರಗ್ರಂಥಗಳೂ ಸರಿಗಟ್ಟಲಿಲ್ಲ ಎನ್ನುವುದು ಗಮನಾರ್ಹ.

ಎಚ್. ಜಯಕುಮಾರ್ ಅವರ 'ಭಾರತದಲ್ಲಿ ಸಮ್ಮಿಶ್ರ ಸರ್ಕಾರ ಮತ್ತು ಅದರ ಅವಶ್ಯಕತೆ' ಬರಹ ಸದ್ಯದ ಸಂದರ್ಭದಲ್ಲಿ ಎಲ್ಲರ ಗಮನ ಸೆಳೆದುಕೊಳ್ಳುತ್ತದೆ. ಪ್ರಸಕ್ತ ಕಾಲದ ಹೊಂದಾಣಿಕೆ ಸರ್ಕಾರ ಹಾಗೂ ಸಮ್ಮಿಶ್ರ ಸರ್ಕಾರ ಪರಿಕಲ್ಪನೆಗಳ ಬಗೆಗೆ ಸ್ಪಷ್ಟ ಅರಿವು ಮೂಡಿಸುವ ಯತ್ನ ಇಲ್ಲಿದೆ. ಎಲ್ಲಕ್ಕಿಂತ ಮುಖ್ಯವಾಗಿ,. ಭಾರತದ ಸದೃಢತೆಗಾಗಿ ಹಾಗೂ ಸ್ಥಿರತೆಗಾಗಿ ಪರಿಶ್ರಮಪೂರ್ವಕವಾಗಿ ರಾಜಕೀಯ ಪಕ್ಷಗಳು ಕೆಲಸ ಮಾಡಬೇಕಾದ ಅಗತ್ಯವನ್ನು ಇದು ಒತ್ತಿ ಹೇಳುತ್ತದೆ.

ಗೀತಾ ನಾವಲ್ ಅವರ "ವಾಲ್ಮೀಕಿ ರಾಮಾಯಣದಲ್ಲಿ ಸಂಗೀತ ರಸಾಭಿಜ್ಞತೆ" ಲೇಖನ ವಾಲ್ಮೀಕಿ ರಾಮಾಯಣ ಕಥಾಸಾಗರದಲ್ಲಿ ಅವಿಚ್ಛಿನ್ನವಾಗಿ ಬೆರೆತುಹೋದ ನಾದಮಯ ಗ್ರಹಿಕೆಗಳನ್ನು ಹಾಗೂ ಅದು ಒದಗಿಸುವ ರಸಾಭಿಜ್ಞತೆಯನ್ನು ಕಂಡುಕೊಳ್ಳುವ ಪ್ರಯತ್ನ ಮಾಡುತ್ತದೆ.

'ಜನಪದ ಮಹಾಭಾರತ ಮತ್ತು ಪರಂಪರಾಗತ ಮೌಲ್ಯಗಳ ಸ್ಥಿರೀಕರಣ' ಎಂಬ ಬರಹ ಕಥಾವಸ್ತು, ಪಾತ್ರ, ಶೈಲಿ ಎಲ್ಲದರಲ್ಲಿಯೂ ಭಿನ್ನ ಸ್ವರೂಪ ಪಡೆದಿರುವ ಜನಪದ

ಮಹಾಭಾರತದ ಲೋ[illegible]ಸವನ್ನು ಅನಾವರಣಗೊಳಿಸುವ ಯತ್ನಮಾಡುತ್ತದೆ. ಜನಪದ ಮಹಾಭಾರತದ ಕಥಾನಕಗಳಲ್ಲಿ ಗುಪ್ತಗಾಮಿನಿಯಾಗಿ ಪ್ರವಹಿಸುವ ರೂಢಿಗತ ಮೌಲ್ಯಗಳನ್ನು ಇಲ್ಲಿ ವಿಶೇಷ ಪರಿಶೀಲನೆಗೆ ಒಡ್ಡಿದ್ದು ಕರಾವಳಿ ಕರ್ನಾಟಕದ ಜನತೆ ಒಪ್ಪಿ ಅಂಗೀಕರಿಸಿರುವ ಮೌಲ್ಯಗಳ ಸ್ವರೂಪವನ್ನು ತಿಳಿಸಿಕೊಡಲಾಗಿದೆ.

ಆರ್. ರಾಮಕೃಷ್ಣ ಅವರ 'ಮೇಘಾಲಯದ ಖಾಸಿ ಭಾಷೆ: ತೆಕ್ಕೆಗೆ ದಕ್ಕಿದ ವಿಚಾರಗಳು' ಲೇಖನ ಮೇಘಾಲಯದಲ್ಲಿ ಜೀವಂತವಾಗಿರುವ ಖಾಸಿ ಭಾಷೆಯ ಧ್ವನಿಮಾ ವ್ಯವಸ್ಥೆ, ಆಕೃತಿಮಾ ವ್ಯವಸ್ಥೆ ಮತ್ತು ವಾಕ್ಯ ವ್ಯವಸ್ಥೆಗಳನ್ನು ಇನ್ನಿತರ ಭಾಷೆಗಳಲ್ಲಿಯ ವ್ಯವಸ್ಥೆಗಳಿಗೆ ಹೋಲಿಸಿ ನೋಡಿದಾಗ ಹಲವಾರು ಸಮಾನ ಅಂಶಗಳು ಕಾಣಸಿಗುವುದನ್ನು ಎತ್ತಿ ಹೇಳುವ ಪ್ರಯತ್ನ ಮಾಡುತ್ತದೆ. ಖಾಸಿ ಭಾಷಾವರ್ಗದ ಹಲವಾರು ಪ್ರಭೇದಗಳು ಹೊಸ ವಿಚಾರಗಳನ್ನು ಪ್ರಕಟಪಡಿಸುವುದನ್ನು ಲಕ್ಷಿಸಿರುವ ಲೇಖಕರು ಈ ಪ್ರಭೇದಗಳ ಐತಿಹಾಸಿಕ, ತೌಲನಿಕ ಹಾಗೂ ವರ್ಣನಾತ್ಮಕ ಅಧ್ಯಯನಗಳು ಹೆಚ್ಚಾಗಿ ನಡೆಯಬೇಕಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಚಲನಚಿತ್ರ ಸಾಹಿತ್ಯವನ್ನು ಬಲ್ಲ ಯಾರಿಗೂ ತಿಳಿದಿರುವಂತೆ ನೂರಾರು ಬಗೆಯ ಜನಪದ ಗೀತೆಗಳನ್ನು ಚಲನಚಿತ್ರಗಳಲ್ಲಿ ಸಂದರ್ಭಕ್ಕೆ ತಕ್ಕಂತೆ ಬಳಸಿಕೊಳ್ಳಲಾಗಿದೆ. ಅಕ್ಕಮಹಾದೇವಿಯವರ 'ಕನ್ನಡ ಚಲನಚಿತ್ರಗಳಲ್ಲಿ ಜನಪದ ಸಾಹಿತ್ಯ' ಲೇಖನ ಚಲನಚಿತ್ರ ಎಂಬ ಯಂತ್ರತಂತ್ರ ಮಾಧ್ಯಮಗಳ ಸಂಗಮ ಜನರಲ್ಲೇ ಹುಟ್ಟಿ ಬೆಳೆಯುವ ಸಾಹಿತ್ಯ ಮಾಧ್ಯಮವನ್ನು ಹೇಗೆ ಬಳಸಿಕೊಳ್ಳುತ್ತದೆ ಎಂಬುದರ ಚಿತ್ರವನ್ನು ಕಟ್ಟಿಕೊಡುವ ಪ್ರಯತ್ನ ಮಾಡುತ್ತದೆ.

ಪ್ರತಿಯೊಂದು ಸಮಾಜ-ಸಂಸ್ಕೃತಿ ತನ್ನನ್ನು ಪ್ರೇರೇಪಿಸುವ, ಚೈತನ್ಯಶೀಲಗೊಳಿಸುವ ಕೆಲವು ಶ್ರದ್ಧಾ ಕೇಂದ್ರಗಳನ್ನು ಹೊಂದಿರುವುದು ಸ್ವಾಭಾವಿಕ. ಅವು ಆ ಜೀವನದ ಚಿಂತನೆಯನ್ನು ರೂಪಿಸಿ ಜೀವನ ದೃಷ್ಟಿಕೋನವನ್ನು ಕಟ್ಟಿಕೊಟ್ಟಿರುತ್ತವೆ. ಬಿ.ವಿ. ವಸಂತಕುಮಾರ್ ಅವರ 'ಜನಪದ ಶ್ರದ್ಧಾ ಕೇಂದ್ರಗಳು' ಲೇಖನದಲ್ಲಿ ಕನ್ನಡದ ಜನಪದ ತ್ರಿಪದಿಗಳಲ್ಲಿ ಕಂಡುಬರುವ ಕೆಲವು ಶ್ರದ್ಧಾಕೇಂದ್ರಗಳನ್ನು ಗ್ರಹಿಸುವ ಪ್ರಯತ್ನವಿದೆ. ಲೇಖಕರು ಬುದ್ಧಿಯನ್ನು ಮಾನವೀಯಗೊಳಿಸುವ, ಜೀವಪೂರ್ಣವಾಗಿಸುವ ಶ್ರದ್ಧೆಯ ಉಸಿರು ಬೇಕು ಎಂದು ಪ್ರತಿಪಾದಿಸಿದ್ದಾರೆ.

ಎಚ್.ಟಿ. ಸರೋಜ ಅವರ 'ಬೇಲೂರಿನ ಸ್ಥಳನಾಮ ಐತಿಹ್ಯಗಳು' ಲೇಖನ ಐತಿಹಾಸಿಕ ಮಹತ್ವ ಪಡೆದಿರುವ ಬೇಲೂರಿನ ಬಗೆಗೆ ಲಭ್ಯವಿರುವ ಸ್ಥಳ ಪುರಾಣಗಳನ್ನಾಧರಿಸಿ ಆ ಸ್ಥಳದ ಇತಿಹಾಸವನ್ನು ಪುನಾರಚಿಸುವ ಅಗತ್ಯವನ್ನು ಮನಗಾಣಿಸಿಕೊಡುತ್ತದೆ. ಅಲ್ಲದೆ ಅಲ್ಲಿನ ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳನ್ನು ತಿಳಿಯಲು ಅನುಕೂಲ ಮಾಡಿಕೊಡುತ್ತದೆ. ಒಟ್ಟಾರೆಯಾಗಿ ಈ ರೀತಿಯ ಸ್ಥಳನಾಮ ಐತಿಹ್ಯಗಳ ಅಧ್ಯಯನದಿಂದ ರಾಜಕೀಯ ಗರ್ಭದೊಳಗೆ ಹುದುಗಿಹೋದ ಮಹತ್ವದ ಕೆಲವು ವಿಷಯಗಳನ್ನು ಬೆಳಕಿಗೆ ತರಬಹುದಾಗಿದೆ.

'ಕನ್ನಡ ವ್ಯಾಕರಣ ಕ್ಷೇತ್ರಕ್ಕೆ ಪ್ರಾಚೀನ ಕನ್ನಡ ವೈಯ್ಯಾಕರಣರ ಕೊಡುಗೆಗಳು' ಎಂಬ

ಲೇಖನದಲ್ಲಿ ಬಿ.ಕೆ. ಸುವರ್ಣಾದೇವಿಯವರು ಕನ್ನಡ ವ್ಯಾಕರಣ ಕ್ಷೇತ್ರಕ್ಕೆ ಪ್ರಾಚೀನ ಕನ್ನಡ ವೈಯ್ಯಾಕರಣ ಮುನಿತ್ರಯರೆಂದೇ ಖ್ಯಾತನಾಮರಾಗಿರುವ ನಾಗವರ್ಮ, ಕೇಶಿರಾಜ ಮತ್ತು ಭಟ್ಟಾಕಳಂಕ ಅವರ ಕೊಡುಗೆಗಳನ್ನು ತಿಳಿಸಿಕೊಡಲಾಗಿದೆ. ಪ್ರಾಚೀನ ಕನ್ನಡ ವ್ಯಾಕರಣ ಗ್ರಂಥಗಳು ಪಾಣಿನಿಯ ವ್ಯಾಕರಣ ಪದ್ಧತಿಗಿಂತ ಭಿನ್ನವಾಗಿರುವ ಕಾರಣದಿಂದ ಈ ಮುನಿತ್ರಯರ ಕೊಡುಗೆಗಳು ಲಕ್ಷ್ಯಾರ್ಹ ಎಂದು ಲೇಖಕಿ ಅಭಿಪ್ರಾಯಪಟ್ಟಿರುವುದು ಸಮರ್ಥನೀಯ.

ಎನ್. ಸರಸ್ವತಿ ಅವರ 'ಒಡೆಯರ ಕಾಲದಲ್ಲಿ ಧರ್ಮ' ಎಂಬ ಬರಹ ವೈವಿಧ್ಯಮಯ ಧರ್ಮಗಳನ್ನು ಅನುಸರಿಸಿದ ಮೈಸೂರಿನ ಅರಸರ ಕಾಲದ ಶಾಂತಿ-ಸೌಹಾರ್ದದ ಜೀವನದ ಬಗೆಗೆ ತಿಳಿವಳಿಕೆ ಮೂಡಿಸುವ ಯತ್ನ ಮಾಡುತ್ತದೆ. ಮೈಸೂರು ಒಡೆಯರು ಹಲವಾರು ದೇವಾಲಯಗಳನ್ನು ನಿರ್ಮಿಸಿ ಅವನ್ನು ಪೋಷಿಸಿದ್ದಲ್ಲದೆ ಜನತೆಯ ಎಲ್ಲ ವರ್ಗದ ಎಲ್ಲ ಜನರ ಭಾವನೆಗಳನ್ನು ಗೌರವಿಸುತ್ತಿದ್ದರು. ಇದು ಸಮಾಜದಲ್ಲಿ ಶಕ್ತಿಸಮತೋಲನವನ್ನು ಕಾಯ್ದುಕೊಳ್ಳಲು ಹೇಗೆ ನೆರವಾಗುತ್ತಿತ್ತು ಹಾಗೂ ಹೇಗೆ ಅದು ಸಾಂಪ್ರದಾಯಿಕ ರಾಜನೀತಿಯ ಪಾಲನೆಯಾಗಿತ್ತು ಎಂಬುದನ್ನು ಸ್ಥೂಲವಾಗಿ ವಿವೇಚಿಸುತ್ತದೆ.

ಅದಮ್ಯ ಹೋರಾಟಗಾರರಾಗಿ ವ್ಯಕ್ತಿಸ್ವಾತಂತ್ರ್ಯದ ಉಳಿವಿಗಾಗಿ ಮತ್ತು ಮನುಕುಲದ ಶ್ರೇಯಸ್ಸಿಗಾಗಿ ಕೊನೆತನಕ ಹೋರಾಡಿದ ಮಹಾವ್ಯಕ್ತಿ ಬರ್ಟ್ರೆಂಡ್ ರಸೆಲ್. ಆ ಮಹಾಚೇತನದ ಜೀವನ-ವ್ಯಕ್ತಿತ್ವ ವಿವರಗಳನ್ನು ಸಂಗ್ರಹವಾಗಿ ಕಟ್ಟಿಕೊಡುವ ಒಂದು ಒಳ್ಳೆಯ ಪ್ರಯತ್ನವನ್ನು ಲೇಖಕ ಎಂ.ಪಿ. ರಮೇಶ್ 'ಬರ್ಟ್ರೆಂಡ್ ರಸೆಲ್' ಎಂಬ ಲೇಖನದಲ್ಲಿ ಮಾಡಿರುವುದು ಶ್ಲಾಘ್ಯಾರ್ಹ.

ಎಂ. ಅನಸೂಯ ಅವರ "ಪಾಶ್ಚಾತ್ಯ ದಿಗ್ಗಜಗಳ ದೃಷ್ಟಿಯಲ್ಲಿ ಸತ್ಯಾನ್ವೇಷಣೆ" ಲೇಖನ ತರ್ಕಶಾಸ್ತ್ರ ಸಂಬಂಧಿತವಾಗಿದ್ದು ಶ್ರೇಷ್ಠ ತತ್ವಜ್ಞಾನಿಗಳಾದ ಹೆಗಲ್, ವೈಟ್‌ಹೆಡ್ ಮುಂತಾದವರ ಚಿಂತನೆಗಳ ಅವಲೋಕನ ಮಾಡುತ್ತದೆ. ವಾಸ್ತವವಾಗಿ, ಪಾಶ್ಚಾತ್ಯರು ಸತ್ಯದ ಅನ್ವೇಷಣೆಯಲ್ಲಿ ಅನುಸರಿಸುವ ಮಾರ್ಗ ಪೌರ್ವಾತ್ಯಕ್ಕಿಂತಲೂ ಭಿನ್ನ. ಪ್ರಕೃತ ಲೇಖನದಲ್ಲಿ ತರ್ಕಸಮ್ಮತವಾದಕ್ಕೆ ಹೆಸರಾದ ಪಾಶ್ಚಾತ್ಯರ ಚಿಂತನಕ್ರಮವನ್ನು ಪರಿಚಯಿಸುವ ಯತ್ನವಿದೆ.

ಒಟ್ಟಿನಲ್ಲಿ ಈ ಸಂಚಿಕೆಯಲ್ಲಿ ಸೇರ್ಪಡೆಗೊಂಡಿರುವ ಬಹುತೇಕ ಎಲ್ಲ ಲೇಖನಗಳು ಅಭ್ಯಾಸಪೂರ್ಣವಾಗಿದ್ದು ಅಧ್ಯಯನ ಯೋಗ್ಯವಾಗಿವೆ. ಇವು ಸಾಮಾಜಿಕ ವಿಜ್ಞಾನ ಕ್ಷೇತ್ರದ ಆಸಕ್ತರ ಅರಿವನ್ನು ವಿಸ್ತರಿಸುವ ಪ್ರಯತ್ನ ಮಾಡುವಂತಾದರೆ ನಮ್ಮ ಪ್ರಯತ್ನ ಸಾರ್ಥಕವಾದಂತೆಯೇ ಸರಿ.

ಅಂಬಳಿಕೆ ಹಿರಿಯಣ್ಣ
ಆರ್. ರಾಮಕೃಷ್ಣ

ಪರಿವಿಡಿ

ಪ್ಲೇಟೋ

ಎನ್. ಬಾಲಸುಬ್ರಹ್ಮಣ್ಯ

ಪಾಶ್ಚಾತ್ಯ ಸಂಸ್ಕೃತಿಯನ್ನು ಗ್ರೀಕರ ವೈಚಾರಿಕತೆ ಮತ್ತು ಯೆಹೂದ್ಯರ ಧರ್ಮಶ್ರದ್ಧೆಗಳ ಸಂಯೋಗದ ಫಲ ಎನ್ನಲಾಗಿದೆ. ಮೊದಲನೆಯದರ ಬಹುಪಾಲು ಪ್ಲೇಟೋನ ಕೊಡುಗೆ. ಪ್ರಾಚೀನ ಗ್ರೀಕರು ಬದುಕಿನ ವಿವಿಧ ಮುಖಗಳನ್ನು ಪರೀಕ್ಷಿಸಿದರು, ಅದರ ಅನೇಕ ಸಮಸ್ಯೆಗಳಿಗೆ ಉತ್ತರಗಳನ್ನು ಒದಗಿಸಿದರು. ಆದರೆ ಅವರ ಮಹತ್ವದ ಕೊಡುಗೆ ಈ ಉತ್ತರಗಳಲ್ಲ, ಅದು ಅವರು ಎತ್ತಿದ ಪ್ರಶ್ನೆಗಳು. ಯಾವುದೇ ವಿಷಯದ ಬಗ್ಗೆ ಸರಿಯಾದ ಪ್ರಶ್ನೆಗಳನ್ನು ಕೇಳುವ ಕಲೆಯನ್ನು ಜನಕ್ಕೆ ಕಲಿಸಿದವರೇ ಅವರು. ಪಾಶ್ಚಾತ್ಯರ ಬೌದ್ಧಿಕ ಮತ್ತು ಭೌತಿಕ ಪ್ರಗತಿಗೆ ಮುಖ್ಯ ಕಾರಣವೂ ಈ ಪ್ರಾಶ್ನಿಕ ವಿಧಾನವೇ. ಅದನ್ನು ಅನನ್ಯಾದೃಶವಾಗಿ ಬೋಧಿಸಿದವನು, ಪ್ರಾಯಶಃ ಕಂಡುಹಿಡಿದವನು ಎನ್ನಬಹುದೇನೋ, ಐತಿಹಾಸಿಕ ಸೊಕ್ರೆಟಿಸ್ ಅಥವಾ ಪ್ಲೇಟೋ ಚಿತ್ರಿಸಿದ ಸೊಕ್ರೆಟಿಸ್.

ಪ್ಲೇಟೋ ಹುಟ್ಟಿದ್ದು ಕ್ರಿ.ಪೂ. ೪೨೯/೪೨೮ ರಲ್ಲಿ. ಅವನ ತಂದೆಯ ಹೆಸರು ಅರಿಸ್ಟೊನ್; ತಾಯಿಯದು ಪೆರಿಕ್ತಿಯೊನೆ. ಅವನಿಗೆ ಇಬ್ಬರು ಅಣ್ಣಂದಿರಿದ್ದರು. ಅವನ ತಂದೆತಾಯಿ ಅವನಿಗೆ ಇಟ್ಟ ಹೆಸರು ಅರಿಸ್ಟೊಕ್ಲೆಸ್. ಆದರೆ ಅವನ ಭುಜಕಟ್ಟು ಅಗಲವಾಗಿದ್ದುದರಿಂದ ಜನ ಅವನನ್ನು ಪ್ಲಾತೋನ್ (ವಿಶಾಲಭುಜ) ಎಂದು ಕರೆಯುತ್ತಿದ್ದರು. ಮುಂದೆ ಆ ಹೆಸರೇ ಅವನಿಗೆ ಶಾಶ್ವತವಾಯಿತು.

ಹುಟ್ಟಿನಿಂದಲೇ ಪ್ಲೇಟೋ ಅದೃಷ್ಟವಂತ. ಅವನ ಮನೆತನ ಅಥೆನ್ಸಿನ ಪ್ರಾಚೀನ ಹಾಗೂ ಶ್ರೀಮಂತ ಮನೆತನಗಳಲ್ಲಿ ಒಂದಾಗಿತ್ತು. ತಂದೆಯ ಕಡೆ ಅವನ ಚಿಕ್ಕಪ್ಪ, ಚಿಕ್ಕ ತಾತಂದಿರು ಅಥೆನ್ಸಿನ ಶ್ರೀಮಂತಕೂಟದ ರಾಜಮಂಡಲಿಗೆ ಸೇರಿದ್ದರು. ತಾಯಿಯ ಕಡೆ ಅವನ ಮುತ್ತಜ್ಜನ ಮುತ್ತಜ್ಜ ಅಥೆನ್ಸಿಗೆ ಕಾನೂನು ಕಟ್ಟಳೆಗಳನ್ನು ರಚಿಸಿಕೊಟ್ಟಿದ್ದ ಸೊಲೊನನ ಸಂಬಂಧಿಯಾಗಿದ್ದ. ಪ್ಲೇಟೋ ಚಿಕ್ಕವನಾಗಿದ್ದಾಗಲೇ ಅವನ ತಂದೆ ತೀರಿಕೊಂಡ. ಅವನ ತಾಯಿ ಪುರಿಲಾಂಪಸ್ ಎನ್ನುವನನ್ನು ಮರುಮದುವೆಯಾದಳು. ಅವನು ಅಥೆನ್ಸಿನ ಮಹಾನಾಯಕ ಪೆರಿಕ್ಲಿಸನ ಆಪ್ತಸ್ನೇಹಿತ ಮತ್ತು ನಿಷ್ಠ ಬೆಂಬಲಿಗನಾಗಿದ್ದ. ಹೀಗೆ ಪ್ಲೇಟೋ ವಿವಿಧ ರಾಜಕೀಯ ಸಂಬಂಧಗಳಿಂದ ಕೂಡಿದ್ದ ಪ್ರಸಿದ್ಧ ಮನೆತನಕ್ಕೆ ಸೇರಿದವನಾಗಿದ್ದ.

ಪ್ಲೇಟೋನ ಬಾಲ್ಯದ ದಿನಗಳ ಬಗ್ಗೆ ಹೆಚ್ಚೇನೂ ತಿಳಿದುಬಂದಿಲ್ಲ. ಅವನ ವಿದ್ಯಾಭ್ಯಾಸ ಅಂದು ರೂಢಿಯಲ್ಲಿದ್ದ ಶಿಕ್ಷಣ ಪದ್ಧತಿಯ ಪ್ರಕಾರ ಜರುಗಿದ್ದಿರಬಹುದು.

ಅದರಲ್ಲಿ ಓದು, ಬರಹ, ಕಾವ್ಯ ರಚನೆ, ಗಣಿತ, ಸಂಗೀತ ಮತ್ತು ದೈಹಿಕ ವ್ಯಾಯಾಮಗಳು ಸೇರಿದ್ದವು. ಯೌವ್ವನದಲ್ಲಿ ಕವನಗಳನ್ನು ಬರೆದಿದ್ದನಂತೆ. ಅಂದಿನ ರಾಜಕೀಯ ಆಗುಹೋಗುಗಳನ್ನು ಆಸಕ್ತಿಯಿಂದ ಗಮನಿಸುತ್ತಿದ್ದ. ಅವುಗಳಲ್ಲಿ ಭಾಗವಹಿಸುವ ಮನಸ್ಸು, ಅದಕ್ಕೆ ಅವಕಾಶ ಮತ್ತು ಅನುಕೂಲಗಳು ಇದ್ದವು.

ಪ್ಲೇಟೋ ಬೆಳೆದುದು ಒಂದು ಯುದ್ಧದ ವಾತಾವರಣದಲ್ಲಿ. ಅಥೆನ್ಸ್ ತನ್ನ ಒಕ್ಕೂಟದ ಇತರ ರಾಜ್ಯಗಳೊಂದಿಗೆ ಮುಖಂಡತ್ವಕ್ಕಾಗಿ ಹೋರಾಟ ನಡೆಸಿತ್ತು. ಅದೇ ಪೊಲೆಪಿನ್ನಿಸಿಯದ ಯುದ್ಧ. ಅದು ಪ್ಲೇಟೋ ಹುಟ್ಟುವುದಕ್ಕೆ ಮೂರು ವರ್ಷ ಮೊದಲು ಪ್ರಾರಂಭವಾಗಿತ್ತು; ಮುಗಿದಾಗ ಅವನಿಗೆ ೨೨ ವರ್ಷ ವರ್ಷವಾಗಿತ್ತು. ಆರಂಭದಲ್ಲಿ ನಾಯಕಸ್ಥಾನದಲ್ಲಿದ್ದ ಅಥೆನ್ಸ್ ಕೊನೆಯಲ್ಲಿ ಭಾರಿ ಸೋಲು ಅನುಭವಿಸಿತ್ತು. ಯುದ್ಧದ ಸ್ಥಿತಿಗತಿಗಳ ಏರುಪೇರುಗಳಿಗೆ ಅನುಸಾರವಾಗಿ ರಾಜಕೀಯ ಪರಿಸ್ಥಿತಿಗಳಲ್ಲಿಯೂ ಬದಲಾವಣೆಗಳು ಆಗತೊಡಗಿದವು. ಶ್ರೀಮಂತ ವರ್ಗದಲ್ಲಿ ಹುಟ್ಟಿದ್ದರೂ ಜನಸಾಮಾನ್ಯರ ಬೆಂಬಲ ಗಳಿಸಿದ್ದ ಪೆರಿಕ್ಲಿಸ್ ಮೊದಲಲ್ಲಿ ನಾಯಕತ್ವ ವಹಿಸಿದ್ದ. ಅವನು ಸತ್ತ ತರುವಾಯ ಪ್ರಜಾಸಾಮಾನ್ಯರ ಪಕ್ಷದವರು ಅಧಿಕಾರಕ್ಕೆ ಬಂದರು. ಅನಂತರ ಶ್ರೀಮಂತರ ಪಕ್ಷ ಆಡಳಿತ ವಹಿಸಿಕೊಂಡಿತು. ಕೊನೆಯಲ್ಲಿ ಪ್ರಜಾಪಕ್ಷದವರೇ ಮತ್ತೆ ಅಧಿಕಾರಕ್ಕೆ ಬಂದರು.

ಪ್ಲೇಟೋ ಈ ಆಗುಹೋಗುಗಳನ್ನು ಆಸಕ್ತಿಯಿಂದ ಗಮನಿಸುತ್ತಿದ್ದ. ವಯಸ್ಸಿಗೆ ಬಂದ ಮೇಲೆ ರಾಜಕೀಯ ಜೀವನವನ್ನು ಪ್ರವೇಶಿಸುವ ಮನಸ್ಸನ್ನೂ ಮಾಡಿದ್ದ. ಅದಕ್ಕೆ ಅನುಕೂಲವಾದ ಅವಕಾಶವೂ ಒದಗಿಬಂದಿತ್ತು. ಅಂದಿನ ಶ್ರೀಮಂತಪಕ್ಷದ ಅನೇಕ ಮುಖಂಡರು ಅವನ ಸ್ನೇಹಿತರೂ ಬಂಧುಗಳೂ ಆಗಿದ್ದರು. ರಾಜಕೀಯವನ್ನು ಪ್ರವೇಶಿಸುವಂತೆ ಅವನನ್ನು ಆಹ್ವಾನಿಸಿಯೂ ಇದ್ದರು. ಹಾಗೆ ಮಾಡುವ ಮೊದಲು ಅವನು ಅವರ ಚಟುವಟಿಕೆಗಳನ್ನು ಎಚ್ಚರದಿಂದ ಪರಿಶೀಲಿಸಿದ. ಅವರು ಸಮಾಜವನ್ನು ಸುಧಾರಣೆಗೊಳಿಸಿ ನ್ಯಾಯದಿಂದ ಆಳುತ್ತಾರೆಂದು ನಿರೀಕ್ಷಿಸಿದ. ಆದರೆ ಅವರು ಅಧಿಕಾರವನ್ನು ಸ್ವಾರ್ಥ, ದ್ವೇಷ, ಪ್ರಭಾವಗಳಿಗಾಗಿ ಬಳಸಿಕೊಳ್ಳುತ್ತಿದ್ದುದು ಕಂಡುಬಂದಿತು. ನಿರಪರಾಧಿಯಾಗಿದ್ದ ವ್ಯಕ್ತಿಯೊಬ್ಬನನ್ನು ಬಂಧಿಸಿ ತಂದು ಮರಣದಂಡನೆಗೆ ಗುರಿಪಡಿಸುವಂತೆ ಅವರು ನ್ಯಾಯನೀತಿಗಳಿಗೆ ಪ್ರಸಿದ್ಧನಾಗಿದ್ದ ಸೊಕ್ರೆಟಿಸನಿಗೆ ಆಜ್ಞೆ ಮಾಡಿದ್ದು ಅದಕ್ಕೊಂದು ನಿದರ್ಶನವಾಗಿತ್ತು. ಈ ಅನ್ಯಾಯದಲ್ಲಿ ಭಾಗಿಯಾಗಲು ಸೊಕ್ರೆಟಿಸನು ಒಪ್ಪದೆ ಅದಕ್ಕಾಗಿ ಯಾವುದೇ ಶಿಕ್ಷೆಯನ್ನು ಅನುಭವಿಸಲು ಸಿದ್ಧನಾದ. ದೈವವಶಾತ್ ಈ ಗಂಡಾಂತರ ತಪ್ಪಿತು. ಇದರಿಂದ ಹೇಸಿದ ಪ್ಲೇಟೋ ರಾಜಕೀಯದಿಂದ ಹಿಂಜರಿದ. ಸ್ವಲ್ಪಕಾಲದಲ್ಲೇ ಆಡಳಿತ ವರ್ಗ ಬದಲಾಯಿತು. ಶ್ರೀಮಂತರ ಪಕ್ಷ ಉರುಳಿ ಮತ್ತೆ ಪ್ರಜಾಪಕ್ಷ ಅಧಿಕಾರಕ್ಕೆ ಬಂದಿತು. ಹೆಚ್ಚು ಉತ್ಸಾಹದಿಂದ ಅಲ್ಲದಿದ್ದರೂ ಈಗ ಪ್ಲೇಟೋಗೆ ಮತ್ತೆ ರಾಜಕೀಯವನ್ನು ಪ್ರವೇಶಿಸುವ ಮನಸ್ಸಾಯಿತು. ಹೊಸ ಆಡಳಿತಗಾರರು ಹಿಂದಿನವರಿಗಿಂತ ಒಟ್ಟಿನ ಮೇಲೆ ಉತ್ತಮರಾಗಿದ್ದರೂ ಪ್ಲೇಟೋ ನಿರೀಕ್ಷಿಸಿದಷ್ಟು ವಿವೇಕಿಗಳೂ ನ್ಯಾಯಪಕ್ಷಪಾತಿಗಳೂ ಆಗಿರಲಿಲ್ಲ. ಅಂದಿನ ಗ್ರೀಸಿನ ಜನಜೀವನದಲ್ಲಿ ಅತ್ಯಂತ ಮೇಧಾವಿಯೂ ಸಜ್ಜನನೂ ದೇಶಪ್ರೇಮಿಯೂ ಆಗಿದ್ದ ಸೊಕ್ರೆಟಿಸನ ಸಾರ್ವಜನಿಕ ವಿಚಾರಣೆಯಲ್ಲಿ ಇದು

ಸುಸ್ಪಷ್ಟವಾಯಿತು. ಇದು ಪ್ಲೇಟೋಗೆ ಅತ್ಯಂತ ನಿರಾಸೆಯಷ್ಟನ್ನೇ ಉಂಟುಮಾಡದೆ ಅವನು ರಾಜಕೀಯ ಜೀವನವನ್ನೇ ತೊರೆಯುವಂತೆ ಮಾಡಿತು.

ಪ್ಲೇಟೋ ಸೊಕ್ರೆಟಿಸನಿಗಿಂತ ನಲವತ್ತು ವರ್ಷ ಚಿಕ್ಕವ. ಯುವಕನಾಗಿದ್ದಾಗ ಅವನನ್ನು ನೋಡಿದ್ದ, ಕೇಳಿಯೂ ಇದ್ದ. ಆಗಾಗ ತಮ್ಮ ಮನೆಗೆ ಬರುತ್ತಿದ್ದ ಒಬ್ಬ ಚಿರಪರಿಚಿತನಂತೆ ಅವನನ್ನು ಚಿತ್ರಿಸಿದ್ದಾನೆ. ಅನೇಕ ಸಲ ಅವನನ್ನು ಸುತ್ತುವರೆದಿದ್ದ ಗುಂಪಿನಲ್ಲಿರುತ್ತಿದ್ದ. ಗಹನವಾದ ಅವನ ಚಿಂತನೆ, ನೇರ ನಡೆನುಡಿ, ಮಾತಿನ ಮೋಡಿಗಳಿಗೆ ಮಾರುಹೋಗಿದ್ದ. ಸೊಕ್ರೆಟಿಸ್ ಒಬ್ಬ ವಿಚಿತ್ರ ವ್ಯಕ್ತಿ. ದೇಹ ಗಿಡ್ಡವಾಗಿದ್ದರೂ ಗಟ್ಟಿಮುಟ್ಟಾಗಿತ್ತು. ದಪ್ಪ ತುಟಿ; ತುದಿಯಲ್ಲಿ ಮೇಲೆದ್ದಿದ್ದ ಚಪ್ಪಟೆ ಮೂಗು; ಜೋತುಬಿದ್ದ ಹುಬ್ಬುಗಳ ಅಡಿಯಲ್ಲಿ ಎದ್ದುಕಾಣುವ ಕಣ್ಣುಗಳು. ಒಟ್ಟಿನ ಮೇಲೆ ರೂಪವಂತನೂ ಅಲ್ಲ, ಕೋಡಂಗಿಯಂತಿದ್ದಾನೆಂದು ಅವನ ಸ್ನೇಹಿತರಲ್ಲೊಬ್ಬ ಅವನನ್ನು ವರ್ಣಿಸಿದ್ದ. ಗಂಭೀರ ಚಿಂತನೆಯೊಂದಿಗೆ ಕೀಟಲೆಯ ಪ್ರವೃತ್ತಿಯನ್ನು ರೂಢಿಸಿಕೊಂಡಿದ್ದ. ಸಹಜ ಸ್ನೇಹಪರತೆಯಿಂದಾಗಿ ಎಲ್ಲರಿಗೂ ಬೇಕಾದವನಾಗಿದ್ದ. ಶಿಲ್ಪಿಯೊಬ್ಬನ ಮಗನಾಗಿದ್ದರೂ ಜೀವನೋಪಾಯಕ್ಕಾಗಿ ಅದನ್ನಾಗಲಿ, ಬೇರೆ ಯಾವುದೇ ವೃತ್ತಿಯನ್ನಾಗಲಿ ಅವಲಂಬಿಸಿರಲಿಲ್ಲ. ಕಲ್ಲಿನಲ್ಲಿ ಅಥವಾ ಲೋಹದಲ್ಲಿ ಮನುಷ್ಯರ ಅಥವಾ ದೇವತೆಗಳ ಪ್ರತಿಮೆಗಳನ್ನು ಕಡೆಯುವುದರ ಬದಲು ಜೀವಂತ ವ್ಯಕ್ತಿಗಳನ್ನು ಸಜ್ಜನರನ್ನಾಗಿ, ಸತ್ಪ್ರಜೆಗಳನ್ನಾಗಿ ರೂಪಿಸುವುದು ತನ್ನ ಕಸುಬೆಂದು ಭಾವಿಸಿದ್ದ. ಬೆಳಗಾಗೆದ್ದು ನಿತ್ಯಕರ್ಮಗಳನ್ನು ಮುಗಿಸಿ ಅಥೆನ್ಸಿನ ಬೀದಿಗಳನ್ನು ಸುತ್ತಲು ಹೊರಟರೆ ಮನೆಗೆ ಹಿಂದಿರುಗುತ್ತಿದ್ದುದು ರಾತ್ರಿಯೇ. ದಾರಿಯಲ್ಲಿ ಸಿಕ್ಕಿದವರನ್ನು ಮಾತನಾಡಿಸುತ್ತಾ, ಅವರಿಗೆ ಇಷ್ಟವಾಗಿದ್ದ ವಿಷಯಗಳನ್ನು ಚರ್ಚಿಸುತ್ತಾ ದಿನವನ್ನು ಕಳೆಯುತ್ತಿದ್ದ. ಮನೆಯ ಮತ್ತು ಮಕ್ಕಳ ಯೋಗಕ್ಷೇಮವನ್ನು ಅವನ ಹೆಂಡತಿಯೇ ನೋಡಿಕೊಳ್ಳಬೇಕಾಗಿತ್ತು. ಇದರಿಂದಾಗಿ ಗಂಡಹೆಂಡಿರ ನಡುವೆ ಅನೇಕ ವೇಳೆ ವಿರಸ, ವ್ಯಾಜ್ಯ ಉಂಟಾಗುತ್ತಿತ್ತು. ಅದನ್ನು ಸಹಾನುಭೂತಿಯಿಂದ ಪರಿಗಣಿಸಿದ, ತಾಳ್ಮೆಯಿಂದ ಸಹಿಸಿದ, ಹಾಸ್ಯವಾಗಿ ಕೂಡ ತೆಗೆದುಕೊಂಡ. ಆದರೆ ಅಥೆನ್ಸಿನ ಪ್ರಜೆಯಾಗಿ ತನ್ನ ಕರ್ತವ್ಯಗಳನ್ನು ಉಪೇಕ್ಷಿಸಲಿಲ್ಲ. ನಗರಸಭೆಯ ಸದಸ್ಯನಾಗಿ, ಸೈನ್ಯದ ಯೋಧನಾಗಿ ತನ್ನ ಕಾರ್ಯದಕ್ಷತೆ ಮತ್ತು ದೇಶನಿಷ್ಠೆಗಳನ್ನು ಮೆರೆದ. ಅದಕ್ಕಾಗಿ ಸಾರ್ವಜನಿಕ ಪ್ರಶಂಸೆಯನ್ನು ಗಳಿಸಿದ.

ಶ್ರೇಷ್ಠ ತತ್ವಜ್ಞಾನಿ ಎಂದು ಹೆಸರು ಪಡೆದಿದ್ದ ಸೊಕ್ರೆಟಿಸ್ ಸ್ವತಃ ಏನನ್ನೂ ಬರೆಯಲಿಲ್ಲ. ಅವನ ಶಿಷ್ಯರು, ಮುಖ್ಯವಾಗಿ ಪ್ಲೇಟೋ, ಬರೆದಿಟ್ಟ ನೆನಪುಗಳ ಮತ್ತು ಸಂವಾದಗಳ ಮೂಲಕ ಅವನ ಬೋಧನೆಯನ್ನು ಗ್ರಹಿಸಬೇಕಾಗಿದೆ. ಒಮ್ಮೆ ಅವನ ಸ್ನೇಹಿತರಲ್ಲೊಬ್ಬ ಡೆಲ್ಫಿಯ ಅಪೊಲ್ಲೋದೇವನ ದೇವಾಲಯಕ್ಕೆ ಹೋಗಿ ಸದ್ಯದ ಗ್ರೀಸ್ ದೇಶದಲ್ಲಿ ಸೊಕ್ರೆಟಿಸ್‌ನನ್ನು ಮೀರಿಸಿದ ಇನ್ನೊಬ್ಬ ತತ್ವಜ್ಞಾನಿ ಇದ್ದಾನೆಯೇ ಎಂದು ಕೇಳಿದನಂತೆ. ಇಲ್ಲ ಎಂದು ಉತ್ತರ ಬಂದಿತಂತೆ. ಸೊಕ್ರಟಿಸ್ ಇದನ್ನು ನಂಬಲಿಲ್ಲ. ಅದು ಸುಳ್ಳು ಎಂದು ಸಾಧಿಸಲು ಹೊರಟ. ದಾರಿಯಲ್ಲಿ ಸಿಕ್ಕಿದ, ಜ್ಞಾನಿಗಳೆಂದು ಪ್ರಸಿದ್ಧರಾಗಿದ್ದ ಅಂದಿನ ದಾರ್ಶನಿಕರು, ರಾಜಕಾರಣಿಗಳು, ಭಾಷಣಕಾರರು, ಕವಿಗಳು ಮೊದಲಾದವರನ್ನೆಲ್ಲಾ

ಅವರವರು ನಿಷ್ಣಾತರೆನಿಸಿದ್ದ ವಿಷಯಗಳ ಬಗ್ಗೆ ಪ್ರಶ್ನಿಸಲು ಪ್ರಾರಂಭಿಸಿದ. ಸತ್ಯ, ಧರ್ಮ, ನೀತಿ, ನ್ಯಾಯ, ಕರ್ತವ್ಯ, ಸದ್ಗುಣ, ಸೌಂದರ್ಯ, ಜ್ಞಾನ ಎಂದರೇನು ಎಂದು ಕೇಳತೊಡಗಿದ. ತಾನೊಬ್ಬ ಮೂಢ ಆದರೆ ಗಂಭೀರ ಜಿಜ್ಞಾಸು, ತನಗೆ ಈ ವಿಷಯಗಳನ್ನು ಕುರಿತಂತೆ ಸರಿಯಾದ ತಿಳಿವಳಿಕೆ ನೀಡಿ ತನ್ನನ್ನು ಉದ್ಧರಿಸಬೇಕೆಂದು ವಿನಯಪೂರ್ವಕವಾಗಿ ಬೇಡಿದ. ಅವನು ಪ್ರಶ್ನಿಸಿದವರಲ್ಲಿ ಅಲ್ಪಸ್ವಲ್ಪ ತಿಳಿದ ಸಾಮಾನ್ಯ ಜನರೂ, ಎಲ್ಲವೂ ತಿಳಿದಿದೆಯೆಂದುಕೊಂಡಿದ್ದ ಮಹಾಪಂಡಿತರೂ ಇದ್ದರು. ಆದರೆ ಅವರಲ್ಲಿ ಯಾರಿಗೂ ಸೊಕ್ರೆಟಿಸನಿಗೆ ಸಮರ್ಪಕವಾದ ಉತ್ತರಗಳನ್ನು ಕೊಡಲು ಸಾಧ್ಯವಾಗಲಿಲ್ಲ. ಇದರಿಂದ ಸೊಕ್ರೆಟಿಸ್ ನಿರಾಸೆಯಿಂದ ಖಿನ್ನನಾಗಲಿಲ್ಲ. ಇದರಿಂದ ತಾನು ಅಜ್ಞಾನಿಯೆಂಬುದು ತನಗೆ ತಿಳಿದಿದೆ, ಇತರರಿಗಾದರೋ ತಾವು ಅಜ್ಞಾನಿಗಳೆಂಬುದೇ ತಿಳಿದಿಲ್ಲ ಎನ್ನುವುದನ್ನು ಕಂಡುಕೊಂಡ. ಡೆಲ್ಫಿಯ ದೇವವಾಣಿ ತನ್ನನ್ನು ಜ್ಞಾನಿಶ್ರೇಷ್ಠ ಎಂದು ಕರೆದಿದ್ದು ಈ ಕಾರಣಕ್ಕಾಗಿಯೇ, ಸೂಚಿಸಿದ್ದು ಈ ಅರ್ಥವನ್ನೇ ಎಂದು ಸಮಾಧಾನಪಟ್ಟುಕೊಂಡ. ಜೊತೆಗೆ ಜ್ಞಾನಿಗಳು ಎಂದುಕೊಂಡಿದ್ದವರ ಅಜ್ಞಾನವನ್ನು ಅವರ ಅರಿವಿಗೆ ತಂದು ಅವರನ್ನು ಜ್ಞಾನಾರ್ಥಿಗಳನ್ನಾಗಿ, ಜ್ಞಾನಾನ್ವೇಷಕರನ್ನಾಗಿ ಮಾಡುವುದು ದೇವರು ತನಗೆ ವಿಧಿಸಿರುವ ಆಜ್ಞೆ ಕರ್ತವ್ಯ ಎಂದು ಭಾವಿಸಿದ. ಸಾಧ್ಯವಾದ ಮಟ್ಟಿಗೆ ಅದನ್ನು ಪಾಲಿಸಲು ತೊಡಗಿದ.

ಆದರೆ ಅವನ ಪರೀಕ್ಷೆಗೆ ಒಳಗಾಗಿದ್ದವರ ಅಭಿಪ್ರಾಯ ಬೇರೆಯಾಗಿತ್ತು. ತನ್ನ ಮೌಢ್ಯದ ಮುಸುಕಿನಲ್ಲಿ ಸೊಕ್ರೆಟಿಸನು ಉದ್ದೇಶಪೂರ್ವಕವಾಗಿಯೇ ಇತರರ ಅಜ್ಞಾನವನ್ನು ಬಯಲಿಗೆಳೆದು ಅವರನ್ನು ನಗೆಪಾಟಲಿಗೆ ಗುರಿಮಾಡುತ್ತಿದ್ದಾನೆಂದು ಕೋಪಗೊಂಡರು. ಅವನ ನಯವಿನಯದ ಸೋಗಿನ ಮರೆಯಲ್ಲಿದ್ದ ಅವನ ಸೂಕ್ಷ್ಮವ್ಯಂಗದ ಮೊನಚು ಅವರನ್ನು ಇರಿಯುತ್ತಿತ್ತು. ಯುವಕರಿಗೇನೋ ಅವನ ವಾದದ ರೀತಿ ಬಹಳ ಹಿಡಿಸಿತ್ತು. ಅವನ ಕೈಗೆ ಸಿಕ್ಕಿದ ಪಂಡಿತರ ಪಾಡು ಅವರಿಗೆ ತಮಾಷೆ ಒದಗಿಸಿತು. ಶ್ರೀಮಂತ ಹಾಗೂ ಸಾಮಾನ್ಯ ಯುವಕರ ಒಂದು ಹಿಂಡು ಯಾವಾಗಲೂ ಅವನ ಸುತ್ತ ಇರಲು ಶುರುವಾಯಿತು. ಅಥೆನ್ಸಿನ ಮುಂದಾಳುಗಳಿಗೆ ಇದು ಸರಿದೋರಲಿಲ್ಲ. ಸೊಕ್ರೆಟಿಸನಿಗೆ ಬುದ್ಧಿಕಲಿಸಲು ಅವರು ಸೂಕ್ತ ಸಮಯಕ್ಕಾಗಿ ಕಾಯುತ್ತಿದ್ದರು. ಪೆಲೊಪೊನಿಸ್ಸಿಯನ್ ಯುದ್ಧದಲ್ಲಿ ಅಥೆನ್ಸಿಗೆ ಒದಗಿದ ಸೋಲು ಅವರಿಗೆ ಈ ಒಳ್ಳೆಯ ಅವಕಾಶವನ್ನು ಒದಗಿಸಿತು. ದೇವತೆಗಳಲ್ಲಿ ಅಪನಂಬಿಕೆ ಮತ್ತು ಪರಂಪರೆಯಿಂದ ಬಂದಿದ್ದ ಧಾರ್ಮಿಕ ಹಾಗೂ ಸಾಮಾಜಿಕ ನೀತಿ ನಿಯಮಗಳ ಬಗ್ಗೆ ಸೊಕ್ರೆಟಿಸನು ಬಿತ್ತಿದ್ದ ಸಂದೇಹ ಮತ್ತು ಕಲ್ಪಿಸಿದ್ದ ಗೊಂದಲಗಳೇ ಅಥೆನ್ಸಿನ ಸೋಲಿಗೆ ಕಾರಣಗಳೆಂದು ಅವರು ಆಪಾದಿಸಿದರು. ಜೊತೆಗೆ ಅವನು ಅಥೆನ್ಸಿನ ಯುವಕರನ್ನು ತಪ್ಪುದಾರಿಗೆ ಎಳೆಯುತ್ತಿದ್ದಾನೆಂದೂ ದೂರಿದರು. ಅಥೆನ್ಸಿನಲ್ಲಿ ಹುಟ್ಟಿ ಬೆಳೆದು, ಅದರ ಗೌರವಾದರಗಳನ್ನು ಗಳಿಸಿ, ಅನಂತರ ಅದರ ಶತ್ರುಗಳನ್ನು ಸೇರಿ, ಅದರ ಸೋಲಿಗೆ ಕಾರಣನಾದ ಅಲ್ಸಿಬಿಯಡಸನು ಸೊಕ್ರೆಟಿಸನ ಅಂತರಂಗದ ಶಿಷ್ಯರಲ್ಲಿ ಪ್ರಮುಖನಾಗಿದ್ದುದನ್ನು ಇದಕ್ಕೆ ನಿದರ್ಶನವಾಗಿ ಇತ್ತರು. ಅದಕ್ಕಾಗಿ ಕ್ರಿ.ಪೂ. ೩೯೯ ರಲ್ಲಿ ಬಹಿರಂಗ ನ್ಯಾಯಾಲಯದಲ್ಲಿ ವಿಚಾರಣೆ ನಡೆಸಿ ಸೊಕ್ರೆಟಿಸನಿಗೆ ಮರಣದಂಡನೆ ವಿಧಿಸಿದರು. ಈ ತೀರ್ಪಿನ ಘೋರ ಅನ್ಯಾಯ ಪ್ಲೇಟೋಗೆ ಭಾರಿ ಆಘಾತ ಉಂಟುಮಾಡಿತು.

ಅಂದಿನ ರಾಜಕೀಯ ಮತ್ತು ಸಾಮಾಜಿಕ ವಿದ್ಯಮಾನಗಳನ್ನು ಗಮನಿಸುತ್ತಿದ್ದ ಪ್ಲೇಟೋಗೆ ಸರಿಯಾಗಿ ಆಡಳಿತ ನಡೆಸುವುದು ಬಹಳ ಕಷ್ಟ ಎನ್ನುವುದು ಮನವರಿಕೆಯಾಯಿತು. ನಂಬಿಕಸ್ತ ಸ್ನೇಹಿತರ ಬೆಂಬಲ ಇಲ್ಲದೆ ಏನು ಮಾಡಲೂ ಸಾಧ್ಯವಿರಲಿಲ್ಲ. ಪರಂಪರಾಗತವಾಗಿ ಬಂದಿದ್ದ ಸಾಂಪ್ರದಾಯಿಕ ರೀತಿನೀತಿಗಳನ್ನು ತೊರೆದು ಬೇರಾವುದನ್ನೂ ಕಲ್ಪಿಸಲಾಗದಿದ್ದ ಅಂದಿನ ಯುಗದಲ್ಲಿ ನ್ಯಾಯ ಪಕ್ಷಪಾತಿಗಳಾದ ದಕ್ಷ ಆಡಳಿತಗಾರರು ಸಿಗುವುದು ಸುಲಭವಾಗಿರಲಿಲ್ಲ. ಜೊತೆಗೆ ನ್ಯಾಯನೀತಿಗಳು ಬೇಗನೆ ಕುಸಿಯುತ್ತಿದ್ದು ದೇಶವು ಅನಾಯಕತ್ವದ ಅವ್ಯವಸ್ಥೆಯತ್ತ ಧಾವಿಸುತ್ತಿತ್ತು. ರಾಜಕೀಯ ವೃತ್ತಿಯನ್ನು ಹಿಡಿಯಬೇಕೆಂದಿದ್ದ ಪ್ಲೇಟೋಗೆ ಇವು ಗಾಬರಿ ಹುಟ್ಟಿಸಿದವು. ಆದ್ದರಿಂದ ಪರಿಸ್ಥಿತಿಗಳನ್ನು ಹೇಗೆ ಸುಧಾರಿಸಬೇಕು, ಅವಶ್ಯಕವಾದ ರಾಜ್ಯಾಂಗವನ್ನು ಹೇಗೆ ರೂಪಿಸಬೇಕು ಎನ್ನುವ ಚಿಂತೆಯಲ್ಲಿ ಮಗ್ನನಾದ. ಅಂದು ಅಸ್ತಿತ್ವದಲ್ಲಿದ್ದ ಎಲ್ಲಾ ರಾಜ್ಯಗಳ ಆಡಳಿತಗಳೂ ಕುಲಗೆಟ್ಟಿದ್ದವು. ಅವುಗಳ ರಾಜ್ಯವ್ಯವಸ್ಥೆಯನ್ನು ಸಂಪೂರ್ಣವಾಗಿ ಬದಲಾಯಿಸಿದರೆ ಮತ್ತು ಅದೃಷ್ಟ ಚೆನ್ನಾಗಿದ್ದರೆ ಮಾತ್ರ ಪರಿಸ್ಥಿತಿಯನ್ನು ಸುಧಾರಿಸಬಹುದಾಗಿತ್ತು. ಸಮಾಜಕ್ಕಾಗಲಿ ವ್ಯಕ್ತಿಗಾಗಲಿ ನಿಜವಾಗಿ ನ್ಯಾಯ ದೊರೆಯಬೇಕಾದಲ್ಲಿ ತತ್ತ್ವಶಾಸ್ತ್ರದ ಅಧ್ಯಯನ ಮತ್ತು ಅನುಷ್ಠಾನಗಳು ಅತ್ಯವಶ್ಯಕ. ದಾರ್ಶನಿಕರು ರಾಜಕೀಯ ಅಧಿಕಾರವನ್ನು ಪಡೆಯುವವರೆಗೆ ಅಥವಾ ರಾಜಕಾರಣಿಗಳು ತತ್ತ್ವಜ್ಞಾನಿಗಳಾಗುವವರೆಗೆ ಮಾನವರಿಗೆ ತೊಂದರೆ ತಪ್ಪಿದ್ದಿಲ್ಲ. ನೆಮ್ಮದಿ ದೊರೆಯುವುದಿಲ್ಲ ಎಂಬ ನಿರ್ಧಾರಕ್ಕೆ ಬಂದಿದ್ದ. ಆ ವೇಳೆಗೆ ಒದಗಿದ ಸೊಕ್ರಟಿಸನ ಮರಣದಂಡನೆಯ ತೀರ್ಪು ಅದಕ್ಕೆ ಪುಷ್ಟಿ ಮತ್ತು ಪ್ರತ್ಯಕ್ಷ ನಿದರ್ಶನ ನೀಡಿದ್ದವು. ಆ ತೀರ್ಪಿನ ಆಘಾತ ಪ್ಲೇಟೋಗೆ ರಾಜಕೀಯ ವೃತ್ತಿಯಲ್ಲಿ ಜಿಗುಪ್ಸೆ ಮತ್ತು ಹತಾಶೆಗಳನ್ನು ಉಂಟುಮಾಡಿ ಅವನ ಬದುಕಿನ ದಿಕ್ಕನ್ನೇ ಬದಲಾಯಿಸಿದವು. ರಾಜಕೀಯ ಆಸೆ ಆಕಾಂಕ್ಷೆಗಳನ್ನು ಸಂಪೂರ್ಣವಾಗಿ ತೊರೆದು ಸತ್ಯ, ಧರ್ಮ, ನೀತಿ ಮುಂತಾದ ಮೂಲಭೂತ ತತ್ತ್ವಗಳ ಜಿಜ್ಞಾಸೆಯಲ್ಲಿ ತನ್ನನ್ನು ತೊಡಗಿಸಿಕೊಳ್ಳಲು ಅಂದೇ ತೀರ್ಮಾನಿಸಿದ. ಆಗ ಅವನಿಗೆ ೨೮ ವರ್ಷ. ಅರಳಬೇಕಾಗಿದ್ದ ಕವಿ ಅರುಹುವ ಗದ್ಯಕಾರನಾದ; ನಾಯಕನಾಗಬೇಕಾಗಿದ್ದ ರಾಜಕಾರಣಿ ನಿಯಂತ್ರಕ ನೀತಿಶಾಸ್ತ್ರಜ್ಞನಾದ.

ತನ್ನ ಗುರುವಿಗೆ ಒದಗಿದ ದುರ್ಗತಿಯಿಂದ ಬೇಸತ್ತೋ ಸೊಕ್ರಟಿಸನ ಶಿಷ್ಯನೆಂಬ ಸಂಶಯಕ್ಕೆ ಗುರಿಯಾಗಿದ್ದರಿಂದಲೋ ಪ್ಲೇಟೋ ದೇಶಾಟನೆ ಕೈಗೊಂಡ. ಕ್ರಿ.ಪೂ. ೩೯೯ ರಿಂದ ೩೮೮ ರ ವರೆಗಿನ ಸುಮಾರು ಹನ್ನೆರಡು ವರ್ಷಗಳ ಅವಧಿಯಲ್ಲಿ ಇಟಲಿ, ಸಿಸಿಲಿ, ಉತ್ತರ ಆಫ್ರಿಕ, ಈಜಿಪ್ಟ್‌ಗಳಲ್ಲೂ ಸುತ್ತಾಡಿದ. ಭಾರತಕ್ಕೂ ಬಂದಿದ್ದನೆಂಬ ವದಂತಿಗಳೂ ಇವೆ. ಅವನು ಇಟಲಿಗೆ ಹೋಗಿದ್ದುದಕ್ಕೆ ಒಂದು ವಿಶೇಷ ಕಾರಣವೂ ಇದ್ದಿತು. ಕ್ರಿಸ್ತಪೂರ್ವ ಆರನೆಯ ಶತಮಾನದ ಪ್ರಸಿದ್ಧ ದಾರ್ಶನಿಕ ಪೈಥಾಗೊರಸನ ಶಿಷ್ಯರ ಒಂದು ತಂಡ ಅಲ್ಲಿ ಸಂಘವೊಂದನ್ನು ಸ್ಥಾಪಿಸಿಕೊಂಡಿತ್ತು. ಅವರ ಗಣಿತ ಬೋಧನೆಯ ವಿಧಾನವನ್ನು ಮತ್ತು ಅವರ ಆಧ್ಯಾತ್ಮಿಕ ಅನುಭಾವದ ರಹಸ್ಯಗಳನ್ನು ಪ್ಲೇಟೋ ಅವರಿಂದ ತಿಳಿದುಕೊಳ್ಳಬೇಕೆಂದಿದ್ದ.

ಕ್ರಿ.ಪೂ. ೩೮೮ ರಲ್ಲಿ ಪ್ಲೇಟೋ ಸಿಸಿಲಿಗೆ ಹೋದ. ಆಗ ಸೈರಕ್ಯೂಸಿನಲ್ಲಿ ಮೊದಲನೆಯ ಡಯೊನೈಸಸ್ ರಾಜ್ಯವಾಳುತ್ತಿದ್ದ. ಅವನ ಭಾವಮೈದುನ, ೩೦ ವರ್ಷದ ಡಯೊನ್ ಪ್ಲೇಟೋನ ಶಿಷ್ಯನಾಗಿದ್ದ ಮತ್ತು ಅವನ ಅಭಿಪ್ರಾಯಗಳನ್ನು ಬಹಳ ಮೆಚ್ಚಿದ್ದ. ಅವನು ಪ್ಲೇಟೋನನ್ನು ರಾಜನಿಗೆ ಪರಿಚಯ ಮಾಡಿಸಿದ. ಆದರೆ ಈ ಭೇಟಿ ಯಶಸ್ವಿಯಾಗಲಿಲ್ಲ. ಯಾವುದೋ ಕಾರಣಕ್ಕಾಗಿ ಡಯೊನೈಸಸನು ಪ್ಲೇಟೋನನ್ನು ಬಂಧಿಸಿ ಗುಲಾಮಪೇಟೆಯಲ್ಲಿ ಹರಾಜು ಹಾಕಿಸಿದ. ಪ್ಲೇಟೋನ ಸ್ನೇಹಿತರು ಅವನನ್ನು ಕೊಂಡುಕೊಂಡು ಅಥೆನ್ಸಿಗೆ ಸಾಗಿಸಿದರು.

ಅಥೆನ್ಸಿಗೆ ಮರಳಿದ ಪ್ಲೇಟೋ ಕ್ರಿ.ಪೂ. ೩೮೬ ರಲ್ಲಿ ಅಲ್ಲೊಂದು ಶಿಕ್ಷಣ ಶಾಲೆಯನ್ನು ಸ್ಥಾಪಿಸಿ ಮುಂದಿನ ಇಪ್ಪತ್ತು ವರ್ಷಗಳನ್ನು ಬೋಧನೆ, ಲೇಖನಗಳಲ್ಲಿ ಕಳೆದ. ಶಾಲೆಯ ವಿಶಾಲವಾದ ಉದ್ಯಾನದಲ್ಲಿ ಶಿಷ್ಯರೊಡನೆ ಸುತ್ತಾಡುತ್ತಾ, ವಿವಿಧ ವಿಷಯಗಳನ್ನು ಚರ್ಚಿಸುತ್ತಾ, ಅವುಗಳನ್ನು ಕುರಿತ ಕಲ್ಪನೆಗಳನ್ನು ವಿಶದಗೊಳಿಸುತ್ತಾ ಸ್ವತಂತ್ರಚಿಂತನೆಯನ್ನು ಪ್ರೇರಿಸುತ್ತಾ ಈ ಚಿಂತನಮಂಥನದ ಪ್ರಕ್ರಿಯೆಯನ್ನು ಮತ್ತು ಫಲವನ್ನು ಸೊಕ್ರೆಟಿಸನ ಜೊತೆಯ ಸಂವಾದಗಳ ಮೂಲಕ ನಿರೂಪಿಸುತ್ತಾ ಕಾಲಯಾಪನೆ ಮಾಡಿದ. ಈ ಶಾಲೆಯ ಉದ್ದೇಶ ಜನರನ್ನು ಅಕ್ಷರಸ್ಥರನ್ನಾಗಿ ಅಥವಾ ಪಂಡಿತರನ್ನಾಗಿ ಮಾಡುವುದಾಗಿರಲಿಲ್ಲ. ಒಳ್ಳೆಯ ರಾಜನೀತಿಜ್ಞರನ್ನು, ಆಡಳಿತಗಾರರನ್ನು ತಯಾರಿಸುವುದಾಗಿತ್ತು. ಅಂದಿನ ರಾಜಕೀಯ ವ್ಯವಸ್ಥೆಯನ್ನು ಮತ್ತು ರಾಜಕಾರಣಿಗಳನ್ನು ತಿದ್ದುವುದು ಸಾಧ್ಯವಿಲ್ಲ ಎಂದು ಕೈಬಿಟ್ಟಿದ್ದ. ಆದ್ದರಿಂದ ಹೊಸ ರಾಜಕೀಯ ವ್ಯವಸ್ಥೆಯನ್ನು, ಹೊಸಬಗೆಯ ರಾಜಕಾರಣಿಗಳನ್ನು ರೂಪಿಸಲು ಹಾಗೂ ಹೊಸ ರಾಜಕಾರಣಿಗಳು ಆದರ್ಶರೀತಿಯಲ್ಲಿ ಆಳಲು ಕಲಿಯುವುದಕ್ಕೆ ಅನುಕೂಲವಾದ ಶಿಕ್ಷಣವನ್ನು ನೀಡುವ ಶಾಲೆಯನ್ನಾಗಿ ಅವನು ಸ್ಥಾಪಿಸಿದ. ಅದರಿಂದ ಶೀಘ್ರದಲ್ಲಿಯೇ ಫಲ ದೊರೆಯುವುದೆಂದೇನೂ ನಿರೀಕ್ಷಿಸಿರಲಿಲ್ಲ. ಕೆಲವು ರಾಜಕಾರಣಿಗಳನ್ನಾದರೂ ದಾರ್ಶನಿಕರನ್ನಾಗಿ ಮಾಡಬಹುದೆಂದು ಆಶಿಸಿದ್ದ. ಈ ಶಾಲೆ (ಅಕಾಡೆಮಿ) ಮುಖ್ಯವಾಗಿ "ದಾರ್ಶನಿಕ ರಾಜಕಾರಣಿಗಳ" ತರಪೇತಿ ಕೇಂದ್ರವಾಗಿತ್ತು. ಅದರ ಲೌಕಿಕ ಯಶಸ್ಸು ಏನೇ ಆಗಿರಲಿ, ಅದು ಮುಂದಿನ ೯೦೦ ವರ್ಷಗಳು, ಎಂದರೆ, ಕ್ರಿ.ಶ. ೫೨೯ರ ವರೆಗೆ ಅಸ್ತಿತ್ವದಲ್ಲಿತ್ತು. ಅದರ ಪಠ್ಯಕ್ರಮ ಇಂದಿಗೂ ಯೂರೋಪಿನ ಪ್ರೌಢಶಿಕ್ಷಣದ ತಳಹದಿಯಾಗಿ ಉಳಿದುಬಂದಿದೆ.

ಈ ಶಾಲೆಯ ವಿದ್ಯಾರ್ಥಿಗಳನ್ನು ಯಾವ ರೂಪದ ಸಮಾಜವನ್ನು ನಿರ್ಮಿಸಲು ಯಾವ ರೂಪದ ರಾಜ್ಯವನ್ನು ನಿರ್ವಹಿಸಲು ತಯಾರುಮಾಡುತ್ತದೆ ಎಂಬ ಯೋಚನೆ ಪ್ಲೇಟೋಗೆ ಹೊಳೆಯದೇ ಇರಲಿಲ್ಲ. ಅಥೆನ್ಸಿನಲ್ಲಿ ಅಂಥ ಸಮಾಜವನ್ನು, ರಾಜ್ಯವನ್ನು ಸ್ಥಾಪಿಸುವುದು ಪ್ಲೇಟೋನ ಹೃದಯದ ಹಂಬಲ, ಜೀವನದ ಗುರಿ ಆಗಿದ್ದವು. ಶಾಲೆಯ ಪ್ರಶಾಂತ ಹಾಗೂ ನೆಮ್ಮದಿಯ ವಾತಾವರಣದಲ್ಲಿ ಅದರ ಬಗ್ಗೆ ಆಳವಾಗಿ ದೀರ್ಘಕಾಲ ಚಿಂತಿಸಿದ್ದ. ಅದರ ನೀಲಿನಕ್ಷೆಯೊಂದನ್ನು ರಚಿಸಿದ್ದ. ಅದರ ವಿವರವಾದ ರೂಪರೇಷೆಯನ್ನು ತನ್ನ ಆದರ್ಶ ಧರ್ಮರಾಜ್ಯ (The Republic) ನಲ್ಲಿ ಚಿತ್ರಿಸಿದ. ಅದನ್ನು ಸೊಕ್ರೆಟಿಸನು ನಡೆಸಿದನೆನ್ನಲಾದ ಸಂವಾದದ ಮೂಲಕ ಪ್ರಕಟಿಸಿದ. ಆಗ ಅವನಿಗೆ ೪೦ ವರ್ಷವಾಗಿತ್ತು.

ಆದರ್ಶ ಧರ್ಮರಾಜ್ಯದ ನಿರ್ಮಾಣ ಅದರ ಪ್ರಜೆಗಳ ಹುಟ್ಟಿನಿಂದಲೇ ಪ್ರಾರಂಭವಾಗುತ್ತದೆ. ಆ ರಾಜ್ಯದಲ್ಲಿ ಮಕ್ಕಳ ಜನನ ಸರ್ಕಾರದ ನಿಯಂತ್ರಣ, ನಿರ್ದೇಶನಗಳಿಗೆ ಒಳಪಟ್ಟದ್ದು. ದೈಹಿಕ ಆರೋಗ್ಯ ಮತ್ತು ಮಾನಸಿಕ ಸ್ವಾಸ್ಥ್ಯ ಇರುವ ಗಂಡಸರು ಮತ್ತು ಹೆಂಗಸರು ಪರಸ್ಪರವಾಗಿ ಯಾರು ಯಾರನ್ನಾದರೂ ಕೂಡಬಹುದು. ಒಳ್ಳೆಯ ಸಂತಾನಕ್ಕಾಗಿ ಉತ್ತಮ ಪುರುಷರು ಉತ್ತಮ ಸ್ತ್ರೀಯರನ್ನು ಕೂಡಬೇಕು. ಆದರೆ ಅವರ ನಡುವೆ ಮದುವೆಯಾಗಲಿ, ಸ್ವಂತ ಕುಟುಂಬವಾಗಲಿ ಇರುವುದಿಲ್ಲ. ಅವರ ಸಂತಾನವೂ ಸರ್ಕಾರದ ಆಸ್ತಿ. ಮಕ್ಕಳು ಹುಟ್ಟಿದ ಕೂಡಲೇ ಅವನ್ನು ಅವುಗಳ ತಂದೆತಾಯಿಗಳಿಂದ ಬೇರ್ಪಡಿಸಿ ರಾಜ್ಯದ ಶಿಶು ಪೋಷಣಾಲಯಗಳಲ್ಲಿ ಬೆಳೆಸಲಾಗುತ್ತದೆ. ತಂದೆ-ತಾಯಿಯರಿಗೆ ತಮ್ಮ ಮಕ್ಕಳು ಯಾರು ಎನ್ನುವುದು, ಮಕ್ಕಳಿಗೆ ತಮ್ಮ ತಂದೆ-ತಾಯಿ ಯಾರು ಎನ್ನುವುದು ತಿಳಿದಿರುವುದಿಲ್ಲ ಮತ್ತು ತಿಳಿಯಲೂ ಕೂಡದು. ಹಾಗಿದ್ದರೆ ಮಾತ್ರ ಎಲ್ಲರೂ ಅಣ್ಣ-ತಮ್ಮಂದಿರಂತೆ, ಅಕ್ಕತಂಗಿಯರಂತೆ, ಒಡಹುಟ್ಟಿದವರಂತೆ ಸಮಾನವಾಗಿ ಬಾಳಲು ಸಾಧ್ಯ ಮತ್ತು ಆದರ್ಶ ರಾಜ್ಯದಲ್ಲಿ ಎಲ್ಲರೂ ಹಾಗೆ ಬಾಳಬೇಕು. ಸರ್ಕಾರವೇ ಮಕ್ಕಳ ಲಾಲನೆ, ಪೋಷಣೆ ಮತ್ತು ಶಿಕ್ಷಣಗಳನ್ನು ನೋಡಿಕೊಳ್ಳುತ್ತದೆ.

ಮೊದಲ ೨೦ ವರ್ಷಗಳ ಶಿಕ್ಷಣ ಎಲ್ಲರಿಗೂ ಸಮಾನವಾಗಿರುತ್ತದೆ. ಅದರ ಮುಖ್ಯ ಅಂಶಗಳು ದೈಹಿಕ ವ್ಯಾಯಾಮ ಮತ್ತು ಸಂಗೀತ. ದೇಹಸೌಷ್ಠವಕ್ಕಾಗಿ ವ್ಯಾಯಾಮ ಮತ್ತು ಆತ್ಮದ ಅಥವಾ ಮಾನಸಿಕ ಸಾಮರಸ್ಯಕ್ಕಾಗಿ ಸಂಗೀತ. ಪ್ಲೇಟೋಗೆ ಸಂಗೀತವು ಎಲ್ಲಾ ಬಗೆಯ ಸಮರಸತೆಯ ಸಂಕೇತವಾಗಿತ್ತು. ಇಡೀ ವಿಶ್ವವನ್ನು ಒಂದು ವ್ಯವಸ್ಥಿತ ರೂಪದಲ್ಲಿ ಹಿಡಿದಿಟ್ಟಿರುವುದೇ ಅದು. ಆದ್ದರಿಂದ ಅದು ಸಾರ್ವಜನಿಕ ಶಿಕ್ಷಣದ ಒಂದು ಅವಶ್ಯ ಭಾಗವಾಗಬೇಕು. ೨೦ ವರ್ಷಗಳೊಳಗಿನ ಎಲ್ಲರಿಗೂ ಸಂಗೀತ ಮತ್ತು ದೈಹಿಕ ವ್ಯಾಯಾಮಗಳ ಸರಿಯಾದ ತಳಹದಿ ಇರಬೇಕು. ಅಂತೆಯೇ ಶಾಲೆಗಳಲ್ಲಿ ಸಹಶಿಕ್ಷಣ ಇರಬೇಕು. ಹುಡುಗರೂ ಹುಡುಗಿಯರೂ ಸಮಾನವಾಗಿ ಎಲ್ಲಾ ವಿಷಯಗಳನ್ನೂ ಕಲಿಯಬೇಕು. ಈ ಕಲಿಕೆ ನೀರಸವಾಗಿರದೆ ಆಹ್ಲಾದವಾಗಿರಬೇಕು. ಹೀಗೆ ಶಾಲೆ ಒಂದು ಬಗೆಯ ಬೌದ್ಧಿಕ ವ್ಯಾಯಾಮಶಾಲೆ, ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಳ್ಳುವ ಆಟದ ಬಯಲು. ಇಪ್ಪತ್ತನೆಯ ವರ್ಷದವರೆಗಿನ ವಿದ್ಯಾಭ್ಯಾಸದ ಕ್ರಮ ಇದು. ಆಗ ಒಂದು ಪರೀಕ್ಷೆ ನಡೆಸಲ್ಪಡುತ್ತದೆ. ಅದರಲ್ಲಿ ತೇರ್ಗಡೆಯಾದವರು ಮುಂದಿನ ಶಿಕ್ಷಣಕ್ಕೆ ಅರ್ಹರಾಗಿರುತ್ತಾರೆ. ತೇರ್ಗಡೆಯಾಗದಿರುವವರನ್ನು ಕೆಳಗಿನ ಎಂದರೆ ಕೃಷಿಕರು, ಶ್ರಮಿಕರು ಮತ್ತು ವ್ಯಾಪಾರಿಗಳ ವರ್ಗಕ್ಕೆ ಸೇರಿಸಲಾಗುತ್ತದೆ.

ತೇರ್ಗಡೆಯಾದವರು ಶಿಕ್ಷಣ ಮುಂದುವರೆಸುತ್ತಾರೆ. ಮುಂದಿನ ಹತ್ತು ವರ್ಷಗಳಲ್ಲಿ ಎಂದರೆ ೨೦ ರಿಂದ ೩೦ ರ ವರೆಗೆ, ಅವರಿಗೆ ವಿಜ್ಞಾನವನ್ನು ಎಂದರೆ ಅಂಕಗಣಿತ, ಜ್ಯಾಮಿತಿ ಮತ್ತು ಖಗೋಳಶಾಸ್ತ್ರ ಬೋಧಿಸಲಾಗುತ್ತದೆ. ಇವನ್ನು ಅವುಗಳ ವ್ಯಾವಹಾರಿಕ ಪ್ರಯೋಜನಗಳಿಗಾಗಿ ಕಲಿಸದೆ ಅವುಗಳ ವಿಷಯ ಸೌಂದರ್ಯಕ್ಕಾಗಿ ಬೋಧಿಸಲಾಗುತ್ತದೆ. ಗಣಿತವನ್ನು ವ್ಯಾಪಾರ, ಗೃಹನಿರ್ಮಾಣ, ಯಂತ್ರತಯಾರಿಕೆ ಮೊದಲಾದುವುಗಳಿಗೆ ಬಳಸುವುದು ಪ್ಲೇಟೋನ ದೃಷ್ಟಿಯಲ್ಲಿ ಅಪಪ್ರಯೋಗವಾಗಿತ್ತು. ಅದು ಅಂದಿನ ಗ್ರೀಕರ

ದೃಷ್ಟಿಯೂ ಆಗಿತ್ತು ವಿಜ್ಞಾನದ ಶಿಕ್ಷಣ ಮುಗಿದ ತರುವಾಯ, ಎಂದರೆ ಅವರ ೩೦ನೆಯ ವರ್ಷದಲ್ಲಿ, ಮತ್ತೊಂದು ಪರೀಕ್ಷೆ ನಡೆಯುತ್ತಿತ್ತು. ಅದರಲ್ಲಿ ತೇರ್ಗಡೆಯಾಗದವರನ್ನು ಸೈನಿಕ ವರ್ಗಕ್ಕೆ ಸೇರಿಸಲಾಗುತ್ತಿತ್ತು. ಅದರ ಗುರಿ ಇತರ ರಾಜ್ಯಗಳ ಮೇಲೆ ಆಕ್ರಮಣವಲ್ಲ. ಪ್ಲೇಟೋ ಯುದ್ಧಕ್ಕೆ ವಿರೋಧಿ. ಆದರೆ ಇತರರು ತಮ್ಮ ದೇಶದ ಮೇಲೆ ಆಕ್ರಮಣ ದೃಷ್ಟಿ ಹಾಯಿಸದಿರಲು ಇರುವ ಒಂದೇ ಮಾರ್ಗ ಸಶಕ್ತ ಸೈನ್ಯವನ್ನು ಹೊಂದಿರುವುದು ಎಂಬ ವ್ಯಾವಹಾರಿಕ ಸತ್ಯವನ್ನು ಅವನು ಅರಿತಿದ್ದ.

ಈ ಎರಡನೇ ಪರೀಕ್ಷೆಯಲ್ಲಿ ತೇರ್ಗಡೆಯಾದವನು ತರ್ಕ ಮತ್ತು ತತ್ತ್ವಶಾಸ್ತ್ರದ ಅಧ್ಯಯನಕ್ಕೆ ಅರ್ಹರಾಗುತ್ತಿದ್ದರು. ರಾಜ್ಯದ ಆಡಳಿತ ನಡೆಸುವ ಶಿಕ್ಷಣವನ್ನು ಕೊಡುತ್ತಿದ್ದುದು ಇವರಿಗೆ ಮಾತ್ರವೇ. ಅವರಲ್ಲಿ ಗಂಡಸರು ಹೆಂಗಸರು ಇಬ್ಬರೂ ಇರುತ್ತಿದ್ದರು. ಅವರಿಗೆ ನೀಡುವ ಶಿಕ್ಷಣ ಒಂದೇ ಬಗೆಯದಾಗಿರುತ್ತಿತ್ತು. ರಾಜಕೀಯ ಆಡಳಿತ, ಅಧಿಕಾರಸ್ಥಾನಗಳನ್ನು ಪಡೆಯಲು ಇಬ್ಬರಿಗೂ ಸಮಾನವಾದ ಅವಕಾಶವಿತ್ತು. ಐದು ವರ್ಷಗಳ ತತ್ತ್ವಶಾಸ್ತ್ರದ ಅಧ್ಯಯನ ಮುಗಿದ ತರುವಾಯ ಅವರ ಸೈದ್ಧಾಂತಿಕ ಶಿಕ್ಷಣ ಮುಗಿಯುತ್ತಿತ್ತು. ಆದರೆ ಶಿಕ್ಷಣ ಸಂಪೂರ್ಣವಾಗುತ್ತಿರಲಿಲ್ಲ. ಅದಕ್ಕಾಗಿ ಸೂಕ್ತ ಆಡಳಿತ ಸ್ಥಾನದಲ್ಲಿ ಅವರಿಗೆ ೧೫ ವರ್ಷ ಪ್ರಾಯೋಗಿಕ ತರಬೇತಿ ನೀಡಲಾಗುತ್ತಿತ್ತು. ಈ ಅವಧಿಯಲ್ಲಿ ಅವರು ಅಧ್ಯಯನದ ಕೋಣೆಗಳಿಂದ ಹೊರಬಂದು ವಾಸ್ತವಿಕ ಜೀವನದ ಅನುಭವವನ್ನು ನಿರ್ವಹಿಸಬೇಕಾಗಿತ್ತು. ಅದರ ಕರ್ತವ್ಯಗಳಲ್ಲಿ ಭಾಗವಹಿಸಿ ಬದುಕಿನ ಅನುಭವವನ್ನು ನೇರವಾಗಿ ಪಡೆದುಕೊಳ್ಳಬೇಕಾಗಿತ್ತು. ಅಷ್ಟರವೇಳೆಗೆ ಅವರಿಗೆ ೫೦ ವರ್ಷಗಳು ತುಂಬುತ್ತಿದ್ದವು. ಆಗ ಅವರು ದಾರ್ಶನಿಕ ರಾಜರ ಸ್ಥಾನಕ್ಕೆ ಅರ್ಹರಾಗುತ್ತಿದ್ದರು. ಆದರ್ಶ ರಾಜ್ಯದಲ್ಲಿ ರಾಜನಾಗುವ ಯೋಗ್ಯತೆ ಮತ್ತು ಸಾಮರ್ಥ್ಯ ಇರುವುದು ತತ್ತ್ವಜ್ಞಾನಿಗೆ ಮಾತ್ರವೇ. "ತತ್ತ್ವಜ್ಞಾನಿಗಳು ರಾಜರಾಗುವ ಅಥವಾ ರಾಜರು ತತ್ತ್ವಶಾಸ್ತ್ರವನ್ನು ಅಧ್ಯಯನ ಮಾಡುವವರೆಗೆ ಜನತೆಯ ಕಷ್ಟಕಾರ್ಪಣ್ಯಗಳು ಕೊನೆ ಮುಟ್ಟುವುದಿಲ್ಲ" ಎನ್ನುವುದು ಪ್ಲೇಟೋನ ದೃಢ ತೀರ್ಮಾನವಾಗಿತ್ತು.

ಹಾಗಾದರೆ ತತ್ತ್ವಜ್ಞಾನಿಗೂ ಸಾಮಾನ್ಯ ವ್ಯಕ್ತಿಗೂ ಏನು ವ್ಯತ್ಯಾಸ ? ಅದು ಭಗವಂತನ ನಿಜಸಂಕಲ್ಪವನ್ನು ಸರಿಯಾಗಿ ಗ್ರಹಿಸುವುದರಲ್ಲಿದೆ. ನಮ್ಮ ಭೌತಿಕ ಪ್ರಪಂಚವು ಆ ಸಂಕಲ್ಪದ ಅಸ್ಪಷ್ಟ ಪ್ರತಿಬಿಂಬ, ಅಪೂರ್ಣ ಪಡಿಯಚ್ಚು, ಭಗವಂತನ ಮನಸ್ಸನ್ನು ಅರಿಯುವುದು ಸಾಮಾನ್ಯರಿಗೆ ಕಷ್ಟ. ಅವರ ಮನಸ್ಸುಗಳು ಧೂಳು ತುಂಬಿದ ಕನ್ನಡಿಗಳಂತೆ ಇರುತ್ತವೆ. ಆದ್ದರಿಂದ ಅವುಗಳಲ್ಲಿ ಪ್ರತಿಫಲಿಸುವ ಬಿಂಬಗಳೂ ಮಸುಕಾಗಿರುತ್ತವೆ. ತನ್ನ ಮನಸ್ಸಿನ ಕನ್ನಡಿಯನ್ನು ಚೆನ್ನಾಗಿ ಒರೆಸಿ ಅದರಲ್ಲಿ ಭಗವಂತನ ಇಂಗಿತವನ್ನು, ನಕ್ಷತ್ರಗಳಂತೆ ಮಾನವರ ನಡೆವಳಿಕೆಯನ್ನು ನಿಯಂತ್ರಿಸುವ ಜ್ಞಾನರೂಪದ ಅವನ ಬೆಳಕನ್ನು ಯಥಾವತ್ತಾಗಿ ಗ್ರಹಿಸಿ ಆದಷ್ಟು ಉತ್ತಮವಾಗಿ ಅದನ್ನು ನಗರ ರಾಜ್ಯದ ಆಡಳಿತ ವ್ಯವಸ್ಥೆಯಲ್ಲಿ ಅಳವಡಿಸುವುದು ತತ್ತ್ವಜ್ಞಾನಿಯಾದವನ ಆದ್ಯ ಕರ್ತವ್ಯ.

ವ್ಯಕ್ತಿಯೊಬ್ಬನ ಜೀವನ ಪರಿಪೂರ್ಣವಾಗುವುದು, ಅವನ ಬದುಕು ಸಾರ್ಥಕ್ಯ ಪಡೆಯುವುದು ಅವನು ನೀತಿಬದ್ಧ ಸುವ್ಯವಸ್ಥಿತ ಸಮಾಜವೊಂದರ ಸಕ್ರಿಯ

ಸದಸ್ಯನಾದಾಗಲೇ. ಅಂತಹ ಸಮಾಜವನ್ನು ಸ್ಥಾಪಿಸುವುದು ಅಥವಾ ಸ್ಥಾಪಿಸಲು ಶ್ರಮಿಸುವುದು ತತ್ತ್ವಜ್ಞಾನಿಯ ವಿಶಿಷ್ಟ ಗುರಿ. ಆದರ್ಶ ರಾಜ್ಯದ ಆಡಳಿತ ನಡೆಸುವವರು ಯಾವಾಗಲೂ ಸಮಾಜದ ಶ್ರೇಷ್ಠ ವ್ಯಕ್ತಿಗಳು ಮಾತ್ರವೇ. ಸಹಜ ಸಾಮರ್ಥ್ಯ ಮತ್ತು ಯೋಜಿತ ಶಿಕ್ಷಣದ ಮೂಲಕ ರಾಜ್ಯವು ರೂಪಿಸುವ ಪ್ರಜೆಗಳಲ್ಲಿ ಉತ್ತಮೋತ್ತಮರು ತತ್ತ್ವಜ್ಞಾನಿಗಳು. ಸಮಾಜದ ಶ್ರೇಷ್ಠ ವರ್ಗವನ್ನು ರಚಿಸುವವರು ಇವರು ಮಾತ್ರವೇ. ಉಳಿದೆರಡು ವರ್ಗಗಳವರು ಇವರಿಗೆ ಅಧೀನರಾಗಿರಬೇಕು. ಈ ತತ್ತ್ವಜ್ಞಾನಿ ಆಡಳಿತಗಾರರು ಸತ್ಯವಂತರೂ ನಿಸ್ಪೃಹರೂ ಆಗಿರಲು ಅವರಿಗೆ ಸ್ವಂತವಾದ ಯಾವುದೇ ಆಸ್ತಿಪಾಸ್ತಿ, ಸಂಸಾರ, ಬಂಧು-ಬಳಗ ಇರಕೂಡದು. ಅವರು ಎಲ್ಲವನ್ನೂ ಸಮಾನವಾಗಿ ಹೊಂದಿರಬೇಕು. ಅವರ ಊಟೋಪಚಾರ ಸಾರ್ವಜನಿಕ ಭೋಜನದ ಪಡಸಾಲೆಗಳಲ್ಲಿ; ನಿದ್ದೆ ಆರಾಮ ಸರ್ವಸಮಾನವಾದ ಹಜಾರಗಳಲ್ಲಿ. ಅವರ ಸಂಪೂರ್ಣ ಯೋಗಕ್ಷೇಮ ಸರ್ಕಾರದ ಹೊಣೆ. ಅವರಿಗೆ ಯಾವುದೇ ಅಧಿಕಾರ, ಹಿತಾಸಕ್ತಿಗಳು ಇರುವುದಿಲ್ಲದಿರುವುದರಿಂದ ಅವರು ಲಂಚಕ್ಕೆ ಕೈಯೊಡ್ಡುವುದಿಲ್ಲ. ಭ್ರಷ್ಟಾಚಾರಕ್ಕೆ ಬೀಳುವುದಿಲ್ಲ. ಪ್ರಸಿದ್ಧಿ ಪ್ರಚಾರಗಳಿಗೆ ಹಾತೊರೆಯುವುದಿಲ್ಲ. ಅವರ ಏಕೈಕ ಆಸಕ್ತಿ ಧರ್ಮರಾಜ್ಯ ಸ್ಥಾಪನೆ; ಗುರಿ ಜನರಲ್ಲಿ ಸಂತುಷ್ಟಿ ಮತ್ತು ಸದಾಚಾರಾನುಷ್ಠಾನ.

ಪ್ರಜೆಗಳ ಯೋಗಕ್ಷೇಮ ಮತ್ತು ಸುಖಸಂತೋಷಗಳು ಆದರ್ಶ ರಾಜ್ಯದ ಆದ್ಯ ಕರ್ತವ್ಯ ಮತ್ತು ಅಂತಿಮ ಗುರಿ. ಪ್ರಜೆಗಳಿಗೆ ಆಹಾರ ವಿಹಾರ, ಆರೋಗ್ಯ, ತೃಪ್ತಿ, ವಿರಾಮಗಳನ್ನು ಒದಗಿಸಿ ಅವರು ನ್ಯಾಯಬದ್ಧವಾದ, ಧರ್ಮನಿಷ್ಠವಾದ, ಪ್ರೇಮಪೂರ್ಣವಾದ ಸುಂದರ ಬದುಕನ್ನು ಬಾಳಲು ಅನುಕೂಲವಾದ ಅವಕಾಶಗಳನ್ನು ಕಲ್ಪಿಸಬೇಕು. ಪ್ಲೇಟೋನ ಪರಿಭಾಷೆಯಲ್ಲಿ ಸೌಂದರ್ಯ, ಧರ್ಮ ಮತ್ತು ಪ್ರೇಮ ಹೆಚ್ಚು ಕಡಮೆ ಸಮಾನಾರ್ಥಕಗಳು. ಅವುಗಳಿಂದ ಕೂಡಿ ಬಾಳುವುದೇ ಮಾನವ ಜೀವನದ ಪರಮಪುರುಷಾರ್ಥ. ಅವನ್ನು ಹೊಂದಿರುವ ವ್ಯಕ್ತಿಯ ಸ್ವಭಾವ, ನಡೆನುಡಿ ಸುತ್ತಲಿನ ಸಮಾಜದೊಂದಿಗೆ ಸಮರಸವಾಗಿ ಮಿಳಿತವಾಗಿರುತ್ತದೆ. ಅಂತಹ ವ್ಯಕ್ತಿ ಯಾವುದನ್ನೇ ಮಾಡಲಿ, ಏನನ್ನೇ ಸೃಷ್ಟಿಸಲಿ–ಮಕ್ಕಳು, ಕಲಾಕೃತಿಗಳು, ಕಾರ್ಯಗಳು–ಎಲ್ಲವೂ ಸುಂದರವಾಗಿರುತ್ತವೆ. ಅಂತಹವರಿಂದ ರಚಿತವಾಗಿರುವುದೇ ಆದರ್ಶ ರಾಜ್ಯದ ಸ್ವರೂಪ, ಅಂತಹವರನ್ನು ರೂಪಿಸಿ ಪೋಷಿಸುವುದೇ ಅದರ ಸಫಲತೆ.

ಇದು ಪ್ಲೇಟೋನ ಆದರ್ಶ ಧರ್ಮರಾಜ್ಯದ ಕಲ್ಪನೆ. ಅದನ್ನು ಅವನು ತನ್ನ ಇಷ್ಟದೇವತೆಯಾಗಿದ್ದ, ಬೆಳಕಿನ ಒಡೆಯ ಅಪೊಲ್ಲೊಗೆ ಸಮರ್ಪಿಸಿದ್ದ. ಮುಂದಿನ ಪೀಳಿಗೆಗಳು ಭೂಮಿಯನ್ನು ಸ್ವರ್ಗವನ್ನಾಗಿ ಮಾಡಲು ಬಯಸಿದಾಗ ಅದಕ್ಕೊಂದು ಮಾದರಿಯನ್ನು ಒದಗಿಸಿದ. ಅನುಕೂಲವಾದ ಸಂದರ್ಭ ಒದಗಿದೆಯೆಂದು ಕಂಡುಬಂದಾಗ ಅದನ್ನು ಕಾರ್ಯಗತ ಮಾಡಲೂ ಯತ್ನಿಸಿದ. ಅವನ ಪ್ರಯತ್ನ ವಿಫಲವಾದರೂ ಅವನ ಹೃದಯದ ಹಂಬಲ ಇಂಗಲಿಲ್ಲ. ಅದನ್ನು ಆದರ್ಶವಾಗಿಟ್ಟುಕೊಂಡು ಬಾಳಬೇಕೆಂದು ಶಿಷ್ಯರಿಗೆ ಬೋಧಿಸುತ್ತಾ ಬಾಳು ಸಾಗಿಸಿದ. ಈ ಕನಸು ಕಂಡವರಲ್ಲಿ ಪ್ಲೇಟೋ ಮೊದಲಿಗನೂ ಅಲ್ಲ, ಕೊನೆಯವನೂ ಅಲ್ಲ. ಅವನ ಹಿರಿಯ ಸಮಕಾಲೀನ ಮತ್ತು ಪ್ರಿಯ ವೈನೋದಿಕ

ನಾಟಕಕಾರ ಅರಿಸ್ಟೋಫನಿಸ್ ಅದರ ಮಾದರಿಯೊಂದನ್ನು ತನ್ನ "ಹಕ್ಕಿಗಳು" ಎಂಬ ನಾಟಕದಲ್ಲಿ ನಿರೂಪಿಸಿದ್ದ. ಅವನ ತರುವಾಯ ಸರ್ ಥಾಮಸ್ ಮೂರ್, ಫ್ರಾನ್ಸಿಸ್ ಬೇಕನ್, ವಾಲ್ಟೇರ್, ರೂಸೋ, ಶೆಲ್ಲಿ, ಸ್ಯಾಮ್ಯುಯೆಲ್ ಬಟ್ಲರ್, ಬರ್ನಾಡ್ ಷಾ, ಎಚ್.ಜಿ. ವೆಲ್ಸ್, ಅಲ್ಡಸ್ ಹಕ್ಸ್ಲಿ ಮೊದಲಾದವರು ಆದರ್ಶ ಸಮಾಜದ ತಮ್ಮದೇ ಆದ ಮಾದರಿಗಳನ್ನು ಚಿತ್ರಿಸಿದರು. ಈ ಪರಂಪರೆಯ ಮೂಲಮಾದರಿ ಪ್ಲೇಟೋನದು. ಕ್ರಿ.ಪೂ. ಐದನೆಯ ಶತಮಾನದಲ್ಲಿ ರಚಿತವಾಗಿದ್ದರೂ ಅದರ ಅನೇಕ ಅಂಶಗಳು ಅತ್ಯಾಧುನಿಕವಾಗಿವೆ ಮತ್ತು ಅದರ ಸಲಹೆಗಳು ಇಂದಿಗೂ ಪ್ರಸಕ್ತವಾಗಿವೆ. ಅದು ಕಮ್ಯೂನಿಸ್ಟ್ ಹಾಗೂ ಶುದ್ಧ ವೈಜ್ಞಾನಿಕ ಸಮಾಜ ವ್ಯವಸ್ಥೆಗಳಿಗೆ ತಳಹದಿ ಒದಗಿಸಿದೆ. ಆದರೆ ಸಮಾಜದ ಶ್ರೇಣೀಕೃತ ವ್ಯವಸ್ಥೆ ಮತ್ತು ಜನಜೀವನದ ಕೇಂದ್ರೀಕೃತ ನಿಯಂತ್ರಣ ಇವುಗಳಿಂದಾಗಿ ಪ್ಲೇಟೋನ ಹೆಸರು ಪ್ರಜಾಪ್ರಭುತ್ವ ವಿರೋಧಿಗಳ ಹಾಗೂ ಜನತೆಯ ಶತ್ರುಗಳ ಪಟ್ಟಿಯಲ್ಲಿ ಸೇರುವಂತೆ ಮಾಡಿದೆ. ಅದರ ಇತಿಮಿತಿಗಳು ಏನೇ ಆಗಿರಲಿ, ಅದು ಪ್ಲೇಟೋನ ಶ್ರೇಷ್ಠ ಕೊಡುಗೆಯೆಂದು ಇಂದಿಗೂ ಭಾವಿತವಾಗಿದೆ. ಅವನ ಈ ಕೃತಿ ಯೂರೋಪಿನ ಸಾಹಿತ್ಯದ ಅತ್ಯುತ್ತಮವಾದ ಮತ್ತು ಸುಸಂಸ್ಕೃತನೆಂದುಕೊಳ್ಳುವ ವ್ಯಕ್ತಿಯು ಓದಿರಲೇಬೇಕಾದ ಕೃತಿಗಳಲ್ಲಿ ಒಂದು ಎಂದು ಪುರಸ್ಕೃತವಾಗಿದೆ. ಅವನ ಕೃತಿಗಳ ಪೈಕಿ ಅತ್ಯಂತ ಜನಪ್ರಿಯವಾದುದೂ ಆಗಿದೆ.

ಕ್ರಿ.ಪೂ. ೩೬೭ರಲ್ಲಿ ಸಿಸಲಿಗೆ ಮತ್ತೆ ಭೇಟಿ ನೀಡಲು ಪ್ಲೇಟೋಗೆ ಆಮಂತ್ರಣ ಬಂದಿತು. ಅಷ್ಟು ಹೊತ್ತಿಗೆ ಮೊದಲನೇ ಡಯೊನೈಸಸ್ ತೀರಿಕೊಂಡಿದ್ದು, ಅವನ ತಮ್ಮನ ಮಗ ಎರಡನೇ ಡಯೊನೈಸಸ್ ಸಿಂಹಾಸನವೇರಿದ್ದ. ಅವನು ಪ್ಲೇಟೋನನ್ನು ತನ್ನ ಆಸ್ಥಾನಕ್ಕೆ ಆಹ್ವಾನಿಸಿ ತನಗೆ ತತ್ತ್ವಶಾಸ್ತ್ರವನ್ನು ಬೋಧಿಸುವಂತೆ ಕೋರಿದ. ಪ್ಲೇಟೋಗೆ ಆಗ ೬೧ ವರ್ಷವಾಗಿತ್ತು. ಸಿಸಲಿಯ ಮೊದಲನೆಯ ಭೇಟಿಯ ವೈಫಲ್ಯ ಅವನ ನೆನಪಿನಲ್ಲಿತ್ತು. ಆದರೆ ಈ ನಡುವಿನಲ್ಲಿ ಅವನು ಆದರ್ಶರಾಜ್ಯದ ಕಲ್ಪನೆಯೊಂದನ್ನು ತಯಾರಿಸಿದ್ದ. ಅದನ್ನು ಕಾರ್ಯಗತ ಮಾಡಲು ಒದಗಿದ ಒಂದು ಅವಕಾಶವೆಂದು ಈ ಸಂದರ್ಭವನ್ನು ಪರಿಗಣಿಸಿ ಎರಡನೇ ಬಾರಿಗೆ ಸಿಸಿಲಿಗೆ ಹೊರಟ.

ಎರಡನೇ ಡಯೊನೈಸಸ್ ಇನ್ನೂ ೨೮ ವರ್ಷದ ಯುವಕ. ಪ್ಲೇಟೋನ ಶಿಷ್ಯನಾಗಿದ್ದ ಡಯೊನ್ ಅವನ ಮಂತ್ರಿಯಾಗಿದ್ದ. ಪ್ಲೇಟೋನ ಎರಡನೇ ಭೇಟಿಗೆ ಪ್ರಾಯಶಃ ಅವನ ಸಲಹೆಯೇ ಕಾರಣವಾಗಿದ್ದಂತೆ ಕಾಣುತ್ತದೆ. ಡಯೊನನ್ಯೈಸಸ್‌ನೇನೋ ಪ್ಲೇಟೋವಿನಲ್ಲಿ ಬಹಳ ಗೌರವವಿಟ್ಟಿದ್ದ ಮತ್ತು ಅವನಿಂದ ಕಲಿಯಲು ಉತ್ಸುಕನಾಗಿದ್ದ. ಆದರೆ ಪ್ಲೇಟೋನ ದೃಷ್ಟಿಯಲ್ಲಿ ತತ್ತ್ವಶಾಸ್ತ್ರದ ಅಧ್ಯಯನ ಅಷ್ಟು ನೇರವೂ ಸುಲಭವೂ ಆಗಿರಲಿಲ್ಲ. ಅದರಲ್ಲಿ ತೊಡಗುವ ಮುನ್ನ ಇತರ ಕೆಲವು ವಿಷಯಗಳ, ಮುಖ್ಯವಾಗಿ ಜ್ಯಾಮಿತಿಯ, ಅಧ್ಯಯನ ಅಗತ್ಯವಾಗಿತ್ತು. ಆದರೆ ಡಯೊನೈಸಸ್‌ನಿಗೆ ಜ್ಯಾಮಿತಿಯಲ್ಲಿ ಆಸಕ್ತಿಯಿರಲಿಲ್ಲ. ಜ್ಯಾಮಿತಿಯಲ್ಲಿ ಪರಿಣತನಾಗದವನಿಗೆ ಪ್ಲೇಟೋ ತತ್ತ್ವಶಾಸ್ತ್ರವನ್ನು ಬೋಧಿಸಲು ಸಿದ್ಧನಿರಲಿಲ್ಲ. ಆದ್ದರಿಂದ ಅವರಿಬ್ಬರ ನಡುವೆ ವೈಮನಸ್ಯ ತಲೆದೋರಿತು. ಡಯೊನನ ಜೊತೆ ಸೇರಿಕೊಂಡು ಪ್ಲೇಟೋ ತನ್ನ ವಿರುದ್ಧ ಯಾವುದೋ ಪಿತೂರಿ ಮಾಡುತ್ತಿದ್ದಾನೆಂದು

ಶಂಕಿಸಿ ಡಯೊನೈಸಸ್‌ನು ಡಯೊನನನ್ನು ಗಡಿಪಾರು ಮಾಡಿ ಪ್ಲೇಟೋನನ್ನು ಒಂದು ಬಗೆಯ ಬಂಧನದಲ್ಲಿಟ್ಟ. ಪ್ಲೇಟೋ ಹೇಗೋ ಅದರಿಂದ ಬಿಡಿಸಿಕೊಂಡು ಅಥೆನ್ಸಿಗೆ ಹಿಂದಿರುಗಿ ತನ್ನ ಪಾಠಪ್ರವಚನಗಳಲ್ಲಿ ಮಗ್ನನಾದ. ಕ್ರಿ.ಪೂ. ೩೬೧ರಲ್ಲಿ ಮತ್ತೆ ಸೈರಕ್ಯೂಸಿನಿಂದ ಆಮಂತ್ರಣ ಬಂದಿತು. ಡಯೊನೈಸಸ್‌ನು ಮತ್ತೆ ತತ್ತ್ವಶಾಸ್ತ್ರದಲ್ಲಿ ಆಸ್ಥೆ ತಳೆದಿದ್ದಾನೆಂದೂ ಅದರಲ್ಲಿ ಸಾಕಷ್ಟು ಪ್ರಗತಿ ಸಾಧಿಸಿದ್ದಾನೆಂದೂ ಅವನ ಆಸ್ಥಾನದಲ್ಲಿದ್ದ ಪಂಡಿತರು ಪ್ಲೇಟೋಗೆ ತಿಳಿಸಿದರು. ಜೊತೆಗೆ ಪ್ಲೇಟೋ ಖಂಡಿತವಾಗಿ ಸೈರಕ್ಯೂಸಿಗೆ ಬರಬೇಕೆಂದೂ ಬಂದು ಡಯೊನನ ವ್ಯವಹಾರಗಳನ್ನು ಇತ್ಯರ್ಥ ಮಾಡಬೇಕೆಂದೂ ಸ್ವತಃ ಡಯೊನೈಸಸ್‌ನೇ ಕಾಗದ ಬರೆದಿದ್ದ. ಅದರಂತೆ ಪ್ಲೇಟೋ ಮತ್ತೆ ಸೈರಕ್ಯೂಸಿಗೆ ಹೋದ. ಈ ಸಲದ ಭೇಟಿಯೂ ವಿಫಲವಾಯಿತು. ಕ್ರಿ.ಪೂ. ೩೬೦ರಲ್ಲಿ ಪ್ಲೇಟೋ ಅಂತಿಮವಾಗಿ ಅಥೆನ್ಸಿಗೆ ಹಿಂದಿರುಗಿದ.

ಪ್ಲೇಟೋಗೆ ಸಿಗಬೇಕಾಗಿದ್ದ ಪುರಸ್ಕಾರ ಬೇರೊಂದೆಡೆ ಸಿಕ್ಕಿತು. ಹರ್ಮಿಯಸ್ ಎಂಬುವನು ಏಷ್ಯಾಮೈನರಿನ ವಾಯುವ್ಯಪ್ರದೇಶದಲ್ಲಿ ಅತರ್ನ್ಯೂಸ್ ಎಂಬ ಚಿಕ್ಕ ರಾಜ್ಯವೊಂದನ್ನು ಕಟ್ಟಿಕೊಂಡು ಆಳುತ್ತಿದ್ದ. ಪ್ರಾಯಶಃ ಅಥೆನ್ಸಿಗೆ ಹೋಗಿದ್ದ. ಅಲ್ಲಿ ಪ್ಲೇಟೋನ ಶಿಕ್ಷಣಶಾಲೆಗೆ ಭೇಟಿಕೊಟ್ಟು ಅದರ ಶಿಕ್ಷಣಕ್ರಮವನ್ನು ಮೆಚ್ಚಿಕೊಂಡಿದ್ದ. ಅಲ್ಲಿ ವ್ಯಾಸಂಗ ಮಾಡುತ್ತಿದ್ದ ತನ್ನ ದೇಶದ ಇಬ್ಬರು ವಿದ್ಯಾರ್ಥಿಗಳು ತಮ್ಮ ಊರಿಗೆ ವಾಪಸಾದ ಮೇಲೆ ಅವರನ್ನು ಕರೆಕಳುಹಿಸಿ, ತನ್ನ ಸರ್ಕಾರದಲ್ಲಿ ಅವರನ್ನು ಒಂದು ಬಗೆಯ ಸಲಹೆಗಾರರನ್ನಾಗಿ ನೇಮಕ ಮಾಡಿಕೊಂಡ. ಅವರ ಪ್ರಭಾವದಿಂದ ಅವನ ನಿರಂಕುಶ ಆಡಳಿತ ಸ್ವಲ್ಪ ಮೆದುವಾಯಿತಂತೆ. ಅದಕ್ಕೆ ಪ್ರತಿಯಾಗಿ ಅವನು ತನ್ನ ರಾಜ್ಯದ ಅಸ್ಸೋಸ್ ಪ್ರಾಂತ್ಯವನ್ನು ಅವನಿಗೆ ಇನಾಮಾಗಿ ಕೊಟ್ಟ. ಪ್ಲೇಟೋನ ಮರಣದ ತರುವಾಯ ಅರಿಸ್ಟಾಟಲ್ ಅವರ ಶಿಕ್ಷಣ ಸಂಸ್ಥೆಯಲ್ಲಿ ಶಿಕ್ಷಕನಾಗಿ ಸೇರಿದ.

ಸಿಸಲಿಯ ಅನುಭವ ಪ್ಲೇಟೋಗೆ ಮಹತ್ವಪೂರ್ಣದ್ದಾಗಿತ್ತು. ಮಾಡಲು ಯಾವುದು ಶ್ರೇಷ್ಠ ಮತ್ತು ಯಾವುದು ರೀತಿಯಲ್ಲಿ ಮಾಡಲು ಸಾಧ್ಯ ಎಂಬುದರ, ಆದರ್ಶ ಕಲ್ಪನೆ ಮತ್ತು ಕಾರ್ಯಸಾಧ್ಯತೆಗಳ, ನಡುವಣ ವ್ಯತ್ಯಾಸವನ್ನು ಅವನು ಅರಿಯುವಂತಾದ. ಆಗ ಅವನಿಗೆ ೭೨ ವರ್ಷ. ಸಿಸಲಿಯ ಭೇಟಿಯ ತರುವಾಯ ಆದರ್ಶ ರಾಜ್ಯ ಎನ್ನುವುದು ಒಂದು ಕನಸೆಂದು ತೋರಿತು. ಯಾವುದು ಇರಬೇಕು ಎನ್ನುವುದಕ್ಕಿಂತಲೂ ಅನುಕೂಲವಾದ ಸಂದರ್ಭಗಳಲ್ಲಿ ಯಾವುದು ಸಾಧ್ಯ ಎನ್ನುವುದನ್ನು "ಕಾನೂನುಗಳು" ಎಂಬ ಸಂವಾದದಲ್ಲಿ ಚಿತ್ರಿಸುತ್ತಾ ತನ್ನ ಕೊನೆಯ ದಿನಗಳನ್ನು ಕಳೆದ.

ಪ್ಲೇಟೋ ತನ್ನ ಕೊನೆಯ ಹತ್ತು ವರ್ಷಗಳನ್ನು ತನ್ನ ಶಾಲೆಯ ಉದ್ಯಾನವನದ ಪ್ರಶಾಂತ ವಾತಾವರಣದಲ್ಲಿ ಶಿಷ್ಯರಿಂದ ಸುತ್ತುವರಿದಿರುತ್ತಾ ಗಂಭೀರ ಚರ್ಚೆ, ಪ್ರವಚನ ಮತ್ತು ಸೊಕ್ರೆಟಿಸನ ಸಂವಾದಗಳ ಲೇಖನಗಳಲ್ಲಿ ಕಳೆದ. ಅವನ ಶಾಲೆಯ ಪ್ರಸಿದ್ಧಿ ದೂರದೂರದ ರಾಜ್ಯಗಳಿಂದ ವಿದ್ಯಾರ್ಥಿಗಳನ್ನು ಸೆಳೆಯಿತು. ಅವನ ಪಾಠಪ್ರವಚನ ಆಕರ್ಷಣೆ ಜನಜನಿತವಾಗಿತ್ತು. ದೇವೇಂದ್ರನೇನಾದರೂ ಭೂಲೋಕಕ್ಕೆ ಭೇಟಿಕೊಟ್ಟಲ್ಲಿ ಅವನು ಮಾತಾಡುತ್ತಿದ್ದುದು ಪ್ಲೇಟೋನಂತೆಯೇ ಎಂದು ಜನ ಹೇಳುತ್ತಿದ್ದರು. ಅವನ ಪ್ರವಚನದಿಂದ ಪ್ರಭಾವಿತರಾಗಿದ್ದ ಅವನ ವಿದ್ಯಾರ್ಥಿಗಳು ತಮ್ಮ ಊರುಗಳಿಗೆ ಹಿಂದಿರುಗಿದ

ಮೇಲೆ ಅಲ್ಲೆಲ್ಲಾ ತಮ್ಮ ಗುರುವಿನ ತತ್ತ್ವಗಳನ್ನು ಪ್ರಚಾರ ಮಾಡಿದರು. ಕಾಲಾನುಕ್ರಮದಲ್ಲಿ ಈ ತತ್ತ್ವಗಳು ಯೂರೋಪಿನ ಇತರ ದೇಶಗಳಿಗೂ ಅಲ್ಲದೆ ಯೂರೋಪಿನ ಪ್ರಭಾವಕ್ಕೆ ಒಳಗಾದ ಪ್ರಪಂಚದ ಇತರ ಭಾಗಗಳಿಗೂ ಹರಡಿದವು. ಪ್ರಾಚೀನ ಗ್ರೀಸಿನ ಅಥೆನ್ಸ್ ನಗರದ ಒಬ್ಬ ವಿಶಿಷ್ಟ ಪ್ರಜೆಯಾಗಿದ್ದ ಪ್ಲೇಟೋ ವಿಶ್ವವ್ಯಾಪಕವಾದ ಒಂದು ಪ್ರಭಾವವಾದ. ಆದರ್ಶರಾಜ್ಯ ಒಂದು ಕಾರ್ಯಸಾಧ್ಯವಲ್ಲದ ಕನಸೆಂದು ಗೊತ್ತಾದರೂ ಪ್ಲೇಟೋನ ಹಂಬಲ ಕೊನೆಯವರೆಗೂ ಅದನ್ನು ಸ್ಥಾಪಿಸಲು ಶ್ರಮಿಸುವುದಾಗಿತ್ತು. ಅದನ್ನು ನಿರ್ವಹಿಸುವ ದಾರ್ಶನಿಕ ಆಡಳಿತಗಾರರನ್ನು ತಯಾರುಮಾಡುವ ಉದ್ಯಮದಲ್ಲಿ ತೊಡಗಿರುವುದಾಗಿತ್ತು. ಅವನ ಕೊನೆಯ ಮತ್ತು ಅತ್ಯಂತ ದೀರ್ಘ ಕೃತಿ, ಕಾನೂನುಗಳು ಮತ್ತೆ ರಾಜಕೀಯವನ್ನು ಕುರಿತದ್ದಾಗಿದೆ. ಆದರೆ ಅದು ಅವನ ಮಧ್ಯ ವಯಸ್ಸಿನ ಕೃತಿಯಾದ ಆದರ್ಶ ರಾಜ್ಯದಂತೆ ಉತ್ಸಾಹದ ಕನಸಾಗಿರದೆ ಲೋಕಾನುಭವದಿಂದ ಪಕ್ವವಾದ ಅಪರವಯಸ್ಸಿನ ಸಂಯಮದಿಂದ ಕೂಡಿ ವಾಸ್ತವಿಕತೆಗೆ ಹತ್ತಿರವಾಗಿದೆ. ಆದರೂ ತನ್ನ ಜೀವಿತದ ಅಂತ್ಯದವರೆಗೂ ಪ್ಲೇಟೋನ ಉದ್ದೇಶ ದಾರ್ಶನಿಕ ರಾಜನನ್ನು ರೂಪಿಸುವುದೇ ಆಗಿತ್ತು ಎನ್ನುವುದರಲ್ಲಿ ಯಾವ ಬದಲಾವಣೆಯೂ ಆಗಿರಲಿಲ್ಲ.

ಕ್ರಿ.ಪೂ. ೩೪೮ ರಲ್ಲಿ ಪ್ಲೇಟೋ ಒಂದು ದಿನ ತನ್ನ ಯುವಸ್ನೇಹಿತನೊಬ್ಬನ ಮದುವೆಯ ಔತಣಕ್ಕೆ ಹೋಗಿದ್ದ. ಸಮಾರಂಭದ ಗಡಿಬಿಡಿಗಳ ಸದ್ದುಗದ್ದಲಗಳಿಂದ ಅವನಿಗೆ ಆಯಾಸ ತೋರಿತು. ಸ್ವಲ್ಪ ವಿಶ್ರಮಿಸಿಕೊಳ್ಳುವುದಾಗಿ ಹೇಳಿ ಪಕ್ಕದ ಕೋಣೆಯೊಂದಕ್ಕೆ ಹೋದ. ತಮ್ಮ ಸಂಭ್ರಮಸಡಗರಗಳಲ್ಲಿ ಅತಿಥಿಗಳು ಈ ಮುದುಕನ ಯೋಗಕ್ಷೇಮ ವಿಚಾರಿಸಲು ಮರೆತರು. ಸ್ವಲ್ಪಕಾಲದ ಅನಂತರ ಮದುವಣಿಗನಿಗೆ ಜ್ಞಾಪಕ ಬಂದು ಅವನು ಮೆತ್ತಗೆ ಹೆಜ್ಜೆಯಿಡುತ್ತಾ ಕೋಣೆಯನ್ನು ಹೊಕ್ಕು ತನ್ನ ವೃದ್ಧ ಗುರುವನ್ನು ನೋಡಿದ. ಗುರುವು ಶಾಶ್ವತ ವಿಶ್ರಾಂತಿಯಲ್ಲಿದ್ದ. ದಾರ್ಶನಿಕರ ರಾಜ ದೇವರಾಜನ ಲೋಕವನ್ನು ಪ್ರವೇಶಿಸಿದ್ದ. ಆಗ ಪ್ಲೇಟೋಗೆ ೮೧ ವರ್ಷಗಳಾಗಿದ್ದವು.

ಪಾಶ್ಚಾತ್ಯ ಶಾಸ್ತ್ರ, ಸಾಹಿತ್ಯ ಮತ್ತು ಚಿಂತನೆಗಳ ಮೇಲೆ ಪ್ಲೇಟೋನ ಪ್ರಭಾವ ಗಾಢವಾದುದು. ವ್ಯಾಪಕವಾದುದು ಮತ್ತು ನಿರಂತರವಾದುದು. ಪಾಶ್ಚಾತ್ಯ ತತ್ತ್ವಶಾಸ್ತ್ರವು ಪ್ಲೇಟೋನ ಮೇಲಿನ ಅಡಿಟಿಪ್ಪಣಿಗಳು, ಅವನ ಪರ ಅಥವಾ ವಿರುದ್ಧವಾದ ನಿರೂಪಣೆಗಳು ಎಂದು ಕೂಡ ಹೇಳಲಾಗಿದೆ. ಇದನ್ನು ಅತಿಶಯೋಕ್ತಿಯೆಂದರೂ ಅದರಲ್ಲಿ ಸ್ವಲ್ಪಮಟ್ಟಿನ ಸತ್ಯಾಂಶವಿದೆಯೆಂಬುದನ್ನು ನಿರಾಕರಿಸಲಾಗುವುದಿಲ್ಲ. ಸೊಕ್ರೆಟಿಸನಂತೆಯೇ ಪ್ಲೇಟೋ ಕೂಡ ತನ್ನ ಸಿದ್ಧಾಂತವನ್ನು ಪ್ರತಿಪಾದಿಸಲು ಯಾವುದೇ ಗ್ರಂಥವನ್ನು ಬರೆಯಲಿಲ್ಲ. ಸೊಕ್ರೆಟಿಸನು ಅದನ್ನು ವಿವಿಧ ವ್ಯಕ್ತಿಗಳೊಡನೆಯ ಚರ್ಚೆ, ಸಂಭಾಷಣೆಗಳ ಮೂಲಕ ಮಾಡಿದ್ದರೆ, ಪ್ಲೇಟೋ ಆ ಸಂಭಾಷಣೆಗಳನ್ನು ರಚಿಸುವ ಅಥವಾ ವರದಿ ಮಾಡುವ ಮೂಲಕ ಮಾಡಿದ. ಹೀಗೆ ನಿರೂಪಿತವಾದ ಸಿದ್ಧಾಂತದ ಎಷ್ಟು ಅಂಶ ಐತಿಹಾಸಿಕ ಸೊಕ್ರೆಟಿಸನದು ಮತ್ತು ಎಷ್ಟು ಅಂಶ ಸೊಕ್ರೆಟಿಸನ ಬಾಯಲ್ಲಿಟ್ಟ ಪ್ಲೇಟೋನ ಸ್ವಂತ ಅಭಿಪ್ರಾಯ ಎನ್ನುವುದು ಇಂದಿಗೂ ವಿವಾದದ ವಿಷಯವಾಗಿದೆ. ಆದರೆ ಸಂವಾದಗಳಲ್ಲಿ ನಿರೂಪಿಸಿರುವ ಸಿದ್ಧಾಂತವನ್ನು ಸೊಕ್ರೆಟಿಸನದೆಂದೂ ಪ್ಲೇಟೋವಿನದೆಂದೂ ರೂಢಿಯಲ್ಲಿ ಸಮಾನವಾಗಿ ಪರಿಗಣಿಸಲಾಗಿದೆ.

ಸೊಕ್ರಟಿಸನು ತತ್ತ್ವಶಾಸ್ತ್ರವನ್ನು ದೇವಲೋಕದ ಹಜಾರಗಳಿಂದ ಮನುಷ್ಯಲೋಕದ ಪೇಟೆಬೀದಿಗೆ ತಂದನೆಂದು ಹೇಳಲಾಗಿದೆ. ಪ್ಲೇಟೋ ಅದನ್ನು ಪಂಡಿತರ ತರ್ಕಗೋಷ್ಠಿಗಳ ಸೆರೆಯಿಂದ, ತಮ್ಮ ಬದುಕಿನ ಕೊನೆಯ ದಿನಗಳನ್ನು ನೆಮ್ಮದಿಯಿಂದ ಪಾರಮಾರ್ಥಿಕ ಚಿಂತನೆಯಲ್ಲಿ ಕಳೆಯಬೇಕೆಂದು ಬಯಸಿದ ಮುದುಕರ ಬಳಲಿದ ಕೈಗಳಿಂದ ಪಾರುಮಾಡಿ, ಜೀವನದ ಸಮಸ್ಯೆಗಳನ್ನು ಎದುರಿಸಲು, ಅದರ ಜವಾಬ್ದಾರಿಗಳನ್ನು ಹೊರಲು ಹೊರಟುನಿಂತ ಉತ್ಸಾಹಿ ಯುವಕರ ಕೈಗಳಿಗೊಪ್ಪಿಸಿದ. ಅದು ವಿದ್ವಾಂಸರ ಕೇವಲ ವಿಹಾರಭೂಮಿಯಾಗಿರುವುದನ್ನು ತಪ್ಪಿಸಿ ಅದನ್ನು ಸಾಮಾನ್ಯ ಜನರ ಸುಗಮ ಜೀವನಕ್ಕೆ ತೋರುದೀಪವನ್ನಾಗಿ ಮಾಡಿದ. ಸೃಷ್ಟಿಯ ದುರೂಹ್ಯವಾದ ಮೂಲಭೂತ ರಹಸ್ಯಗಳ ಅನ್ವೇಷಣೆಯಾಗಿರುವ ಜೊತೆಗೆ ಅದು ಮಾನವರ ಅನುದಿನದ ಬದುಕಿನ ಅಗತ್ಯಗಳಲ್ಲಿ ಒಂದನ್ನಾಗಿಯೂ ಮಾಡಿದ. ಆದರೆ ಸೊಕ್ರಟಿಸನು ನಡೆಸಿದ್ದೆಂದು ಹೇಳಲಾಗಿದ್ದ ಸಂಭಾಷಣೆಗಳ ಅಥವಾ ಚರ್ಚೆಗಳ ವರದಿಯ ಮೂಲಕ ಮಾಡಿದ. ಅವೇ ಪ್ಲೇಟೋನ ಪ್ರಸಿದ್ಧ ಸಂವಾದಗಳು.

ಪ್ಲೇಟೋ ಒಟ್ಟು ೩೦ ಸಂವಾದಗಳನ್ನು ರಚಿಸಿದ. ಅದರ ಕೇಂದ್ರವ್ಯಕ್ತಿ ಸೊಕ್ರಟಿಸ್ ಆಗಿರುತ್ತಿದ್ದ. ಈ ಸಂವಾದಗಳು ಜರುಗುತ್ತಿದ್ದುದು ಅಥೆನ್ಸಿನ ವಿವಿಧ ಪ್ರದೇಶಗಳಲ್ಲಿ. ಅದರಲ್ಲಿ ಪಾಲುಗೊಳ್ಳುತ್ತಿದ್ದವರು ಸಮಕಾಲೀನ ಅಥೆನ್ಸಿನ ಚಿರಪರಿಚಿತ ಸ್ಥಳವಂದಿಗರು ಮತ್ತು ಅಥೆನ್ಸಿಗೆ ಭೇಟಿ ನೀಡುತ್ತಿದ್ದ ನೆರೆ ಪ್ರದೇಶಗಳವರು. ಅವರಲ್ಲಿ ತತ್ತ್ವಶಾಸ್ತ್ರಜ್ಞರು, ಭಾಷಣಕಾರರು, ರಾಜಕಾರಣಿಗಳು, ಕವಿಗಳು, ನಾಟಕಕಾರರು, ಪಂಡಿತರು, ಪಾಮರರು, ಮುದುಕರು ಮತ್ತು ಯುವಕರು, ಎಲ್ಲಾ ಬಗೆಯವರೂ, ವೃತ್ತಿಯವರೂ ಇದ್ದರು. ವಿಷಯಗಳು ಮೂಲಭೂತ ಪಾರಮಾರ್ಥಿಕ ತತ್ತ್ವಗಳಿಂದ ಹಿಡಿದು ವ್ಯಾವಹಾರಿಕ ಜೀವನದ ಅನುದಿನದ ಸಮಸ್ಯೆಗಳವರೆಗೆ ಹರಡಿದ್ದವು. ಸಂಭಾಷಣೆಯಲ್ಲಿ ವಿಷಯಗಳು ಆಗಿನ ಸಂದರ್ಭಗಳಿಂದ ಅಥವಾ ಅದರಲ್ಲಿ ಭಾಗವಹಿಸುತ್ತಿದ್ದವರ ವೈಯಕ್ತಿಕ ಆಸಕ್ತಿಗಳಿಂದ ಸಹಜವಾಗಿ ಉದ್ಭವಿಸುತ್ತಿದ್ದವು. ಲೋಕಾಭಿರಾಮವಾಗಿ ಪ್ರಾರಂಭವಾಗುತ್ತಿದ್ದ ಸಂಭಾಷಣೆ ಮುಂದುವರೆಯುತ್ತಿದ್ದಂತೆ ಸ್ವಲ್ಪ ಹೊತ್ತಿನಲ್ಲಿಯೇ ಗಂಭೀರವಾದ ತಾತ್ವಿಕ ಚರ್ಚೆಗೆ ಒಯ್ಯುತ್ತಿತ್ತು. ಈ ಚರ್ಚೆ ಏಕಮುಖವಾಗಿ ಕ್ರಮಬದ್ಧವಾಗಿ ಏಕತಾನತೆಯಿಂದ ಸಾಗುತ್ತಿರಲಿಲ್ಲ. ಅಡ್ಡಪ್ರಶ್ನೆ, ವಿಷಯಾಂತರ, ವ್ಯಂಗ್ಯ, ಕುಚೋದ್ಯಗಳಿಂದ ಕೂಡಿ ವೈವಿಧ್ಯಮಯವಾಗಿತ್ತು. ಅದರಲ್ಲಿ ಭಾಗವಹಿಸುತ್ತಿದ್ದ ಪಾತ್ರಗಳು ಜೀವಂತ ವ್ಯಕ್ತಿಗಳಾಗಿದ್ದುದಷ್ಟೇ ಅಲ್ಲದೆ ವಿಭಿನ್ನ ದೃಷ್ಟಿಕೋನಗಳ ಪ್ರತಿನಿಧಿಗಳಾಗಿರುತ್ತಿದ್ದರು. ಆದ್ದರಿಂದ ಚರ್ಚೆಗೆ ಒಳಗಾಗಿದ್ದ ವಿಷಯ ಭಿನ್ನಭಿನ್ನ ನೆಲೆಗಳಿಂದ ಪರೀಕ್ಷಿತವಾಗುತ್ತಿತ್ತು. ಎಷ್ಟೋ ವೇಳೆ ಸಮಸ್ಯೆ ವಿಶದವಾಗುತ್ತಿತ್ತೇ ವಿನಾ ಪರಿಹಾರವಾಗುತ್ತಿರಲಿಲ್ಲ. ಆದರೆ ಇದರಿಂದಾಗಿ ಚರ್ಚೆಯ ಗಾಂಭೀರ್ಯವೇನೂ ಕುಂದುತ್ತಿರಲಿಲ್ಲ. ಮಾತಿನ ಚಕಮಕಿ [illegible] ವಾದದ [illegible]ವುಮುರಿವುಗಳು ಸಂವಾದಕ್ಕೆ [illegible] ನೀಡುತ್ತಿದ್ದವು. ಪಾತ್ರಗಳ [illegible]ವಿಕ ಚಿತ್ರಣ, [illegible] ಮತ್ತು [illegible] ಸಹಜತೆಗಳು ಸಂವಾದಕ್ಕೆ ಐತಿಹಾಸಿಕತೆ ಮತ್ತು ನಾಟಕದ ದೃಶ್ಯಗುಣದ ವಾತಾವರಣ ಕಲ್ಪಿಸಿದ್ದವು. ಇದರ ಪ್ರಭಾವಕ್ಕೊ[illegible]

ಓದುಗನು ತಾನೊಬ್ಬ ಕೇವಲ ಪರೋಕ್ಷ ಶ್ರೋತೃವಾಗಿರದೆ ಪ್ರತ್ಯಕ್ಷ ಸಂಭಾಷಣೆಯೊಂದರಲ್ಲಿ ಮೌನದಿಂದ ಭಾಗವಹಿಸುತ್ತಿರುವ ಒಂದು ಪಾತ್ರವಾಗಿ ತನ್ನನ್ನು ಭಾವಿಸಿಕೊಳ್ಳುವಂತಾದ. ಶೈಲಿಯ ಮೋಡಿ ಮತ್ತು ನಾಟಕೀಯ ನಿರೂಪಣೆಗಳಿಂದಾಗಿ ತತ್ತ್ವಶಾಸ್ತ್ರದ ಶುಷ್ಕ ಪ್ರತಿಪಾದನೆಯಾಗದೆ ಶ್ರೇಷ್ಠ ಸಾಹಿತ್ಯವೂ ಆಗಬಹುದು, ತತ್ತ್ವಚಿಂತನೆ ಬುದ್ಧಿಗೆ ವ್ಯಾಯಾಮವಾಗುವುದರ ಜೊತೆಗೆ ಹೃದಯಕ್ಕೆ ಆಹ್ಲಾದವನ್ನು ನೀಡಬಹುದು ಎನ್ನುವುದನ್ನು ಸ್ಥಾಪಿಸಿದವು. ಪ್ಲೇಟೋನ ಈ ಸಂವಾದಗಳು ಗಳಿಸಿರುವ ವ್ಯಾಪಕ ಜನಪ್ರಿಯತೆಯನ್ನು ಯೂರೋಪಿನ ಇತರ ಯಾವ ತತ್ತ್ವಶಾಸ್ತ್ರಗ್ರಂಥವೂ ಸರಿಗಟ್ಟಿಲ್ಲ ಎನ್ನುವುದು ಸರ್ವವಿದಿತ.

ಭಾರತದಲ್ಲಿ ಸಮ್ಮಿಶ್ರ ಸರ್ಕಾರ ಮತ್ತು ಅದರ ಅವಶ್ಯಕತೆ

ಡಾ. ಎಚ್. ಜಯಕುಮಾರ್

ಸಮ್ಮಿಶ್ರ ಸರ್ಕಾರವೆಂದರೆ, ಒಂದು ರಾಜಕೀಯ ಪಕ್ಷ ಅಥವಾ ರಾಜಕೀಯ ಗುಂಪುಗಳು ಒಂದಾಗಿ ಸಾಮಾನ್ಯ ಪ್ರನಾಳಿಕೆ ಅಥವಾ ಕಾರ್ಯಕ್ರಮದ ಅಡಿಯಲ್ಲಿ ಸರ್ಕಾರದ ರಚನೆ ಮಾಡುವುದು ಹಾಗೂ ಆ ಪ್ರನಾಳಿಕೆಯ ಚೌಕಟ್ಟಿನಲ್ಲಿಯೇ ಸರ್ಕಾರವನ್ನು ನಡೆಸಿಕೊಂಡು ಹೋಗುವುದು. ಜೊತೆಗೆ ಈ ಚೌಕಟ್ಟಿನಲ್ಲಿಯೇ ರಾಜಕೀಯ ಪಕ್ಷ ಅಥವಾ ಗುಂಪುಗಳು ಸಂಸ್ಕೃತಿ ಮತ್ತು ಉದ್ದೇಶಗಳನ್ನು ಉಳಿಸಿಕೊಳ್ಳುವುದು.

ಭಾರತದಲ್ಲಿ ಹೊಂದಾಣಿಕೆ ಸರ್ಕಾರ ಮತ್ತು ಸಮ್ಮಿಶ್ರ ಸರ್ಕಾರಗಳು ಬೇರೆ ಬೇರೆಯಾಗಿವೆ. ಹೊಂದಾಣಿಕೆಯನ್ನು ಚುನಾವಣೆಯ ಪೂರ್ವದಲ್ಲಿ ಮಾಡಿಕೊಳ್ಳಲಾಗುತ್ತದೆ. ಸಮ್ಮಿಶ್ರ ಸರ್ಕಾರವನ್ನು ಚುನಾವಣೆಯ ತರುವಾಯ ಸರ್ಕಾರದ ರಚನೆ ಮಾಡುವ ಸಂದರ್ಭದಲ್ಲಿ ಮಾಡಿಕೊಳ್ಳಲಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಭಾರತದಲ್ಲಿ ಸಮ್ಮಿಶ್ರ ಸರ್ಕಾರದ ಅವಶ್ಯಕತೆ ಹೆಚ್ಚಾಗಿದೆ. ಏಕೆಂದರೆ ಯಾವುದೇ ಒಂದು ಪಕ್ಷವು ನಿರ್ಣಾಯಕ ಬಹುಮತವನ್ನು ಸಾರ್ವತ್ರಿಕ ಚುನಾವಣೆಯಲ್ಲಿ ಪಡೆದುಕೊಳ್ಳುವಲ್ಲಿ ಸಫಲವಾಗುತ್ತಿಲ್ಲ. ಇದು ಕಾಂಗ್ರೆಸ್ ಅಥವಾ ಬಿಜೆಪಿಗೆ ಅನ್ವಯಿಸಿದಂತೆ ಅಕ್ಷರಶಃ ನಿಜ.

ಭಾರತದಲ್ಲಿ ಸಮ್ಮಿಶ್ರ ಸರ್ಕಾರವನ್ನು ಎರಡು ಹಂತಗಳಲ್ಲಿ ನೋಡಬಹುದಾಗಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಸಮ್ಮಿಶ್ರ ಸರ್ಕಾರದ ಸ್ಥಾಪನೆಯಾಗಿತ್ತು. ಕಾಂಗ್ರೆಸ್, ಸಮಾಜವಾದಿ, ಮುಸ್ಲಿಂಲೀಗ್ ಇತ್ಯಾದಿ ವಿವಿಧ ಪಕ್ಷಗಳು ಜೊತೆಗೂಡಿ ಬ್ರಿಟಿಷರು ಭಾರತೀಯರಿಗೆ ಸ್ವಾತಂತ್ರ್ಯವನ್ನು ಕೊಟ್ಟು ಹೊರಡುವ ಸಮಯದಲ್ಲಿ ಸರ್ಕಾರವನ್ನು ರಚಿಸಲು ವಿವಿಧ ಪಕ್ಷಗಳ ನಾಯಕರುಗಳು ಮುಂದೆ ಬಂದು ಸಮ್ಮಿಶ್ರ ಸರ್ಕಾರವನ್ನು ರಚಿಸಿದ್ದರು.

ಸ್ವಾತಂತ್ರ್ಯಾನಂತರದ ಅವಧಿಯಲ್ಲಿ ಮೊದಲ ಸಮ್ಮಿಶ್ರ ಸರ್ಕಾರವು ಕೇರಳ ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂದಿತು. ಕೇಂದ್ರದಲ್ಲಿ ಮೊದಲ ಕಾಂಗ್ರೆಸ್ಸೇತರ ಸಮ್ಮಿಶ್ರ ಸರ್ಕಾರವು ೧೯೭೭ರಲ್ಲಿ ರಚನೆಯಾಯಿತು. ಈ ಸಮ್ಮಿಶ್ರ ಸರ್ಕಾರವು ಕಾಂಗ್ರೆಸ್ಸೇತರ ಪಕ್ಷಗಳ ಸಮೂಹವಾಗಿತ್ತು ಹಾಗೂ ಇಂದಿರಾ ಗಾಂಧಿಯನ್ನು ವಿರೋಧಿಸುವವರಾಗಿದ್ದರು. ಹಲವಾರು ಅಂಶಗಳು ಈ ಸರ್ಕಾರದ ರಚನೆಗೆ ಕಾರಣವಾಗಿದ್ದವು. ಮೊದಲನೆಯದಾಗಿ, ಇಂದಿರಾ ಗಾಂಧಿಯವರ ನಾಯಕತ್ವದಲ್ಲಿ ಕಾಂಗ್ರೆಸ್ ಪಕ್ಷದ ದಿವಾಳಿತನವಾಗಿತ್ತು. ಎರಡನೆಯದಾಗಿ, ಪ್ರಾದೇಶಿಕ ಪಕ್ಷಗಳು ಉದಯವಾಗಿದ್ದವು ಮತ್ತು ಮೂರನೆಯದಾಗಿ ಅಲ್ಪಸಂಖ್ಯಾತರು ದೇಶದ ಆಗುಹೋಗುಗಳಲ್ಲಿ ತಮ್ಮ ಧ್ವನಿಯನ್ನು ಎತ್ತಲು ಪ್ರಾರಂಭಿಸಿದುದು. ಈ ರೀತಿಯ

ಅನೇಕ ಅಂಶಗಳು ಎಲ್ಲ ಪಕ್ಷಗಳು ಜೊತೆಗೂಡಿ ಕಾಂಗ್ರೆಸ್ಸೇತರ ಸಮ್ಮಿಶ್ರ ಸರ್ಕಾರದ ರಚನೆ ಮಾಡಿ ಅದರ ಮೂಲಕ ತಮ್ಮ ಬಲವನ್ನು ತೋರಿಸಿಕೊಂಡು ಸಮಸ್ಯೆಗಳನ್ನು ಕಡಿಮೆ ಮಾಡಿಕೊಳ್ಳುವುದಾಗಿತ್ತು. ಅಲ್ಲದೆ ಆ ಪಕ್ಷಗಳು ತಮ್ಮ ಉದ್ದೇಶಗಳ ಸಾಧನೆ ಮಾಡುವುದಾಗಿತ್ತು.

ಸಮ್ಮಿಶ್ರ ಸರ್ಕಾರವು ಪ್ರಜಾಸತ್ತಾತ್ಮಕವಲ್ಲದ ವ್ಯವಸ್ಥೆ ಆಗುವ ಸಾಧ್ಯತೆ ಇದೆ. ಏಕೆಂದರೆ ಸಣ್ಣ ಪಕ್ಷಗಳು ಸಹ ಅಗಾಧವಾದ ಅಧಿಕಾರ ಮತ್ತು ಪ್ರಭಾವವನ್ನು ಬೀರಲು ಪ್ರಯತ್ನಪಡುತ್ತವೆ. ಇತ್ತೀಚಿನ ದಿನಗಳಲ್ಲಿ, ಕಾಂಗ್ರೆಸ್‌ನ ಬಲಹೀನತೆ, ದಕ್ಷ ನಾಯಕತ್ವದ ಅಭಾವ ಮತ್ತು ಬಿಜೆಪಿಯ ಬಲವರ್ಧನೆಯಿಂದಾಗಿ ಕೇಂದ್ರದಲ್ಲಿ ಸಮ್ಮಿಶ್ರ ಸರ್ಕಾರದ ಅವಶ್ಯಕತೆ ಕಂಡುಬಂದಿದೆ. ಅಲ್ಲದೆ ಬಿಜೆಪಿಯಿಂದಲೇ ಕೇಂದ್ರದಲ್ಲಿ ಸ್ಥಿರವಾದ ಸರ್ಕಾರವನ್ನು ರಚನೆ ಮಾಡಲು ಬೇಕಾಗುವಷ್ಟು ಬಲವನ್ನು ಹೊಂದಿಲ್ಲ. ಹಾಗಾಗಿ ಇದು ಇತರೆ ಪ್ರಾದೇಶಿಕ ಮತ್ತು ಚಿಕ್ಕ ಪಕ್ಷಗಳನ್ನು ಆಹ್ವಾನಿಸಿಕೊಂಡು ಸಮ್ಮಿಶ್ರ ಸರ್ಕಾರದ ರಚನೆಗೆ ಮುಂದಾಯಿತು. ಬಿಜೆಪಿಯ ರಾಷ್ಟ್ರೀಯ ಸ್ವಯಂಸೇವಕ ಸಂಘದಿಂದ ಗಾಢವಾದ ಪ್ರಭಾವಕ್ಕೆ ಒಳಗಾಗಿದ್ದು ಪರಿಶಿಷ್ಟ, ಜಾತಿ ಮತ್ತು ಪರಿಶಿಷ್ಟ, ಪಂಗಡಗಳೊಡನೆ ಸೇರಿಕೊಂಡು ನಿಜವಾದ ಸಮ್ಮಿಶ್ರ ಸರ್ಕಾರದ ಸ್ಥಾಪನೆಗೆ ಮುಂದಾಗುವಲ್ಲಿ ಆಸಕ್ತಿಯನ್ನು ತೋರಿದಂತೆ ಕಂಡುಬರುತ್ತಿಲ್ಲ.

ಸಮ್ಮಿಶ್ರ ಸರ್ಕಾರವು ಭಾಗಿದಾರರೆಲ್ಲರ ಸಮ್ಮತಿಯನ್ನು ಪಡೆದುಕೊಳ್ಳುವಲ್ಲಿ ಸಮಸ್ಯೆಯನ್ನು ಎದುರಿಸುತ್ತದೆ. ಸಮ್ಮಿಶ್ರ ಸರ್ಕಾರದ ವ್ಯವಸ್ಥೆಗೆ ಸೇರಿಕೊಳ್ಳುವ ಪಕ್ಷಗಳೆಲ್ಲವೂ ಆಂತರಿಕ ವಿಷಯಗಳ ಮೇಲೆ ಮತ್ತು ವಿದೇಶಿ ವ್ಯವಹಾರಗಳಿಗೆ ಸಂಬಂಧಿಸಿದಂತೆ ತಮ್ಮದೇ ಆದ ಅಭಿಪ್ರಾಯ ಮತ್ತು ನಿಲುವುಗಳನ್ನು ಹೊಂದಿರುತ್ತವೆ. ಜಯಲಲಿತ (AIADMK) ಅವರು ವಾಜಪೇಯಿ ಅವರಿಗೆ ಸಾಕಷ್ಟು ತಲೆ ನೋವನ್ನುಂಟು ಮಾಡಿದ್ದರು. ರಕ್ಷಣಾ ಸಚಿವ ಜಾರ್ಜ್ ಫರ್ನಾಂಡಿಸ್ ಅವರು ಕೇಂದ್ರ ಸರ್ಕಾರದ ನೀತಿಗಳಿಗೆ ಬೆಂಬಲ ಪಡೆದುಕೊಳ್ಳಲು ಹಲವು ಬಾರಿ ಮದ್ರಾಸ್‌ಗೆ ಪ್ರಯಾಣ ಮಾಡಬೇಕಾಯಿತು. ರೈಲ್ವೆ ಮಂತ್ರಿ ಮಮತ ಬ್ಯಾನರ್ಜಿಯವರು ಅನೇಕ ಬಾರಿ ಎಚ್ಚರಿಕೆಯನ್ನು ನೀಡಿ ಅನಂತರ ಸಚಿವ ಸ್ಥಾನಕ್ಕೆ ರಾಜಿನಾಮೆ ನೀಡಿದರು. ಶಿವಸೇನೆಯ ನಾಯಕರಾದ ಬಾಳಠಾಕ್ರೆಯವರು ಪಾಕಿಸ್ತಾನಕ್ಕೆ ಸಂಬಂಧಿಸಿದಂತೆ ಭಾರತದ ನೀತಿ ಹಾಗೂ ಭಾರತದ ಕ್ರಿಕೆಟ್ ತಂಡವನ್ನು ಪಾಕಿಸ್ತಾನಕ್ಕೆ ಕಳುಹಿಸುವ ವಿಷಯದಲ್ಲಿ ಕಿರಿಕಿರಿಯನ್ನುಂಟು ಮಾಡಿದರು.

ಭಾರತದಲ್ಲಿ ಅನೇಕ ಪಕ್ಷಗಳಿವೆ. ಆದರೆ ದೊಡ್ಡ ಪಕ್ಷಗಳು ಕೆಲವೇ ಕೆಲವು. ಈ ದೊಡ್ಡ ಪಕ್ಷಗಳು ಸ್ಥಿರವಾದ ಸರ್ಕಾರ ಅಥವಾ ದೇಶದ ಪ್ರಮುಖ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಯಶಸ್ವಿಯಾಗಿಲ್ಲ. ಸ್ವಾತಂತ್ರ್ಯದ ನಂತರ ನಾವು ಇದುವರೆವಿಗೂ ಅರ್ಧ ಶತಮಾನಕ್ಕಿಂತಲೂ ಹೆಚ್ಚಿನ ಅವಧಿಯನ್ನು ಪೂರ್ಣಗೊಳಿಸಿದ್ದೇವೆ. ಆದಾಗ್ಯೂ ಭಾರತದಲ್ಲಿ ಪ್ರಮುಖ ಸಮಸ್ಯೆಗಳಾದ ಬಡತನ, ನಿರುದ್ಯೋಗ ಮತ್ತು ಮೂಲಭೂತ ಸೌಕರ್ಯಗಳನ್ನು [illegible]ಸುವಲ್ಲಿ ವಿ[illegible]ಾಗಿವೆ. ಪಕ್ಷಗಳು ಮತದಾರರಿಂದ ನೀಡಲ್ಪಟ್ಟ ಜನಾದೇಶವನ್ನು ಜಾರಿಗೊಳಿಸುವಲ್ಲಿ ಸಹ ವಿಫಲವಾಗಿವೆ. ಆದ್ದರಿಂದ ಸಮ್ಮಿಶ್ರ ಸರ್ಕಾರವು ಜನಾದೇಶವನ್ನು

ಸರಿಯಾದ ಪಥದಲ್ಲಿ ಒಯ್ಯುವ ಸಾಧನವಲ್ಲ. ಈ ನಿಟ್ಟಿನಲ್ಲಿ 1) ಸಂವಿಧಾನಿಕ ಸುಧಾರಣೆ 2) ಪಕ್ಷಗಳ ಸುಧಾರಣೆ 3) ಚುನಾವಣೆ ಸುಧಾರಣೆಗಳು ಆಗಬೇಕಾಗಿವೆ.

ಸರ್ಕಾರದ ನೀತಿಯು ಜಾತಿ, ಕೋಮುಗಳ ಆಧಾರದ ಮೇಲೆ ಇರದೆ ಜನಪರವಾಗಿರಬೇಕು. ಸಮ್ಮಿಶ್ರ ಸರ್ಕಾರವು ಅಗತ್ಯವಾಗಿ ಸಾಮಾನ್ಯ ಕನಿಷ್ಠ ಕಾರ್ಯಕ್ರಮಗಳ ಪ್ರನಾಳಿಕೆಯನ್ನು ಅಳವಡಿಸಿಕೊಳ್ಳಬೇಕು. ಇಲ್ಲದಿದ್ದರೆ ವಿವಿಧ ಪಕ್ಷಗಳು ಸರ್ಕಾರದ ಕಾರ್ಯಕ್ರಮವು ವಿವಿಧ ಮಾರ್ಗಗಳಲ್ಲಿ ಹೋಗುವಂತೆ ಒತ್ತಡ ಹಾಕುತ್ತವೆ. ಇದರಿಂದ ಸರ್ಕಾರ ಮತ್ತು ಆಡಳಿತ ಯಾವುದೇ ನಿರ್ದಿಷ್ಟವಾದ ನಿರ್ದೇಶನವಿಲ್ಲದಂತೆ ಆಗುತ್ತದೆ. ಆದರೆ ಕೆಲವೊಮ್ಮೆ ಇಂತಹ ಸಾಮಾನ್ಯ ಕನಿಷ್ಠ ಕಾರ್ಯಕ್ರಮಗಳ ಪ್ರಣಾಳಿಕೆಯು ಸಾಕಾಗುವುದಿಲ್ಲ. ಅಲ್ಲದೆ ಯಾವುದೇ ಸಮಸ್ಯೆಗಳನ್ನು ಬಗೆಹರಿಸುವುದಕ್ಕೂ ಆಗುವುದಿಲ್ಲ. ಏಕೆಂದರೆ ಪ್ರಮುಖ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಎಲ್ಲ ಪಕ್ಷಗಳ ಬೆಂಬಲ ಮತ್ತು ಸಮ್ಮತಿ ಬೇಕಾಗುತ್ತದೆ. ದೈನಂದಿನ ಕಾರ್ಯನಿರ್ವಹಣೆಯಲ್ಲಿ ವಿವಿಧ ಪಕ್ಷಗಳ ನಾಯಕರುಗಳು ಮತ್ತು ಟೀಕಾಕಾರರು ಹಲವು ಆಕ್ಷೇಪ ಮತ್ತು ಕಠಿಣತೆಯನ್ನು ತರುತ್ತಾರೆ. ಆಗಾಗ್ಗೆ ನಿರ್ಧಾರ ಮಾಡುವ ಮತ್ತು ಜಾರಿ ಮಾಡುವ ಪ್ರಕ್ರಿಯೆಯಲ್ಲಿ ವಿರೋಧ ಹಾಗೂ ಅಡಚಣೆಯನ್ನುಂಟುಮಾಡುತ್ತಾರೆ. ಇದರಿಂದಾಗಿ ಸರ್ಕಾರ ಸುಲಲಿತವಾಗಿ ಯಶಸ್ವಿಯಾಗಿ ಕಾರ್ಯನಿರ್ವಹಿಸುವಲ್ಲಿ ಸಫಲವಾಗುವುದಿಲ್ಲ.

ಕೆಲವೊಮ್ಮೆ ಪ್ರಾದೇಶಿಕ ಪಕ್ಷಗಳು, ಕಾಂಗ್ರೆಸ್ ಮತ್ತು ಬಿಜೆಪಿಗೆ ಪರ್ಯಾಯವಾಗಿ ಉದಯವಾಗಿವೆ. ಆದರೆ ಭಾರತದಲ್ಲಿ ಪ್ರಾದೇಶಿಕ ಪಕ್ಷಗಳು ಈ ದಿಸೆಯಲ್ಲಿ ಇನ್ನೂ ಬಲಗೊಂಡಿಲ್ಲ ಮತ್ತು ಸಮ್ಮಿಶ್ರ ಸರ್ಕಾರವನ್ನು ಬಲಪಡಿಸಿಲ್ಲ. ಒಂದು ರಾಷ್ಟ್ರದಲ್ಲಿ ದ್ವಿಪಕ್ಷ ಪದ್ಧತಿ ಇದ್ದಾಗ ಮಾತ್ರ ಕೇಂದ್ರ ಸರ್ಕಾರವು ಸ್ಥಿರವಾಗಿರಬಲ್ಲದು ಎಂದು ಅನೇಕರು ವಾದಿಸುತ್ತಾರೆ. ಕೇಂದ್ರ ಕಾರ್ಯಾಂಗಕ್ಕೆ ಅಪರಿಮಿತವಾದ ಅಧಿಕಾರವನ್ನು ಕೊಡಬೇಕು. ಸಂವಿಧಾನವನ್ನು ಪುನರ್ವಿಮರ್ಶೆ ಅಥವಾ ತಿದ್ದುಪಡಿ ಮಾಡುವುದರ ಮೂಲಕ ಸಮ್ಮಿಶ್ರ ಸರ್ಕಾರದ ದುರ್ಬಲತೆಯನ್ನು ದೂರ ಮಾಡಬೇಕು. ಸಮ್ಮಿಶ್ರ ರಾಜಕೀಯದಲ್ಲಿ ಕೇಂದ್ರ ಮಟ್ಟದಲ್ಲಿ, ರಾಜ್ಯ ಮಟ್ಟದಲ್ಲಿ ಮತ್ತು ಸ್ಥಳೀಯ ಮಟ್ಟದಲ್ಲಿ ಹೊಂದಾಣಿಕೆಯ ಅವಶ್ಯಕತೆ ಇದೆ. ಸ್ಥಿರತೆ ಮತ್ತು ಆಡಳಿತ ನಡೆಸುವುದು ರಾಜಕೀಯ ವ್ಯವಸ್ಥೆಯನ್ನು ಬಲಗೊಳಿಸಲು ಇರುವ ಅಂಶಗಳಲ್ಲಿ ಪ್ರಮುಖವಾದವು.

ಕೇರಳ ರಾಜ್ಯವು ಉತ್ತಮ ರಾಜಕೀಯ ಪರ್ಯಾಯಗಳಿಗೆ ಹೆಸರಾಗಿದೆ. ಇಲ್ಲಿ ಈ ರೀತಿಯು ಪರ್ಯಾಯದ ಬೆಳವಣಿಗೆಗೆ ಚಲನಶೀಲ ಪರಿಸರ ಮತ್ತು ಜನರ ನಿರ್ದೇಶನವಾಗಿದೆ. ಇಲ್ಲಿ ಜನರು ಸಕ್ರಿಯವಾಗಿ ಭಾಗಿದಾರರಾಗಿದ್ದಾರೆ. ಜನರು ರಾಜಕೀಯ ಸ್ಥಿರತೆಗಾಗಿ ಬೇಡಿಕೊಂಡಿದ್ದಾರೆ. ಈ ಪ್ರಕ್ರಿಯೆಯ ಪರಿಣಾಮವಾಗಿ ಕಾಂಗ್ರೆಸ್ ತನ್ನ ಪ್ರಬಲತೆಯನ್ನು ದಶಕಗಳಿಂದ ಕಳೆದುಕೊಂಡಿದೆ. ಕೇರಳದಲ್ಲಿ ಸಮ್ಮಿಶ್ರ ಸರ್ಕಾರವು ರಾಜ್ಯಮಟ್ಟದಲ್ಲಿ ಮಾತ್ರವಲ್ಲದೆ ಸ್ಥಳೀಯ ಮಟ್ಟದಲ್ಲೂ ಅಸ್ತಿತ್ವಕ್ಕೆ ಬಂದಿದೆ. ಇಲ್ಲಿ ಜಿಲ್ಲಾ ಮತ್ತು ಪಂಚಾಯತ್ ಮಟ್ಟದಲ್ಲೂ ಬೆಳೆದಿದೆ. ಈ ರೀತಿಯ ಎಡಪಂಥೀಯ ಅಥವಾ ಕಮ್ಯೂನಿಸ್ಟ್ ರಾಜಕೀಯ ಪಶ್ಚಿಮ ಬಂಗಾಳದ ಎಡಪಂಥೀಯ ರಾಜಕೀಯಕ್ಕಿಂತ

ಭಿನ್ನವಾಗಿದೆ. ಅಲ್ಲಿ ಜ್ಯೋತಿ ಬಸು ಅವರು ಎಡಪಂಥೀಯ ಸಮ್ಮಿಶ್ರ ವ್ಯವಸ್ಥೆಯನ್ನು ಪಂಚಾಯಿತಿ ಮಟ್ಟದವರೆಗೂ ವಿಸ್ತರಿಸಿದ್ದಾರೆ. ಕಾಂಗ್ರೆಸ್ಸನ್ನು ಕೆಳಹಂತದಲ್ಲೂ ಸಹ ಅಧಿಕಾರದಿಂದ ವಂಚಿತರಾಗುವಂತೆ ಮಾಡಿದ್ದಾರೆ. ಕೇರಳದ ಸಮ್ಮಿಶ್ರ ರಾಜಕೀಯದಲ್ಲಿ ಅಲ್ಪಸಂಖ್ಯಾತರ ಮತಗಳು ಸಹ ಗಣನೆಯಾಗುತ್ತಿದೆ. ಪಶ್ಚಿಮ ಬಂಗಾಳದಲ್ಲಿ ಕಮ್ಯೂನಿಸ್ಟ್ ರಚನೆ ಮತ್ತು ವ್ಯವಸ್ಥೆಯು ಸ್ಥಿರತೆಯನ್ನು ಒದಗಿಸುವಷ್ಟು ಸದೃಢವಾಗಿದೆ.

ಇಂದಿನ ದಿನಗಳಲ್ಲಿ ಬಿಜೆಪಿಯು ಕೋಮುವಾದದ ಛಾಯೆಯಿಂದ ಜಾತ್ಯಾತೀತತೆಯ ಕಡೆಗೆ ಚಲಿಸಬೇಕು. ಇದು ತನ್ನ ಹಿಂದಿನ ಹಿನ್ನೆಲೆಯನ್ನು ತೊರೆಯುವ ಹಾಗೆ ಕಾಣುತ್ತಿಲ್ಲ ಅಥವಾ ಇದು ರಾಷ್ಟ್ರೀಯ ಸ್ವಯಂ ಸೇವಕ ಸಂಘವನ್ನು ತನ್ನ ಅಸ್ತಿತ್ವ ಕಳೆದುಕೊಳ್ಳುವಂತೆ ಕೇಳುವ ಸ್ಥಿತಿಯಲ್ಲೂ ಸಹ ಇಲ್ಲ. ಬಿಜೆಪಿಯು ಸಮ್ಮಿಶ್ರ ಸರ್ಕಾರದ ಪಾಲುದಾರರ ಮಾತನ್ನು ಕೇಳಬೇಕು. ಹಾಗೆಯೇ ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಭಿಪ್ರಾಯಗಳನ್ನು ಆಲಿಸಬೇಕು. ಈ ಎಲ್ಲ ಸಹಭಾಗಿಗಳು ಭಾರತದ ಸದೃಢತೆ ಹಾಗೂ ಸ್ಥಿರತೆಗಾಗಿ ಬಹಳ ಪರಿಶ್ರಮದಿಂದ ಕೆಲಸ ಮಾಡಬೇಕಾಗಿದೆ.

ವಾಲ್ಮೀಕಿ ರಾಮಾಯಣದಲ್ಲಿ ಸಂಗೀತ ರಸಾಭಿಜ್ಞತೆ

ಗೀತಾ ನಾವಲ್

ನಾದಾನುಸಂಧಾನವೆಂಬುದು ಪ್ರಕೃತಿಯ ಸಮಸ್ತ ಕ್ರಿಯಾಕ್ರಿಯಾ ರೂಪಗಳಲ್ಲಿ ಒಂದಿಲ್ಲೊಂದು ರೀತಿಯಲ್ಲಿ ಪ್ರಕಟವಾಗುತ್ತಲೇ ಇರುತ್ತದೆಂಬುದನ್ನು ಆಗಾಗ್ಗೆ ಕಲಾಪ್ರಪಂಚವು ನಿರೂಪಿಸುತ್ತಲೇ ಬಂದಿದೆ. ಅದು ಪ್ರಾಕೃತಿಕ ನೆಲೆಯಲ್ಲಿ ಮಾನವನು ಬಿನ್ನವಿಸಿಕೊಂಡ ಹಸಿಹಸಿ ಭಾವನೆಗಳ ಹಠಾತ್ ಕ್ರಿಯಾರೂಪವಾಗಿರಬಹುದು ಅಥವಾ ಅದೇ ನೆಲೆಯು ಕಾಲಕಾಲಕ್ಕೆ ಪರಿವರ್ತನೆಗೊಳಪಟ್ಟು ಸುಸಂಸ್ಕೃತವಾದ ಶಾಸ್ತ್ರೀಯ ಆವರಣದೊಳಗೆ ನೆಲೆ ನಿಂತಿರಬಹುದು. ಎಲ್ಲವೂ ನಾದ ರೂಪವೇ.

ಆದಿ ಮಹಾಕಾವ್ಯವೆಂದು ಪ್ರಣೀತವಾಗಿರುವ ವಾಲ್ಮೀಕಿಯ ರಾಮಾಯಣ ಕಥಾಸಾಗರದಲ್ಲಿ ಅವಿಚ್ಛಿನ್ನವಾಗಿ ಬೆರೆತುಹೋದ ನಾದಮಯ ಗ್ರಹಿಕೆಗಳನ್ನು ಹಾಗೂ ಅದು ಒಸರುವ ರಸಾಭಿಜ್ಞತೆಯನ್ನು ಕಂಡುಕೊಳ್ಳುವುದು ಈ ಲೇಖನದ ಉದ್ದೇಶ.

ಈಗಾಗಲೇ ವಿದ್ವದ್ವಲಯದಲ್ಲಿ ಖಚಿತಗೊಂಡಿರುವಂತೆ ರಾಮಾಯಣದ ಕರ್ತೃವು ವಾಲ್ಮೀಕಿಯೆಂದರೆ ವಾಲ್ಮೀಕಿಯೊಬ್ಬನೇ ಆಗಿರದೆ, ನಿರಂತರ ಕಾಲಪ್ರವಾಹದಲ್ಲಿ ಹರಿದುಬಂದ ಅನೇಕ ಮೌಖಿಕ ಕಲ್ಪನೆಗಳ ಸೆಳವುಗಳು ಕೂಡಿ ವಾಲ್ಮೀಕಿಯ ಕಾವ್ಯಕಟ್ಟುವ ಕ್ರಿಯೆಯನ್ನು ರೂಪಿಸಿವೆ. 'ವಾಲ್ಮೀಕಿ ಗಿರಿಸಂಭೂತಾ ರಾಮಸಾಗರಗಾಮಿನೀ' ಎಂಬ ಮಾತೇ ಇದನ್ನು ಸ್ಪಷ್ಟಪಡಿಸುತ್ತದೆ. ಅಂದಮಾತ್ರಕ್ಕೆ ವಾಲ್ಮೀಕಿಯ ಪ್ರತಿಭೆಯ ಗುಣಮಟ್ಟವನ್ನು ಅನುಮಾನಿಸುವುದೆಂದರ್ಥವಲ್ಲ. ಅವನೊಬ್ಬ ಅಪ್ಪಟ ದೈತ್ಯ ಪ್ರತಿಭಾಸಂಪನ್ನನೆಂಬುದರಲ್ಲಿ ಎರಡು ಮಾತಿಲ್ಲ. ಒಬ್ಬ ಕವಿಯ ಸೂಕ್ಷ್ಮ ಗ್ರಹಣಶಕ್ತಿಯನ್ನು ತುಂಬಿ ನಿಲ್ಲಿಸುವ ಕಾಲಮಾನಗಳು, ಕಥೆಗಳು, ಸಾಮಾಜಿಕ ಬದಲಾವಣೆಗಳು, ನಂಬಿಕೆ, ಜೀವನಶ್ರದ್ಧೆ, ಕಲಾಸ್ವಾದನ ಗುಣಗಳೆಲ್ಲವನ್ನೂ ಒಳಗೊಂಡಂತೆ ರಾಮಾಯಣದ ಕಥೆಯು ಸಾಗರವಾಗಿ ಹರಿದಿದೆ. ಆದ್ದರಿಂದ ವಾಲ್ಮೀಕಿ ರಾಮಾಯಣವೆಂಬುದು ಬರಿಯ ಕಾವ್ಯಮಾತ್ರವಾಗದೆ ಜನಮನದ ನಡುವಿನ ಪುರಾಣವೂ ದಂತಕತೆಗಳ ಕಣಜವೂ ಕಥಾಗುಚ್ಛವೂ ಇತಿಹಾಸವೂ ಆಗಿದೆ.

ಈ ಕಥಾ ಪ್ರಕಾರದ ನಿರಂತರ ಹರಿವಿನ ಪರಿಕ್ರಮವು ವಾಲ್ಮೀಕಿಯ ಕೈಯಲ್ಲಿ ಒಂದು ಪರಿಪಕ್ವ ಕಾವ್ಯವಾಗಿ ಪಡಿಮೂಡುವ ಹೊತ್ತಿಗೆ ಅದು ದೇಶೀಯ ಸಂಸ್ಕೃತಿಯ ಅನೇಕ ಗುಣಗಳನ್ನುಳಿಸಿಕೊಂಡೂ ಆರ್ಯಸಂಸ್ಕೃತಿಯ ಪ್ರತೀಕವಾಗಿ ಬೆಳೆದು ನಿಂತಿದೆ. ವೇದಗಳನ್ನು ಬಿಟ್ಟರೆ ಬಹುಶಃ ಇಷ್ಟು ನಿಕಟವಾಗಿ ಆರ್ಯ ಸಂಸ್ಕೃತಿಯ ಜೀವನಕ್ರಮದ ಅಚ್ಚಳಿಯದ

ಚಿತ್ರವನ್ನು ದಾಖಲಿಸುವುದು ರಾಮಾಯಣವೊಂದೇ. ಈ ಮಹಾಕಾವ್ಯವು ಕೊಡುವ ಜೀವನ ಚಿತ್ರಣ, ಆಲೋಚನಾ ವಿಧಾನ, ನಂಬಿಕೆ, ನಿಯಮಗಳು, ಹಾಡುಪಾಡು, ಪ್ರಕೃತಿ, ವೇಷಭೂಷಣಗಳು, ವಾದ್ಯವೈವಿಧ್ಯಗಳು, ಆಹಾರ ಪದ್ಧತಿ, ಹಬ್ಬ ಹರಿದಿನ – ಇಂಥವು ಒಂದು ನಿರ್ದಿಷ್ಟ ಜನಸಂಸ್ಕೃತಿಯ ಪ್ರತೀಕವಾಗಿವೆ. ಅಂದರೆ ಇದು ಒಂದರ್ಥದಲ್ಲಿ ಇಂದು ಭಾರತೀಯ ಸಂಸ್ಕೃತಿ ಪರಂಪರೆ ಎಂದರೆ ವಿಶಾಲಾರ್ಥದಲ್ಲಿ ನಾವೇನೆಂದುಕೊಂಡಿದ್ದೇವೋ ಆ ಶಿಷ್ಟ ಪ್ರಪಂಚದ ಅರ್ಥಾನುಭವದ ಕೀಲಿಕೈ ವಾಲ್ಮೀಕಿ ರಾಮಾಯಣದಲ್ಲಿ ನಮಗೆ ಸಿಗುತ್ತದೆ.

ಭ್ರಾತೃತ್ವ, ಪತಿಪತ್ನಿ ಸಂಬಂಧ, ತಂದೆ ಮಕ್ಕಳ ನಡುವಿನ ಭಾವಬಂಧಗಳು, ಒಟ್ಟು ಕುಟುಂಬದ ಅನೇಕ ಅವಾಂತರಗಳು, ಅವಸ್ಥಾಂತರಗಳು, ಸಾಮಾಜಿಕ ಬಂಧಸಂಬಂಧಗಳು– ಹೀಗೆ ಎಲ್ಲ ಕೋನಗಳಿಂದ ಭಾರತೀಯ ಸಂಸ್ಕೃತಿಯ ಇಂದಿನ ಚಿತ್ರವನ್ನು ಈ ನೆಲದಲ್ಲಿ ಗಟ್ಟಿಗೊಳಿಸುವಲ್ಲಿ ರಾಮಾಯಣದ ಪಾತ್ರವಿದೆ. ವಾಲ್ಮೀಕಿಯು ತಾನು ರಾಮಾಯಣವನ್ನು ಬರೆಯುವುದಕ್ಕೂ ಮೊದಲು, ಎಲ್ಲೆಡೆ ಹಾಡುಗಬ್ಬವಾಗಿ ಜನರ ಬಾಯಿಂದ ಬಾಯಿಗೆ ಹರಿದುಬರುವಾಗ ಹೊತ್ತುತಂದ ಸಾಮಾಜಿಕ ಚಿತ್ರದ ಒಂದು ಸುಸಂಸ್ಕೃತ ರೂಪವನ್ನು ಕಡೆದಿಡುತ್ತಾನೆ. ಅದು ಇಂದು ಎಷ್ಟು ಗಟ್ಟಿದನಿಯಲ್ಲಿ ಬೇರೂರಿದೆಯೆಂದರೆ–

"ಯಾವತ್ ಸ್ಥಾಯಂತಿ ಗಿರಯಃ ಸರಿತಾಶ್ಚ ಮಹೀತಲೇ

ತಾವದ್ರಾಮಾಯಣ ಕಥಾ ಲೋಕೇಷು ಪ್ರಚರಿಷ್ಯತೇ" ಎನಿಸಿಕೊಂಡಿದೆ. (ಎಲ್ಲಿಯವರೆಗೆ ಗಿರಿಪರ್ವತಗಳು ಸ್ಥಾಯಿಯಾಗಿ ನೆಲೆ ನಿಂತಿರುವುವೋ, ಸಮುದ್ರಗಳು ನೆಲೆಸಿರುತ್ತವೋ ಅಲ್ಲಿಯವರೆಗೂ ಭೂಮಂಡಲದಲ್ಲಿ ರಾಮಾಯಣ ಕಥೆಯು ಪ್ರಸರಿಸುತ್ತಿರುತ್ತದೆ.)

* * *

ವಾಲ್ಮೀಕಿ ರಾಮಾಯಣವು ಜನಪದ ರಾಮಾಯಣಗಳ ಹಾಗೆ ಹಾಡುಗಬ್ಬವೇ ಆಗಿದೆ. ಅದು ಪ್ರಚಾರಕ್ಕೆ ಬಂದದ್ದೇ ಕುಶಿಲವರು ಹಾಡುವ ಮೂಲಕ. 'ಪಾಠ್ಯಂ ಗೇಯೇ ಚ ಮಧುರಂ' ಅದು ಕುಶಿಲವರಿಂದ ಪ್ರಚುರಗೊಂಡಿತೆಂದು ಹೇಳಲಾಗಿದೆ. ರಾಮಾಯಣದ ಕಥೆಗಳು ಹರಿದುಬಂದ ಗಾನಮಾರ್ಗದ ಹೆಜ್ಜೆ ಗುರುತುಗಳನ್ನು ಋಗ್ವೇದ ಕಾಲದವರೆಗೆ ಗುರುತಿಸಲಾಗಿದೆ. ಅದನ್ನು ಮೊದಲು ನಾರದಮುನಿಯು ವಾಲ್ಮೀಕಿ ಎಂದು ಪ್ರಸಿದ್ಧನಾದ ಪ್ರಾಚೇತಸನೆಂಬ ಬೇಡನಿಗೆ ಹೇಳಿದನೆಂದೂ ಅತ್ಯಂತ ಪ್ರತಿಭಾನ್ವಿತನಾದ ಅವನು ಅದಕ್ಕೊಂದು ಶ್ರುತಿಮಾರ್ಗದ ಗೇಯತೆಯನ್ನೂ ಕಾವ್ಯತ್ವದ ಬಂಧವನ್ನೂ ಕೊಟ್ಟು ರಾಮನ ಮಕ್ಕಳಾದ ಕುಶಿಲವರಿಗೆ ಕಲಿಸಿದನೆಂದೂ ಅಧ್ಯಯನಗಳು ತಿಳಿಸುತ್ತವೆ. ಕುಶಿಲವರು ಅದನ್ನು ಮೊದಲು ಆಶ್ರಮದ ಮುನಿಗಳ ಎದುರು, ಅನಂತರ ಅನೇಕ ಶ್ರೋತೃವೃಂದದ ಮುಂದೆ ಹಾಡುತ್ತ ಹಾಡುತ್ತ, ಹಾಡು ಸೊಗಸುಪಡೆದ ಬಳಿಕ ಅಯೋಧ್ಯೆಯಲ್ಲಿ ರಾಮನ ಎದುರಿಗೆ ಹಾಡಿದರು. ವಾಲ್ಮೀಕಿ ರಾಮಾಯಣದಲ್ಲಿ ಈ ಪ್ರಸಂಗದ ಉಲ್ಲೇಖವು ಸಂಗೀತ ಸಭಾ ಸಂಪ್ರದಾಯದ್ದೊಂದು ತುಣುಕು ಹೀಗಿದ್ದಿರಬಹುದೆಂಬ ಕಲ್ಪನೆಯನ್ನು ನಮಗೆ ಕೊಡುತ್ತದೆ.

ಇಲ್ಲಿಂದ ಮೊದಲಾಗಿ ವಾಲ್ಮೀಕಿಗೆ ಸಂಗೀತ ಮತ್ತು ರಸಪ್ರತಿಪಾದನೆಯ ಅರಿವು ಎಷ್ಟರಮಟ್ಟಿಗಿದ್ದಿತೆಂಬುದನ್ನು ಪ್ರಕಟಪಡಿಸುವ ಪ್ರಸಂಗಗಳು ರಾಮಾಯಣದಲ್ಲಿ ಎಷ್ಟೋ ದೊರೆಯುತ್ತವೆ. ಅದು ಒಳಗೊಳ್ಳುವ ಭಾವನಾವಿಲಾಸ, ರಸಾನುಭವ, ಆ ರಾಗರೇಖಾ ವಿನ್ಯಾಸ, ವರ್ಣವೈಭವ, ಲಯ ಸಮನ್ವಯತೆ ಹಾಗೂ ವಾದ್ಯವಾದನ ವೈಖರಿಗಳು ಎಲ್ಲವೂ ವಾಲ್ಮೀಕಿಯೊಬ್ಬ ಶ್ರೇಷ್ಠ ಸಂಗೀತರಸಾಭಿಜ್ಞನಾಗಿದ್ದ ಎಂಬುದನ್ನು ಶ್ರುತಪಡಿಸುತ್ತವೆ.

ಈ ಎಲ್ಲ ಅಂಶಗಳು ರಾಮಾಯಣದ ಆರಂಭದಲ್ಲೇ ಕಾಣಿಸಿಕೊಳ್ಳಲಾರಂಭಿಸುತ್ತವೆ. ಮೊದಲಿಗೆ ಬಾಲಕಾಂಡದಲ್ಲಿ 'ಸ್ವರರಾಗ ಸಂಪನ್ನ'ರಾದ ಕುಶಿಲವರಿಗೆ "ತ್ರಿಕಾಲಗಳಲ್ಲಿ ಧ್ರುತ-ವಿಲಂಬಿತ, ಮಧ್ಯಲಯಗಳನ್ನೊಳಗೊಂಡಂತೆ ಶೃಂಗಾರ ಕರುಣ ಹಾಸ್ಯ ರೌದ್ರ ಭಯಾನಕ ವೀರಾದಿ ರಸಗಳೊಸರುವಂತೆ ಈ ಕಾವ್ಯವನ್ನು ಹಾಡಬೇಕು" ಎಂದು ವಾಲ್ಮೀಕಿಯು ನಿರ್ದೇಶಿಸುತ್ತಾನೆ (ಬಾಲಕಾಂಡ - ಚತುರ್ಥ ಸರ್ಗ- ೬-೯). ಗಂಧರ್ವರೂಪಿಗಳೂ ಗಂಧರ್ವಗಾಯನ ವಿದ್ಯೆಯನ್ನು ಬಲ್ಲವರೂ ಸ್ಥಾನಮೂರ್ಛನೆಗಳನ್ನು ಅರಿತು ಹಾಡಬಲ್ಲವರೂ ಮಧುರಸ್ವರ ನುಡಿತಗಳನ್ನರಿತವರೂ ಆದ ಆ ಸಹೋದರರು ರಾಮಾಯಣವನ್ನು ರಾಮನ ಮುಂದೆ ಹಾಡಿದರೆನ್ನಲಾಗಿದೆ.

ಅದಕ್ಕೂ ಮುಂಚೆ ವಾಲ್ಮೀಕಿಯು ಅವರನ್ನು ಪೂರ್ವಸಿದ್ಧತೆಗೆಂಬಂತೆ ಬಹಿರಂಗವಾಗಿ ಹಾಡಲು ತಾನೇ ತೊಡಗಿಸಿದ್ದ. ಋಷಿ ಕುಟೀರಗಳ-ಹಾದಿಯಲ್ಲಿ, ಬ್ರಾಹ್ಮಣ ವಸತಿಗಳಲ್ಲಿ, ರಾಜಮಾರ್ಗ ಹಾಗೂ ಇನ್ನಿತರ ಹೆದ್ದಾರಿಗಳಲ್ಲಿ, ಅಶ್ವಮೇಧಯಾಗಕ್ಕೆ ಆಹ್ವಾನಿತರಾಗಿದ್ದ ರಾಜರ ಬಿಡಾರಗಳಲ್ಲಿ, ರಾಮನ ಅರಮನೆಯ ಮುಂದೆ, ವಿಶೇಷವಾಗಿ ಋತ್ವಿಜರ ಮುಂದೆ ತ್ರಿಕಾಲಯುಕ್ತವಾಗಿ ದಿನಕ್ಕೆ ೨೦ ಸರ್ಗಗಳಂತೆ ಹಾಡಬೇಕೆಂದು ನಿರ್ದೇಶಿಸಿದ್ದ ಹಾಗೂ ಹಾಡುಗಾರಿಕೆಗೆ ಮಧುರ ನಾದವುಳ್ಳ ತಂತೀವಾದ್ಯಗಳನ್ನು ('ತಂತ್ರೀಲಯ ಸಮನ್ವಿತಮ್') ತ್ರಿಸ್ಥಾಯಿಗಳಿಗೆ ಹೊಂದಿಸಿಕೊಂಡು ಹಾಡಬೇಕೆಂದು ನಿರ್ದೇಶಿಸಿದ್ದ.

ಸಂಗೀತಕ್ಕೆ ಕಂಠಮಾಧುರ್ಯವೂ ರಸಾಭಿಜ್ಞತೆಯೂ ಎಷ್ಟು ಮುಖ್ಯವೋ ಸಹೃದಯ ರಸಿಕ ಶ್ರೋತೃವೃಂದವೂ ಅಷ್ಟೇ ಮುಖ್ಯ. ಈ ಎರಡೂ ವರ್ಗಗಳು ಹಾಡುಗಾರಿಕೆಯು ಸುಶೋಭಿತವಾಗಲು ಪರಸ್ಪರಾವಲಂಬಿತವಾದವುಗಳು. ಈ ಅಂಶ ತುಂಬ ಸೂಕ್ಷ್ಮವಾಗಿ ಇಲ್ಲಿ ಪ್ರಸ್ತಾಪಿತವಾಗಿದೆ. ಕುಶಿಲವರು ಹಾಡುವಾಗ ಸಭಾಭವನವನ್ನು ತುಂಬಿದ್ದ ಋಷಿಮುನಿಗಳಾದಿ ಸರ್ವರೂ ತಲೆದೂಗುತ್ತಾ ಗಾಯಕರನ್ನು ಪ್ರಶಂಸಿಸುತ್ತಲೂ ಪ್ರೋತ್ಸಾಹಿಸುತ್ತಲೂ ಇದ್ದರು. 'ಅಹೋ ಗೀತಸ್ಯ ಮಾಧುರ್ಯಂ ಶ್ಲೋಕಾನಾಂ ಚ ವಿಶೇಷಿತಃ' ಎಂದು ('ಗೀತವಷ್ಟೇ ಅಲ್ಲ. ಸಾಹಿತ್ಯವೂ ಅದ್ಭುತವಾಗಿದೆ').

ಈ ಸಂದರ್ಭದಲ್ಲಿಯೇ ಮತ್ತೊಂದು ಅತಿಮುಖ್ಯವಾದ ಅಂಶವನ್ನು ವಾಲ್ಮೀಕಿಯು ನಮ್ಮ ಗಮನಕ್ಕೆ ತರುತ್ತಾನೆ. ಆಶ್ರಮವಾಸಿಗಳು ಹಾಗೂ ರಾಮನ ಮುಂದೆ ಹೇಗೆ ಹಾಡಬೇಕೆಂಬುದನ್ನಷ್ಟೇ ಅವನು ಕುಶಿಲವರಿಗೆ ಕಲಿಸಲಿಲ್ಲ. ನಿರ್ದಿಷ್ಟ ನಿಯಮಾವಳಿಗಳು ಒಬ್ಬ ಗಾಯಕನ ಮಾನಸಿಕ ಹಾಗೂ ದೈಹಿಕ ಆರೋಗ್ಯದ ಮೇಲೆ ಉಂಟುಮಾಡುವ ಪ್ರಭಾವ ಏನೆಂಬುದನ್ನು ಅವರಿಗೆ ವಿಧಿಸುವ ಆಹಾರಕ್ರಮದ ಸಂದರ್ಭದಲ್ಲಿ ನಮ್ಮ ಗಮನಕ್ಕೆ

ತರುತ್ತಾನೆ. "ನೀವು ಫಲಕಂದ ಮೂಲಗಳನ್ನು ತಿನ್ನುತ್ತಾ ಬಂದರೆ ಬಳಲುವುದೂ ಇಲ್ಲ. ರಾಗಾದಿಗಳು ನಿಮ್ಮನ್ನು ಬಾಧಿಸುವುದಿಲ್ಲ........ ಹಾಡುವಾಗ ದ್ರವ್ಯಾದಿಗಳ ಪ್ರೇರಣೆಗೊಳಗಾಗಬೇಡಿ. ಫಲಕಂದಗಳ ಮೇಲೆ ಬದುಕುವವನಿಗೆ ದ್ರವ್ಯವು ಬಹಳ ಅಲ್ಪವಾದದ್ದು" ಎನ್ನುತ್ತಾನೆ. ಇಂದ್ರಿಯಗಳನ್ನು ಕಟ್ಟಿಗೊಳಪಡಿಸುವುದು ಗಾಯನ ಹಾಗೂ ಕಲೆಯ ಕುರಿತಾದ ಶ್ರದ್ಧೆಯನ್ನು ಹೇಗೆ ನಿರ್ವಹಿಸಬಲ್ಲದು ಎಂಬಂಶವನ್ನಿಲ್ಲಿ ವಾಲ್ಮೀಕಿಯು ಗ್ರಹಿಸುತ್ತಾನೆ.

ಕುಶಿಲವರಾದರೂ ತಮಗೆ ಈ ಮೊದಲೇ ಪಾಠವಾದಂತೆ, ತಾವು ಹಾಡುತ್ತಿರುವುದು ಎಂದೋ ನಡೆದುಹೋದ ಇತಿಹಾಸದ ಕತೆ ಎಂಬುದಾದರೂ, ಇಂದು ಕೇಳುತ್ತಿರುವವರ ಕಣ್ಣಲ್ಲಿ ಕಟ್ಟುವಂತೆ, ಈಗ ನಡೆಯುತ್ತಿರುವ ಘಟನೆಯೇನೋ ಎಂಬಂತೆ ಸಾಹಿತ್ಯಶುದ್ಧವಾಗಿ ಮಧುರವಾದ ರಕ್ತಿರಾಗಗಳಲ್ಲಿ ವಿಶೇಷ ಭಾವದಿಂದ ಹಾಡಿ ಅಲ್ಲಿದ್ದ ತಪಸ್ವಿಗಳಿಂದ ನಾನಾಪ್ರಕಾರದ ಮೆಚ್ಚುಗಾಣಿಕೆಗಳನ್ನು ಪಡೆದರು. (ಬಾಲಕಾಂಡ-ಚತುರ್ಥಸರ್ಗ-೧೮-೨೦). ಹಾಡುಗಾರಿಕೆಯ ಎಲ್ಲ ಶೈಲಿಗಳಲ್ಲಿಯೂ ಅವರು ಕೋವಿದರಾಗಿದ್ದುದನ್ನು ರಾಮನೂ ಅಂದಿನ ಸಭೆಯೂ ಗುರುತಿಸಿತು. 'ಸರ್ವಗೀತಿಷು ಕೋವಿದೌ' ಎಂದೂ 'ಮಾರ್ಗವಿಧಾನ ಸಂಪದ'ರಾಗಿ ಹಾಡಿದರೆಂದೂ ಸಭೆ ಅವರನ್ನು ಕೊಂಡಾಡಿತು.

ವಾಲ್ಮೀಕಿ ರಾಮಾಯಣದಲ್ಲಿ ಕುಶಿಲವರು ಹಾಡಿದ ಶೈಲಿ ಅಥವಾ ಸಂಗೀತ ವಿನ್ಯಾಸವನ್ನು 'ನಾಟ್ಯಶಾಸ್ತ್ರ' ಕರ್ತೃವಾದ ಭರತನು ಗುರುತಿಸುತ್ತಾನೆ. ಅವನ ಪ್ರಕಾರ ವಾಲ್ಮೀಕಿಯು ಶ್ರೇಷ್ಠ ಮುನಿಗಾಯಕರಲ್ಲೊಬ್ಬ. ಕಾವ್ಯಾತ್ಮಕವಾಗಿಯೂ ಸಂಗೀತಾತ್ಮಕವಾಗಿಯೂ ಈ ಮಹಾಕಾವ್ಯವು ಹೃದಯಸ್ಪರ್ಶಿಯಾಗಿದೆಯೆಂದು ನಾಟ್ಯಶಾಸ್ತ್ರ ಉಲ್ಲೇಖಿಸುತ್ತದೆ.

ರಾಮನಿಗೆ ಪಟ್ಟಾಭಿಷೇಕವನ್ನು ಮಾಡಿ ತಾನು ಆಡಳಿತದಿಂದ ನಿರ್ಗಮಿಸಬೇಕೆಂದು ನಿರ್ಧರಿಸಿದಂದು ದಶರಥ ಜನತೆಯನ್ನುದ್ದೇಶಿಸಿ ಮಾತನಾಡುವಾಗ ಅವನ ಧ್ವನಿಯ ರಮಣೀಯತೆಯನ್ನೂ ಅದು ಒಳಗೊಂಡ ನಾದಮಯ ಗಾಂಭೀರ್ಯವನ್ನೂ ಕುರಿತು ವಾಲ್ಮೀಕಿಯು "ದುಂದುಭಿ ಸ್ವರಕಲ್ಪೇನ ಗಂಭೀರೇಣಾನುನಾದಿನಾ ಸ್ವರೇಣ ಮಹತಾ ರಾಜಾ ಜೀಮೂತ ಇವ ನಾದಯನ್" ಎಂದು ವರ್ಣಿಸುತ್ತಾನೆ (ಅಯೋಧ್ಯಾಕಾಂಡ-ದ್ವಿತೀಯ ಸರ್ಗ). ಅನಂತರ ಪಟ್ಟಣವು ಸಂಭ್ರಮದಿಂದ ಸಿಂಗಾರಗೊಂಡಿದ್ದರೆ ಬೀದಿಬೀದಿಯಲ್ಲೂ ಗಾನಾಲಾಪಗಳು ಹಾಗೂ ನೃತ್ಯಾಂಗನೆಯರ ನರ್ತನಗಳು ಶುಭದ ವಾತಾವರಣ ವನ್ನುಂಟುಮಾಡಿದ್ದುವು. ಇದರೊಂದಿಗೆ ವಸಿಷ್ಠವಾಮದೇವಾದಿಗಳನ್ನೊಳಗೊಂಡ ಮುನಿವೃಂದದ ಮಂತ್ರಘೋಷಗಳು, ಸ್ವಸ್ತಿವಾಚನಗಳು ಪುಣ್ಯಾಹವಾಚನಗಳು ನಾದದ ವಿವಿಧ ಮಜಲುಗಳನ್ನು ನಿರೂಪಿಸುತ್ತಿದ್ದರೆ ತೂರ್ಯಘೋಷಗಳು ಗಂಭೀರ ಮಧುರಸ್ವರದಿಂದ ಅಯೋಧ್ಯೆಯನ್ನು ತುಂಬಿದ್ದವು (ಅದೇ ಷಷ್ಠ ಸರ್ಗ -೭). ಅಯೋಧ್ಯೆಯ ಜನರು ನಾಟಕಕಾರರು ಹೇಳುತ್ತಿದ್ದ ವಚನಗಳನ್ನೂ ನೃತ್ಯಕಾರನ ರಸಾಭಿವ್ಯಕ್ತಿಯನ್ನೂ ಸಂಗೀತಗಾರನ ನಾದಾನುನಯದ ಸೊಗಸನ್ನೂ ಆಸ್ವಾದಿಸುವುದರ ಮೂಲಕ ತಮ್ಮ ಕಿವಿ ಹಾಗೂ ಮನಸ್ಸುಗಳನ್ನು ತಣಿಸಿಕೊಂಡರು. ದೇವಸ್ಥಾನಗಳು ವಿವಿಧ ರೀತಿಯ ವಾದ್ಯಗಳ

ನಾದದಿಂದ ತುಂಬಿಹೋಗಿದ್ದುವು. ಈ ಸಂಭ್ರಮದ ನಾದ ವೈಭವದಲ್ಲಿ ಹರ್ಷಿತಗೊಂಡಿದ್ದ ಕುದುರೆಗಳ ಹೇಷಾರವವೂ ಆನೆಗಳ ಘೀಂಕಾರವೂ ದನಗಳ ಕೂಗೂ ಸೇರಿಹೋಗಿದ್ದುವು.

ಅಯೋಧ್ಯಾಕಾಂಡದ ತುಂಬ ಹೀಗೆ ಪದೇ ಪದೇ ಸಂಗೀತದಾಲಾಪ, ವೇದಗಳ ಘೋಷ, ವಾದ್ಯಗಳ ಝೇಂಕಾರ, ತೂರ್ಯಾದಿಗಳ ಹೊಯ್ಲು ಪ್ರಸ್ತಾಪವಾಗುತ್ತಲೇ ಇರುತ್ತದೆ. ರಾಮನು ಪಟ್ಟಾಭಿಷಿಕ್ತನಾಗಬೇಕಾಗಿದ್ದ ದಿನ ಅರಮನೆಯು ಸತತವಾಗಿ ಮೊಳಗುತ್ತಿದ್ದ ಮುರಜ ಮತ್ತು ಪಣವಗಳ ಧ್ವನಿಯನ್ನು ಪ್ರತಿಧ್ವನಿಸುತ್ತಿತ್ತು. ಗಾಯಕರು ನಿರಂತರವಾಗಿ ಶ್ರುತಿ ನಿರೂಪಣೆಯಲ್ಲಿ ತೊಡಗಿಕೊಂಡಿದ್ದರು ಹಾಗೂ ಆಗಾಗ್ಗೆ ಹಾಡು ಹಾಗೂ ವಾದ್ಯ-ವಾದನಗಳ ಕುರಿತಂತೆ ಚರ್ಚೆಯಲ್ಲಿ ತೊಡಗಿಕೊಂಡು ಅಭಿಪ್ರಾಯಭೇದಗಳನ್ನು ವಿನಿಮಯಿಸಿಕೊಳ್ಳುತ್ತಿದ್ದರು. ನಿಪುಣರಾದ ವಾದ್ಯಕಾರರು ತಂತಮ್ಮ ವಾದ್ಯಗಳನ್ನು ನುಡಿಸುತ್ತಿದ್ದರೆ, ಆ ನಾದಗಳಿಂದ ಎಚ್ಚರಗೊಳ್ಳುತ್ತಿದ್ದ ಅರಮನೆಯ ಸಾಕುಪಕ್ಷಿಗಳು ತಮ್ಮ ಪಂಜರಗಳಲ್ಲೇ ಮಧುರವಾಗಿ ಉಲಿಯಲಾರಂಭಿಸಿದುವು. ವೀಣೆಯ ಮಧುರನಾದವೂ ಸ್ವಸ್ತಿವಾಚನವೂ ಮಂಗಳಕರವಾದ ನಾದದಿಂದ ಅರಮನೆಯನ್ನು ತುಂಬಿದುವು.

ಇತ್ತ ತನ್ನ ಮಾತಾಮಹನ ಊರಾದ ಗಿರಿವ್ರಜದಲ್ಲಿ ಶತ್ರುಘ್ನನೊಂದಿಗಿದ್ದ ಭರತನಿಗೆ ಅಯೋಧ್ಯೆಯಲ್ಲಿ ನಡೆಯುತ್ತಿದ್ದ ಯಾವುದೇ ಸಂಭ್ರಮದ ಕುರಿತಾಗಲೀ ಅನಂತರದ ಬೆಳವಣಿಗೆಯ ಕುರಿತಾಗಲೀ ಸಂಗತಿಗಳ ಅರಿವಿರಲಿಲ್ಲ. ಅಲ್ಲಿ ಸದಾ ಅರಮನೆಯಲ್ಲಿ ಸೂರ್ಯೋದಯವನ್ನು ಕಾಣುತ್ತಿದ್ದಂತೆ ಯಾಮಸೂಚಕವಾಗಿ ದುಂದುಭಿ ವಾದ್ಯಗಳನ್ನು ಚಿನ್ನದ ಕೋಲುಗಳಿಂದ ಬಾರಿಸಿ ಮೊಳಗಿಸಲಾಗುತ್ತಿತ್ತು. ಶಂಖಗಳೇ ಮೊದಲಾದ ಸಂಭ್ರಮಸೂಚಕ ನಾನಾ ವಾದ್ಯಗಳನ್ನು ನುಡಿಸಲಾಗುತ್ತಿತ್ತು. ವಾದ್ಯಘೋಷಗಳು ಮುಗಿಲನ್ನೂ ವ್ಯಾಪಿಸುತ್ತಿದ್ದವು. ಭರತನಿಗೆ ಕಾರಣವೇ ಇಲ್ಲದೆ ಅಶುಭಸೂಚಕ ಕನಸುಗಳು ಬಿದ್ದು ವ್ಯಗ್ರನಾಗಿದ್ದ ಕಾರಣ ಈ ಸಂಭ್ರಮಗಳು ರುಚಿಸಲಿಲ್ಲ. ರಾಜಹಂಸದಂತೆ ಮೃದುಮಧುರವಾದ ಧ್ವನಿಯಿಂದ ಆಕ್ಷೇಪಿಸುತ್ತಿದ್ದ. ಇದ್ದಾಗ್ಯೂ 'ಪಾಣಿವಾದಕರು' ರಾಜನ ಪೂರ್ವಚರಿತ್ರವನ್ನು ವಾದ್ಯಗಳಲ್ಲಿ ನುಡಿಸುತ್ತಿದ್ದರು. ಹಕ್ಕಿಗಳು ಜೊತೆಗೂಡಿ ಚಿಲಿಪಿಲಿಗುಡುತ್ತಿದ್ದಂತೆ ಪುಣ್ಯಸ್ತವನವೂ ವೀಣಾದಿ ಧ್ವನಿಗಳೂ ಸ್ತೋತ್ರಪಾಠಗಳೂ ಅರಮನೆಯನ್ನು ಮಂಗಳಕರವಾಗಿ ತುಂಬಿದ್ದುವು. ಹೀಗೆ ಸದಾ ನೃತ್ಯವಾದ್ಯ ಗೋಷ್ಠಿಗಳಿಂದ ತುಂಬಿದ್ದ ಗಿರಿವ್ರಜದಿಂದ ಮರಳಿ ಅಯೋಧ್ಯೆಗೆ ಬರುವಾಗ ಭರತನಿಗೆ ಏಕೋ ಅಯೋಧ್ಯೆಯು ಮಂಗಳಕರವಾಗಿ ಕಾಣಲಿಲ್ಲ. ಸೂರ್ಯೋದಯವಾಗಿದ್ದರೂ ಮದಿಸಿದ ಮೃಗಗಳಾಗಲೀ ಹಕ್ಕಿಪಕ್ಷಿಗಳಾಗಲೀ ಕೂಗುವುದು ಕೇಳಿಸಲಿಲ್ಲ. ಭೇರಿ ಮೃದಂಗಗಳಿಂದುಂಟಾಗಬೇಕಿದ್ದ, ವೀಣಾದಿ ವಾದ್ಯಗಳಿಂದ ತುಂಬಿದ ಗಂಭೀರ ನಾದವು ಕೇಳಿಸಲಿಲ್ಲ. ದಾರಿಯಲ್ಲಿ ಮನೆಗಳಲ್ಲಿ ಹಾಗೂ ಮಹಲುಗಳಲ್ಲಿ ರೋದಿಸುತ್ತಿದ್ದ ಮಹಿಳೆಯರ ಧ್ವನಿಯು ಕ್ರೌಂಚ ಪಕ್ಷಿಗಳ ರೋದನದಂತೆ ಭಾಸವಾಗುತ್ತಿತ್ತು.

ವಾದ್ಯವಾದನ ಗಾಯನ ನೃತ್ಯಾದಿ ಗೋಷ್ಠಿಗಳು ತುಂಬಿಹೋದ ಪ್ರದೇಶವು ಶುಭಕರವಾಗಿ ಭಾವಿತವಾಗುವುದು ಹಾಗೂ ಸಂಗೀತನಾದರಾಹಿತ್ಯವು ವ್ಯಸನಕರವಾಗಿ ಸೂಚಿತವಾಗುವುದನ್ನು ಹೀಗೆ ಗಮನಕ್ಕೆ ತರುತ್ತಲೇ ವಾಲ್ಮೀಕಿಯು 'ಶಬ್ದ'ದ ಮತ್ತೊಂದು

ಗುಣದ ಬಗ್ಗೆಯೂ ಸೂಕ್ಷ್ಮವಾಗಿ ಗಮನ ಸೆಳೆಯುತ್ತಾನೆ. ಸೀತೆಯು ತಾನೂ ರಾಮನೊಂದಿಗೆ ಕಾಡಿಗೆ ಬರಬೇಕೆಂದು ಆಗ್ರಹಿಸಿದಾಗ ಅದನ್ನು ತಪ್ಪಿಸಲು ರಾಮನು 'ಬಹುದೋಷಂ ಹಿ ಕಾಂತಾರಂ' ಎನ್ನುತ್ತಾ ಕ್ರೂರಮೃಗಗಳ ಘರ್ಜನೆಯಿಂದಲೂ ನಿರಂತರವಾಗಿ ಮರಗಳಿಂದ ಉದುರುವ ಎಲೆಗಳು ಉಂಟುಮಾಡುವ ನೀರವ ಶಬ್ದವು ಭಯಂಕರವಾಗಿರುವುದರಿಂದಲೂ ಕಾಡು ಎಂಬುದು ದುಃಖಕರವಾದ ಅನುಭವವನ್ನುಂಟುಮಾಡುವುದೆಂದೂ ಆ ನೀರವತೆಯು ಸೀತೆಯ ಉತ್ಸಾಹಗುಣಕ್ಕೆ ಹೊಂದುವುದಿಲ್ಲವೆಂದೂ ಹೇಳುತ್ತಾನೆ. ಎರಡು ಸಮಾನ ಭಯಂಕರತೆಯುಳ್ಳ ಶಬ್ದಗಳು ಪರಸ್ಪರ ಘರ್ಷಿಸಿದಾಗ ಪರಿಣಾಮ 'ನೀರವಮೌನ'ವಾಗಿ ನೆಲಗೊಳ್ಳುತ್ತದೆಂಬ 'ನಾದತತ್ತ್ವ'ವನ್ನು ವಾಲ್ಮೀಕಿಯ ಸೂಕ್ಷ್ಮಸಂವೇದಿ ಮನಸ್ಸು ಪರಿಭಾವಿಸುವುದನ್ನಿಲ್ಲಿ ಕಾಣಬಹುದು. ಇದರೊಂದಿಗೇ ಅಲ್ಲಲ್ಲಿ ಮೇಘ ಘರ್ಜನೆಯನ್ನು ಮೃದಂಗ ಭೇರಿ ಪಣವ ಧ್ವನಿಗಳೊಂದಿಗೆ ಸಮೀಕರಿಸುವ ರೀತಿಯನ್ನೂ, ರಾಮನ ಧ್ವನಿಯು ಮೃದಂಗದ ಧ್ವನಿಯಂತೆ ಎಂದು ಹೋಲಿಸುವ ರೀತಿಯನ್ನೂ ಗಮನಿಸಿದರೆ, ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ ವಾಲ್ಮೀಕಿಯ ಭಾವನೆಗಳು ಸಂಗೀತಾತ್ಮಕ ಆಲೋಚನೆಗಳಿಂದ ಅಭಿವ್ಯಕ್ತಗೊಳ್ಳುವುದು ಗಮನಕ್ಕೆ ಬರುತ್ತದೆ.

ಕಾಡಿನ ವಿವಿಧ ಪ್ರದೇಶಗಳಲ್ಲಿನ ಶಬ್ದವು ವಿವಿಧ ಭಾವಗಳನ್ನು ಹೇಗೆ ಸ್ಫುರಿಸಬಲ್ಲುದೆಂಬ ಚಿತ್ರವನ್ನು ವಾಲ್ಮೀಕಿ ಕೊಡುತ್ತಾನೆ. ಶೃಂಗಿಬೇರಪುರದಲ್ಲಿ ಗಂಗಾನದೀ ತೀರವನ್ನು ತಲುಪಿಕೊಂಡಾಗ ಗಂಗಾನದೀತೀರದಲ್ಲಿದ್ದ ಬಂಡೆಗಳಿಗೆ ಅಪ್ಪಳಿಸುವ ನೀರಿನ ತರಂಗಗಳು ಕೆಲವೊಮ್ಮೆ ಕುದುರೆಗಳ ಹೇಷಾರವದಂತೆ ಕೇಳಿಸಿದರೆ ಮತ್ತೆ ಕೆಲವೆಡೆ ಮಧುರಸ್ವರವಾಗಿ, ಇನ್ನೊಂದೆಡೆ ಗಂಭೀರ ನಿರ್ಘೋಷದಂತೆ, ಮಗದೊಂದೆಡೆ ರುದ್ರಹಾಸದಂತೆ ತೋರುತ್ತಿತ್ತು. ಮಯೂರಗಳ ಕೇಕೆ, ಟಿಟ್ಟಿಭ ಹಾಗೂ ಕೋಗಿಲೆಗಳ, ವಿವಿಧ ಪಕ್ಷಿಜಾತಿಗಳ ಉಲಿಗಳು ಆ ಪ್ರದೇಶವನ್ನೆಲ್ಲ ಧ್ವನಿಸುತ್ತಿದ್ದು ಮತ್ತಗಜಗಳ ಬೃಂಹಿತದಿಂದಲೂ ಆ ಸಮೀಪದ ಪರ್ವತ ಸಾಲನ್ನು ಮನೋಹರ ನಾದಮಯವನ್ನಾಗಿಸಿದ್ದುವು.

ಮುಂದೆ ಭಾರದ್ವಾಜಾಶ್ರಮಕ್ಕೆ ರಾಮನನ್ನು ಹುಡುಕುತ್ತಾ ಭರತ ಬಂದಾಗ ಭಾರದ್ವಾಜ ಮುನಿಗಳು ಭರತನಿಗಾಗಿ ದೇವಶಿಲ್ಪಿಯಾದ ವಿಶ್ವಕರ್ಮನನ್ನು ವಿಶೇಷವಾಗಿ ಆಹ್ವಾನಿಸಿ ಅತಿಥಿಗೃಹವನ್ನು ನಿರ್ಮಿಸಿದ್ದರು. ಭರತನ ಸಂತೋಷಾರ್ಥವಾಗಿ ದೇವಗಂಧರ್ವರಾದ ಹಾಹಾಹೂಹೂ ಎಂಬ ಗಾಯಕರನ್ನಾಹ್ವಾನಿಸಲಾಗಿತ್ತು. ದೇವಜಾತಿಗೂ ಗಂಧರ್ವ ಜಾತಿಗೂ ಸೇರಿದ ಅಪ್ಸರಸಿಯರು ನೆರೆದಿದ್ದರು. ನೃತ್ಯ ಗಾಯನಗಳಿಗಾಗಿ ಘೃತಾಚಿ, ವಿಶ್ವಾಚಿ, ಮಿತ್ರಕೇಶಿ, ಅಲಂಬುಸೆ, ನಾಗದಂತೆ, ಹೇಮಾ, ಹಿಮಾ, ಅದ್ರಿಕೃತಸ್ಥಲೆ ಎಂಬ ಅಷ್ಟ ಅಮರ ನೃತ್ಯಗಾಯಕಿಯರನ್ನಾಹ್ವಾನಿಸಲಾಗಿತ್ತು. ದೇವೇಂದ್ರ ಹಾಗೂ ಬ್ರಹ್ಮಾದಿಗಳ ಸೇವೆಗಾಗಿ ನಿಯೋಜಿಸಲ್ಪಟ್ಟಿದ್ದ ನವತರುಣಿಯರೆಲ್ಲ ತಂತಮ್ಮ ನೃತ್ಯಗೀತ ಸಾಮಗ್ರಿಗಳೊಂದಿಗೂ ತುಂಬುರು ಮುನಿಗಳೊಂದಿಗೂ ಹಾಡುವಾಡಿಗೆ ಸಿದ್ಧರಾಗಿ ಬಂದಿದ್ದರು. (ಅ.ಕಾಂಡ; ೯೧ನೇ ಸರ್ಗ-೧೭)

ಆಗ ಮಲಯ ದರ್ದುರಗಳೆಂಬ ಪರ್ವತಗಳ ಮೇಲೆ ಬೀಸಿಬಂದ ಸುಗಂಧಮಯ ಶೀತಲಮಾರುತನೊಂದಿಗೆ ದಿವ್ಯದುಂದುಭಿಗಳ ನಾದವು ಅಷ್ಟದಿಕ್ಕುಗಳಲ್ಲೂ ವ್ಯಾಪಿಸಿತು. ದೇವಗಂಧರ್ವರ ಗಾಯನವೂ ವೀಣಾವಾದನವೂ ಅದರ ಸೊಗಸನ್ನು ಇಮ್ಮಡಿಸಿದುವು. (೨೫-೨೬). ಭೂವ್ಯೋಮಾಕಾಶಗಳನ್ನು ತುಂಬಿದ ನಾನಾ ಬಗೆಯ ಗೀತಗಳು ಶ್ರುತಿಸಮನ್ವಿತವಾಗಿಯೂ ಲಯಬದ್ಧವಾಗಿಯೂ ಇದ್ದು ಇಂಪಾಗಿತ್ತು (೨೭-೨೮). ಸೂರ್ಯನಂತೆ ವರ್ಚಸ್ವಿಗಳಾದ ನಾರದ, ತುಂಬುರು, ಗೋಪ ಎಂಬ ಗಂಧರ್ವಶ್ರೇಷ್ಠರು 'ಸಂಗೀತಕೋವಿದನಾಗಿದ್ದ' ಭರತನೆದುರು ಹಾಡಿದರು (೪೫-೪೬). ಭಾರದ್ವಾಜರ ಆಜ್ಞೆಯಂತೆ ಅಲಂಬುಸೆ, ಮಿತ್ರಕೇಶಿ, ಪುಂಡರೀಕೆ, ವಾಮನೆಯರಾದಿ ಅಪ್ಸರಸಿಯರು ನರ್ತಿಸಿದರು. ಭಾರದ್ವಾಜರು ಆದೇಶಿಸಿದಂತೆ ಬಿಲ್ವವೃಕ್ಷಗಳು ಮನುಷ್ಯರಂತೆ ಮೃದಂಗವನ್ನು ನುಡಿಸಿದುವು, ತಾರೆಯ ಮರಗಳು ತಾಳ ಹಾಕಿದುವು, ಅರಳಿಯ ಮರಗಳು ನರ್ತಿಸಿದುವು.

ಇತ್ತ ಮಂದಾಕಿನೀ ನದಿಯನ್ನು ವರ್ಣಿಸುತ್ತ ಚಿತ್ರಕೂಟದಲ್ಲಿ ರಾಮನು ಸೀತೆಗೆ "ಗಾಳಿಯಿಂದ ಮರಗಳ ತುದಿಯು ಜೋರಾಗಿ ಅಲುಗಾಡುತ್ತ ನದಿಯ ಸುತ್ತ ಎಲೆ ಹೂಗಳನ್ನುದುರಿಸುತ್ತ, ಪರ್ವತವೇ ನೃತ್ಯ ಮಾಡುತ್ತಿದೆಯೇನೋ ಎಂಬಂತೆ ಕಾಣುತ್ತಿರುವುದನ್ನು" ತೋರಿಸಿದ (೯೫ನೇ ಸರ್ಗ).

ಕಿಷ್ಕಿಂಧಾಕಾಂಡದಲ್ಲೂ ಪಂಪಾ ಸರೋವರ ಪ್ರದೇಶದ ಪ್ರಕೃತಿಯನ್ನು ಸಂಗೀತನೃತ್ಯ ಭಾವಗಳಿಂದ ಪೋಷಕವಾಗಿರುವಂತೆ ವಾಲ್ಮೀಕಿ ಚಿತ್ರಿಸುತ್ತಾನೆ. ಹೆಸರಿಗೆ ತಕ್ಕಂತೆ ಈ ಕಾಂಡವು ಚೋಟುದ್ದವಷ್ಟೇ ಇದ್ದರೂ ಅತ್ಯಂತ ಕಾವ್ಯಾತ್ಮಕವಾಗಿಯೂ ಶ್ರುತಿಲಯ ಸಮನ್ವಿತವಾಗಿಯೂ ಇದೆ. ಪಂಪಾ ಸರೋವರ ತಟದಲ್ಲಿ " ಗಾಳಿಯು ಹೂಹೊತ್ತ ಮರಗಳ ರೆಂಬೆಗಳನ್ನಲುಗಿಸುತ್ತ ಮರ್ಮರ ಧ್ವನಿಯನ್ನುಂಟುಮಾಡುತ್ತಿದೆ. ಇದಕ್ಕೆ ಕರಿದುಂಬಿಗಳು ಹಿಮ್ಮೇಳವನ್ನೊದಗಿಸುತ್ತಿವೆ. ಪರ್ವತ ಗುಹೆಗಳಿಂದ ಬರುತ್ತಿರುವ ಗಾಳಿಯು ಹಾಡಿನ ಇನಿದನಿಯನ್ನು ಹೊತ್ತು ತರುತ್ತಿದೆ. ಇವು ಮರಗಳನ್ನೂ ಉತ್ತೇಜಿಸುತ್ತಿವೆ. ಕೋಗಿಲೆಯ ಧ್ವನಿಯು ಮತ್ತೇರಿಸಿ ನರ್ತಿಸಲು ಉತ್ತೇಜಿಸುತ್ತಿದೆ." ಶರತ್ಕಾಲದ ಪ್ರಕೃತಿ ಸೌಂದರ್ಯವು ರಾಮನನ್ನು ವಿಶೇಷವಾಗಿ ಪ್ರಭಾವಿಸುತ್ತದೆ. ಲಕ್ಷ್ಮಣನನ್ನು ಕುರಿತು ಹೇಳುತ್ತಾನೆ. "ಅರುಣೋದಯ ಕಾಲದಲ್ಲಿ ಬೀಸುವ ಗಾಳಿಯು ಕೊಳಲ ನಾದವನ್ನುಂಟುಮಾಡುತ್ತ ದಿವ್ಯಗಾನಪರವಶವಾಗಿರುವಂತೆ ಕಾಣುತ್ತಿದೆ. ಗೂಳಿಗಳ ಗುಟುರು ಹಾಗೂ ಗವಿಗಳನ್ನು ಸುತ್ತುವರೆದು ನುಗ್ಗುವ ಗಾಳಿಯ ಮೊರೆತವು ಈ ನಾದವನ್ನು ಮತ್ತೂ ಗಂಭೀರ ನಿನಾದ ದೊಂದಿಗೆ ಘೋಷಿಸುವಂತಿವೆ."

ಮಳೆಗಾಲದ ಕಾರ್ಮೋಡಗಳು, ರುದ್ರಾಟ್ಟಹಾಸದಿಂದ ರೊಚ್ಚಿಗೆದ್ದು ಧೋ ಸುರಿಯುವ ಮಳೆಯಿಂದ ಉನ್ಮತ್ತಗೊಂಡ ಕಾಡಿನ ವೈಭವಕ್ಕೆ ಪರವಶನಾದ ರಾಮ ಹೇಳುತ್ತಾನೆ. ನೋಡು ಓ! ಲಕ್ಷ್ಮಣಾ, "ದುಂಬಿಗಳು ವೀಣೆಯು ಝೇಂಕಾರನಾದವನ್ನುಂಟು ಮಾಡುವ ಹಾಗೆ ಝೇಂಕರಿಸುತ್ತಿವೆ. ಕಪ್ಪೆಗಳು ಸೂತ್ರಧಾರರಂತೆ ತಮ್ಮ ಕಂಠದ ತಾಳವನ್ನು ಆರಂಭಿಸಿವೆ. ಮೇಘಗಳು ಮೃದಂಗವನ್ನು ನುಡಿಸುವಂತೆ ಗುಡುಗುತ್ತಿವೆ. ಭಾವೋನ್ಮತ್ತವಾದ ನವಿಲುಗಳು ಕೆಲವೊಮ್ಮೆ ನೃತ್ಯದಿಂದ ಮತ್ತೊಮ್ಮೆ ಕೇಕೆಗಳಿಂದ ಮಗದೊಮ್ಮೆ ತಮ್ಮ

ಅಗಾಧ ಸೌಂದರ್ಯದ ಗಣಿಗಳಂತಿರುವ ಗರಿಗಳನ್ನು ಬಿಚ್ಚಿ ಹರಡಿ ತಮ್ಮ ರಾಗಭಾವಗಳನ್ನು ಅಭಿವ್ಯಕ್ತಿಸುತ್ತಿವೆ. ಇಡೀ ಸಂಗೀತವೇ ಕಾಡನ್ನು ವ್ಯಾಪಿಸಿಕೊಂಡಂತೆ ಕಾಣುತ್ತಿದೆ."

ಸುಂದರಕಾಂಡವೂ ಅನ್ವರ್ಥನಾಮವೆಂಬಂತೆ ಅತಿ ಸುಂದರವಾದ ಲಂಕಾನಗರಿಯ ವರ್ಣವೈಭವದಲ್ಲಿ ತೊಡಗಿಬಿಡುತ್ತದೆ. ವಾಲ್ಮೀಕಿಯ ಭಾವವೈವಿಧ್ಯದೊಂದಿಗೆ ಅವನಿಗಿದ್ದ ನಾದಲೋಕದ ಪರಿಚಯವನ್ನೂ ಈ ಭಾಗ ಪ್ರಕಟಪಡಿಸುತ್ತದೆ. ಮೊದಲ ಸರ್ಗದ ಅನೇಕ ಭಾಗಗಳು ಸಂಗೀತ ರಸಾನುಭವವನ್ನು ಮಾಡಿಕೊಡುತ್ತವೆ. ಹನುಮಂತನ ಲಂಕಾನಗರಿಯಲ್ಲಿ ಸೀತೆಯನ್ನು ಹುಡುಕುತ್ತ ಬರುವಾಗ ರಾವಣನ ಅಂತಃಪುರ ವಿಭಾಗಗಳನ್ನೂ ಹಾದುಬರುತ್ತಾನೆ. ಹಾಗೆ ಬರುವಾಗ ಪಾನಭೂಮಿಯನ್ನೂ ದಾಟುತ್ತಾನೆ. ಅತಿ ರಮಣೀಯ ಅಭಿವ್ಯಕ್ತಿ ಸಂಪದವುಳ್ಳ ಭಾಗ ಇದು. ಅಂತಃಪುರಗಳಿಗೆ ಸೇರಿದ ಪಾನಭೂಮಿಯಲ್ಲಿ ನೃತ್ಯಗೀತಾದಿಗಳಿಂದಲೂ ಪಾನಾದಿಗಳಿಂದಲೂ ಅಲಸರಾಗಿದ್ದ ಮನೋಹರ ಸ್ತ್ರೀಯರು ವಿವಿಧ ಭಾವ ಭಂಗಿಗಳಲ್ಲಿ ಮೈಮರೆತಿದ್ದುದನ್ನು ಹನುಮಂತ ನೋಡಿದ. "ಮನೋಹರ ರೂಪಲಾವಣ್ಯಗಳಿಂದ ಕೂಡಿದ ಯುವತಿಯೋರ್ವಳು ತನ್ನ ಅಂಗಾಂಗಗಳು ಇನ್ನೂ ನೃತ್ಯಮುದ್ರೆಗಳನ್ನು ಸೂಚಿಸುತ್ತಿರುವ ಭಂಗಿಯಲ್ಲಿಯೇ ನಿದ್ರಾವಶಳಾಗಿದ್ದಳು; ಕೊಳದಿಂದ ಬುಡಸಮೇತ ಕಿತ್ತೆಸೆದ ತಾವರೆಯಂತಿದ್ದ ಮತ್ತೋರ್ವಳು ಅವಲಂಬನಕ್ಕಾಗಿಯೇನೋ ಎಂಬಂತೆ ವೀಣೆಯನ್ನು ತಬ್ಬಿಕೊಂಡು ನಿದ್ರೆ ಹೋಗಿದ್ದಳು; ಮತ್ತೊಬ್ಬಳು ತನ್ನ ಮಗುವನ್ನೇನೋ ಎಂಬಂತೆ ಮಡ್ಡುಕವನ್ನೇ ತಬ್ಬಿ ಹಿಡಿದಿದ್ದಳು; ಶುಭಸ್ತನಿಯೂ ಚಾರು ಸರ್ವಾಂಗಿಯೂ ಆದವಳೊಬ್ಬಳು ದೀರ್ಘಕಾಲದ ಅಗಲಿಕೆಯ ಅನಂತರ ವಿರಹ ದೌತ್ಸುಕ್ಯದಿಂದ ನಲ್ಲನನ್ನು ತಬ್ಬಿಹಿಡಿದಂತೆ ಪಟಹವನ್ನು ಅಪ್ಪಿಕೊಂಡಿದ್ದಳು. ಕಮಲ ಲೋಚನೆಯಾದ ಕಾಮಿನಿಯೋರ್ವಳು ಪ್ರೀತಿಯಿಂದ ಪ್ರಿಯತಮನನ್ನಾಶ್ರಯಿಸಿದಂತೆ ವೀಣೆಯನ್ನು ಆಶ್ರಯಿಸಿದ್ದಳು. ತನ್ನ ಪ್ರಿಯಕರನನ್ನು ತಬ್ಬಿಹಿಡಿದಂತೆ ವಿಪಂಚಿಯನ್ನಾಶ್ರಯಿಸಿದ್ದ ನೃತ್ಯಶಾಲಿನಿಯೋರ್ವಳು ಹಾಗೆಯೇ ನಿದ್ರಾವಶಳಾಗಿದ್ದಳು; ಮತ್ತಲೋಚನಿಯೊಬ್ಬಳು ಚಿನ್ನದಂತೆ ಶೋಭಾಯಮಾನವಾದ ಪೀನಪಯೋದರಗಳಿಗೆ ಮೃದಂಗವನ್ನೊತ್ತಿಕೊಂಡು ನಿದ್ರಿಸುತ್ತಿದ್ದಳು; ಕೃಶೋದರಿಯೊಬ್ಬಳು ಪಣವವನ್ನು ಭುಜಗಳಿಗೊತ್ತಿಕೊಂಡು ಸುಪ್ತನಿದ್ರೆಯಲ್ಲಿದ್ದಳು; ಭಾಮಿನಿಯೋರ್ವಳು ಪ್ರಿಯತರುಣ ನನ್ನೆಂತೋ ಅಂತೆ ಡಿಂಡಿಮವನ್ನೊತ್ತಿಕೊಂಡಿದ್ದಳು; ಕಮಲಪತ್ರಾಕ್ಷಿಯೂ ಮದಮೋಹಿತಳೂ ಆದ ಮತ್ತೋರ್ವಳು ಔದುಂಬರೀ ವೀಣೆಯನ್ನು ಆಲಿಂಗಿಸಿಕೊಂಡು ಮತ್ತಳಾಗಿ ಒರಗಿದ್ದಳು; ವಿವಿಧ ವಿಚಿತ್ರ ಭಂಗಿಗಳಲ್ಲಿ ನಿದ್ರಾವಶರಾಗಿಯೂ ಪಾನಮತ್ತರಾಗಿಯೂ ಒರಗಿದ್ದ ಆ ಪ್ರಮದೆಯರು ಗೀತನೃತ್ಯಾದಿಗಳಿಂದಲೂ ಮುರಜ ಪಣವ ಮೃದಂಗ ಕೇಲಿಕಾದಿ ವಾದ್ಯನಾದಗಳಿಂದಲೂ ಅಲಸರಾಗಿದ್ದುದನ್ನು" ಹನುಮಂತನು ಕಂಡ (೩೫-೫೦, ಸುಂದರಕಾಂಡ ೧ ಸರ್ಗ).

ಹನುಮಂತನನ್ನೇ ವಾಲ್ಮೀಕಿಯು ಸುಸಂಸ್ಕೃತ ಸ್ವರವಿನ್ಯಾಸಬದ್ಧವಾದ ಧ್ವನಿ ಸಂಸ್ಕಾರವುಳ್ಳವನೆಂದು ವರ್ಣಿಸುತ್ತಾನೆ. ಹನುಮಂತನನ್ನು ಪ್ರಥಮತಃ ಪರಿಚಯಿಸಿಕೊಂಡ ನಂತರ ಅವನ ಬಗ್ಗೆ ರಾಮ ಹೇಳುತ್ತಾನೆ. "ಹನುಮಂತನಂತೆ ಋಗ್ವೇದ, ಯಜುರ್ವೇದ,

ಸಾಮವೇದಗಳನ್ನು ಕ್ರಮಬದ್ಧವಾಗಿ ಅಭ್ಯಸಿಸಿದವರು ವಿರಳ. ಅವನ ಮಾತು ವಿನಯಪೂರ್ವಕವಾಗಿದ್ದು, ಖಂಡಿತಾ ವ್ಯಾಕರಣವನ್ನು ಗುರುಮುಖೇನ ಅಭ್ಯಸಿಸಿರಬೇಕು. ಅವನು ಮಾತನಾಡುವಾಗ ತಪ್ಪಿ ತಡವರಿಸುವುದಿಲ್ಲ. ಬಾಯಿ, ಹುಬ್ಬುಗಳು ವಿಕಾರಗೊಳ್ಳದಂತೆ ಹೊಮ್ಮುತ್ತವೆ. ತಂತಾನೇ ಹೊರವುಕ್ಕುವ ಸ್ಫುಟವಾದ, ಸಂಕ್ಷೇಪವಾದ, ನಿರರ್ಗಳವಾದ ವಾಗ್ಝರಿ ಅದು." ಶಿಕ್ಷಾಗ್ರಂಥದಲ್ಲಿ ಒಬ್ಬ ಸುಸಂಸ್ಕೃತ ಪಾಠಕನಲ್ಲಿರಬೇಕೆಂದು ಹೇಳಲಾಗಿರುವ ಗುಣಲಕ್ಷಣಗಳ ಪಟ್ಟಿ ಹೀಗಿದೆ :

"ಮಾಧುರ್ಯಮಕ್ಷರವ್ಯಕ್ತಿಃ ಪದಚ್ಛೇದಸ್ತು ಸುಸ್ವರಃ
ಧೈರ್ಯಂ ಲಯಸಮರ್ಥಂ ಚ ಷಡೇತೇ ಪಾಠಕಾ ಗುಣಾಃ"

("ಸ್ವರಮಾಧುರ್ಯ, ಸ್ಫುಟವಾದ ಅಕ್ಷರೋಚ್ಚಾರಣೆ, ಅರ್ಥಬದ್ಧವಾದ ಪದವಿಭಾಗ, ಲಯಬದ್ಧತೆ, ಧೈರ್ಯ, ಸಭಾಕಂಪನವಿಲ್ಲದಂಥ ವ್ಯಕ್ತಿತ್ವ – ಇವು ಪಾಠಕನಲ್ಲಿರಬೇಕಾದ ಗುಣಲಕ್ಷಣಗಳು") ಹನುಮಂತನಲ್ಲಿದ್ದ ಆ ಸುಸ್ವರವೂ ಸುಶಿಕ್ಷಿತ ರೀತಿನೀತಿಯೂ ಒಬ್ಬ ಕಲಾಸ್ವಾದಕನಾದ ರಾಮನನ್ನು ಆಕರ್ಷಿಸಿತ್ತು. ಅಂತಹ ಹನುಮಂತನನ್ನು ರಾವಣನ ಕಲಾರಸಿಕತೆಯನ್ನು ಆಸ್ವಾದಿಸುವಂತೆ ರೂಪಿಸಿದ ವಾಲ್ಮೀಕಿಯ ಪ್ರತಿಭೆ ಅರ್ಥಪೂರ್ಣವಾಗಿದೆ.

ರಾವಣನು ತನ್ನ ದೇಶವನ್ನಷ್ಟೇ ರಾಗಸಮೃದ್ಧವಾಗಿ ವಿನ್ಯಾಸಗೊಳಿಸಿರಲಿಲ್ಲ,ಸ್ವತಃ ಅವನೊಬ್ಬ ಕಲಾಸ್ವಾದಕನೆಂದು ವಾಲ್ಮೀಕಿ ಚಿತ್ರಿಸುತ್ತಾನೆ. ಯುದ್ಧಕಾಂಡದ್ದೊಂದು ಸಂದರ್ಭದಲ್ಲಿ ಶುಕನೆಂಬ ತನ್ನ ಚಾರನನ್ನುದ್ದೇಶಿಸಿ ರಾವಣನು ಹೇಳುತ್ತಾನೆ : "ಶುಕಾ, ನೋಡು, ಈ ನನ್ನ ಬಿಲ್ಲೇ ವೀಣೆ; ಬಾಣಗಳೆಂಬ ವಾದನದಂಡಗಳಿಂದ ಅದನ್ನು ನುಡಿಸುವೆನು ನೋಡು; ಅದರಲ್ಲಿ ಹುಟ್ಟುವ ಧನುಷ್ಟಂಕಾರ ಧ್ವನಿಯೂ ಯುದ್ಧದಲ್ಲಿ ನನ್ನ ಬಾಣಗಳಿಂದ ಗಾಯಗೊಂಡವರ ರೋದದ ಧ್ವನಿಯೂ ಬಾಣಗಳನ್ನು ಪ್ರಯೋಗಿಸುವಾಗ ನನ್ನ ಬಿಲ್ಲಿನ ಸ್ವರವೂ ಮಂದ್ರ, ಮಧ್ಯಮ, ತಾರಗಳೆಂಬ ಮೂರು ಸ್ಥಾಯಿಸ್ವರಗಳೆಂದು ತಿಳಿ" (ಸರ್ಗ ೨೪).

ರಾಮಲಕ್ಷ್ಮಣರು ಯುದ್ಧದಲ್ಲಿ ರಾವಣನಿಂದ ಪ್ರಯೋಗಿಸಲ್ಪಟ್ಟ ಶರಬಂಧದಿಂದ ಮುಕ್ತರಾದಾಗ, ಗರುತ್ಮಂತನು ಅವರಿಗೆ ಸಂಭವಿಸಿದ ವಿಪತ್ತನ್ನು ಪರಿಹರಿಸಿದ ಸಂದರ್ಭದಲ್ಲಿ ಪದೇ ಪದೇ ವಾನರಸೈನ್ಯವು ಸಿಂಹನಾದ ಮಾಡುತ್ತದೆ. ಕೆಲವರು ಭೇರಿಗಳನ್ನು ಬಜಾಯಿಸುತ್ತಾರೆ, ಕೆಲವರು ಮೃದಂಗಗಳನ್ನು ನುಡಿಸುತ್ತಾರೆ, ಮತ್ತೆ ಕೆಲವರು ಶಂಖನಾದವನ್ನು ಮಾಡುತ್ತಾರೆ. ಅವು ಒಟ್ಟಂದದಲ್ಲಿ ವರ್ಷಾರಂಭದಲ್ಲಿ ಗುಡುಗುತ್ತಿರುವ ಮೇಘಗಳ ಗರ್ಜನೆಯಂತೆ ಭಯಂಕರವಾಗಿ ಕೇಳಿಸುತ್ತವೆ.

"ಯುದ್ಧ ಸಂದರ್ಭದಲ್ಲಿ ಕುಂಭಕರ್ಣನನ್ನೇಳಿಸುವುದಕ್ಕಾಗಿ ಕುಂಭಗಳು, ಭೂಮಿದುಂದುಭಿ, ಮೃದಂಗ, ಪಣವ, ಭೇರಿ, ಶಂಖನಾದ, ಸಿಂಗನಾದ, ದರ್ದುರಾದಿ ವಾದ್ಯಗಳನ್ನು ನಗಾರಿ ಸಹಿತ ಬಾರಿಸಲಾಯಿತು. ಇಡೀ ಲಂಕೆಯೂ ಪರ್ವತಶ್ರೇಣಿಗಳೂ, ಕಾಡುಗಳೂ ಈ ಭಾರೀ ಶಬ್ದಗಳಿಂದ ತುಂಬಿಹೋದುವು."

ಪ್ರಕೃತಿಯಲ್ಲಿ ಸಂಗೀತದ ರಾಗ, ಭಾವಾದಿಗಳನ್ನು ಗುರುತಿಸುವುದು, ಮೇಳಗಾನದ ಹಲವು ದೃಶ್ಯಗಳನ್ನು ಅಲ್ಲಲ್ಲಿ ಸಂಯೋಜಿಸುವುದು ವಾಲ್ಮೀಕಿಯಲ್ಲಿ ಪದೇಪದೇ ಕಂಡುಬರುವ ವೈಶಿಷ್ಟ್ಯಗಳು. ಅವನು ಬಳಸುವ ವಾದ್ಯವಿಶೇಷಗಳೂ ಗಮನಾರ್ಹ. ಪದೇ ಪದೇ ಉಲ್ಲೇಖಿಗೊಳ್ಳುವ ಸಿಂಹನಾದ, ವಾನರ ಬುಡಕಟ್ಟು ಹಾಗೂ ಇನ್ನಿತರ ಕೆಳಸ್ತರದ ಗುಡ್ಡಗಾಡಿನ ಜನರು ಮನರಂಜನಾರ್ಥ ಬಳಸುತ್ತಿದ್ದ ಶೃಂಗೀವಾದ್ಯ, ಲಯತ್ರಯಗಳೆಂದು ಭರತ ಹೆಸರಿಸುವ ಮೃದಂಗ, ಪಣವ ಹಾಗೂ ದರ್ದುರಗಳನ್ನು ವಾಲ್ಮೀಕಿ ಅತ್ಯಂತ ಸಾಮಾನ್ಯ ಬಳಕೆಯೆಂಬಂತೆ ಹೆಸರಿಸುತ್ತಾನೆ. ಇವನ್ನು ಭರತ ಕ್ರಮವಾಗಿ ಹರಿತಕೀ, ಯವ ಮತ್ತು ಗೋಪುಚ್ಛಗಳೆಂಬ ಆಕಾರಗಳ ಹಿನ್ನೆಲೆಯಲ್ಲಿ ವಿಂಗಡಿಸುತ್ತಾನೆ. 'ಭೂಮಿದುಂದುಭಿ'– ಇದೊಂದು ಪ್ರಾಚೀನ ಜನಪದ ವಾದ್ಯವಾಗಿದ್ದು ಮಣ್ಣಿಂದ ತಯಾರಿಸಲ್ಪಡುತ್ತಿತ್ತೆಂದು ಹೇಳಲಾಗಿದೆ. ವೇದಗಳಲ್ಲಿ ಕೂಡ ಇದರ ಪ್ರಸ್ತಾಪವಿದೆ. ಸಂಹಿತೆಗಳು, ಬ್ರಾಹ್ಮಣಗಳಲ್ಲೂ ವಿಶೇಷವಾಗಿ ಮಣ್ಣಿಂದ ತಯಾರಿಸಲ್ಪಟ್ಟ 'ಭೂಮಿದುಂದುಭಿ'ಗಳನ್ನು 'ಮಹಾವ್ರತ'ಗಳಲ್ಲಿ ಬಳಸುತ್ತಿದ್ದುದಾಗಿ ತಿಳಿದುಬರುತ್ತದೆ. ಇದನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ಕಾರಣಗಳಿಗಾಗಿ ಬಾರಿಸಲಾಗುತ್ತಿತ್ತು. ರಣರಂಗದಲ್ಲಿ ಬೇರೆ ಬೇರೆ ಕಾಲಮಾನಗಳನ್ನು ಸೂಚಿಸುವುದಕ್ಕೆ, ವಿವಿಧ ರೀತಿಯ ಘೋಷಣೆಗಳನ್ನು ಹೊರಡಿಸುವುದಕ್ಕೆ ಬಳಸಲಾಗುತ್ತಿತ್ತೆಂದು ತಿಳಿದುಬರುತ್ತದೆ. ರಾಮಾಯಣದಲ್ಲಿ ವಾಲ್ಮೀಕಿ ರಾಜವೈಭವವನ್ನು ಮೆರೆಸುವ ಭಿನ್ನ ಭಿನ್ನ ಸಂದರ್ಭಗಳಲ್ಲೆಲ್ಲ ಭೂಮಿದುಂದುಭಿಯನ್ನು ಒಂದು ರೀತಿ 'symbol of Royalty' ಎಂಬಂತೆಯೇ ಬಳಸುತ್ತಾನೆ. ಈ ವಾದ್ಯದ ಮೊದಲ ಪ್ರಸ್ತಾಪ ಬರುವುದೇ ವೇದಗಳಲ್ಲಿ ಎಂದು ಅಧ್ಯಯನಗಳು ತಿಳಿಸುತ್ತವೆ. ಕ್ರಿ.ಪೂ. ೩೦೦೦ ಕ್ಕಿಂತಲೂ ಹಿಂದೆ ಇದನ್ನು ಹೋಲುವ ವಾದ್ಯಗಳನ್ನು ಸಂಕೇತಗಳಿಗಾಗಿ ಬಳಸಲಾಗುತ್ತಿತ್ತೆಂದು ಹೇಳಲಾಗಿದೆ.

ರಾವಣನ ಅಂತಃಪುರದಲ್ಲಿತ್ತೆಂದು ಉಲ್ಲೇಖಿತವಾಗುವ ವೀಣೆ, ವಿಪಂಚಿ, ಔದುಂಬರಗಳು ವೀಣೆಯ ವಿವಿಧ ರೂಪಗಳಾಗಿವೆ. ವಿಪಂಚಿ ಒಂಬತ್ತು ತಂತಿಗಳ ವಾದ್ಯ. ಸಾರಿಕೆಗಳಿಲ್ಲದ ವಿಪಂಚಿಯಂಥ ವಾದ್ಯಗಳ ಬಗ್ಗೆ ಭರತ ಉಲ್ಲೇಖಿಸುತ್ತಾನೆ. ಔದುಂಬರವು ಒಂದು ವಿಶೇಷ ರೀತಿಯ ಔದುಂಬರ ಮರದಿಂದಲೇ ಪೂಜಾಕಾರ್ಯದಲ್ಲಿ ಹಾಡಲು ಬಳಸುತ್ತಿದ್ದ ವಾದ್ಯವಾಗಿದೆ. ವೀಣೆಯ ತಂತಿಗಳನ್ನು ಸರಿಯಾದ ಸ್ವರಸ್ಥಾನಗಳಲ್ಲಿ ಶ್ರುತಿಗೆ ಬದ್ಧಗೊಳಿಸುವುದನ್ನು 'ಸ್ಥಾನಮೂರ್ಛನೆ'ಯೆಂದೂ ಆಲಾಪನೆಯ ವಿಶಿಷ್ಟ ರೀತಿಗೆ 'ಕರಣ'ವೆಂದೂ ಕರೆಯಲಾಗುತ್ತದೆ. ಸ್ವರಕ್ಕೆ ಸಂಬಂಧಿಸಿದಂತೆ ವಾಲ್ಮೀಕಿಯು ಸ್ಥಾನ, ಸ್ವರ, ಶ್ರುತಿ, ಮೂರ್ಛನೆ, ಜಾತಿ ಮತ್ತು ಕರಣಗಳನ್ನು ಬಳಸುತ್ತಾನೆ. ಒಂದು ಸ್ವರವು ಇಡೀ ಇಡೀ ಸುಸಂಬದ್ಧವಾಗಿರಬೇಕಾದರೆ ಇವೆಲ್ಲವನ್ನೂ ಒಳಗೊಂಡಿರಬೇಕಾಗುತ್ತದೆ. ಗಾಯಕನ ಶಾರೀರವು ಮಂದ್ರ, ಮಧ್ಯ ಮತ್ತು ತಾರ ಸ್ಥಾನಗಳಿಗೆ ಬದ್ಧವಾಗಿರಬೇಕು ಹಾಗೂ ಅವು ನಾಭಿ, ಹೃತ್, ಕಂಠ, ರಸನಾ ಮಾರ್ಗವಾಗಿ ಹೊರಹೊಮ್ಮಬೇಕು. ಈ ಸುಸಂಬದ್ಧತೆಯನ್ನೇ ರಾಮನ, ಹನುಮಂತನ ಸ್ವರೋಚ್ಚಾರದಲ್ಲಿ ಗುರುತಿಸಿದ್ದು. ರಾಮಾಯಣದ ಪ್ರಾರಂಭದಲ್ಲಿ ಕುಶಿಲವರು ಹಾಡುವಾಗಿನ ಕ್ರಮವು ರಸಜಾತಿಬದ್ಧವಾಗಿತ್ತೆಂದು ಹೇಳುವಾಗ ವಾಲ್ಮೀಕಿಗೆ ಅದರ ಖಚಿತ ಪರಿಜ್ಞಾನವಿದೆಯೆಂದೇ ಅರ್ಥ. ಒಂದು ಕ್ರಮದಲ್ಲಿ ಅಭಿವ್ಯಕ್ತವಾದ ಷಡ್ಜೀ,

ಋಷಭೀ, ಗಾಂಧಾರೀ, ಮಧ್ಯಮೀ, ಧೈವತೀ ಹಾಗೂ ನಿಷಾಧಿಗಳು ಸೇರಿ ಗ್ರಾಮರಾಗಗಳು ನಿಷ್ಪನ್ನವಾಗುತ್ತವಷ್ಟೆ. ಇವು ವಿವಿಧ ರಸಗಳನ್ನುಂಟುಮಾಡುತ್ತವೆ. ಭಿನ್ನ ಭಿನ್ನ ಜಾತಿಯ ಸ್ವರ ಸಪ್ತಕಗಳು ಭಿನ್ನ ಭಿನ್ನ ರಾಗರಸಗಳನ್ನು ಉತ್ಪಾದಿಸುತ್ತವೆ. ಅವು ಸ್ವರ, ನಾದ, ತಾಳ ಹಾಗೂ ಮಾರ್ಗಗಳೆಂಬ ನಾಲ್ಕು ಅಂಗಗಳಿಂದ ಕೂಡಿದಾಗ ಅದು ಸುಸಂಬದ್ಧ ಗಾಯನವಾಗುತ್ತದೆ. ಇವನ್ನು ಅತಿಸೂಕ್ಷ್ಮವಾಗಿ ವಾಲ್ಮೀಕಿ ಅಲ್ಲಲ್ಲಿ ತೋರಿಸಿದ್ದಾನೆ.

ಅವನು ಹೆಸರಿಸುವ ಇತರ ಲಯವಾದ್ಯಗಳಾದ ಪಟಹ, ಡಿಂಡಿಮ, ಮೃದಂಗ, ಮುರಜ, ಮುಡಕ, ಚೇಲಿಕಾದಿ ವಾದ್ಯಗಳು ಅಂದಿನ ಮೇಳಗಾನ ಪರಂಪರೆಯ ಕುರಿತೂ ಬೆಳಕು ಚೆಲ್ಲುತ್ತವೆ. "ವಿವಿಧ ಆಕಾರದ ತಾವರೆಯೆಲೆಗಳ ಮೇಲೆ ಬೀಳುವ ಭಿನ್ನಗಾತ್ರದ ನೀರಿನ ಬಿಂದುಗಳು ಉಂಟುಮಾಡುವ ಶಬ್ದವನ್ನು ಅನುಸರಿಸಿ ಸಂತಗಾಯಕನಾದ ಸ್ವಾತಿಯು ವಿಶ್ವಕರ್ಮನ ಸಹಾಯದಿಂದ ಲಯವಾದ್ಯಗಳನ್ನು ರೂಪಿಸಿದ"ನೆಂದು ನಾಟ್ಯಶಾಸ್ತ್ರಕಾರ ಹೇಳುತ್ತಾನೆ. ಲಯವಾದ್ಯಗಳ ತಾಡನ ಕ್ರಮ ವಾಖ್ಯೆಗಳಲ್ಲಿ ವಾಲ್ಮೀಕಿಯು ಗೀತಿ, ಅಕ್ಷರ, ಸಮ, ಲಯ, ಕಾಲ, ಮಾತ್ರೆ, ಸ್ಥಾಯೀ, ತಾಳ, ಮಾರ್ಗ, ಪ್ರಮಾಣ ಇತ್ಯಾದಿಗಳನ್ನು ಉಲ್ಲೇಖಿಸುತ್ತಾನೆ. ಗಾಳಿವಾದ್ಯಗಳ ಪೈಕಿ ತೂರ್ಯ, ಶಂಖ, ಕೊಳಲು ಇತ್ಯಾದಿಗಳನ್ನು ಪ್ರಾಸಂಗಿಕವಾಗಿ ಹೆಸರಿಸುತ್ತಾನೆ.

ಋಷ್ಯಮೂಕಪರ್ವತದ ಸುತ್ತಣ ಪರಿಸರವು ನಾದಮಯತೆಯನ್ನು ಅಭಿವ್ಯಕ್ತಿಸುತ್ತದೆಂಬಂಶವನ್ನು ತುಂಬುರುವಿನ ಅಭ್ಯಾಸದಿಂದ ಪಂಚಾಪ್ಸರ ಸರೋವರದ ಆಖ್ಯಾನ (ಅರಣ್ಯಕಾಂಡ) ದಿಂದ ಹಾಗೂ ಸಪ್ತಜನರ ಆಖ್ಯಾನ (ಕಿಷ್ಕಿಂಧಾಕಾಂಡ) ಗಳಿಂದ ತಿಳಿಯುತ್ತದೆ. ಗಂಧರ್ವರು ಹಾಗೂ ಅಪ್ಸರರ ಕುರಿತಾದ ಪಟ್ಟಿಯನ್ನು, ಸಾಂದರ್ಭಿಕವಾಗಿ ಅವರ ಗೀತ ನೃತ್ಯಾದಿ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿದ್ದುದರ ಕುರಿತಾದ ಮಾಹಿತಿಯನ್ನು ಕೊಡುವುದರ ಮೂಲಕ ಗಾಯನಪದ್ಧತಿಯ ಪರಂಪರೆಯ ಸುಳಿವೊಂದನ್ನು ಕೊಟ್ಟಿದ್ದಾನೆ.

ಮಾನವನು ನಾಗರಿಕತೆಯ ವಿಕಾಸಕ್ರಮದಲ್ಲಿ ರೂಢಿಸಿಕೊಂಡ ಸುಸಂಸ್ಕೃತ ಬದುಕಿನ ಮಾರ್ಗದ ಹೆಜ್ಜೆಗುರುತುಗಳನ್ನು ಈ ಎಲ್ಲದರಿಂದ ಬಹಳ ಸೂಕ್ಷ್ಮವಾಗಿ ಗಮನಿಸಬಹುದು. ಸಂಗೀತ ಪ್ರಪಂಚದಲ್ಲಿ ಬಳಕೆಯಾಗುವ ಲಯ, ತಾಳ, ಮಾರ್ಗ ಇತ್ಯಾದಿ ಪದಗಳ ಹಾಗೂ ಅವುಗಳ ಬಳಕೆಯ ಕುರಿತಾದ ಮಾಹಿತಿಯನ್ನು ವಾಲ್ಮೀಕಿ ಕೊಡುತ್ತಾನೆ. ಕಾವ್ಯಸಂದರ್ಭದಲ್ಲಿ ಅನಿವಾರ್ಯ ಒಳಕುರುಹುಗಳಾಗಿ ಎಂಬಂತೆ ಬಳಕೆಯಾಗುವ ಇವು ವಾಲ್ಮೀಕಿ ಒಬ್ಬ ನಿಷ್ಠ ಸಂಗೀತಜ್ಞನಾಗಿದ್ದ ಎಂಬುದನ್ನು ಸಮರ್ಥಿಸುವಂತಿವೆ.

ಗ್ರಂಥಋಣ

1. ವಾಲ್ಮೀಕಿ ರಾಮಾಯಣ – ಗೋರಖಪುರ ಪ್ರಕಟಣೆ
2. ನಾಟ್ಯಶಾಸ್ತ್ರ, ಭರತಮುನಿ – ವಾರಾಣಸೀ ಚೌಕಾಂಬಾ ಸಂಸ್ಕೃತ ಸಂಸ್ಥಾನ, 1985
3. ಸುಂದರಕಾಂಡ – ಎಸ್. ರಂಗನಾಥಶರ್ಮಾ
4. Bharatiya Sangeet Vadya – Lalmani Mishra, 1973, (Bharatiya Jnanpitha Prakashan)

ಜನಪದ ಮಹಾಭಾರತ ಮತ್ತು ಪರಂಪರಾಗತ ಮೌಲ್ಯಗಳ ಸ್ಥಿರೀಕರಣ

ಪ್ರೊ. ಅಂಬಳಿಕೆ ಹಿರಿಯಣ್ಣ

ಇಲ್ಲಿ ವಿವೇಚನೆಗೆ ಎತ್ತಿಕೊಂಡಿರುವ 'ಜನಪದ ಮಹಾಭಾರತ' ಕರಾವಳಿ ಕರ್ನಾಟಕದಲ್ಲಿ ನೆಲೆಸಿರುವ ಗಾಮೊಕ್ಕಲು ಸಮಾಜದಲ್ಲಿ ಪ್ರಚಲಿತವಿರುವ ಮೌಖಿಕ ಪಠ್ಯ. ನಾಡಿನ ಹಿರಿಯ ಜಾನಪದ ವಿದ್ವಾಂಸ ಎನ್.ಆರ್. ನಾಯಕ ಅವರು ಅತ್ಯಂತ ಪರಿಶ್ರಮದಿಂದ ದೊರಕಿಸಿಕೊಟ್ಟಿರುವ ಸಾಹಿತ್ಯವನ್ನು ಆಧರಿಸಿ ಹೇಳುವುದಾದರೆ ಈ ಗಾಮೊಕ್ಕಲು ಬಯಲು ಕೃಷಿ ಕೈಗೊಂಡ ಗ್ರಾಮವಾಸಿಗಳು. ಇವರ ಮಹಾಭಾರತ ಅನೇಕ ಬಗೆಯಲ್ಲಿ ಅಭಿಜಾತ ಮಹಾಭಾರತದಿಂದ ಭಿನ್ನ. ಇಲ್ಲಿಯ ಕಥಾವಸ್ತು ಅಭಿಜಾತ ಮಹಾಭಾರತ ಕಥಾವಸ್ತುವಿನೊಂದಿಗೆ ಸಾದೃಶ್ಯ ಸಾಧಿಸುವುದಕ್ಕಿಂತ ವೈದೃಶ್ಯ ಪಡೆಯುವುದೇ ಹೆಚ್ಚು. ಹಲವೆಡೆ ಮಾರ್ಪಾಡುಗಳು ನಡೆದಿವೆ. ಎಲ್ಲೆಡೆಯಲ್ಲಿಯೂ ಸಮುಚಿತವಾದ ಸುಂದರ ಮಾರ್ಪಾಡಾಗಿದೆ ಎಂದೇನೂ ಎಣಿಸಬೇಕಾಗಿಲ್ಲ. ಹಲವೆಡೆ ಮೂಲದ ಸೊಗಸು ಮಸುಕಾಗಬಹುದು. ಕೆಲವೇ ಅನೌಚಿತ್ಯದ ಚಂಚು ಪ್ರವೇಶವಾಗಬಹುದು. ಅಲ್ಲಲ್ಲಿ ಪಾತ್ರಪೋಷಣೆ ತಲೆಕೆಳಗಾಗಬಹುದು. ಅನೇಕ ಸಂದರ್ಭಗಳಲ್ಲಿ ಪ್ರತಿ ಕಥಾನಕದ ಆದಿಯಲ್ಲಿ ದೇವತಾಸ್ತುತಿ, ಅಂತ್ಯದಲ್ಲಿ ಕಾವ್ಯಫಲವಿರುವುದನ್ನು ಕಾಣುತ್ತೇವೆ. ಇಲ್ಲಿಯ ನಿರೂಪಣೆಗಳಲ್ಲಿ ಅಲ್ಲಲ್ಲಿ ಪುನರುಕ್ತಿ, ಭಾಷಾ ಶೈಥಿಲ್ಯ ಗೋಚರಕ್ಕೆ ಬರಬಹುದು. ಅನೇಕ ಸಂದರ್ಭಗಳಲ್ಲಿ ಕಾವ್ಯದ ಸೊಗಸು ಬತ್ತಿ ಹೋಗಬಹುದು. ಶಿಥಿಲ ಶೈಲಿ ಹಣಕಿ ಹಾಕಿರಬಹುದು, ಆದರೂ ಮೂಲದಿಂದ ಕಥಾವಸ್ತು, ಪಾತ್ರ, ಶೈಲಿ, ಎಲ್ಲದರಲ್ಲಿಯೂ ಭಿನ್ನ ಸ್ವರೂಪ ಪಡೆದ ಸಾಕಷ್ಟು ಮಣ್ಣಿನ ವಾಸನೆ ಅಂಟಿದ ಇನ್ನೊಂದು ಬಗೆಯ ಜನಪದ ಭಾರತ ಲೋಕದರ್ಶನವನ್ನು ಈ ಜನಪದ ಮಹಾಭಾರತದಲ್ಲಿ ಕಾಣಬಹುದು.

ಈ ಜನಪದ ಮಹಾಭಾರತ ಮುಖ್ಯವಾಗಿ ಧರ್ಮರು, ಗೀಚಗ (ಕೀಚಕ), ಸುಭದ್ರೆ, ಲಕ್ಷ್ಮಣ, ಅರ್ಜುನ, ಕುಸುಮಾಲಿ (ಚಿತ್ರಾಂಗದೆ), ಕನಕಾಂಗಿ ಕಲ್ಯಾಣ, ಅಭಿಮನ್ಯು ಮತ್ತು ಸಾವಿತ್ರಿ ಎಂಬುದಾಗಿ ಒಟ್ಟು ಎಂಟು ಬಿಡಿ ಕಥಾನಕಗಳ ರೂಪದಲ್ಲಿ ಪ್ರಚಲಿತವಿದೆ. ಈ ಜನಪದ ಮಹಾಭಾರತ ಸಂಪ್ರದಾಯ ಅಶಿಕ್ಷಿತ ಜನತೆಯಿಂದ ಮೌಖಿಕವಾಗಿ ಬದಲಾವಣೆ ಹೊಂದುತ್ತ ನಿರಂತರವಾಗಿ ತಲೆಮಾರಿನಿಂದ ತಲೆಮಾರಿಗೆ ಸಾಗಿಬಂದಿದೆ. ಇನ್ನು ಶತಮಾನಗಳು ಉರುಳಿದ ಮೇಲೆ ಸದ್ಯ ಲಭ್ಯವಿರುವ ಜನಪದ ಮಹಾಭಾರತಕ್ಕೂ ಜನತೆಯ

ನಾಲಗೆಯ ಮೇಲೆ ನಲಿದಾಡಲಿರುವ ಜನಪದ ಮಹಾಭಾರತ ಕತೆಗೂ ಸಾಕಷ್ಟು ವ್ಯತ್ಯಾಸ ತಲೆದೋರಿದರೆ ಅದಕ್ಕೆ ನಾವು ಅಚ್ಚರಿಪಡಬೇಕಾಗಿಲ್ಲ. ಒಟ್ಟನಲ್ಲಿ ವಾಕ್ಪರಂಪರೆಯಲ್ಲಿ ಸಾಗಿಬರುವ ಮಹಾಭಾರತ ನಿತ್ಯಪರಿವರ್ತನಶೀಲವಾದುದು; ಸಜೀವವಾದುದು; ಸುಂದರವಾದುದು. ಹೀಗೆ ಜನಪದ ಮಹಾಭಾರತ ನಿತ್ಯರೂಪ ವ್ಯತ್ಯಾಸಹೊಂದುತ್ತಾ ತನ್ನ ನಿತ್ಯನೂತನತೆಯನ್ನು ಕಾಯ್ದುಕೊಳ್ಳಲು ಹವಣಿಸುವುದರಿಂದ ಇದರ ಸಂಗ್ರಹಕಾರ್ಯ/ ದಾಖಲೀಕರಣ ಕಾರ್ಯ ಕಾಲಕಾಲಕ್ಕೆ ಅವ್ಯಾಹತವಾಗಿ ಸಾಗುತ್ತಲೇ ಹೋಗಬೇಕು. ಹಾಗಾದಾಗ ಮಾತ್ರ ಮೌಖಿಕ ಪಠ್ಯ ಯಾವ ರೀತಿಯಲ್ಲಿ ಬದಲಾವಣೆ ಹೊಂದುತ್ತಾ ಹೋಗುತ್ತದೆ ಎನ್ನುವುದರ ಇತಿಹಾಸ ನಮಗೆ ದೊರಕಲು ಸಾಧ್ಯ. ಭಾಷೆ, ವಸ್ತು ಮತ್ತು ತಂತ್ರಗಳಲ್ಲಿ ಆದ ಮಾರ್ಪಾಟು/ವಿಕಾಸದ ಹಂತಗಳನ್ನು ಗುರುತಿಸಲು ಸಾಧ್ಯ.

ಕರಾವಳಿ ಕರ್ನಾಟಕ ಪ್ರದೇಶದಲ್ಲಿ ಮೌಖಿಕ ಪರಂಪರೆಯಲ್ಲಿ ಉಳಿದುಬಂದಿರುವ ಒಂದೊಂದೂ ಕಥಾನಕ ಒಟ್ಟಂದದಲ್ಲಿ ಸತ್ವಯುತವಾಗಿವೆ. ಮೊದಲನೆಯ ಪ್ರಸಂಗ 'ಧರ್ಮರು'. ದ್ರೌಪದಿಗೆ ಕೆಟ್ಟ ಕನಸು ಬೀಳುವುದು, ಪಾಂಡವರು ದುರ್ಯೋಧನನ ಜೊತೆಯಲ್ಲಿ ಪಗಡೆಯಾಡಿ ಸೋಲುವುದು, ಕೊನೆಗೆ ದ್ರೌಪದಿ ಪಗಡೆಯಲ್ಲಿ ದುರ್ಯೋಧನನನ್ನು ಗೆಲ್ಲುವುದು ಇಲ್ಲಿಯ ಮುಖ್ಯ ಘಟನೆಗಳು. ಇಲ್ಲಿಯ ಕರ್ಣ, ದುಶ್ಯಾಸನ, ನಾರಾಯಣಸ್ವಾಮಿ (ಶ್ರೀಕೃಷ್ಣ) ವಿಶಿಷ್ಟ ಸ್ವಭಾವದ ಪಾತ್ರಗಳು. ದುಶ್ಯಾಸನ ದ್ರೌಪದಿಯ ಸೀರೆ ಎಳೆಯುವ ವೃತ್ತಾಂತ, ಶ್ರೀಕೃಷ್ಣ ಅವಳ ಸೆರಗು ಸ್ಥಿರವಾಗಿರುವಂತೆ ಹರಸುವುದು, ದ್ರೌಪದಿ ದುರ್ಯೋಧನನ ವಿಷಯದಲ್ಲಿ ತೊಟ್ಟ ಪ್ರತಿಜ್ಞೆ, ಪಾಂಡವರ ಸೋಲಿಗೆ ಕಾರಣವಾದ ದುರ್ಯೋಧನನ ಕಳ್ಳಪಗಡೆ, ದ್ರೌಪದಿ ಕರ್ಣನ ಮೂಲಕ ನಾರಾಯಣದೇವನಿಂದ ಹೊಸ ಪಗಡೆ ಮಣೆಯನ್ನು ತರಿಸಿಕೊಳ್ಳುವುದು, ಪಗಡೆಯಾಡುವಾಗ ಗಾಳಿಯಿಂದ ದ್ರೌಪದಿಯ ಸೆರಗು ಜಾರಿ ಅವಳ ಬಾಹುಮೂಲಗಳ ದರ್ಶನವಾಗುವುದು, ಅವನ್ನು ನೋಡುವುದರಲ್ಲಿ ಮಗ್ನನಾದ ದುರ್ಯೋಧನ ಪಗಡೆಯಾಟದಲ್ಲಿ ಸೋಲುವುದು, ಕರ್ಣನು ದ್ರೌಪದಿಯ ವಿಷಯದಲ್ಲಿ ತಳೆಯುವ ಉನ್ನತ ಭಾವನೆ, ಆತನ ಚಾರಿತ್ರಿಕ ಶುದ್ಧಿ, ಅವನು ದ್ರೌಪದಿಗೆ ಮುಂದೊದಗಬಹುದಾದ ಕೇಡಿನ ಸೂಚನೆ ನೀಡುವ ಸಂದರ್ಭ– ಇವೇ ಮುಂತಾದ ಘಟನೆಗಳಿಂದ 'ಧರ್ಮರ ಕತೆ' ಅಭಿಜಾತ ಮಹಾಭಾರತದ ಕತೆಯಿಂದ ಭಿನ್ನವಾಗಿದೆ. ಇಲ್ಲಿ ಬರುವ ಕರ್ಣನ ಪಾತ್ರ ವಿಶಿಷ್ಟವಾದುದು. ಕರ್ಣನ ಧರ್ಮಭೀರುತ್ವ, ಭ್ರಾತೃವಾತ್ಸಲ್ಯ, ಪರದಾರ ವಿರತಿ ನೀತಿ ಅವನ ಸತ್ವಾತಿಶಯ ಈ ಕಾವ್ಯದಲ್ಲಿ ಪಡಿಮೂಡಿದೆ. ದ್ರೌಪದಿ ತಲೆತಿರುಗಿ ಬಿದ್ದಾಗ ಅವಳನ್ನು ಮುಟ್ಟದೆ ತನ್ನ ಹಚ್ಚಡದ ಸೆರಗಿನಿಂದ ಹಿಡಿದೆತ್ತುವಲ್ಲಿ ಅವನ ಚಾರಿತ್ರ್ಯದ ಔನ್ನತ್ಯವನ್ನು ಕಾಣಬಹುದು. ಮಹಾಭಾರತದಲ್ಲಿ ದ್ರೋಣ, ಅಶ್ವತ್ಥಾಮಾದಿಗಳು ಕರ್ಣನನ್ನು ಕುಲಹೀನ ಎಂದು ಬೇರೆ ಬೇರೆ ಸಂದರ್ಭಗಳಲ್ಲಿ ಕರೆದು ಕೆರಳಿಸಿದ ಅಂಶ ಉಕ್ತವಾಗಿದೆ. ಆದರೆ ಇಲ್ಲಿ ದುರ್ಯೋಧನನೇ ಕರ್ಣನ ಘನತೆಗೆ ಮಾತ್ಸರ್ಯಪಟ್ಟು ಅವನನ್ನು 'ಅಂಬಿಗ' ಎಂದು ಕರೆದು ಕರ್ಣನ ನಿಷ್ಠುರ ಕಟ್ಟಿಕೊಳ್ಳುವ ಹೊಸ ಆಶಯ (Motif) ಸೇರಿದೆ. ಕರ್ಣನ ತೇಜೋವಧೆಗಾಗಿ ಈ ಮಾತನ್ನಾಡಿದ್ದರೂ ಈ ಪ್ರಸಂಗದಿಂದ ಕರ್ಣನ ಜನಪ್ರಿಯತೆ ಎದ್ದುಕಾಣುತ್ತದೆ. ಹೀಗೆ ಮಹಾಭಾರತದ ಖಳ

ಚತುಷ್ಟಯಗಳಲ್ಲಿ ಒಬ್ಬನಾದ ಕರ್ಣನು ಈ ಕಾವ್ಯದಲ್ಲಿ ಉದಾತ್ತೀಕರಣಗೊಂಡು ಸಾತ್ವಿಕ ತೇಜದಿಂದ ಕಳಕಳಿಸಿದ್ದಾನೆ.

ಧರ್ಮರ ಹಾಡಿನ ಕೇಂದ್ರ ವ್ಯಕ್ತಿ ದ್ರೌಪದಿ. ಕತೆ ಆರಂಭವಾಗುವುದು ಅವಳ ಕನಸಿನಿಂದ. ಅವಳ ಕನಸಿನ ರುಜುವಾತಿಗಾಗಿಯೇ ಕತೆಯ ಬೆಳವಣಿಗೆಯಾದಂತಿದೆ. ಇಲ್ಲಿಯ ದ್ರೌಪದಿ ಅಭಿಜಾತ ಮಹಾಭಾರತದ ದ್ರೌಪದಿಗಿಂತ ಗಟ್ಟಿಗಳು. ಗಂಡಂದಿರು ಪಗಡೆಯಲ್ಲಿ ಸೋತು ಸೆರೆಯಾಳಾದರೂ ಅವಳು ಧೃತಿಗೆಡುವುದಿಲ್ಲ. ದುಶ್ಯಾಸನನು ಅವಮಾನಮಾಡಿದ ಪ್ರಸಂಗದಲ್ಲಿ ಅಸಹಾಯಕ ಸ್ತ್ರೀಯಂತೆ ಗೋಗರೆಯದೆ ಸಿಟ್ಟಿನಿಂದ, ದುಶ್ಯಾಸನನ ರಕ್ತದಿಂದ ತನ್ನ ದೇವಾಂಗವನ್ನು ಅದ್ದಿಸಿ ಉಡುವ, ತನ್ನ ಬಿಚ್ಚಿದ ಮುಡಿ ಕಟ್ಟುವ ಪ್ರತಿಜ್ಞೆಯನ್ನು ಮಾಡುತ್ತಾಳೆ. ಈ ವಿನೂತನ ಬದಲಾವಣೆ ಧರ್ಮರ ಹಾಡಿನ ಅಗ್ಗಳಿಕೆ ಎಂದೇ ಹೇಳಬೇಕು. ಅಭಿಜಾತ ಮಹಾಭಾರತದಲ್ಲಿ ದ್ರೌಪದಿಯ ವಸ್ತ್ರಾಪಹರಣವು ಅವಳ ಪತಿಗಳೆದುರಿನಲ್ಲಿ ಭೀಷ್ಮ ದ್ರೋಣ ಮುಂತಾದ ಧರ್ಮಿಷ್ಠರ ಸಮ್ಮುಖದಲ್ಲಿ ತುಂಬಿದ ಸಭೆಯಲ್ಲಾಗುತ್ತದೆ. ಆಗ ಅವರೆಲ್ಲ ಈ ಅನೀತಿಯುಕ್ತ ಕೃತ್ಯವನ್ನು ಪ್ರತಿಭಟಿಸದೆ ನಿಷ್ಕ್ರಿಯರಾಗಿ ಕುಳಿತದ್ದು ವಿಚಿತ್ರ ಎನಿಸುತ್ತದೆ. ಇದನ್ನು ಗಮನಿಸಿದ ಸೂಕ್ಷ್ಮ ಪ್ರಕೃತಿಯ ಜನಪದ ನಿರೂಪಕ (Folk narrator) ಆ ಪ್ರಸಂಗವನ್ನೇ ಬದಲು ಮಾಡುವಲ್ಲಿ ತನ್ನ ಔಚಿತ್ಯಪ್ರಜ್ಞೆಯನ್ನು ಮೆರೆದಿದ್ದಾನೆ. ಈ ಬದಲಾವಣೆಯಲ್ಲಿ ಜನಪದ ಕಥಾನಿರೂಪಕನ ಉನ್ನತಮಟ್ಟದ ಸಾಂಸ್ಕೃತಿಕ ಹಿನ್ನೆಲೆಯ ದರ್ಶನವಾಗದಿರದು. ಇಲ್ಲಿಯ ದ್ರೌಪದಿ ಚಾಲಾಕಿನವಳು. ಕುರುರಾಯನು ಕಪಟ ಪಗಡೆಯ ಮಣೆಯನ್ನು ಉಪಯೋಗಿಸಿ ತನ್ನ ಗಂಡಂದಿರನ್ನು ಸೋಲಿಸಿದ್ದನ್ನು ದ್ರೌಪದಿ ಬಹುಬೇಗನೆ ಗ್ರಹಿಸುವಳು. ಅದಕ್ಕಾಗಿಯೇ ಅವಳು ನಾರಾಯಣದೇವನಿಂದ ಹೊಸ ಮಣೆಯನ್ನು ತರಿಸಿಕೊಳ್ಳುವಳು. ತನ್ನ ಗಂಡಂದಿರು ಸೆರೆಯಲ್ಲಿರುವಾಗಲೂ ದುರ್ಯೋಧನ ದುಶ್ಯಾಸನರಿಗೆ ಹೆದರದೆ ದಿಟ್ಟತನದ ಉತ್ತರ ನೀಡುವಲ್ಲಿ ದ್ರೌಪದಿಯ ಕಲಿತನ ವ್ಯಕ್ತವಾಗುತ್ತದೆ.

ದ್ರೌಪದಿ ದುರ್ಯೋಧನನ ಜೊತೆಯಲ್ಲಿ ಪಗಡೆಯಾಡಿ ಅವನನ್ನು ಸೋಲಿಸಿದ ಅಂಶ ಜನಪದ ಮಹಾಭಾರತದಲ್ಲಿ ಮಾತ್ರ ಬರುತ್ತದೆ. ಧರ್ಮರ ಹಾಡಿನಲ್ಲಿ ದುರ್ಯೋಧನನ ಸೋಲಿಗೆ ಕಾರಣವನ್ನೂ ಸ್ಪಷ್ಟಪಡಿಸಲಾಗಿದೆ. ದ್ರೌಪದಿಯ ಬಾಹುಮೂಲಗಳ ದರ್ಶನದಿಂದ ದುರ್ಯೋಧನನಿಗುಂಟಾದ ಚಿತ್ತಚಾಂಚಲ್ಯ. ಅವಳ ಎದೆಯ ಸೆರಗು ಗಾಳಿಯಿಂದ ಹಾರಿದ ಪ್ರಯುಕ್ತ ದುರ್ಯೋಧನನಿಗೆ ದ್ರೌಪದಿಯ ವಕ್ಷಸ್ಥಲದ ದರ್ಶನವಾದದ್ದು. ಈ ಪ್ರಸಂಗ ದ್ರೌಪದಿಯ ಶೀಲಕ್ಕೆ ಪೂರಕವಾಗಿದೆ. ಹೀಗೆ ಧರ್ಮರ ಹಾಡಿನಲ್ಲಿ ದ್ರೌಪದಿಯ ಪಾತ್ರ ತೇಜಸ್ಸು, ಅವಳ ಜಾಣ್ಮೆ, ಸತೀತ್ವಗಳು ಹೊಡೆದು ಕಾಣುವಂತೆ ಚಿತ್ರಿತವಾಗಿವೆ.

ಈ ಕತೆಯಲ್ಲಿಯ ಒಂದು ದೋಷವೆಂದರೆ ಪಾಂಡವರು ದ್ಯೂತನನ್ನು ದ್ರೌಪದಿಯ ಮೂಲಕ ಗೆದ್ದರೂ ಮತ್ತೆ ಪುನಃ ವನವಾಸಕ್ಕೆ ತೆರಳಲು ಕಾರಣವಾದ ಹಿನ್ನೆಲೆ ಏನೆಂಬುದು ಸ್ಪಷ್ಟವಾಗದಿರುವುದು.

'ಗೀಜಗ' (ಕೀಚಕ) ಪ್ರಸಂಗದಲ್ಲಿ ಅಭಿಜಾತ ಭಾರತದ ವಿರಾಟಪರ್ವದ ಕತೆಯನ್ನು ವಿಶೇಷ ವ್ಯತ್ಯಾಸವಿಲ್ಲದೆ ಹಾಡುವ ಪರಿಪಾಠ ಕಂಡುಬರುತ್ತದೆ. ಮಹಾಭಾರತದ ವ್ಯಕ್ತಿಯ

ಹೆಸರು ಮಾತ್ರ ಇಲ್ಲಿ ಬದಲಾಗಿದೆ. ಕೀಚಕ ತೂಗುಮಂಚದಲ್ಲಿ ನಿದ್ದೆ ಹೋದಾಗ ದ್ರೌಪದಿಯು ಸುದೇಷ್ಣೆಯ ಆದೇಶದ ಮೇರೆಗೆ ಹಿಡಿದೆತ್ತುವ ಘಟನೆ ಇಲ್ಲಿ ಹೊಸದಾಗಿ ಸೇರಿಕೊಂಡಿದೆ. ದ್ರೌಪದಿ ವೇಷದ ಭೀಮ ತನ್ನ ತೋಳು ಗಟ್ಟಿಯಾಗಲಿಕ್ಕೆ ಕೊಟ್ಟ ಕಾರಣ ಹಾಗೂ ಕೀಚಕನನ್ನು ಸೀಳಿ ಮೂರು ಹಾದಿ ಕೂಡಿದಲ್ಲಿ ನಿಲ್ಲಿಸಿದ ಅಂಶಗಳು ಮಾತ್ರ ಮಹಾಭಾರತ ಕತೆಗೆ ಸೇರಿದ ಅಂಶಗಳೇ ಆಗಿವೆ.

ಜನಪದ ಮಹಾಭಾರತದ 'ಸುಬದ್ರೆ ಹಾಡು' ಮಹಾಭಾರತ ಕತೆಯಿಂದ ಅನೇಕ ಅಂಶಗಳಲ್ಲಿ ಭಿನ್ನವಾಗಿದೆ. ತೀರ್ಥಯಾತ್ರೆಗೆ ಹೋದ ಅರ್ಜುನನು ಸುಭದ್ರಾಪಹರಣ ಮಾಡಿದ ಕತೆ ಮಹಾಭಾರತದಲ್ಲಿದೆ. 'ಸುಬದ್ರೆ ಹಾಡು' ಜನಪದ ಮನೋಭೂಮಿಕೆಗೆ ಅನುಗುಣವಾಗಿ ಭಿನ್ನ ಆಶಯಗಳೊಡನೆ ಭಾರತ ಕತೆಯಿಂದ ಬೇರೆಯಾಗಿ ನಿಲ್ಲುತ್ತದೆ. ಕತೆಯ ಆರಂಭದಲ್ಲಿ ಅರ್ಜುನ ನಾರಿಯರ ಮನೆಯಲ್ಲಿದ್ದುದಾಗಿ ಉಕ್ತವಾಗಿದೆ. ಆ ನಾರಿಯರು ಇಂದ್ರಕನ್ನೆ, ದೇವಕನ್ನೆಯರೆಂದು ಸುಬದ್ರೆಯ ಹಾಡಿನ ಕೊನೆಯಲ್ಲಿ ಸ್ಪಷ್ಟವಾಗುತ್ತದೆ. ಮಹಾಭಾರತದಲ್ಲಿ ಈ ನಾರಿಯರ ಪ್ರಸ್ತಾಪವಿಲ್ಲ. ಮಹಾಭಾರತದ ಕತೆಯಲ್ಲಿ ಉಲೂಪಿ ಚಿತ್ರಾಂಗದೆಯರೇ ಜನಪದ ನಿರೂಪಕರ ಬಾಯಲ್ಲಿ ನಾರಿಯರಾದ ಇಂದ್ರಕನ್ನೆ ದೇವಕನ್ನೆಯರಾಗಿರಬಹುದೆ? ಎಂಬ ಸಂಶಯ ಇಲ್ಲಿ ಕಾಡುತ್ತದೆ.

ಅರ್ಜುನನು ನಾರಿಯರ ಮೋಹಪಾಶದಲ್ಲಿ ಇರುವ ಸಂಗತಿ, ಮಹಾದೇವಿ ತನ್ನಣ್ಣ ಕಲ್ಲಿಂದ್ರ (ಕೌರವೇಂದ್ರ) ನಿಗೆ ಸುಬದ್ರೆಯನ್ನು ಮದುವೆಗೆ ನಿಶ್ಚಯಿಸುವುದು, ಈ ಸಂಗತಿ ನಾರಾಯಣದೇವನ (ಶ್ರೀಕೃಷ್ಣ) ಪತ್ರಮುಖೇನ ಅರ್ಜುನನಿಗೆ ಗೊತ್ತಾಗುವುದು, ಸನ್ಯಾಸಿಯು ಸುಬದ್ರೆಯ ಕೈಭಿಕ್ಷೆ ಬೇಕೆಂದು ಹಠ ಮಾಡುವುದು, ಸನ್ಯಾಸಿಯ ಉಪಟಳವನ್ನು ತಾಳಲಾಗದೆ ಸುಬದ್ರೆ ಆತ್ಮಹತ್ಯೆ ಮಾಡಿಕೊಳ್ಳುವುದು, ಅರ್ಜುನ ಸನ್ಯಾಸಿ ಅವಳನ್ನು ನಾಗಬೆತ್ತ–ಅಮೃತ ನೀರಿನಿಂದ ಬದುಕಿಸುವುದು, ಸುಬದ್ರೆಯ ಪಾಣಿಗ್ರಹಣ ಮಾಡಿಕೊಂಡು ದಿಬ್ಬಣ ಸಮೇತನಾಗಿ ಹೋಗುವಾಗ ಕೌರವರನ್ನು ಎದುರಿಸುವುದು, ಮದುಮಕ್ಕಳು ಮೂರು ದಿನಗಳವರೆಗೆ ದೇವರೆಂದು ಎಣಿಸಿ ಮದುಮಗನಾಗಿ ಬಂದಿದ್ದ ಕೌರವನನ್ನು ಕೊಲ್ಲದೆ ಹಾಗೆಯೇ ಬಿಡಲು ಸುಬದ್ರೆ ಅರ್ಜುನನಿಗೆ ಸೂಚಿಸುವುದು, ಅರ್ಜುನನು ಕೌರವೇಂದ್ರ ಮಹಾದೇವಿಯರನ್ನು ಕೊಲ್ಲದೆ ಬಿಡುವುದು ಮುಂತಾದ ಘಟನಾವಳಿಗಳಲ್ಲಿ 'ಸುಬದ್ರೆಯ ಹಾಡು' ಅಭಿಜಾತ ಮಹಾಭಾರತದಿಂದ ತೀರ ಭಿನ್ನವಾಗಿದೆ. ಇಲ್ಲಿಯ ಮಹಾದೇವಿಯ ಪಾತ್ರವೂ ಜನಪದರ ಹೊಸ ಸೃಷ್ಟಿ.

ಅರ್ಜುನ ಸನ್ಯಾಸಿಯ ವೇಷದಿಂದ ಸುಭದ್ರೆಯು ಅವನಲ್ಲಿಟ್ಟಿರುವ ಅಗಾಧ ಪ್ರೇಮವನ್ನು ಅವಳ ಬಾಯಲ್ಲಿಯೇ ಕೇಳುವ ರೀತಿ ತುಂಬಾ ಹೃದ್ಯವಾಗಿದೆ, ನಾಟಕೀಯವಾಗಿದೆ.

"ಅಯ್ವರಿದ್ದಲ್ಲಿ ನಾಲ್ವರೆಸರೇಳಿದೆ
ಇನ್ನೊಬ್ಬನೆಸರಾ ಮರತೆಯಾ ?"
"ಸೆಣ್ಣಾಲ್ಲೇ ತಾಯ್ತಂದೆ ಕೊಡುತೇನಂದೇಳಿರು
ಹೆಸರಾ ಹೇಳ್ವದಕ್ಕೆ ಅಳಂದೆ"

ಸುಭದ್ರೆಯು ಅರ್ಜುನನಲ್ಲಿಟ್ಟಿರುವ ಪ್ರೀತಿಯ ಗಾಢತೆ ಅಸದೃಶ. ಅರ್ಜುನನಲ್ಲಿ ತಾನಿಟ್ಟಿರುವ ಪ್ರೀತಿವಿಶ್ವಾಸಕ್ಕೆ ಭಂಗ ಉಂಟಾಯಿತೆಂಬ ವಿರೋಧಾಭಾಸದಿಂದ ಸುಭದ್ರೆ ಆತ್ಮಬಲಿದಾನಗೈದುದನ್ನು ಕಥಾನಾಯಕ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾನೆ.

ಸೆಣ್ಣಾದಲತೀ ತಾಳಿತಾ ಹೆರಿಯಣ್ಣಾ। ಣ್ಣಾ। ನ ಕಣ್ಣೀಗೆ
ಇಂಗಾಳಿ ಹಬ್ಬ ತೊರಗಾಲೇ। ಅಂದೆ ಸೂಬದ್ರಿ
ಕೊಟ್ಟಾಳೆ ಕಯ್ಯಾ ಬರದೊಲೆ। ಸೂಬದ್ರಿ
ಮಾಯೀನಾ ಮರಕಗ್ಗಾ ಇಡೋದಾಳೇ
ಹಗ್ಗಾದಲ್ ಪರಣವಾ ಕಳಕಂತೇ

ಕರಾವಳಿ ಕರ್ನಾಟಕದ ರೂಢಿ, ನಂಬಿಕೆಗಳು, ರೀತಿನೀತಿಗಳು ಈ ಹಾಡಿನಲ್ಲಿ ಅಲ್ಲಲ್ಲಿ ಬಳಕೆಗೊಂಡು ಅವುಗಳ ಸ್ಥಿರೀಕರಣಕ್ಕಾಗಿ ಕಥಾನಾಯಕ ವಹಿಸುವ ಮುತವರ್ಜಿ ಇಲ್ಲಿ ಉಲ್ಲೇಖನೀಯ.

'ಲಕ್ಷ್ಮಣನ ಹಾಡು' (ಅರ್ಜುನನ ಹಾಡು) ಬಹುಮಟ್ಟಿಗೆ 'ಸುಬದ್ರೆಯ ಹಾಡ'ನ್ನೇ ಹೋಲುವ ಕಥಾನಕ. ಎರಡೂ ಕಥಾನಕಗಳಲ್ಲಿ ಜೋಗಿಯ ವೇಷ ಸಾಮಾನ್ಯವಾಗಿದ್ದರೂ ಆ ವೇಷಗಳ ಉದ್ದೇಶ ಮಾತ್ರ ಬೇರೆ ಬೇರೆ. ಸುಭದ್ರೆಯ ಹಾಡಿನಲ್ಲಿ ಜೋಗಿಯ ವೇಷ ಸುಭದ್ರೆಯ ಪ್ರೀತಿಯ ಆಳಅಗಲಗಳ ಪರೀಕ್ಷೆಗಾಗಿ ಬಂದಿದ್ದರೆ 'ಲಕ್ಷ್ಮಣನ ಹಾಡಿ'ನಲ್ಲಿ ಜೋಗಿಯ ವೇಷವು ತನಗೆ ಹೆಣ್ಣುಕೊಡಲು ಒಪ್ಪದ ಸೋದರಮಾವನ ಕಣ್ಣಿಗೆ ಮಣ್ಣೆರಚಿ ಬಯಸಿದ ಹೆಣ್ಣನ್ನು ಅಪಹರಿಸಲು ಬರುತ್ತದೆ. ಜೋಗಿ ವೇಷದ ಚಟುವಟಿಕೆಗಳು ಎರಡೂ ಹಾಡುಗಳಲ್ಲಿ ತೀರ ಭಿನ್ನವಾಗಿವೆ. ಸುಭದ್ರೆಯ ಹಾಡಿನ ಅನೇಕ ಘಟನೆಗಳು ಲಕ್ಷ್ಮಣನ ಹಾಡಿನಲ್ಲಿಲ್ಲ (ಸುಭದ್ರೆಯ ಹಾಡು ಅಭಿಜಾತ ಮಹಾಭಾರತದಿಂದ ಹೇಗೆ ಭಿನ್ನವಾಗಿದೆ ಎಂಬಲ್ಲಿ ಸುಭದ್ರೆಯ ಹಾಡಿನ ಹೊಸ ಆಶಯಗಳ ಪ್ರಸ್ತಾಪವಿದೆ. ಲಕ್ಷ್ಮಣನ ಮಾವ (ವಸುದೇವ) ಇತರರು ಕೌಲರಿಗೆ (ಕೌರವರಿಗೆ) ತನ್ನ ಮಗಳನ್ನು ಮದುವೆಯಾಗಲು ಕೇಳಲು ಹೋಗುವುದು, ಇದನ್ನರಿತ ಲಕ್ಷ್ಮಣ ತನ್ನ ಮಾವನ ಮಗಳಿಗಾಗಿ ಶಪಥ ತೊಡುವುದು, ಜೋಗಿ ವೇಷ ತೊಟ್ಟು ಲಕ್ಷ್ಮಣ ತನ್ನ ಮಾವನ ಮಗಳ ಮದುವೆಗೆ ಹೋಗುವುದು, ಅಲ್ಲಿ ಮದುಮಕ್ಕಳು ಸೇಸೆ ತಳಿದುಕೊಳ್ಳುವುದು, ಚಿಗುರು ತಿಕ್ಕಿಕೊಳ್ಳುವುದು, ಕೌಲರ ದಿಬ್ಬಣ ಧಾರೆಗೆ ಬರುವುದು, ಅವರು ಮದುಮಗಳಿಗೆ ತಂದ ವಸ್ತ್ರಾಭರಣ ತೊಂಡಿಲುಗಳೆಲ್ಲ ಪುಡಿಪುಡಿಯಾಗುವುದು, ಆಗ ಲಕ್ಷ್ಮಣ ತಾನು ತಂದ ವಸ್ತ್ರಾಭರಣ ತೊಂಡಿಲುಗಳನ್ನು ಕೌರವರಿಗೆ ಕೊಡುವುದು, ಜೋಗಿಯನ್ನು ಪಡಿಕೊಟ್ಟು ಹೊರಗಟ್ಟಲು ನೆರೆದ ಜನ ಹೇಳುವುದು, ಮಾದೇವಿ ಪಡಿಕೊಡಲು ಬಂದಾಗ ಲಕ್ಷ್ಮಣ ಅವಳನ್ನು ಅಪಹರಿಸುವುದು, ಇತರರು (ವಸುದೇವ, ತನ್ನ ಚಿಕ್ಕಮಗಳನ್ನು ಕೌಲರಿಗೆ (ಕೌರವರಿಗೆ) ಧಾರೆ ಎರೆಯುವುದು, ಕೊನೆಯಲ್ಲಿ ಲಕ್ಷ್ಮಣ ತನ್ನ ಮಾವನಿಂದ ಮಾದೇವಿಯ ಧಾರೆ ಎರೆಸಿಕೊಳ್ಳುವುದು ಈ ಮುಂತಾದ ಘಟನೆಗಳು ಲಕ್ಷ್ಮಣನ ಹಾಡಿನಲ್ಲಿ ಸೇರಿಕೊಂಡು ಲಕ್ಷ್ಮಣನ ಹಾಡು ಸುಭದ್ರೆಯ ಹಾಡಿನಿಂದ ಭಿನ್ನವಾಗಿ ನಿಲ್ಲುತ್ತದೆ.

'ಅರ್ಜುನ ಹಾಡಿ'ನಲ್ಲಿ ಬರುವ ಕತೆಗೂ ಮಹಾಭಾರತ ಕತೆಗೂ ಸಂಬಂಧ ಜೋಡಿಸುವುದು ಪ್ರಯಾಸದ ಕೆಲಸ. ಈ ಹಾಡಿನ 'ನಾಗಮಣಿ' ಅರ್ಜುನ ತೀರ್ಥಯಾತ್ರೆಗೆ ಹೋದಾಗ ಅವನ ಕೈಹಿಡಿದ 'ನಾಗಕನ್ನೆ' ಉಲೂಪಿ ಎಂದುಕೊಳ್ಳಬೇಕು. 'ಕುಸುಮಾಲಿ' ಚಿತ್ರಾಂಗದೆ ಇರಬೇಕು. ದ್ರೌಪದಿ 'ನಾಗಾಣಿ' (ಉಲೂಪಿ) ಯರ ಸವತಿ ಮಾತ್ಸರ್ಯ, ಕುಸುಮಾಲಿಯ (ಚಿತ್ರಾಂಗದೆ) ಔದಾರ್ಯ, ಅನುಕಂಪೆ ಈ ಹಾಡಿನ ತಿರುಳು.

'ಕುಸುಮಾಲಿ ಹಾಡು' ಜನಪದ ಮಹಾಭಾರತದ ಮತ್ತೊಂದು ಸ್ವಾರಸ್ಯಕರ ಕಥಾನಕ, ಹಾಡುಗಬ್ಬ. ಅರ್ಜುನನು ಚದುರಂಗಿ ಕುಸುಮಾಲೆಯರನ್ನು ಮದುವೆಯಾದ ಮೇಲೆ ಹನ್ನೆರಡು ವರ್ಷ ಬಿಟ್ಟಿದ್ದು ಆಮೇಲೆ ಜೋಗಿಯ ವೇಷ ಧರಿಸಿ ಅವರು ಅವನಲ್ಲಿಟ್ಟಿರುವ ನಿರ್ವ್ಯಾಜ ಪ್ರೇಮವನ್ನು ಪರೀಕ್ಷಿಸಿ ಅವರನ್ನು ಕರೆತರುವ ವಿಷಯ ಇಲ್ಲಿ ಕಾವ್ಯಮಯವಾಗಿ ನಿರೂಪಿತವಾಗಿದೆ. ಈ ಹಾಡುಗಬ್ಬದಲ್ಲಿ ಚದುರಂಗಿ ಕುಸುಮಾಲೆಯರ ವಿರಹ ವರ್ಣನೆ ಹಾಡಿನ ಸ್ವಾರಸ್ಯಕರ ಭಾಗ. ತಾಯಿ ಅಣ್ಣತಮ್ಮಂದಿರನ್ನೆಲ್ಲ ಮರೆತು ದ್ರೌಪದಿಯ ಮೋಹವಶದಲ್ಲಿದ್ದ ಅರ್ಜುನನಿಗೆ ಗಿಳಿಗಳಿಂದ ಚದುರಂಗಿ ಕುಸುಮಾಲೆಯರ ವಿರಹ ವಿಷಯ ತಿಳಿದು ಅವರನ್ನು ಕಾಣಲು ಜೋಗಿಯ ವೇಷ ಧರಿಸಿ ಅವರ ಪ್ರೀತಿ ವಿಶ್ವಾಸಗಳನ್ನರಿತು ಅವರನ್ನು ಹಸ್ತಿನಾಪುರಕ್ಕೆ ಕರೆತರುತ್ತಾನೆ. ಈ ಮೊದಲೇ ಕೈ ಹಿಡಿದ ನಚ್ಚಿನ ಮಡದಿಯ ಪ್ರೇಮಾತಿಶಯವನ್ನು ಪರೀಕ್ಷಿಸಿ ತನ್ನ ಮಡದಿ ದ್ರೌಪದಿಗೆ ತೋರಿಸಲು ಅರ್ಜುನ ಸನ್ಯಾಸಿಯಾಗುವುದು ಇಲ್ಲಿಯ ವಿಶೇಷ.

'ಸುಭದ್ರೆಯ ಹಾಡಿ'ನಲ್ಲಿಯೂ ಅರ್ಜುನ ಜೋಗಿಯ ವೇಷ ತೊಡುವ ಸನ್ನಿವೇಶ ಬರುತ್ತದೆ. ಅರ್ಜುನನ ಈ ವೇಷ ಪರಿವರ್ತನೆಗೆ ಕಾರಣ ಸುಭದ್ರೆಯ ಪ್ರೀತಿಯ ಅಗಾಧತೆಯನ್ನು ಅರಿತು ಅವಳನ್ನು ವರಿಸುವುದು, ಇನ್ನೂ ಕೈಹಿಡಿಯದ ಸುಭದ್ರೆಯನ್ನು ಪರೀಕ್ಷಿಸಿ ಕೈ ಹಿಡಿಯುವ ಸನ್ನಿವೇಶ ಒದಗುವುದು. ಕುಸುಮಾಲೆಯ ಹಾಡಿನಲ್ಲಿ ಅರ್ಜುನನು ಈ ಮೊದಲೇ ಕೈ ಹಿಡಿದ ಮಡದಿಯ ಪ್ರೇಮ ಪರೀಕ್ಷೆಗೆ ಹೊರಟು ಅವಳು ಕೈತಪ್ಪಿಹೋಗುವ ಪ್ರಸಂಗವನ್ನು ತಂದುಕೊಳ್ಳುತ್ತಾನೆ.

ಕುಸುಮಾಲಿಯ ಕತೆ ಮಹಾಭಾರತದಲ್ಲಿ ದೊರೆಯದು. ಈ ಹಾಡುಗಬ್ಬದಲ್ಲಿ ಬಸದಿಯ ಪ್ರಸ್ತಾಪ ಬಂದಿರುವುದು ಈ ಹಾಡು ಜೈನ ಪರಂಪರೆಯಿಂದ ಬಂದಿರಬೇಕು ಎಂಬ ಅನುಮಾನವನ್ನು ಹುಟ್ಟಿಸುತ್ತದೆ ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಗಂಡ ಹೆಂಡತಿಗೆ ತೊಂದರೆ ಕೊಟ್ಟ ಪ್ರಸಂಗದಲ್ಲಿ ಹೆಂಡತಿ ಬಸದಿಗೆ ಹೋಗಿ ದೀಕ್ಷೆ ತೊಟ್ಟು ಸಂಸಾರದಿಂದ ವಿರಕ್ತಿ ಪಡೆಯುವ ಸಂಪ್ರದಾಯವಿದೆ. ಕುಸುಮಾಲಿ ದೀಕ್ಷಾಬದ್ಧಳಾಗಿ ಅರ್ಜುನನಿಗೆ ದಕ್ಕದೇ ಹೋದುದನ್ನು ಈ ಹಾಡಿನಲ್ಲಿ ಧ್ವನಿಸಲಾಗಿದೆ.

ಜನಪದ ಮಹಾಭಾರತದ ಮತ್ತೊಂದು ರಮ್ಯ ಪ್ರಸಂಗ 'ಕನಕಾಂಗಿ ಕಲ್ಯಾಣ'. ಈ ಹಾಡಿನಲ್ಲಿ ಸುಭದ್ರೆ ತನ್ನ ಸೋದರನ ಕುವರಿಯನ್ನು ತನ್ನ ಮಗ ಅಭಿಮನ್ಯುವಿಗೆ ಮದುವೆ ಮಾಡಿಕೊಂಡ ಸಂಗತಿ ಅತ್ಯಂತ ಸರಳ ರೀತಿಯಲ್ಲಿ ನಿರೂಪಿತವಾಗಿದೆ. ಕರಾವಳಿ ಕರ್ನಾಟಕ ಪ್ರದೇಶದಲ್ಲಿ ವ್ಯಾಪಕವಾಗಿ ಪ್ರಚಲಿತದಲ್ಲಿರುವ ಸೋದರ ಹೆಣ್ಣನ್ನು ಮದುವೆಯಾಗುವ ಸಂಪ್ರದಾಯದ ಸ್ಥಿರೀಕರಣಕ್ಕಾಗಿ ಕನಕಾಂಗಿ ಕಲ್ಯಾಣ ನಿರೂಪಿತವಾದಂತಿದೆ. ಸೋದರ

ಹೆಣ್ಣನ್ನು ತಂದುಕೊಳ್ಳುವ ಈ ಜನಪದ ಸಂಪ್ರದಾಯ ಕರಾವಳಿ ಕರ್ನಾಟಕದಲ್ಲಿ ಕನ್ನಡ ಮಾತನಾಡುವ ಎಲ್ಲ ಸಮಾಜಗಳಲ್ಲಿಯೂ ಇಂದಿಗೂ ಪ್ರಚಲಿತವಿದೆ.

ಜನಪದ ಮಹಾಭಾರತದ ಬಹು ಆಕರ್ಷಕ ಭಾಗ 'ಅಭಿಮನ್ಯು ಹಾಡು'. ಅಭಿಜಾತ ಮಹಾಭಾರತದಲ್ಲಿ ದ್ರೋಣಾಚಾರ್ಯರು ರಚಿಸಿದ ಚಕ್ರವ್ಯೂಹ ಭೇದಿಸಿ ಒಳನುಗ್ಗಿದ ಅಭಿಮನ್ಯುವನ್ನು ಕರ್ಣ ಮೋಸದಿಂದ ಕೊಂದ ವೃತ್ತಾಂತವಿದೆ. ಆದರೆ ಜನಪದ ಮಹಾಭಾರತದಲ್ಲಿ ಅಭಿಮನ್ಯು 'ಕಡಚಕ್ರ' ಕಾಳಗದಲ್ಲಿ ಅವನ ಮಾವ ನಾರಾಯಣದೇವನಿಂದ ಪ್ರೇರಣೆಗೊಂಡ ಕರ್ಣನಿಂದ ಹತನಾಗುತ್ತಾನೆ. ಕರ್ಣ ಅಭಿಮನ್ಯುವನ್ನು ವಂಚನೆಯಿಂದ ವಧಿಸಿದ್ದು ಎರಡೂ ಕಡೆಯಲ್ಲಿ ಸಾಮಾನ್ಯವಾದರೂ ಜನಪದ ಮಹಾಭಾರತದಲ್ಲಿ ಕರ್ಣನು ಮೋಸದಿಂದ ಅಭಿಮನ್ಯುವನ್ನು ಹೊಡೆದುದಕ್ಕಾಗಿ ಪಶ್ಚಾತ್ತಾಪಪಡುತ್ತಾನೆ. ತನ್ನನ್ನು ವಂಚಿಸಿ ಅಭಿಮನ್ಯುವನ್ನೇ ಕೊಲ್ಲಿಸಿದ ನಾರಾಯಣದೇವನ (ಶ್ರೀಕೃಷ್ಣ) ಮೇಲೆ ಕೋಪ ಕಾರುತ್ತಾನೆ. ಅಷ್ಟೇ ಅಲ್ಲ, ಅಭಿಮನ್ಯುವನ್ನು ಬದುಕಿಸುವ ಯೋಚನೆಯನ್ನೂ ಮಾಡುತ್ತಾನೆ. ಆದರೆ ಅಭಿಮನ್ಯು ವೀರೋಚಿತ ಮರಣವನ್ನು ಬಯಸಿದಾಗ ಅಭಿಮನ್ಯು ಮಡಿದಲ್ಲಿ ಹನ್ನೆರಡು ಸುತ್ತಿನ ಕೋಟೆ ಆಗಲೆಂದು ಹರಸಿ ಅವನ ಶೌರ್ಯ ಸ್ಮಾರಕದ ತಳಪಾಯ ಹಾಕುತ್ತಾನೆ. (ಮಹಾಭಾರತದ ಕರ್ಣನ ದುಷ್ಟ ವ್ಯಕ್ತಿತ್ವ ಸರ್ವರಿಗೂ ವಿದಿತವೇ ಇದೆ) ಒಟ್ಟಿನಲ್ಲಿ 'ಧರ್ಮರ ಹಾಡಿ'ನಲ್ಲಿಯ ಕರ್ಣನಂತೆ ಇಲ್ಲಿ ಪಡಿಮೂಡಿದ ಕರ್ಣನ ವ್ಯಕ್ತಿತ್ವವೂ ಸಾತ್ವಿಕ ತೇಜದಿಂದ ಕಳೆಗೊಂಡಿದೆ.

ಈ ಹಾಡುಗಬ್ಬದಲ್ಲಿ ಅಭಿಮನ್ಯುವಿನ ಸಾಹಸದ ಕಥೆ ಚೆನ್ನಾಗಿ ಪಡಿಮೂಡಿದೆ. ಮಾವ ನಾರಾಯಣದೇವನಿಂದ ತಾನು ವಂಚಿತನಾಗುವ ಸುಳಿವು ಸಿಕ್ಕರೂ ಅಭಿಮನ್ಯು ಕಾಳಗಕ್ಕೆ ಅಂಜುವ ಹೇಡಿಯಾಗದೆ ತನ್ನ ಸತ್ವಾತಿಶಯವನ್ನು ತೋರಿಸಿ ವೀರಮರಣವಪ್ಪುವ ಕಲಿ. ನರಸತ್ತ ಹೇಡಿಯಾಗಿ ನೂರು ವರ್ಷ ಬಾಳುವುದಕ್ಕಿಂತ ನರಕೇಸರಿಯಾಗಿ ಮೂರು ದಿನ ಬಾಳುವುದು ಲೇಸು ಎಂಬ ಜೀವನಾದರ್ಶವುಳ್ಳ ಕಲಿ ಅವನು. ಕರ್ಣ "ನೀನು ಏನು ಗೆಯ್ದರೆ ಬದುಕೀಯೇ ?" ಎಂದು ಅಭಿಮನ್ಯುವನ್ನು ಬದುಕಿಸಲು ತವಕಪಟ್ಟಾಗ ಅಭಿಮನ್ಯು "ನನ್ನ ಜೊತೆಗಾರರು ಕೂಡಿ ಪಗಡೆಯಾಡುವಾಗ ತೋಳ ಮೇಲೇತರ ಕಲೆಯೆಂದು ನಿನ್ನನ್ನು ಕೇಳಿದರೆ ನನಗೆ ಸತ್ತಂತಾಗುವುದು" ಎಂದು ಆತ ಕೊಟ್ಟ ಉತ್ತರ ಅವನ ಕಳಂಕ ರಹಿತ ತೋಳ್ಬಲಕ್ಕೆ ಅಮರ ದಾಖಲೆಯಾಗಿದೆ.

ಈ ಕಥಾನಕದಲ್ಲಿ ನಾರಾಯಣದೇವರ ಹಾಗೂ ಅವನ ಅಳಿಯ ಅಭಿಮನ್ಯು ಇವರಲ್ಲಿ ವೈರತ್ವ ಉಂಟಾಗಲು ಕಾರಣವೇನು ಎಂಬುದರ ಹಿನ್ನೆಲೆ ಉಕ್ತವಾಗಿಲ್ಲ. ಇದೇ ಬಗೆಯಲ್ಲಿ ಅಭಿಮನ್ಯು ಮತ್ತು ಅವರ ಮಾವ ನಾರಾಯಣದೇವರಲ್ಲಿ ಇಲ್ಲದಿರುವ ಉಲ್ಲೇಖ ಜನಪದ ಮಹಾಭಾರತದಲ್ಲಿ ಅನೇಕ ಕಡೆಗಿದೆ. ಇದಕ್ಕೆ ಕಾರಣವಾಗಿರುವ ಹಿನ್ನೆಲೆಯೂ ಬೇರೆಡೆ ಇದೆ. ಸದ್ಯ ಅದು ಇಲ್ಲಿ ಅಪ್ರಕೃತ. ಒಟ್ಟಿನಲ್ಲಿ ಈ ಕಥಾನಕದಲ್ಲಿ ಬರುವ ನಾರಾಯಣದೇವ ಕುತಂತ್ರಿಯೂ ವಂಚಕನೂ ಸ್ವಾರ್ಥಪರನೂ ಆಗಿದ್ದಾನೆ. ತನ್ನ ಸುಖಕ್ಕಾಗಿ ಅಳಿಯ ಹಾಗೂ ಮಗಳ ಬಲಿ ತೆಗೆದುಕೊಳ್ಳುವ ಕ್ರೂರಿಯಾಗಿ ತೋರುತ್ತಾನೆ.

ಜನಪದ ಮಹಾಭಾರತದ ಗಮನಾರ್ಹ ಪ್ರಸಂಗ 'ಸಾವಿತ್ರಿ ಹಾಡು'. ಮಹಾಭಾರತದ

ಅರಣ್ಯಪರ್ವದಲ್ಲಿ ಬರುವ ಸಾವಿತ್ರಿ ಸತ್ಯವಾನರ ಕತೆಯ ಉತ್ತರ ಭಾಗ ಮಾತ್ರ ಜನಪದ ಮನೋಧರ್ಮಕ್ಕನುಗುಣವಾಗಿ ಕೆಲವು ಹೊಸ ಆಶಯಗಳೊಡನೆ ಈ ಹಾಡಿನಲ್ಲಿ ಉಕ್ತವಾಗಿದೆ. ಸಾವಿತ್ರಿಯ ಪತಿಪ್ರೇಮ ಅತ್ತೆಮಾವಂದಿರಲ್ಲಿಯ ನಿಷ್ಠೆ ಮುಂತಾದುವೆಲ್ಲ ಹಾಡಿನಲ್ಲಿ ಉಕ್ತವಾಗಿವೆ. ಸಾವಿತ್ರಿಯ ದಿಟ್ಟತನವನ್ನು ಪ್ರಕಟಪಡಿಸುವ ಯಮರಾಯನ ಮಡದಿಯರ ಮುಂದೆ ಅವಳು ಕೊಡುವ ಉತ್ತರವಾಗಲಿ ಅವಳ ಭೂತಾನುಕಂಪೆಯನ್ನು ಸಾದರಪಡಿಸುವ ಯಮರಾಯನ ಕುಂಡದಲ್ಲಿಯ ಪಾಪಿಗಳನ್ನು ಬದುಕಿಸುವ ಘಟನೆಯಾಗಲಿ ಅಭಿಜಾತ ಮಹಾಭಾರತದಲ್ಲಿಲ್ಲ. ಜನಪದರು ಮಾಡಿಕೊಂಡ ಈ ಮಾರ್ಪಾಟುಗಳು ಸಾವಿತ್ರಿ ಇಲ್ಲವೇ ಯಮನ ವ್ಯಕ್ತಿತ್ವದ ಘನತೆಯನ್ನು ಪೋಷಿಸುವ ಘಟನೆಗಳಾಗಿ ಬರುವುದಿಲ್ಲ. ಯಮನ ಕುಂಡದಲ್ಲಿಯ ಪಾಪಿಗಳ ಮೇಲೆ ಕರುಣೆಯನ್ನು ತೋರಿಸಲು ಹೊರಟ ಸಾವಿತ್ರಿ ತನ್ನ ಮೂಲ ಉದ್ದೇಶವನ್ನು ಮರೆತು ಬೇರೆಡೆ ಗಮನಹರಿಸಿ ತನ್ನ ಪತಿಯನ್ನು ಬದುಕಿಸುವಲ್ಲಿ ವಿಲಂಬಿಸುವುದು ವಿಚಿತ್ರವಾಗಿ ಕಾಣುತ್ತದೆ. ಯಮರಾಯ ಕಣ್ಣುತಪ್ಪಿಸಿ ಅಮೃತವನ್ನು ಗಂಡನಿಗಾಗಿ ಸೆಳ್ಳುಗುರಿನಲ್ಲಿ ಕದ್ದಿಟ್ಟುಕೊಳ್ಳುವುದು ಸಾವಿತ್ರಿಯ ಘನವಾದ ವ್ಯಕ್ತಿತ್ವಕ್ಕೆ ಶೋಭಿಸುವುದಿಲ್ಲ. ಅಂತೆಯೇ ಸಾವಿತ್ರಿಗೆ ಕೊಟ್ಟ ಅಮೃತ ಗಿಂಡಿಯನ್ನು ಯಮರಾಯನು ಕಸಿದು ಪುನಃ ತನ್ನಲ್ಲಿಟ್ಟುಕೊಳ್ಳುವುದೂ ಯಮರಾಯನ ಘನತೆಗೆ ಒಪ್ಪುವುದಿಲ್ಲ. ಒಟ್ಟಿನಲ್ಲಿ ಸಾವಿತ್ರಿ ಹಾಡಿನ ಮಾರ್ಪಾಟುಗಳು ಸಾವಿತ್ರಿಯ ಇಲ್ಲವೇ ಯಮರಾಯನ ಘನತೆಯನ್ನು ಹೆಚ್ಚಿಸದೆ ಅವರ ವ್ಯಕ್ತಿತ್ವಕ್ಕೆ ಎಳೆದ ಕರಿಗೆರೆಗಳಾಗಿವೆ ಎಂದೇ ಹೇಳಬೇಕಾಗುತ್ತದೆ.

ಇಲ್ಲಿ ನಿರೂಪಿಸಲಾದ ಜನಪದ ಮಹಾಭಾರತದ ಬಿಡಿ ಕಥಾನಕಗಳ ಸ್ವರೂಪವನ್ನು ನೋಡಿದರೆ ಇವು ಅಭಿಜಾತ ಭಾರತದಿಂದ ಭಿನ್ನವಾಗಿರುವ ಇನ್ನೊಂದು ಸಂಪ್ರದಾಯಕ್ಕೆ ಸೇರಿದ ಮಹಾಭಾರತದಿಂದ ಪ್ರೇರಣೆ ಪೋಷಣೆಗಳನ್ನು ಪಡೆದಂತಿದೆ. ಇಲ್ಲಿ ಮಹಾಭಾರತದ ಪಾತ್ರಗಳು ತಮ್ಮ ಎಂದಿನ ಗುಣಧರ್ಮಗಳನ್ನು ಕಳೆದುಕೊಂಡು ಬೇರೆಯ ಸ್ವರೂಪದಲ್ಲಿಯೇ ನಿಲ್ಲುತ್ತವೆ. ಮಹಾಭಾರತದ ನಾಯಕಮಣಿಯಾದ ಶ್ರೀಕೃಷ್ಣ ಇಲ್ಲಿ ನಾರಾಯಣದೇವ ಎಂಬ ಹೆಸರಿನಲ್ಲಿ ಕುತಂತ್ರಿಯೂ ಕಠೋರಮತಿಯೂ ಆಗಿ ಗೋಚರಿಸುತ್ತಾನೆ. ದುರ್ಯೋಧನನ ದುಷ್ಟಕೂಟದಲ್ಲೊಬ್ಬನಾದ ಕರ್ಣನು ಧರ್ಮಬೀರುವೂ ಸಾತ್ವಿಕನೂ ಸತೀಧರ್ಮರಕ್ಷಕನೂ ಆಗಿ ಇಲ್ಲಿ ಮಾರ್ಪಾಡಾಗಿದ್ದಾನೆ. ಅಭಿಜಾತ ಮಹಾಭಾರತದ ಖಳ ಪಾತ್ರಗಳಾದ ಕರ್ಣಾದಿಗಳ ಉದಾತ್ತೀಕರಣಕ್ಕೆ ಕನ್ನಡ ಕವಿಗಳು ಜನಪದ ಮಹಾಭಾರತದಿಂದ ಪ್ರೇರಣೆ ಪಡೆದಿರಬಹುದು ಎನ್ನಲು ಈ ಕಥಾನಕಗಳು ಆಧಾರ ಎನಿಸಿವೆ.

ಮಹಾಭಾರತದಲ್ಲಿಯ ಅನೇಕ ಪಾತ್ರಗಳ ಹೆಸರು ಜನಪದ ಜಾಯಮಾನಕ್ಕೆ ಅನುಗುಣವಾಗಿ ಇಲ್ಲಿ ತದ್ಭವವಾಗಿವೆ. ಅಭಿಜಾತ ಮಹಾಭಾರತದಲ್ಲಿಲ್ಲದ ಕೆಲವು ಹೊಸ ಪಾತ್ರಗಳು (ಜನಪದ ಮಹಾಭಾರತದಲ್ಲಿ) ಇಲ್ಲಿ ಸೇರ್ಪಡೆಗೊಂಡಿವೆ. ಕೆಲವೆಡೆ ಒಬ್ಬರ ಹೆಸರನ್ನು ಇನ್ನೊಬ್ಬರಿಗೆ ವರ್ಗಾಯಿಸಲಾಗಿದೆ. ಕೆಲವರ ಹೆಂಡಿರ ಹೆಸರೂ ಬದಲಾಗಿ ಹೋಗಿವೆ. ಜನಪದರು ವ್ಯಕ್ತಿಯ ಹೆಸರಿನ ಕಡೆಗೆ ಗಮನವೀಯದೆ ಕಥೆಯ ನಿಟ್ಟೋಟದ ಕಡೆಗೆ ಗಮನಹರಿಸಿದ್ದೇ ಇದಕ್ಕೆ ಕಾರಣ.

ಇಲ್ಲಿಯ ಒಂದೊಂದೂ ಕಥಾನಕವನ್ನು ನೋಡಿದಾಗ ಕರಾವಳಿ ಕರ್ನಾಟಕದ ಜನತೆ ಮಹಾಭಾರತದ ಯಾವುದೋ ಘಟನೆಯನ್ನು ತೆಗೆದುಕೊಂಡು ತಮ್ಮ ಮನೋಧರ್ಮಕ್ಕನುಗುಣವಾಗಿ ಅದರಲ್ಲಿ ಹೊಸ ಆಶಯಗಳನ್ನು ಅಳವಡಿಸಿಕೊಂಡು ತಮ್ಮಲ್ಲಿ ಪ್ರಚಲಿತವಿರುವ ರೀತಿ ನೀತಿ ರೂಢಿ ನಂಬಿಕೆ ಸಂಪ್ರದಾಯಗಳನ್ನೆಲ್ಲ ಮೇಳವಿಸಿ ಜನಸಾಮಾನ್ಯರಿಗೆ ಸುಲಭಗ್ರಾಹ್ಯವಾಗುವ ರೀತಿಯಲ್ಲಿ ಕಥೆ ಕಟ್ಟಿಯೋ ಪರಂಪರಾಗತವಾಗಿ ಬಂದ ಜನಪದ ಮೂಲಕಥೆಯನ್ನೇ ತಮಗನುಕೂಲ ಕಂಡ ರೀತಿಯಲ್ಲಿ ಮಾರ್ಪಡಿಸಿಕೊಂಡು ಹಾಡಿಯೇ ಜನಸಾಮಾನ್ಯರನ್ನು ರಂಜಿಸುವ ಯತ್ನ ಮಾಡಿದ್ದಾರೆ.

ಇಲ್ಲಿಯ ಹಾಡುಗಬ್ಬಗಳಲ್ಲಿ ಮೇಲಿಂದ ಮೇಲೆ ಕೆಲವು ವರ್ಣನಾ ಭಾಗಗಳು, ನುಡಿಗಟ್ಟುಗಳು (phrases) ಪುನರಾವರ್ತನೆಗೊಂಡಿವೆ. ಸ್ನಾನ, ಉಡುಗೆ ತೊಡುಗೆ, ವಿವಾಹ ಕಾರ್ಯ ಮುಂತಾದುವುಗಳಿಗೆ ಸಂಬಂಧಿಸಿದ ವರ್ಣನೆಗಳನ್ನು ಇದಕ್ಕೆ ಉದಾಹರಣೆಗಳಾಗಿ ನಮೂದಿಸಬಹುದು. ಪುನರುಕ್ತಿಗೊಂಡ ಈ ವರ್ಣನೆಗಳು ಘಟನೆಗಳ ಸೂಕ್ಷ್ಮಾತಿಸೂಕ್ಷ್ಮಗಳನ್ನು ಚಿತ್ರವತ್ತಾಗಿ ನಿರೂಪಿಸುವಲ್ಲಿ ಸಾಫಲ್ಯ ಪಡೆಯುತ್ತವೆ. ಆದರೂ ಕೆಲವೊಮ್ಮೆ ಅನಿವಾರ್ಯ ಎನ್ನುವ ರೀತಿಯಲ್ಲಿ (ಜಾನಪದ ಜಾಯಮಾನವೇ ಅದು) ಪುನರುಕ್ತಿಗಳು ಮೇಲಿಂದ ಮೇಲೆ ಅವತರಿಸುತ್ತವೆ. ಯಾವುದೋ ಜನಪ್ರಿಯ ನುಡಿಗಟ್ಟು/ ಜನಪ್ರಿಯ ಸಂಪ್ರದಾಯ ಜನತೆಯ ಸ್ಮೃತಿಪಟಲದಿಂದ ಅಳಿಸಿ ಹೋಗಬಾರದೆಂಬ ಉದ್ದೇಶದಿಂದ ಇಂತಹ ಪುನರಾವರ್ತನೆಗಳನ್ನು ಜನಪದರು ಉದ್ದೇಶಪೂರ್ವಕವಾಗಿಯೇ ಉಳಿಸಿಕೊಂಡು ಬಂದರು. ಕೇಳುಗರ ಮನಸ್ಸಿನಲ್ಲಿ ಅವು ಅಚ್ಚೊತ್ತಿ ನಿಲ್ಲಲಿ ಎಂಬ ಆಶಯವೂ ಇಲ್ಲಿ ಈ ಕೆಲಸ ಮಾಡಿದೆ. ಹೀಗಾಗಿ ಪರಂಪರಾಗತ ಪದ್ಧತಿ, ಸಂಪ್ರದಾಯಗಳು ಜನಪದರಲ್ಲಿ ಭದ್ರವಾಗಿ ಬೇರುಬಿಟ್ಟವು.

ಜನಪದ ಮಹಾಭಾರತದಲ್ಲಿ ಅಭಿಜಾತ ಮಹಾಭಾರತದಲ್ಲಿ ಕಾಣುವ ಯುದ್ಧ ಹೋರಾಟಗಳ ಭೀಕರ ವರ್ಣನೆಯಿಲ್ಲ. ವೀರರ ಪೌರುಷದ ಚೀತ್ಕಾರ, ಖಡ್ಗಗಳ ಠಣತ್ಕಾರ ಗಾಯಾಳುಗಳ ರೋಧನವಿಲ್ಲ. ವೇದ ವೇದಾಂತ ತತ್ವಗಳ ಮಣಭಾರವಿಲ್ಲ. ಇಲ್ಲಿ ಕಾಣುವುದು ಜನಪದರ ರೂಢಿ ಸಂಪ್ರದಾಯಗಳ ಪ್ರದರ್ಶನ ಶಾಲೆಯನ್ನು; ಅವರ ಕೌಟುಂಬಿಕ ಜೀವನದ ಸುಂದರ ಕಳವನ್ನು; ಮಾನವ ಸಹಜವಾದ ರಾಗದ್ವೇಷಗಳ ತುಮುಲವನ್ನು. ಆದರೆ ಆ ತುಮುಲದಲ್ಲಿ ರಕ್ತಪಾತ ತೀರ ಕಡಿಮೆ ಎಂದೇ ಹೇಳಬೇಕು.

ಜನಪದ ಮಹಾಭಾರತದ ಈ ಕಥಾನಕಗಳಲ್ಲಿ ಅಳವಟ್ಟಿರುವ ಜನಪದ ರೀತಿನೀತಿಗಳು ವಿಧಿಸಂಪ್ರದಾಯಗಳು ವಿಶೇಷ ಪರಿಶೀಲನೆಗೆ ಅರ್ಹವಾಗಿವೆ. ಈ ಕರಾವಳಿ ಕರ್ನಾಟಕದ ಜನತೆ ಒಪ್ಪಿ ಅಂಗೀಕರಿಸಿರುವ ಮೌಲ್ಯಗಳ ಸ್ಥಿರೀಕರಣವೇ ಇಲ್ಲಿಯ ಘನ ಉದ್ದೇಶ. ಕರಾವಳಿ ಪ್ರದೇಶದಲ್ಲಿ ಇಂದಿಗೂ ಕಂಡುಬರುವ ಶಿಷ್ಟಾಚಾರಗಳು ರೂಢಿವಾಡಿಕೆಗಳು ಹಾಡುಹಬ್ಬಗಳಲ್ಲಿ ಉಲ್ಲೇಖಗೊಂಡಿರುವುದು ಸಾಮಾನ್ಯ. ಕೈಕಾಲು ಮುಖ ತೊಳೆದು 'ಆಸರ' ಕುಡಿಯುವುದು, ವೀಳ್ಯದೆಲೆ ಮೆಲ್ಲುವುದು, ಮಿಂದು ಮಡಿಯುಟ್ಟು ದೇವತಾರ್ಚನೆ ಮಾಡುವುದು, ಊಟ ಮಾಡಿ ವೀಳ್ಯ ಹಾಕುವುದು, ಗಂಡಿನೂಟವಾದ ಅನಂತರವೇ ಹೆಣ್ಣು ಊಟ ಮಾಡಿ ಎಂಜಲು ಮೈಲಿಗೆ ತೆಗೆಯುವುದು, ಗಂಡ ಮುಂದೆ

ಹೆಂಡತಿ ಹಿಂದೆ ನಡೆಯುವುದು, ಸೋದರಿ ಮುಂದೆ ಸೋದರ ಹಿಂದೆ ನಡೆಯುವುದು ಇವೇ ಮುಂತಾದ ರಿವಾಜುಗಳು ಇಲ್ಲಿ ಉಕ್ತವಾಗಿವೆ.

ಕರಾವಳಿ ಕರ್ನಾಟಕದ ಬಂಧುತ್ವ ಸಂಪ್ರದಾಯಗಳೆಲ್ಲ ಸೋದರಮಾವನ ಮಗಳನ್ನು ಮದುವೆಯಾಗುವುದು ಅನೂಚಾನವಾಗಿ ನಡೆದುಬಂದ ಒಂದು ಪದ್ಧತಿ. ಸೋದರದ ಹೆಣ್ಣನ್ನು ಅಧಿಕಾರವಾಣಿಯಿಂದ ಕೇಳಿ ಕೊಡದಿದ್ದಲ್ಲಿ ಬಲಾತ್ಕಾರವಾಗಿ ಪಡೆಯುವ, ಅಪಹರಿಸುವ ಪದ್ಧತಿ ಇದ್ದಿತು ಎಂಬುದು ಈ ಕಥಾನಕದ ಉಕ್ತಿಗಳೇ ದೃಢಪಡಿಸುತ್ತವೆ. ಮದುವೆ ಸಂಪ್ರದಾಯದಲ್ಲಿ ಹೆಣ್ಣನ್ನು ಅಪಹರಿಸುವ ಕ್ರಮ (ಚಡಂಗ) ಹಲವರಲ್ಲಿದ್ದುದನ್ನು ನಾವು ಇಲ್ಲಿ ನೆನೆಯಬಹುದು. ಕರಾವಳಿ ಪ್ರದೇಶದಲ್ಲಿ ಕೆಲವು ಗಿರಿಜನರಲ್ಲಿ ಅಣ್ಣ ತಂದ ಮಡದಿಯ ಮೇಲೆ ಅರ್ಧ ಹಕ್ಕು ತಮ್ಮನಿಗೂ ಲಭ್ಯವಿದೆ: " ಹಿತ್ತಲಕಡೆಯ ಸೌತೆಕಾಯಿಯು ಹೇಗೆ ನೆಟ್ಟವರಿಗೆ ಅರ್ಧ ನೆರೆಯವರಿಗೆ ಅರ್ಧವೋ ಅಂತೆಯೇ ಅಣ್ಣ ತಂದ ಹೆಣ್ಣು ಅಣ್ಣನಿಗರ್ಧ ತಮ್ಮನಿಗರ್ಧ" ಎಂಬ ಮಾತೇ ಉಂಟು. ಅಷ್ಟೇ ಅಲ್ಲ ಈ ಪ್ರದೇಶದ ಜನರಲ್ಲಿ ಇಂದಿಗೂ ಮೈದುನ ಅತ್ತಿಗೆಯನ್ನು ಮುಟ್ಟಲು ನಿಷೇಧವಿಲ್ಲ. ಆದರೆ ಭಾವನು ನಾದಿನಿಯನ್ನು ಮುಟ್ಟುವುದು ನಿಷಿದ್ಧ. ವಧು ವರನ ಹೆಸರು ಹೇಳುವ ರೂಢಿ ಇಲ್ಲ. ಹಾಗೆ ಹೆಸರು ಹೇಳಿದರೆ ಸಂಗಾತಿಯ ಆಯುಷ್ಯ ಕ್ಷೀಣಿಸುವುದು ಎಂಬ ನಂಬಿಕೆ ಬಲವಾಗಿದೆ. ಗಂಡನ ಮರಣಾನಂತರ ಹೆಂಡತಿ ತನ್ನ ಮೈದುನನನ್ನು ಮದುವೆಯಾಗುವ ಪದ್ಧತಿಯೂ ಕೆಲವು ಬುಡಕಟ್ಟುಗಳಲ್ಲುಂಟು. ಅಭಿಮನ್ಯು ಸತ್ತಾಗ ನಾರಾಯಣದೇವ (ಶ್ರೀಕೃಷ್ಣ) ಸೀಗ್ರರನ್ನು ಕುರಿತು 'ನಿಮ್ಮ ವಿಧವೆ ಅತ್ತಿಗೆಯನ್ನು ವರಿಸುವಿರೇನು ?' ಎಂದು ಪ್ರಶ್ನಿಸಿದ ಸನ್ನಿವೇಶವನ್ನು ಇಲ್ಲಿ ನೆನೆಯಬಹುದು. ಸತಿಹೋಗುವ ಪದ್ಧತಿಯ ಸುಳಿವು ಇಲ್ಲಿಯ ಹಾಡಿನಲ್ಲಿದೆ. ಸತಿಹೋಗುವ ಸ್ತ್ರೀ ಮುತ್ತೈದೆ (ಸುಮಂಗಲೆ) ಯಂತೆ ಸಿಂಗರಿಸಿಕೊಂಡು ಸಹಗಮನಕ್ಕೆ ಅಣಿಯಾಗುವುದು, ಸಹಗಮನಕ್ಕೆ ಹೊರಡುವಾಗ, ಸತಿಗೆ ಪ್ರಿಯವಾದ ವಸ್ತು ವಾಹನಾದಿಗಳನ್ನು ಒಯ್ಯುವ ವಾಡಿಕೆಯಿತ್ತೆಂಬ ಉಕ್ತಿಯೂ ಹಾಡಿನಲ್ಲಿ ಬಂದಿರುವುದುಂಟು.

ಹಾಣೆಯಾಟ, ಸೋಡಿಯಾಟ, ಪಗಡೆಯಾಟಗಳು ಜನಪ್ರಿಯ ಮನರಂಜನೆಯ ಆಟಗಳು. ಹೆಣ್ಣುಗಂಡುಗಳು ಒಟ್ಟಿಗೆ ಕುಳಿತು ಪಗಡೆಯಾಡುವ ರೂಢಿ ಇತ್ತು. ಅನೇಕ ವೇಳೆ ಈ ಪಗಡೆಯಾಟದಲ್ಲಿ ಮೋಸ ವಂಚನೆಗಳು ನಡೆದು ಪರಸ್ಪರ ದ್ವೇಷಕ್ಕೆ ಕಾರಣವಾಗುತ್ತಿತ್ತು. ಈ ಎಲ್ಲ ಸಂಗತಿಗಳು ಇಲ್ಲಿಯ ಕಥಾನಕಗಳಲ್ಲಿ ಉಕ್ತವಾಗಿರುವುದು ಗಮನಾರ್ಹ.

ದೇವರನ್ನು ಅತ್ಯಂತ ನಿಕಟವರ್ತಿಯಾಗಿ ಈ ಜನ ಕಾಣಬಲ್ಲರು. ತಮ್ಮ ಅಭೀಷ್ಟ ನೆರವೇರಿದಾಗ ದೇವರನ್ನು ಹೊತ್ತು ಮೆರವಣಿಗೆ ಮಾಡಬಲ್ಲರು. ನೆರವೇರದಾದಾಗ ಆ ದೇವರನ್ನು ಕಿತ್ತು ಸಮುದ್ರಕ್ಕೆ ಹಾಕುವ ಬೆದರಿಕೆಯನ್ನೂ ಈ ಜನ ಮಾಡಬಲ್ಲರು. ಆದರೆ ಈ ಬೆದರಿಕೆ ಕೇವಲ ತೋರಿಕೆಯ ಬೆದರಿಕೆ, ಪ್ರೀತಿಯ ಬೆದರಿಕೆ. ದುರ್ಯೋಧನ, "ಗಣನಾಥನನ್ನು ಕುಟ್ಟುತ್ತೇನೆ, ಕಿತ್ತು ಸಮುದ್ರಕ್ಕೆ ಒಗೆಯುತ್ತೇನೆ" ಎನ್ನುವಲ್ಲಿ ದೇವರ ವಿಷಯದಲ್ಲಿ ಜನಪದ ಮನೋಧರ್ಮ ಏನೆಂಬುದು ಸ್ಪಷ್ಟವಾಗುತ್ತದೆ.

ಇಂದಿನ ವೈಜ್ಞಾನಿಕ ದೃಷ್ಟಿಗೆ ಕೇವಲ ಮೂಢನಂಬಿಕೆಗಳಾಗಿ, ಅರ್ಥಹೀನವಾಗಿ

ಕಾಣುವ ಶಕುನ, ಸ್ವಪ್ನಗಳಲ್ಲಿ ಇಲ್ಲಿಯ ಜನರಿಗೆ ವಿಶೇಷ ನಂಬಿಕೆ ಇರುವುದು ಇಲ್ಲಿಯ ಹಾಡುಗಬ್ಬಗಳಲ್ಲಿ ವ್ಯಕ್ತವಾಗಿದೆ. ಈ ಜನ ಅವನ್ನು ನಂಬುತ್ತಾರೆ. ಈ ಸ್ವಪ್ನ, ಶಕುನಗಳು ಮುಂದಾಗುವ ಶುಭವನ್ನೋ ಅಶುಭವನ್ನೋ ಪೂರ್ವಭಾವಿಯಾಗಿ ತಿಳಿಸುವ ಸಾಧನಗಳು ಎಂದು ಇವರ ಬಲವಾದ ನಂಬಿಕೆ. ಈ ಮತ್ತು ಇತರ ಎಲ್ಲ ಸಂಗತಿಗಳು ಈ ಜನರು ಒಪ್ಪಿ ಅಂಗೀಕರಿಸುವ ಮೌಲ್ಯಗಳ ಸ್ಥಿರೀಕರಣದ ಪ್ರಯತ್ನಗಳಲ್ಲದೆ ಮತ್ತೇನು ?

ಗ್ರಂಥಸೂಚಿ

ಗಾಮೊಕ್ಕಲ ಮಹಾಭಾರತ : ಸಂ.: ಎನ್.ಆರ್. ನಾಯಕ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೨

ಜನಪದ ಗೀತಗಳಲ್ಲಿ ಮಹಾಭಾರತ : ಸಂ.: ಕ.ರಾ. ಕೃಷ್ಣಸ್ವಾಮಿ, ಜನಪದ ಸಾಹಿತ್ಯ ಅಕಾಡೆಮಿ, ಮೈಸೂರು, ೧೯೬೨

ಕನ್ನಡ ಜಾನಪದ ಗೀತಗಳು : ಲೇ.: ಬಿ.ಎಸ್. ಗದ್ದಗೀಮಠ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೬೩

ವಚನಭಾರತ : ಲೇ.: ಎ. ಆರ್. ಕೃಷ್ಣಶಾಸ್ತ್ರಿ, ನಾಲ್ಕನೆಯ ಮುದ್ರಣ, ೧೯೬೬

ಜನಪದ ಮಹಾಭಾರತ : ಸಂ.: ಸೋಮಶೇಖರ ಇಮ್ರಾಪೂರ, ಚೇತನ ಪ್ರಕಾಶನ, ಧಾರವಾಡ, ೧೯೭೬

ಜನಪದ ಭಾರತ ಕಥೆಗಳು : ಸಂ.: ಎಲ್.ಆರ್. ಹೆಗಡೆ, ಜಾನಪದ ಪ್ರಕಾಶನ, ಹೊನ್ನಾವರ, ಉ.ಕ. ೧೯೭೯

ಮೇಘಾಲಯದ
ಖಾಸಿಭಾಷೆ : ತೆಕ್ಕಿಗೆ ದಕ್ಕಿದ ವಿಚಾರಗಳು

ಡಾ. ಆರ್. ರಾಮಕೃಷ್ಣ

ಖಾಸಿಭಾಷೆಯು ಆಸ್ಟ್ರಿಕ್ ಭಾಷಾಪರಿವಾರದ ಮಾನ್-ಖ್ಮೇರ್ ವರ್ಗಕ್ಕೆ ಸೇರಿದೆ. ಅಸ್ಸಾಮಿ, ಬಂಗಾಳಿ, ಜೈತೆ, ವೈಫೈ (ಕುಕಿ ಗುಂಪಿಗೆ ಸೇರಿದ ಭಾಷೆ), ಗಾರೋ, ದಿಮಸ್ ಮತ್ತು ಲಾಲುಂಗ್ (ಬೋಡೋ ಗುಂಪಿಗೆ ಸೇರಿದ ಭಾಷೆ). ಭಾಷೆಗಳ ಪ್ರಭಾವವಿದ್ದರೂ ಖಾಸಿ ಭಾಷೆ ಪ್ರಾಚೀನ ಕಾಲದಿಂದಲೂ ತನ್ನದೇ ಆದ ವೈಶಿಷ್ಟ್ಯವನ್ನು ಪಡೆದುಕೊಂಡಿದೆ. ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗದಲ್ಲಿ ಜೆ.ಆರ್. ಲೋಗನ್ ಎಂಬಾತ ಮ್ಯಾನ್ಮಾರ್, ಚೀನಾ ಮತ್ತು ಮಲೇಷ್ಯ ಮೊದಲಾದ ರಾಷ್ಟ್ರಗಳಲ್ಲಿ ಮಾನ್-ಖ್ಮೇರ್ ಭಾಷಾವರ್ಗಕ್ಕೆ ಸೇರಿದ ಭಾಷೆಗಳನ್ನು ಶೋಧಿಸುವ ಪ್ರಯತ್ನ ನಡೆಸಿದ. ಅನಂತರ ಪೀಟರ್ ಸ್ಮಿತ್ ಎಂಬ ಸಂಶೋಧಕ ಆಸ್ಟ್ರಿಕ್ ಭಾಷಾಪರಿವಾರಕ್ಕೆ ಸೇರಿರುವ ಮತ್ತಷ್ಟು ಭಾಷೆಗಳನ್ನು ಕುರಿತು ವಿಶ್ಲೇಷಣೆ ನಡೆಸಿದರು. ಇದರ ಫಲವಾಗಿ ಮುಂಡಾ ವರ್ಗಕ್ಕೆ ಸೇರಿದ ಕೋಲ್, ಸಂತಾಲ್, ಹೋ ಮೊದಲಾದ ಭಾಷೆಗಳು ಬೆಳಕಿಗೆ ಬಂದವು. ಖಾಸಿ ಭಾಷೆ, ಮಾನ್-ಖ್ಮೇರ್ ಮತ್ತು ಮುಂಡಾ ವರ್ಗಗಳ ನಡುವಣ ಸ್ಥಾನದಲ್ಲಿದೆ ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

೧

ಸ್ಮಿತ್ ಅವರು ಆಸ್ಟ್ರಿಕ್ ಭಾಷಾ ಪರಿವಾರವನ್ನು ಪ್ರಮುಖವಾಗಿ ಎರಡು ಗುಂಪುಗಳನ್ನಾಗಿ ವರ್ಗೀಕರಿಸಿದ್ದಾರೆ : ೧. ಆಸ್ಟ್ರೋನೀಷಿಯನ್ (ಮಲಯೋ-ಪಾಲಿನೀಷಿಯನ್) ಮತ್ತು ೨. ಆಸ್ಟ್ರೋ ಏಷ್ಯಾಟಿಕ್, ಈ ಪೈಕಿ ಎರಡನೆಯದರಲ್ಲಿ ಆರು ಉಪಗುಂಪುಗಳನ್ನು ಗುರುತಿಸಿದ್ದಾರೆ. ಅವು :

೧. ಮಾನ್-ಖ್ಮೇರ್ : ಬಹ್ನರ್, ಸ್ತಿಯಂಗ್, ಖಾಸೋ, ಖಾ ತಂಪುಯನ್, ಚೊಂಗ್, ಹ್ಯೂ, ಸ್ಸುಮ್, ಹಿನ್, ನಿಖಾಂಗ್, ಮೀ, ಖ್ಮು, ಲೆಮೆತ್, ಬರ್‌ಸಿಸ್ತ್ ಮತ್ತು ಜಕುನ್ ಭಾಷೆಗಳು.

೨. ಸೆನೊಯ್ (ಸಕಯ್), ಸೆಮಾಂಗ್ ಗುಂಪು

೩. ಪತಾಂಗ್-ರಿಯಂಗ್- ವಾ ಗುಂಪು

೪. ಖಾಸಿ ಗುಂಪು

೫. ನಿಕೋಬಾರಿ ಗುಂಪು ಮತ್ತು

೬. ಮುಂಡಾ ಗುಂಪು

ಪ್ರಿಜಿಲೂಸ್ಕಿ ಎಂಬ ಐತಿಹಾಸಿಕ ಭಾಷಾವಿಜ್ಞಾನಿ ಆಸ್ಟ್ರಿಕ್ ಭಾಷಾಪರಿವಾರದಲ್ಲಿ ಮೂರು ಗುಂಪುಗಳನ್ನು ಗುರುತಿಸಿದ್ದಾರೆ. ಅವು : ೧. ಮುಂಡಾ, ೨. ಮಾನ್-ಖ್ಮೇರ್ ಮತ್ತು ೩. ಅನ್ನಮೈತ್

ಮಾನ್-ಖ್ಮೇರ್ ಗುಂಪಿನಲ್ಲಿ ಮತ್ತೆ ಆರು ಉಪಗುಂಪುಗಳನ್ನು ಶೋಧಿಸಿದ್ದಾರೆ. ಅವು :

೧. ಮಧ್ಯಪ್ರಾಂತ ಮಾನ್-ಖ್ಮೇರ್ : ಬಹ್ನರ್, ಸ್ತಿಯಂಗ್, ರೆಂಗ, ಮೊಯ್, ಖಾ, ಕೌಯಿ, ಚೊಂಗ್, ಪಿಯರ್, ಪನ್ಹೊಂಗ್ ಭಾಷೆಗಳು.

೨. ಪೂರ್ವಪ್ರಾಂತ : ಚಾಮ್, ಜರಯ್, ರಾದ್, ಸೆದಂಗ್ ಭಾಷೆಗಳು

೩. ಮಲಯ್ ಪರ್ಯಾಯ ದ್ವೀಪ : ಸೆಮಂಗ್, ಸಕಯ್, ಜಕುನ್ ಭಾಷೆಗಳು

೪. ನಿಕೋಬಾರಿ ಉಪಗುಂಪು

೫. ಮಧ್ಯಪ್ರಾಂತದ ಸಲ್ವೀನ್, ಪತೌಂಗ್-ವಾ, ರಿಯಂಗ್ ಭಾಷೆಗಳು ಮತ್ತು

೬. ಖಾಸಿ ಉಪಗುಂಪು

ಸಿಚಾಕ್ ಎಂಬುವವರು ಮಾಡಿರುವ ಪುನರ್ ವರ್ಗೀಕರಣ ಇಂತಿದೆ.

೧. ಮಾನ್-ಖ್ಮೇರ್ : ಚಾಮ್, ಸೆಮಂಗ್, ನಿಕೋಬಾರಿ, ಖ್ಮೇರ್, ಪಲೌಂಗ್, ಮಾನ್, ಖಾಸಿ ಮೊದಲಾದವು.

೨. ಮುಂಡಾ ವರ್ಗ

೩. ಮುವೊಂಗ್-ಅನ್ನಮ್-ವಿಯತ್ನಾಮಿ ವರ್ಗ

ಹ್ಯಾವೆಸಿ ಎಂಬ ತಜ್ಞ ಮಾನ್-ಖ್ಮೇರ್, ಮುಂಡಾ ಮತ್ತು ಫಿನ್ನೋ ಉಗ್ರಿಕ್ ವರ್ಗಗಳ ನಡುವೆ ಅಂತಃಸಂಬಂಧವನ್ನು ಗುರುತಿಸಿದ್ದಾರೆ. ಹೌದ್ರಿಕಾತ್ ಎಂಬ ಭಾಷಾವಿಜ್ಞಾನಿ, ಏಷ್ಯಾಖಂಡದ ಆಗ್ನೇಯ ಭಾಗದಲ್ಲಿ ಬಳಕೆಯಲ್ಲಿರುವ ಭಾಷೆಗಳ ಪದಕೋಶವನ್ನು ಥಾಯ್-ವಿಯತ್ನಾಮಿ ಭಾಷೆಗಳ ಪದಕೋಶವನ್ನೂ ತೌಲನಿಕವಾಗಿ ಅಭ್ಯಸಿಸಿ ಹಲವಾರು ಜ್ಞಾತಿಪದಗಳನ್ನು ಪರಿಶೋಧಿಸಿದ್ದಾರೆ. ಅಂತೆಯೇ ವಿಯತ್ನಾಮಿ ಭಾಷಾಧ್ವನಿಗಳನ್ನು ಮಾನ್-ಖ್ಮೇರ್ ಭಾಷಾಪದಗಳಲ್ಲಿಯ ವ್ಯಂಜನಾಂತಗಳನ್ನು ತುಲನಾತ್ಮಕವಾಗಿ ಗಮನಿಸಿ ಅನೇಕ ಹೊಸವಿಚಾರಗಳನ್ನು ಪ್ರಕಟಪಡಿಸಿದ್ದಾರೆ. ಎಚ್.ಜೆ. ಪಿನೌ ಎಂಬ ಸಂಶೋಧಕ ಮುಂಡಾ ಭಾಷಾವರ್ಗದ ಭಾಷೆಗಳ ಪ್ರಾಕ್ ರೂಪವನ್ನು ಪುನಾರಚಿಸುವ ಪ್ರಯತ್ನ ಮಾಡಿದ್ದಾರೆ. ಕೆ. ಪೀಟರ್ ಎಂಬುವರು ತಮ್ಮ 'ಸೌತ್ ಈಸ್ಟ್ ಏಷ್ಯಾ : ಟ್ರೈಬ್ಸ್, ಮೈನಾರಿಟಿಸ್ ಆ್ಯಂಡ್ ನೇಷನ್ಸ್' ಎಂಬ ಗ್ರಂಥದಲ್ಲಿ ಆಸ್ಟ್ರಿಕ್ ಭಾಷಾಪರಿವಾರವನ್ನು ಕುರಿತು ವಿವೇಚಿಸಿದ್ದಾರೆ. ಅವರ ಪ್ರಕಾರ ಈ ಪರಿವಾರದಲ್ಲಿರುವ ಏಳು ವರ್ಗಗಳೆಂದರೆ : ಬಹ್ನರಿಕ್, ಕತುಯಿ, ಖಾಸಿ, ಮಾನ್, ಖ್ಮೇರ್, ಉತ್ತರ ಲಾವೋ ಮತ್ತು ಪಲೌಂಗ್.

೨

ವಿಯಟ್ನಾಂ, ಲಾವೋ, ಕಾಂಬೋಡಿಯ, ಥೈಲೆಂಡ್ ಮತ್ತು ಮ್ಯಾನ್ಮಾರ್ ಮೊದಲಾದ ದೇಶಗಳಲ್ಲಿ ಮಾನ್-ಖ್ಮೇರ್ ಭಾಷೆಗಳನ್ನಾಡುವ ಸಮುದಾಯವುಂಟು. ಮಲೇಷ್ಯಾದ ಆಗ್ನೇಯ ಭಾಗದಲ್ಲೂ ಈ ವರ್ಗಕ್ಕೆ ಸೇರಿರುವ ಭಾಷೆಗಳನ್ನಾಡುವ ಜನರಿದ್ದಾರೆ. ಉದಾಹರಣೆಗೆ ಬಹ್ನರ್, ಬ್ರೌ, ಸದಂಗ್, ಚ್ರವ್, ಪಚೊಹ್, ಚಾಮ್, ರಾದ್, ಜರಯ್, ಸ್ತಿಯಂಗ್, ಜೆಹ್ ಮೊದಲಾದ ಭಾಷೆಗಳನ್ನು ಆಡುವ ಸಾವಿರಾರು ಮಂದಿ ಇದ್ದಾರೆ. ಲಾವೋ ದೇಶದಲ್ಲಿ ಖಾ, ಮೊಯ್, ಖ್ಮು ಭಾಷೆಗಳನ್ನು ಗುರುತಿಸಲಾಗಿದೆ. ಕಾಂಬೋಡಿಯದಲ್ಲಿ ಖ್ಮೇರ್, ಲೆಮೆತ್, ಬಹ್ನರ್ ಭಾಷೆಗಳು ಚಾಲ್ತಿಯಲ್ಲುಂಟು. ಮಲೇಷ್ಯ ಮತ್ತು ಭಾರತದ ಪೂರ್ವ ಭಾಗಗಳಲ್ಲಿ ಸಕೈ ಮತ್ತು ಸೆಮಂಗ್ ಭಾಷೆಗಳನ್ನು ಆಡುವ ಜನರಿದ್ದಾರೆ. ಮೇಘಾಲಯದಲ್ಲಿ ಬಳಕೆಯಲ್ಲಿರುವ ಖಾಸಿ ಭಾಷೆಯ ಧ್ವನಿಮಾವ್ಯವಸ್ಥೆ, ಆಕೃತಿಮಾ ವ್ಯವಸ್ಥೆ ಮತ್ತು ವಾಕ್ಯವ್ಯವಸ್ಥೆಗಳನ್ನು, ಮೇಲೆ ಉಲ್ಲೇಖಿಸಿರುವ ಇನ್ನಿತರ ಭಾಷೆಗಳಲ್ಲಿಯ ವ್ಯವಸ್ಥೆಗಳಿಗೆ ಹೋಲಿಸಿ ನೋಡಿದಾಗ ಹಲವಾರು ಸಮಾನ ಅಂಶಗಳು ಕಾಣಸಿಕೊಳ್ಳುತ್ತವೆ.

ಈ ಭಾಷಾಪರಿವಾರಕ್ಕೆ ಸೇರಿದ ಭಾಷೆಗಳ ನಾಮನಿಷ್ಪತ್ತಿಗಳನ್ನು ಗಮನಿಸಿದಾಗ ಅನೇಕ ಕುತೂಹಲಕರ ಸಂಗತಿಗಳು ತಿಳಿದುಬರುತ್ತವೆ. ಖಾಸಿ ಎಂಬುದರಲ್ಲಿಯ 'ಖಾ' ಎಂಬ ಧ್ವನಿ ಮೊದಲಿಗೆ ಪೂರ್ವಪ್ರತ್ಯಯವಾಗಿತ್ತೆಂದು ಹೇಳಬಹುದು. ಖಾ-ಸೊ, ಖಾ-ತಂಪುಯೆನ್ ಎಂಬ ಭಾಷೆಗಳನ್ನು ಗಮನಿಸಬಹುದು. ಅಂತೆಯೇ ಮೊಯಿಸ್ ಎಂಬುದಕ್ಕೆ ಖಾ ಎಂಬುದು ಪರ್ಯಾಯ ಪದವಾಗಿತ್ತು. ಖ್ಮು ಮತ್ತು ಖ್ಮೇರ್ ಎಂಬುವು ಸಮಾನಾರ್ಥಕ ಪದಗಳಾಗಿದ್ದವು ಎಂಬುದಾಗಿ ಊಹಿಸಲು ಅವಕಾಶಗಳಿವೆ. ಕಾಂಬೋಡಿಯದ ಜನರಿಗೆ ಮೊಯ್ ಎಂಬುದು ಸ್ತಿಯಂಗ್ ಅಥವಾ ಪ್ನೊಂಗ್ ಎಂಬ ಹೆಸರುಗಳಲ್ಲಿ ಬಳಕೆಯಾಗುತ್ತಿತ್ತು. ಥಾಯ್ ಮಂದಿ ಈ ಭಾಷೆಯನ್ನು ಖಾ ಎಂದರೆ, ಲಾವೊ ಜನ ಖಾಸಿ ಅಥವಾ ಖ್ಮು ಎಂದು ಕರೆಯುತ್ತಾರೆ.

ಖ್ಮೇರ್, ಖ್ಮು, ಖಾ, ಖಾಸ್, ಖಾಸಿ, ಖಾಸೊ, ಖಾ ತಂಪುಯೆನ್ ಎಂಬ ಹೆಸರುಗಳನ್ನು ಗಮನಿಸಿದಾಗ, ಈ ಎಲ್ಲ ಶಬ್ದಗಳೂ 'ಖ್' ಎಂಬ ಧ್ವನಿಯಿಂದಲೇ ಆರಂಭವಾಗಿವೆ. ಇದೇ ಅಲ್ಲದೆ ಗಮನಿಸಬಹುದಾದ ಮತ್ತೊಂದು ಸಂಗತಿಯೆಂದರೆ, ಮೇಘಾಲಯ ರಾಜ್ಯದ ಮರಮ್ ಪ್ರಾಂತ್ಯದಲ್ಲಿ ವಾಸಿಸುತ್ತಿರುವ ಖಾಸಿಗಳು ತಮ್ಮನ್ನು 'ಖಾಸೊಯ್' ಎಂದು ಕರೆದುಕೊಳ್ಳುತ್ತಾರೆ. ಅಂತೆಯೇ ದಕ್ಷಿಣ ಭಾಗದ ಬಲತ್ ಪ್ರಾಂತ್ಯದ ಜನ 'ಖಾಸ್ಯ' ಎಂದು ಹೇಳಿಕೊಳ್ಳುತ್ತಾರೆ. ತಮ್ಮ ನೆರೆಹೊರೆ ಪ್ರಾಂತದವರು ಅವರನ್ನು 'ಖಾಸಾಸ್' ಎಂದೂ ಕಂಪನಿ ಸರ್ಕಾರದ ಬ್ರಿಟಿಷ್ ಆಡಳಿತಾಧಿಕಾರಿಗಳು ಅವರನ್ನು 'ಖೋಸೀಹ್' ಎಂಬುದಾಗಿ ಉಲ್ಲೇಖಿಸುತ್ತಿದ್ದರು.

ಮೇಘಾಲಯದಲ್ಲಿ ಸಾಂಪ್ರದಾಯಿಕವಾಗಿ ಖಾಸಿ ಎಂದರೆ, 'ಮಾತೃಪ್ರಧಾನ ವ್ಯವಸ್ಥೆಗೆ ಒಳಪಟ್ಟ ವರ್ಗ' ಎಂದರ್ಥ. ಲಾವೋದಲ್ಲಿ ಖ್ಮು ಎಂದರೆ, ಇದೇ ಅರ್ಥವನ್ನು

ಹೊಳೆಯಿಸುವಂಥದು. ಅಂತೆಯೇ ಸ್ತಿಯಂಗ್, ಸಿನ್‌ತೆಂಗ್ (ಜೈಂತಿಯಾ ಬೆಟ್ಟ ಗುಡ್ಡಪ್ರದೇಶಗಳಲ್ಲಿ ವಾಸಿಸುತ್ತಿರುವ ಒಂದು ಬುಡಕಟ್ಟು) ಸೆದಂಗ್, ಸೆಮಂಗ್, ಸೆಕಂಗ್ ಎಂಬುವೆಲ್ಲವೂ ಪರ್ಯಾಯ ಪದಗಳೇ ಆಗಿವೆ. ಆದರೆ ಮೊಯ್, ಮುಂಡಾ ಮತ್ತು ಮಾನ್ ಭಾಷೆಗಳಲ್ಲಿಯ ಸಂಬಂಧವನ್ನು ಉಪೇಕ್ಷಿಸುವಂತಿಲ್ಲ.

ಖಾಸಿ ಭಾಷೆಯನ್ನಾಡುವವರ ಪೂರ್ವಿಕರು ಪಶ್ಚಿಮದ ಕಡೆಯಿಂದ ಅಸ್ಸಾಂ ಬಯಲು ಪ್ರದೇಶಗಳ (ಪ್ನಾರ್ ಮತ್ತು ವಾರ್) ಮೂಲಕ ಮೇಘಾಲಯ ರಾಜ್ಯಕ್ಕೆ ವಲಸೆ ಬಂದು ನೆಲೆಸಿದರೆಂದು ಪ್ರತೀತಿ. ಅಲ್ಲದೆ ಬಹ್ನರ್ ಭಾಷೆಯನ್ನಾಡುವವರೊಂದಿಗೆ ಸಂಬಂಧ ಸ್ಥಾಪಿಸಿದ್ದರೆಂಬ ವಿಚಾರವೂ ಇತ್ತೀಚೆಗೆ ತಿಳಿದುಬಂದಿದೆ. ಆದುದರಿಂದ ಖ್ಮೇರ್, ಖ್ಮು, ಖಾಸಿ, ಖಾ, ಖಾಸೊ, ಖಾ ತಂಪುನಯನ್, ಖಾಸ್ಯ, ಖಾಸ್ಯೊ ಎಂಬ ವಾಚಕಗಳನ್ನು ಭಾಷಿಕ ದೃಷ್ಟಿಯಿಂದ ಪರಿಶೀಲಿಸಿದಾಗ, ಖ್ ಎಂಬ ಧ್ವನಿ ಪದಾದಿ ವ್ಯಂಜನವಾಗಿ ಸಮಾನವಾಗಿ ಕಾಣಸಿಕೊಂಡಿದೆಯಲ್ಲದೆ ಪೂರ್ವಪ್ರತ್ಯಯ ರೂಪದಲ್ಲಿದೆ ಎಂಬ ವಿಚಾರ ತಿಳಿದುಬರುತ್ತದೆ.

ಮೇಘಾಲಯದಲ್ಲಿ ಖಾಸಿ ಎಂಬುದು ಒಂದು ಪ್ರತ್ಯೇಕ, ವಿವಿಕ್ತ ಬುಡಕಟ್ಟು. ತೈ ಅಥವಾ ಕರೆನ್, ಬೋದಿ, ಕಚಿನ್ ಮತ್ತು ಇಂಡೋ ಆರ್ಯನ್ ಭಾಷಾವರ್ಗಕ್ಕೆ ಸೇರಿದ ಭಾಷೆಗಳ ನಡುವೆ ಖಾಸಿ ಭಾಷೆಯನ್ನಾಡುವ ಜನರಿದ್ದರೂ ಇವರು ಇಂದಿಗೂ ಕೂಡ ಭಾಷೆ ಮತ್ತು ಸಂಸ್ಕೃತಿ ದೃಷ್ಟಿಯಿಂದ ತಮ್ಮತನವನ್ನು ಸ್ಥಾಪಿಸಿಕೊಂಡಿದ್ದಾರೆ.

೩

ಖಾಸಿ ಭಾಷೆಯಲ್ಲಿ ಹಲವಾರು ಪ್ರಭೇದಗಳಿವೆ. ಒಂದು ಪ್ರಭೇದವನ್ನಾಡುವವರು ಮತ್ತೊಂದು ಪ್ರಭೇದವನ್ನು ಲೀಲಾಜಾಲವಾಗಿ ಅರ್ಥ ಮಾಡಿಕೊಳ್ಳಬಲ್ಲರು. ಏಕೆಂದರೆ ಅವರಲ್ಲಿ ಪರಸ್ಪರ ಅರಿವು (Mutual intelligibility) ಇರುವುದೇ ಮುಖ್ಯ ಕಾರಣ. ಆಮ್‌ವಿ ಎಂಬ ಪ್ರಭೇದ ದಕ್ಷಿಣದ ಗಡಿಭಾಗದಲ್ಲೂ ನೊಂಗ್‌ಸ್ಟೊಯಿನ್, ಲಿಂಗ್‌ನ್ಗಾಂ ಎಂಬವು ಪಶ್ಚಿಮ ಭಾಗಗಳಲ್ಲೂ ಭೊಯ್‌ಜಿರಂಗ್ ಎಂಬುದು ಉತ್ತರ ಭಾಗದಲ್ಲೂ ಬಳಕೆಯಲ್ಲಿವೆ. ಈ ಎಲ್ಲ ಪ್ರಭೇದಗಳೂ ಧ್ವನಿಮಾ, ಆಕೃತಿಮಾ ಮತ್ತು ವಾಕ್ಯವಿಚಾರಗಳಲ್ಲಿ ಭಿನ್ನತೆಯನ್ನು ಪಡೆದಿವೆ. ಆಮ್‌ವಿ ಮತ್ತು ಭೊಯ್‌ಜಿರಂಗ್ ಪ್ರಭೇದಗಳು ಖಾಸಿ ಮತ್ತು ಮಾನ್-ಖ್ಮೇರ್ ಭಾಷೆಗಳಿಂದ ಪ್ರಭಾವಿತವಾಗಿವೆ. ಚೆರ್ರ ಎಂಬ ಪ್ರಭೇದ ಪ್ರಮುಖ ಸ್ಥಾನವನ್ನು ಪಡೆದಿದ್ದು, ಶಾಲೆಗಳಲ್ಲಿ ಶಿಕ್ಷಣ ಮಾಧ್ಯಮವೂ ಆಗಿರುವುದರಿಂದ ಅದು ಪ್ರಧಾನ ಭಾಷಾಪ್ರಭೇದವಾಗಿದೆ. ಡಿಸೆಂಬರ್ ೨೦೦೦ ದ ವರೆಗೆ ಸಂಶೋಧಿಸಿರುವ ಪ್ರಮುಖ ಪ್ರಭೇದ ಅಥವಾ ಉಪಭಾಷೆಗಳನ್ನು ಈ ಕೆಳಗೆ ಕಾಣಿಸಿದೆ.

೧. ಆಮ್‌ವಿ : ಜೈಂತಿಯಾ ಬೆಟ್ಟಗುಡ್ಡ ಪ್ರದೇಶದ ದಕ್ಷಿಣ ಭಾಗದಲ್ಲಿ ಬಳಕೆಯಲ್ಲಿದೆ.

೨. ಶೆಲ್ಲಾ : ಖಾಸಿ ಬೆಟ್ಟಗುಡ್ಡಗಳ ದಕ್ಷಿಣ ಭಾಗದಲ್ಲಿ ಬಳಕೆಯಲ್ಲಿದೆ.

೩. ವಾರ್‌ರಿಂಗ್ : ಖಾಸಿ ಬೆಟ್ಟಗುಡ್ಡಗಳ ದಕ್ಷಿಣ ಭಾಗದಲ್ಲಿ ಬಳಕೆಯಲ್ಲಿರುವ ಪ್ರಭೇದ.

೪. ಮೈರಿಯನ್, ನೋಂಗ್‌ಖ್ಲಾ, ನೋಂಗ್‌ಸ್ಪುಂಗ್, ಮರಮ್, ಮಾವಿಯಂಗ್: ಖಾಸಿ ಬೆಟ್ಟಗುಡ್ಡ ಪ್ರದೇಶದ ಮಧ್ಯ ಮತ್ತು ಪಶ್ಚಿಮ ಭಾಗಗಳಲ್ಲಿ ಬಳಕೆಯಲ್ಲಿರುವ ಪ್ರಭೇದಗಳು.

೫. ಚೆರ್ರ : ಖಾಸಿ ಗುಡ್ಡಗಾಡಿನ ಮಧ್ಯ ಮತ್ತು ದಕ್ಷಿಣ ಭಾಗಗಳಲ್ಲಿ ಬಳಕೆಯಲ್ಲಿದೆ.

೬. ನೋಂಗ್‌ಕ್ರೆಮ್, ಮಿಲ್ಲಿಯಮ್, ಲೈತ್‌ಲಿಂಗ್‌ಕೊತ್, ಲೈನಿಯೊಂಗ್ : ಖಾಸಿ ಪ್ರಾಂತದ ಮಧ್ಯಭಾಗದಲ್ಲಿ ಬಳಕೆಯಲ್ಲಿರುವ ಪ್ರಭೇದಗಳು.

೭. ಜೊವೈ : ಜೈಂತಿಯಾದ ಮಧ್ಯಭಾಗದಲ್ಲಿ ಬಳಕೆಯಲ್ಲಿರುವಂಥದು.

೮. ಭೊಯ್ : ಖಾಸಿ ಗುಡ್ಡಗಾಡಿನ ಪ್ರದೇಶದಲ್ಲಿ ಹಾಗೂ ರಾಜ್ಯದ ಈಶಾನ್ಯ ಭಾಗದಲ್ಲಿ ಪ್ರಚಲಿತವಿರುವ ಪ್ರಭೇದ.

೯. ಮನಾರ್, ನೋಂಗ್‌ವಾಹ್, ಜಿರಂಗ್ : ಖಾಸಿ ಪ್ರಾಂತದ ಉತ್ತರ ಭಾಗದಲ್ಲಿ ಚಾಲ್ತಿಯಲ್ಲಿವೆ.

೧೦. ಖದರ್‌ಬ್ಲಂಗ್ (ಮಾಪ್ರನ್) : ರಾಜ್ಯದ ಮಧ್ಯ ಹಾಗೂ ದಕ್ಷಿಣ ಭಾಗಗಳಲ್ಲಿ ಬಳಕೆಯಲ್ಲಿವೆ.

೧೧. ನೋಂಗ್‌ಸ್ಟ್ರೋಯಿನ್ ಮತ್ತು ಲಾಂಗ್‌ರಿನ್ : ಖಾಸಿ ಬೆಟ್ಟಗುಡ್ಡ ಪ್ರದೇಶದ ಪಶ್ಚಿಮ ಮತ್ತು ದಕ್ಷಿಣ ಭಾಗಗಳಲ್ಲಿ ಪ್ರಚಲಿತವಿರುವ ಪ್ರಭೇದಗಳು.

ಮೇಲೆ ಗುರುತಿಸಲಾಗಿರುವ ಪ್ರಭೇದಗಳ ಜೊತೆಗೆ ಹಲವಾರು ಉಪಪ್ರಭೇದಗಳೂ ಇವೆ. ಗ್ರಾಮ್ಯರೂಪಗಳೂ ಚಾಲ್ತಿಯಲ್ಲಿವೆ. ಈ ಎಲ್ಲ ರೂಪಗಳನ್ನು ಧ್ವನಿಮಾ ವ್ಯವಸ್ಥೆಯ ದೃಷ್ಟಿಯಿಂದ ಪರಿಶೀಲಿಸಿದಾಗ ಗಮನಾರ್ಹ ವ್ಯತ್ಯಾಸಗಳು ಕಂಡುಬರುತ್ತವೆ.

ಆಮ್‌ವಿ ಎಂಬುದು ಪ್ರಮುಖ ಪ್ರಭೇದ. ಇದು ಅಂಟುಭಾಷಾವರ್ಗಕ್ಕೆ (Agglutinating group) ಸೇರಿದೆ. ವ್ಯಾಕರಣ ವಿಚಾರದಲ್ಲಿ ಜೊಲ್ಯೆ ಪ್ರಭೇದವನ್ನು ಸ್ವಲ್ಪಮಟ್ಟಿಗೆ ಹೋಲುತ್ತದೆ. ಆಮ್‌ವಿ ಪ್ರಭೇದದಲ್ಲಿ ಹಾಸ್ಯಪ್ರಧಾನ ಪದಗಳು ಹೆಚ್ಚಿನ ಪ್ರಮಾಣದಲ್ಲಿವೆ ಎಂದು ಅಭಿಪ್ರಾಯಪಟ್ಟಿರುವವರುಂಟು. ಆಮ್‌ವಿ ಭಾಷಿಕರು ತಮ್ಮ ನೆರೆಹೊರೆಯ ಸಮುದಾಯಗಳಲ್ಲಿ ಬಳಕೆಯಲ್ಲಿರುವ ಅನೇಕ ಪ್ರಭೇದಗಳೊಡನೆ ಸಂಪರ್ಕ ಹೊಂದಿದ್ದಾರೆ. ಹೀಗಾಗಿ ಆಮ್‌ವಿಯಲ್ಲಿ ಹಲವಾರು ಸ್ವೀಕರಣ ಶಬ್ದಗಳುಂಟು. ಖಾಸಿ ಬೆಟ್ಟಗುಡ್ಡ ಪ್ರದೇಶಗಳ ದಕ್ಷಿಣ ಭಾಗದಲ್ಲಿ ಬಳಕೆಯಲ್ಲಿರುವ ಶೆಲ್ಲಾ ಪ್ರಭೇದವು ಚೆರ್ರ ಮತ್ತು ಮಾವಿಯಂಗ್ ಭಾಷಾಪ್ರಭೇದಗಳೊಡನೆ ಹೆಚ್ಚು ಸಂಬಂಧ ಪಡೆದಿದೆ. ಈ ಪ್ರಭೇದಗಳ ಧ್ವನಿಮಾ ವ್ಯವಸ್ಥೆ, ವಾಕ್ಯವ್ಯವಸ್ಥೆಗಳಲ್ಲಿ ಸಾಮ್ಯವಿದೆ. ದಕ್ಷಿಣದ ಪ್ರಭೇದವಾದ ವಾರ್‌ದಿಂಗ್ ಎಂಬುದು ಕೂಡ ಮಾವಿಯಂಗ್ ಪ್ರಭೇದಕ್ಕೆ ಹತ್ತಿರವಾಗಿದೆ. ಆದುದರಿಂದ ಇವೆರಡೂ ಪ್ರಭೇದಗಳಲ್ಲಿ ಕೆಲವು ಸಮಾನ ಲಕ್ಷಣಗಳನ್ನು ಗುರುತಿಸಬಹುದು. ಧ್ವನಿಮಾ ವ್ಯವಸ್ಥೆಯಲ್ಲಿ ಸ್ವಲ್ಪಮಟ್ಟಿನ ವ್ಯತ್ಯಾಸವನ್ನು ತೋರಿಸಿಕೊಡುವ ಮಾಪೆನ್ ಪ್ರಭೇಧ ವಾರ್‌ದಿಂಗ್ ಪ್ರಭೇದಕ್ಕೆ ಸಮೀಪವಾಗಿದೆ.

ಮೈರಿಯಾವ್, ನೋಂಗ್‌ಖ್ಲಾ, ನೋಂಗ್‌ಸ್ಪುಂಗ್, ಮರಮ್, ಮಾವಿಯಂಗ್ ಪ್ರಭೇದಗಳನ್ನಾಡುವ ಜನರಲ್ಲಿ ಪರಸ್ಪರ ಅರಿವುಂಟು. ಹೀಗಾಗಿ ಇವರಲ್ಲಿ ಸಂವಹನ ಸಾಧ್ಯತೆ

ಸುಲಭ. ಮಧ್ಯಭಾಗದಲ್ಲಿ ಪ್ರಚಲಿತವಿರುವ ಮಾಫ್ಲಂಗ್, ಮಾನ್‌ಗಪ್ ಎಂಬವುಗಳೊಡನೆ ಸಂಬಂಧ ಪಡೆದಿರುವ ಮಾಸಿನ್‌ರವ್ ಎಂಬ ಭಾಷಾ ಪ್ರಭೇದ ನುಡಿವಾಚಕಗಳ ದೃಷ್ಟಿಯಿಂದ ಸಾಮ್ಯತೆಯನ್ನು ಪಡೆದಿದೆ. ರಾಜ್ಯಾದ್ಯಂತ ಬಳಕೆಯಲ್ಲಿರುವ ಚಿಕ್ಕ ಪ್ರಭೇದ ಪ್ರಮುಖವಾದುದು. ಇದು ಶಿಷ್ಟಪ್ರಭೇದವೆಂದು ಪರಿಗಣಿತವಾಗಿದೆ. ಇದಕ್ಕೆ ಲೈತ್‌ಲಿಂಗ್‌ಕೊತ್ ಪ್ರಭೇದ ಸಮೀಪವಾದುದು. ನಾಂಗ್‌ಕ್ರೆಮ್ ಪ್ರಭೇದ ಚೆರ್ರ ಮತ್ತು ಮಿಲ್ಲಿಯಂ ಪ್ರಭೇದಗಳೊಡನೆ ಧ್ವನಿಮಾವ್ಯವಸ್ಥೆ ದೃಷ್ಟಿಯಿಂದ ವ್ಯತ್ಯಾಸ ಪಡೆದಿದೆ. ಜೊವೈ ಪ್ರಭೇದವನ್ನು ಖಿರ್‌ವಾಂಗ್ ಮತ್ತು ನೋಂಗ್‌ತುಂಗ್ ಪ್ರಭೇದಗಳೊಡನೆ ತುಲನೆ ಮಾಡಿದಾಗ, ಧ್ವನಿಮಾ ವ್ಯವಸ್ಥೆಯಲ್ಲಿ ಅನೇಕ ವ್ಯತ್ಯಾಸಗಳಿರುವ ಅಂಶ ಗೋಚರವಾಗುತ್ತದೆ. ಆದರೆ ಭೊಯ್ ಪ್ರಭೇದದೊಡನೆ ಜೊಯ್ ಧ್ವನಿಮಾಗಳ ದೃಷ್ಟಿಯಿಂದ ಸಾಮ್ಯತೆ ಪಡೆದಿದೆ. ಮನಾರ್, ನೋಂಗ್‌ವಾಹ್, ಜಿರಂಗ್ ಪ್ರಭೇದಗಳು ಆಮ್‌ವಿಯೊಂದಿಗೆ ಸಮಾನ ಲಕ್ಷಣಗಳನ್ನು ಹೊಂದಿವೆ. ಮಾಪ್ರನ್ ಎಂಬುದು ನಾಂಗ್‌ಕ್ರೆಮ್ ಪ್ರಭೇದದ ಉಪ ಪ್ರಭೇದವೆಂದು ಪರಿಗಣಿಸಲಾಗಿದೆ. ಪಶ್ಚಿಮ ಭಾಗದಲ್ಲಿ ಬಳಕೆಯಲ್ಲಿರುವ ನೋಂಗ್‌ಸ್ಟೋಯಿನ್, ಲಾಂಗ್‌ರಿನ್ ಎಂಬವು ಇನ್ನಿತರ ಪ್ರಭೇದಗಳೊಡನೆ ಹೆಚ್ಚು ಸಂಪರ್ಕ ಪಡೆದಿಲ್ಲ. ಆದರೆ ಲಾಂಗ್‌ರಿನ್ ಪ್ರಭೇದವನ್ನು ನೋಂಗ್‌ಸ್ಟೋಯಿನ್ ಪ್ರಭೇದದೊಡನೆ ಹೋಲಿಸಿದಾಗ, ಇವೆರಡೂ ವ್ಯಾಕರಣಾಂಶಗಳಲ್ಲಿ ಭಿನ್ನವಾಗಿರುವ ವಿಚಾರ ಸ್ಪಷ್ಟವಾಗುತ್ತದೆ. ನೋಂಗ್‌ಸ್ಟೋಯಿನ್, ಲಾಂಗ್‌ರಿನ್ ಪ್ರಭೇದಗಳನ್ನಾಡುವ ಮಂದಿ ವ್ಯಾಪಾರ, ವಾಣಿಜ್ಯ ವ್ಯವಹಾರಗಳಿಗೆ ಚೆರ್ರ ಪ್ರಭೇದವನ್ನೇ ಬಳಸುತ್ತಾರೆ.

ಶಿಲ್ಲಾಂಗ್‌ನ ಉಪನಗರಗಳಲ್ಲಿ ಜನರು ಸಂವಹನಕ್ಕಾಗಿ ಅನೇಕ ಮಿಶ್ರ ಭಾಷೆಗಳನ್ನು ಬಳಸುವುದುಂಟು. ಉದಾಹರಣೆಗೆ ಲೈತ್‌ಲಿಂಗ್‌ಕೊತ್ ಪ್ರಭೇದಕ್ಕೆ ಸಮೀಪವೆನಿಸಿರುವ ಲಬನ್ ಮತ್ತು ಲಾಸೊಹ್‌ತುನ್ ಎಂಬ ಪ್ರಭೇದಗಳನ್ನು ಉಪಯೋಗಿಸುತ್ತಾರೆ. ಅಂತೆಯೇ ನಾಂಗ್‌ಕ್ರೆಮ್ ಪ್ರಭೇದದ ಒಂದು ಉಪಪ್ರಭೇದವನ್ನು ಮಾಲ್ಕಿ ಸಮುದಾಯ ಬಳಸುತ್ತಾರೆ.

ಮೇಲೆ ಹೇಳಿರುವ ಪ್ರಮುಖ ಪ್ರಭೇದಗಳೊಡನೆ ಗೌಣ ಪ್ರಭೇದಗಳೂ ಬಳಕೆಯಲ್ಲಿವೆ. ಆದರೆ ಇವನ್ನು ನಿರ್ಧರಿಸುವುದು ಸುಲಭದ ಮಾತಲ್ಲ.

ಖಾಸಿ ಭಾಷಾಪ್ರಭೇದಗಳ ಅಧ್ಯಯನ ವೈಜ್ಞಾನಿಕವಾಗಿ ನಡೆಯಬೇಕಾಗಿದೆ. ಜಿ.ಎ.ಗ್ರಿಯರ್‌ಸನ್ ಅವರು ತಮ್ಮ ಭಾರತೀಯ ಭಾಷಾ ಸರ್ವೇಕ್ಷಣೆ (ಸಂ. ೨, ೧೯೦೪) ಗ್ರಂಥದಲ್ಲಿ ಐದು ವರ್ಗಗಳನ್ನು ಮಾತ್ರ ಸೂಚಿಸಿದ್ದಾರೆ. ಅವು ಖಾಸಿ, ಪ್ನಾರ್ ಅಥವಾ ಸಿನ್‌ತೆಂಗ್, ಭೋಯಿ, ವಾರ್ ಮತ್ತು ಲಿಂಗ್‌ನ್ಗಾಮ್, ನೈಜ ಭಾಷಿಕ ಅಧ್ಯಯನಕ್ಕೆ ಈ ವರ್ಗೀಕರಣ ಯುಕ್ತವಾದುದಲ್ಲ. ಲಿಂಗ್‌ನ್ಗಾಮ್ ಎಂಬುದು ಖಾಸಿ ಭಾಷೆಗೆ ಸೇರಿದ ಪ್ರಭೇದವೋ ಅಥವಾ ಗಾರೋ ಭಾಷೆಯ ಪ್ರಭೇದವೋ ಖಚಿತವಾಗಿಲ್ಲ. ಖಾಸಿ ಮತ್ತು ಗಾರೋ ಭಾಷೆಯ ಹಲವಾರು ಶಬ್ದಗಳನ್ನು ಪದಗಳನ್ನು ಲಿಂಗ್‌ನ್ಗಾಮ್ ಎರವಲು ಪಡೆದಿದೆ. ಲಿಂಗ್‌ನ್ಗಾಮ್ ಪ್ರಭೇದವನ್ನಾಡುವವರು ದ್ವಿಭಾಷಿಕರಾಗಿದ್ದಾರೆ. ತಾವಾಡುವ ತಾಯ್ನುಡಿಯೊಂದಿಗೆ ಖಾಸಿಯನ್ನೂ ಮಾತನಾಡುತ್ತಾರೆ.

೪

ಮಾನ್-ಖ್ಮೇರ್ ಮತ್ತು ಖಾಸಿ ಭಾಷೆಗಳ ನಡುವಣ ಜ್ಞಾತಿ ಸಂಬಂಧವನ್ನು ಗುರುತಿಸಬಹುದು. ಉದಾಹರಣೆಗೆ ಕೆಲವು ಪದಗಳನ್ನು ಪರಿಭಾವಿಸೋಣ.

	ಮಾನ್-ಖ್ಮೇರ್	ಖಾಸಿ	ಕನ್ನಡ
೧	ಸೆಮ್ (ಬಹ್ನರ್)	ಸೆಮ್ಮ (ತಿಂಗ್‌ನ್ಗರ್)	ಹಕ್ಕಿ
೨	ಯಾಮ್ (ಖ್ಮ)	ಅಯಾಮ್ (ಚೆರ್ರ)	ಅಳು
೩	ಮತ್ (ಬಹ್ನರ್, ಜೆಹ್, ಕತೊ)	ಮತ್ (ಆಮ್‌ವಿ)	ಕಣ್ಣು
೪	ಲೆ (ಖ್ಮ)	ಲೆ (ಮಾಫ್ಲಂಗ್, ಆಮ್‌ವಿ)	ಹೋಗು
೫	ಹ್ಲಾ (ಖ್ಮ)	ಹ್ಲಾ (ಮರಮ್)	ಎಲೆ
೬	ಯುಂಗ್ (ಬಹ್ನರ್, ಖ್ಮ)	ಯುಂಗ್ (ಜೊವೈ)	ನಿಲ್ಲು
೭	ಕೀ (ಖ್ಮ, ವಾ)	ಕೀ (ಚೆರ್ರ)	ಅವರು
೮	ಓಮ್ (ಖ್ಮ)	ಓಂ (ವಾರ್, ಮರಮ್)	ನೀರು
೯	ಯೀ (ಕತೊ)	ಯೀ (ನೋಂಗ್‌ಖ್ಲಾ, ಶೆಲ್ಲಾ)	ನಾವು

ಮೇಲಿನ ಪಟ್ಟಿಯಲ್ಲಿ ಉದಾಹರಿಸಿರುವ ಲೆ ಎಂಬುದು ಬೇರೆ ಬೇರೆ ಭಾಷಾಪ್ರಭೇದಗಳಲ್ಲಿ ಬೇರೆ ಬೇರೆಯಾಗಿಯೇ ಕಾಣಿಸಿಕೊಂಡಿದೆ. ನಿದರ್ಶನಕ್ಕಾಗಿ ಕೆಲವನ್ನು ಗಮನಿಸಬಹುದು. ಚೆರ್ರ ಪ್ರಭೇದದಲ್ಲಿ ಲೈತ್, ಶೆಲ್ಲಾ ಪ್ರಭೇದದಲ್ಲಿ ಲೈ, ಮಾಲ್ಶೈ ಎಂಬುದರಲ್ಲಿ ಲೈ, ಬಹ್ನರ್ ಪ್ರಭೇದದಲ್ಲಿ ಲೆಖ್ ಎಂಬುದಾಗಿ ಪ್ರಯೋಗಗೊಳ್ಳುತ್ತದೆ. ಈ ಎಲ್ಲ ರೂಪಗಳೂ 'ಲೆ' ಎಂಬ ಧಾತುವಿನಿಂದ ನಿಷ್ಪನ್ನಗೊಂಡಿದೆ. 'ಕೀ' ಎಂಬ ನಾಮಪ್ರಕೃತಿಯಿಂದ ರೂಪುಗೊಂಡಿರುವ ಶಬ್ದ ಕೈ. ಈ ರೂಪ ಶೆಲ್ಲಾ ಪ್ರಭೇದದಲ್ಲಿ ಬಳಕೆಯಲ್ಲಿದೆ. ಅಂತೆಯೇ 'ಯೀ' ಎಂಬ ಪ್ರಕೃತಿಯಿಂದ ಸಿದ್ಧಗೊಂಡಿರುವ ಶಬ್ದಗಳೆಂದರೆ ಯಿ (ಖ್ಮ), ಜೀ (ಮಾವಿಂಗ್), ಯೀ (ನೋಂಗ್‌ಖ್ಲಾ), ಹೀ (ಪಚೊಹ್), ನ್ಗೀ (ಚೆರ್ರ) ಮೊದಲಾದವು. ಆಮ್‌ವಿ ಮತ್ತು ಬಹ್ನರ್ ಪ್ರಭೇದಗಳಲ್ಲಿ 'ಖ್ಮತ್' ಎಂಬ ಪ್ರಕೃತಿಯಿಂದ ಮತ್ ಎಂಬ ರೂಪ ಸಿದ್ಧಿಸಿದೆ. ಖ್ಮತ್ ಎಂಬ ರೂಪದಲ್ಲಿ ಖ್ ಎಂಬುದು ಲೋಪಗೊಂಡು ಕೇವಲ ಮತ್ ಎಂಬುದು ಉಳಿದುಕೊಂಡಿದೆ. ಮರಮ್ ಪ್ರಭೇದದಲ್ಲಿ ಹ್ಲಾ ಎಂಬ ಶಬ್ದ ಖಾಸಿ ಪ್ರಭೇದಗಳಲ್ಲಿ ಸ್ಲಾ ಎಂಬುದಾಗಿ ಪ್ರಯೋಗದಲ್ಲಿದೆ. ಅಂತೆಯೇ 'ಸೆಮ್' ಎಂಬ ರೂಪ ಕೂಡ ರೂಪಾಂತರಗೊಂಡಿದೆ. ಉದಾಹರಣೆಗೆ ಕ್ಸೆಮ್ (ಆಮ್‌ವಿ), ಚಿಮ್/ಸೆಮ್/ಜೆಮ್ (ಖ್ಮ), ಚಿಮ್ (ಪಚೊಹ್), ಚೊಮ್ (ಚ್ರವ್, ಬ್ರವ್). ಈ ಎಲ್ಲ ಧಾತು ಅಥವಾ ಪ್ರಕೃತಿಗಳನ್ನು ಗಮನಿಸಿದಾಗ, ಅವುಗಳಲ್ಲಿ ಜ್ಞಾತಿಸಂಬಂಧವಿರುವ ಅಂಶ ತಿಳಿದುಬರುತ್ತದೆ.

ಖಾಸಿ ವರ್ಗದಲ್ಲಿ ಕಾಣಿಸಿಕೊಳ್ಳುವ ಕೆಲವು ಸಂಖ್ಯಾವಾಚಕಗಳು :

೧	ಮುವೊಯ್ (ಬಹ್ನರ್, ಬ್ರವ್)	ಮೀ (ಆಮ್‌ವಿ)	ಒಂದು
	ಮೊವೊಯ್ (ಖ್ಮ)	ವೆಯ್ (ಚೆರ್ರ)	

೨	ಬರ್ (ಬ್ರವ್, ಚ್ರವ್, ಬಹ್ನರ್)	ಅರ್ (ಚೆರ್ರು)	ಎರಡು
	ಬಾರ್ (ಖ್ಮು, ಬ್ರವ್)	ಉ (ಆಮ್‌ವಿ)	
೩	ಲೀ (ವಾ)	ಲಾಯ್ (ಜೊವ್ವೈ)	ಮೂರು
	ಪೈ (ಬ್ರವ್)	ಲೈ (ಚೆರ್ರು) ಲಾ (ಆಮ್‌ವಿ)	
೫	ಸಾಂಗ್ (ಕತೊ)	ಸನ್ (ಚೆರ್ರು)	ಐದು

ಕೆಲವು ಸರ್ವನಾಮಗಳು :

೧	ಗೊ (ಬಹ್ನರ್)	ಉ (ಚೆರ್ರು)	ಅವನು
	ಚು (ಪಚೊಹ್)	ಮಾ ಉ (ಚೆರ್ರು)	
೨	ಸ್ನಾ (ಖ್ಮು)	ಕಾ (ಚೆರ್ರು)	ಅವಳು

ವಿಶಿಷ್ಟ ಪದಗಳು :

೧	ನ್ತರ್ (ಪಚೊಹ್)	ಸ್ತರ್ (ಖಾಸಿ)	ಬುಟ್ಟಿ/ಪಟ್ಟಿ
೨	ನ್ಆಂಗ್ (ಬ್ರವ್)	ಶ್ಯಂಗ್ (ಆಮ್‌ವಿ)	ಮೂಳೆ
೩	ಪತ್ (ಖ್ಮು)	ಫಿಯಹ್ (ಚೆರ್ರು)	ಹೋಳು
೪	ಕಾ (ಖ್ಮು, ಪಚೊಹ್, ಜೆಹ್, ಹಲಂಗ್)	ಕಾ/ಖಾ (ಶೆಲ್ಲಾ)	ಮೀನು
೫	ಕಪ್ (ಕತೊ)	ಖಪ್ (ಚೆರ್ರು)	ಕತ್ತರಿಸು
೬	ರೋಹ್ (ಜೆಹ್)	ರ್ಹೋಹ್ (ಆಮ್‌ವಿ)	ತೆಳ್ಳಗೆ
೭	ತಾನ್ (ಖ್ಮು)	ಥ್ಯನ್ (ಚೆರ್ರು)	ಹೆಣಿಗೆ/ ನೆಯ್ಗೆ
		ಥೋ (ಆಮ್‌ವಿ)	
೮	ಕುನ್ (ಖ್ಮು)	ಖುನ್ (ಖಾಸಿ)	ಮಗು
	ಕೊನ್ (ಬಹ್ನರ್)	ಖೊನ್ (ಮಾವಿಯಂಗ್)	

ಸಂಸ್ಕೃತದ 'ಮಾತೃ' ಎಂಬ ಪದಕ್ಕೆ ಸಂವಾದಿ ಪದಗಳಿವು. ಮಾ (ಖ್ಮು), ಮೇ (ಆಮ್‌ವಿ), ಮೆಯ್ (ಚೆರ್ರು). ಜೈಂತಿಯ ಪ್ರಭೇದದಲ್ಲಿ ತಾಯಿಗೆ 'ಬೆಯ್' ಎನ್ನುವರು.

ಮೇಲೆ ಗುರುತಿಸಿರುವ ಖಾಸಿ ಭಾಷಾ ವರ್ಗದ ಹಲವಾರು ಪ್ರಭೇದಗಳು ಹೊಸ ವಿಚಾರಗಳನ್ನು ಪ್ರಕಟಪಡಿಸುತ್ತವೆ. ಈ ಪ್ರಭೇದಗಳ ಐತಿಹಾಸಿಕ, ತೌಲನಿಕ ಮತ್ತು ವರ್ಣನಾತ್ಮಕ ಅಧ್ಯಯನಗಳು ಹೆಚ್ಚಾಗಿ ನಡೆಯಬೇಕಾಗಿದೆ. ಹಾಗೆ ನಡೆದಾಗ ಮಾನವ ಸಂಸ್ಕೃತಿಗೆ ಸಂಬಂಧಿಸಿದ ಅನೇಕ ಸಂಗತಿಗಳು ತಿಳಿದುಬರುತ್ತವೆ.

ಕನ್ನಡ ಚಲನಚಿತ್ರಗಳಲ್ಲಿ ಜನಪದ ಸಾಹಿತ್ಯ

ಡಾ. ಅಕ್ಕಮಹಾದೇವಿ

ಚಲನಚಿತ್ರ ಒಂದು ದೃಶ್ಯ ಕಾವ್ಯ. ಅದರ ಹೆಸರೇ ಸೂಚಿಸುವಂತೆ ಚಲನಚಿತ್ರ ಚಲಿಸುವ ಚಿತ್ರ. ಇದಕ್ಕೆ ಮೂಲ ಚಿತ್ರಕಲೆ. ಜೀವಂತ ವಸ್ತುಗಳನ್ನು ಚಿತ್ರಕಲಾಮಾಧ್ಯಮದಲ್ಲಿ ಮೂಡಿಸಿಕೊಡುವ ಪ್ರಯತ್ನಗಳು ಸಫಲಗೊಂಡಾಗ ಚಲನಚಿತ್ರ ಮಾಧ್ಯಮ ಉದ್ಭವವಾಯಿತು. ಈ ಮಾಧ್ಯಮ ಹಲವಾರು ಹಂತಗಳನ್ನು ದಾಟಿ ಇಂದಿನ ಸ್ಥಿತಿಯನ್ನು ತಲುಪಿದೆ. ಅದರ ಪ್ರಾಥಮಿಕ ರೂಪವಾದ ಕೈನೆಟೊಸ್ಕೋಪ್ ಅಸ್ತಿತ್ವಕ್ಕೆ ಬಂದಾಗ ಅದು ಎಲ್ಲ ವರ್ಗದ ಜನರ ಮನವನ್ನೂ ಸೆಳೆಯಿತು. ಪೆಟ್ಟಿಗೆಯೊಂದರ ಸಣ್ಣ ತೂತಿನಲ್ಲಿ ಕಣ್ಣಿಟ್ಟು "ಬೊಂಬಾಯ್ ನೋಡು.... ಕಲ್ಕತ್ತ ನೋಡು.... " ಎಂದು ಚಲಿಸುವ ಚಿತ್ರವನ್ನು ನೋಡುತ್ತಿದ್ದುದರ ಅನುಭವ ಮುಗ್ಧಮನಸ್ಸಿನ ಕನಸುಗಳ ಸಾಕಾರ ರೂಪದಂತಿತ್ತು. ಕ್ರಮೇಣ ಯಂತ್ರ-ತಂತ್ರಗಳನ್ನು ಬಳಸಿ ಚಲನೆಯ ಚಿತ್ರಗಳನ್ನು ಆಕರ್ಷಕವಾಗಿ ತೋರಿಸುವ ವಿಜ್ಞಾನದ ವಿಕಾಸವಾದಂತೆ ಒಂದು ಜನಪ್ರಿಯ ಮಾಧ್ಯಮವಾಗಿ ಅದು ಸುಸ್ಥಿರತೆಯನ್ನು ಪಡೆಯಿತು. ಅದು ಸಮೂಹ ಸಂಪರ್ಕ ಮಾಧ್ಯಮವಾಗಿ ಹಾಗೂ ಸಮೂಹ ಭಾಷೆಯಾಗಿ ಇಂದಿಗೂ ಪ್ರಮುಖ ಮಾಧ್ಯಮಗಳಲ್ಲಿ ಒಂದಾಗಿ ಮುಂದುವರಿಯುತ್ತಿದೆ. ಸಮೂಹ ಮಾಧ್ಯಮಗಳಲ್ಲಿ ಹೊಸ ಹೊಸ ಆವಿಷ್ಕಾರಗಳಾಗಿದ್ದರೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿರುವ ಪ್ರಬಲ ಮಾಧ್ಯಮ ಈ ಚಲನಚಿತ್ರ.

ಚಲನಚಿತ್ರದ್ದು ಸೋಜಿಗವೂ ವಿಸ್ಮಯವೂ ಆದ ಜಗತ್ತು. ಇದು ಕೇವಲ ದೃಶ್ಯಶ್ರವ್ಯಗಳ ಸಂಯೋಜನೆ ಮಾತ್ರವಲ್ಲ. ಇದರಲ್ಲಿ ವಿವಿಧ ಕಲಾರೂಪಗಳು ಒಟ್ಟುಗೂಡಿರುತ್ತವಲ್ಲದೆ ಜಡಯಂತ್ರದ ಶಕ್ತಿ ಹಾಗೂ ಸೃಜನಶೀಲ ಮನುಷ್ಯ ಶಕ್ತಿಗಳು ಕೂಡ ಸಮ್ಮಿಲನಗೊಂಡಿರುತ್ತವೆ. ಮಾನವನ ಅನುಭವಗಳ ಅಭಿವ್ಯಕ್ತಿ ಈ ಚಲನಚಿತ್ರ. ಇದನ್ನು ಬರಗೂರು ರಾಮಚಂದ್ರಪ್ಪ ಅವರು 'ಕಲೋದ್ಯಮ' (ಸಂಸ್ಕೃತಿ, ಶ್ರಮ ಮತ್ತು ಸೃಜನಶೀಲತೆ, ೨೦೦೧, ಪು. ೩೭೮) ಎಂದು ಕರೆದಿದ್ದಾರೆ.

'ಕಲೋದ್ಯಮ' ಎಂದು ಚಲನಚಿತ್ರವನ್ನು ಕರೆದಿರುವುದು ಗಂಭೀರವಾಗಿ ಯೋಚಿಸಬೇಕಾದ ವಿಷಯ. ಇದು ಕಲೆಯಾಗಿ ಮಾತ್ರ ಉಳಿದರೆ ಪ್ರಯೋಜನವಿಲ್ಲ. ಒಂದು ಉದ್ಯಮವೂ ಆಗಬೇಕೆಂದಾಗ ಇದಕ್ಕೆ ಹಲವಾರು ಅನಿವಾರ್ಯತೆಗಳು ಸೇರ್ಪಡೆಯಾಗುತ್ತವೆ. ಉದ್ಯಮವೆಂದರೆ ಉತ್ಪಾದನೆ, ವ್ಯಾಪಾರ, ಪೈಪೋಟಿ ಎಲ್ಲವೂ ಇದ್ದೇ ಇರುತ್ತದೆ. ಆದ್ದರಿಂದ ಚಿತ್ರನಿರ್ಮಾಣದಲ್ಲಿ ಅದನ್ನು ಜನಪ್ರಿಯಗೊಳಿಸುವ ಮಾರ್ಗಗಳ ಹುಡುಕಾಟವೂ

ಅದಮ್ಯವಾಗಿರುತ್ತದೆ. ಎಲ್ಲ ವರ್ಗದ ಪ್ರೇಕ್ಷಕರಿಗೂ ಒಪ್ಪಿಗೆಯಾಗುವಂತೆ ಚಲನಚಿತ್ರ ನಿರ್ಮಾಣವಾಗಬೇಕಾಗುತ್ತದೆ. ಹೀಗಾಗಿ ಜನಪದ ಸಾಹಿತ್ಯ ಪ್ರಕಾರಗಳನ್ನು ಸಿನಿಮಾ ಮಾಧ್ಯಮಕ್ಕೆ ಅಳವಡಿಸಿಕೊಳ್ಳುವ ಸಂಪ್ರದಾಯ ಬೆಳೆದುಬಂದಿದೆ.

ಜನಪದ ಸಾಹಿತ್ಯ ಮೌಖಿಕ, ಸಾಂಪ್ರದಾಯಿಕ ಮತ್ತು ಜನಪ್ರಿಯವಾದುದು ಕೂಡ. ಜನಪದ ಸಾಹಿತ್ಯ ಮತ್ತು ಚಲನಚಿತ್ರ ಎಂಬ ಎರಡು ಜನಪ್ರಿಯ ಮಾಧ್ಯಮಗಳು ಒಂದಕ್ಕೊಂದು ಪೂರಕ ಹಾಗೂ ಪೋಷಕವಾಗಿರುವುದರಲ್ಲಿ ಆಶ್ಚರ್ಯವಿಲ್ಲ. ಜನಪದ ಸಾಹಿತ್ಯದ ಪ್ರಭಾವ ಚಲನಚಿತ್ರಗಳ ಮೇಲೆ ಇರುವಂತೆಯೇ ಚಲನಚಿತ್ರಗಳ ಪ್ರಭಾವ ಜನಪದ ಸಾಹಿತ್ಯದ ಮೇಲೂ ಆಗಿದೆ.

ಜನಪದ ಸಾಹಿತ್ಯದಲ್ಲಿ ಅನೇಕ ಜನಪ್ರಿಯ ಪ್ರಕಾರಗಳು ಸೇರಿವೆ. ಸ್ಥೂಲವಾಗಿ ಹೇಳುವುದಾದರೆ ಜನಪದಗೀತೆ, ಲಾವಣಿ, ಮಹಾಕಾವ್ಯ, ಪುರಾಣ, ಐತಿಹ್ಯ, ಕಥೆ, ಗಾದೆ, ಒಗಟು–ಇವು ಜನಪದ ಸಾಹಿತ್ಯದ ಮುಖ್ಯ ಪ್ರಕಾರಗಳು. ಕಾವ್ಯರೂಪದ ಗೀತೆ, ಲಾವಣಿ ಮತ್ತು ಮಹಾಕಾವ್ಯ–ಚಲನಚಿತ್ರಗಳನ್ನು ಸಾಹಿತ್ಯ ಪರವಾಗಿ ಆಕರ್ಷಕಗೊಳಿಸಿವೆ. ಕಥನಗಳಾದ ಪುರಾಣ, ಐತಿಹ್ಯ ಮತ್ತು ಜನಪದ ಕಥೆ ಚಲನಚಿತ್ರದ ಕಥೆಗಳಿಗೆ ಮೆರುಗನ್ನು ಕೊಟ್ಟಿವೆ. ಕಥಾ ನಿರ್ಮಾಣಕ್ಕೆ, ಸಂಭಾಷಣಾ ನಿರೂಪಣೆಗೆ, ಚಲನಚಿತ್ರ ಗೀತೆಗಳಿಗೆ, ಆಶಯಗಳ ವಿವರಣೆಗೆ ಜನಪದ ಕಥನಗಳು ನೆರವಾಗುತ್ತಾ ಬಂದಿವೆ. ಭಾಷಾಭಿವ್ಯಕ್ತಿಯ ವಿಶೇಷ ಪ್ರಕಾರಗಳಾದ ಗಾದೆ ಮತ್ತು ಒಗಟು ಚಲನಚಿತ್ರ ಸಾಹಿತ್ಯಾಭಿವ್ಯಕ್ತಿಗೆ ಸೊಗಸನ್ನು ನೀಡಿವೆ. ಜನರ ಮನಸ್ಸನ್ನು ಸೆಳೆಯಲು ನೆರವಾಗಿವೆ.

ಜನಪದ ಗೀತೆ

ಜನಪದ ಗೀತೆಗಳಲ್ಲಿ ಹಲವು ಒಳಪ್ರಭೇದಗಳಿವೆ. ಲಾಲಿಹಾಡು, ಜೋಗುಳ, ನಾಟಿಪದ, ಹಂತಿಹಾಡು, ಮಳೆರಾಯನ ಹಾಡು, ಒನಕೆ ಹಾಡು, ಬೀಸುವ ಕಲ್ಲಿನ ಹಾಡು, ತಿಂಗಳು ಮಾವನ ಪದ, ಗರತಿಯ ಹಾಡು, ಮದುವೆಯ ಹಾಡು, ಜರಿಯುವ ಪದ, ಮರಣಗೀತೆ ಇತ್ಯಾದಿ – ಒಂದೇ ಎರಡೇ – ನೂರಾರು ಬಗೆಯ ಹಾಡುಗಳಿವೆ. ಇವನ್ನು ಸಂದರ್ಭಕ್ಕೆ ತಕ್ಕಂತೆ ಚಲನಚಿತ್ರಗಳಲ್ಲಿ ಬಳಸಿಕೊಳ್ಳಲಾಗಿದೆ.

'ಕಿತ್ತೂರು ಚೆನ್ನಮ್ಮ' ಚಿತ್ರದಲ್ಲಿ ಜನಪದ ತ್ರಿಪದಿಗಳನ್ನು ಬಳಸಲಾಗಿದೆ.

ಆಲಕ್ಕೆ ಹೂವಿಲ್ಲ ಸಾಲಕ್ಕೆ ಕೊನೆಯಿಲ್ಲ
ಜಾಲಿಯ ಮರವು ನೆರಳಲ್ಲ ಜಾಲಿಯ
ಮರವು ನೆರಳಲ್ಲ ಮಗಳೆ
ತಾಯಿಯ ಮನೆಯು ಸ್ಥಿರವಲ್ಲ

'ತ್ರಿಶೂಲ' ಚಿತ್ರದಲ್ಲಿ ಜನಪದಗೀತೆಯನ್ನೇ ಯಥಾವತ್ತಾಗಿ ಬಳಸಿಕೊಂಡಿರುವ ಸಂದರ್ಭ :

ಕುಂತ್ರೆ ನಿಂತ್ರೆ ಅವನ್ದೇ ಧ್ಯಾನ

ಜೀವಕ್ಕಿಲ್ಲ ಸಮಾಧಾನ ಅವನ್ಗೆ ಎಂಥ ಬಿಗುಮಾನ
ಅವ್ನೇ ನನ್ನ ಗೆಣೆಕಾರ

ಇಂದ್ರಲೋಕ್ದಾಗ್ ಇಲ್ಲ ಕಂಡ್ರಿ
ಚಂದ್ರಲೋಕ್ದಾಗ್ ಇಲ್ಲ ಕಂಡ್ರಿ
ಮೂರ್ ಲೋಕ್ದಾಗ್ ಇಲ್ಲ ಕಂಡ್ರಿ
ಅವ್ನೆ ನನ್ನ ಗೆಣೆಕಾರ

ರೂಪ್‌ದಲ್ಲವ್ನು ಚಂದ್ರ ಕಂಡ್ರಿ
ರೂಪ್‌ದಲ್ಲವ್ನು ಇಂದ್ರ ಕಂಡ್ರಿ
ಕೇರಿಗೆಲ್ಲ ಒಬ್ನೇ ಕಂಡ್ರಿ
ಅವ್ನೇ ನನ್ನ ಗೆಣೆಕಾರ

ಜಾತ್ರೇಲವ್ನ ಕಂಡೆ ಕಂಡ್ರಿ
ಛತ್ರಿ ಮುಚ್ಚಿ ನಿಂತಾ ಕಂಡ್ರಿ
ನನ್ ಪಕ್ಕಕೆ ಬಂದು ನಿಂತಾ ಕಂಡ್ರಿ ಅವ್ನೇ.....

ಮೂಡಲ್ ಕುಣಿಗಲ್ ಕೆರೆ ನೋಡೋಕ್ ಒಂದ್
ಐಭೋಗ ಮೂಡಿಬರ್‍ತಾನೆ ಚಂದಿರಾ.... ಎಂಬ ಹಾಡೂ ಬಳಕೆಗೊಂಡಿದೆ.

(ನನ್ನ ಪ್ರೀತಿಯ ಹುಡುಗಿ)

ಜನಪದರು ಮದುವೆಯ ಸಂದರ್ಭದಲ್ಲಿ ಬಳಸುವ ಸೋಬಾನೆ ಮಟ್ಟನ್ನು ಅನೇಕ ಚಲನಚಿತ್ರಗಳಲ್ಲಿ ಬಳಸಿಕೊಳ್ಳಲಾಗಿದೆ.

ಸೋಬಾನ ಸೋಬಾನ ಸೋಬಾನವೆ
ಸೋಬಾನವೆಂಬುದು ಶಿವನಿಗೆ । ಸೋಬಾನ ಎಂಬುದು
ಸಿರಿಗೌರಿಗೇ ....

ಚೆಂದದ ಹಸೆಮೇಲೆ ಸುಂದರ ಕುಳಿತವ್ನೆ
ಇಂದು ಕಂಕಣವ ತೊಡಿಸೀರೆ
ಇಂದು ಕಂಕಣವ ತೊಡಿಸೀರೆ ಚೆಲುವೆಗೆ
ಚಂದನದಾ ಗೊಂಬೆ ಮಾದೇವಿಗೆ

ಅಕ್ಕ ತಂಗೇರು ಬಂದು ಮುತ್ತಿನಾರತಿ ಎತ್ತಿ
ಕರೆಯ್ತಿರಿ ವರನನು ಮಂಟಪಕೆ

ಸೋದರ ಮಾವಯ್ಯ ಕರೆತನ್ನಿರಯ್ಯ ಧಾರೆಗೆ ವಧುವನ್ನು
ನಿಮ್ಮ ತೌರಿನ ಬೆಳಕನ್ನು

ಹೆಜ್ಜೆ ಇಟ್ಟರೆ ಸವಿಯೋಳೆ ಲಜ್ಜೆಗೆ ನೆಲವ ಕೆರೆಯೋಳೆ
ನಿನ್ನಯ ಗಂಡನ ಹೆಸರೇಳೆ..

ಕದ್ದು ಹೆಂಡಿರ ನೋಡೋನೆ ಮುದ್ದುಮುಖಕೆ ಸೋತೋನೆ
ನಿನ್ನಯ ಹೆಂಡತಿ ಹೆಸರೇಳೋ....
(ಭೂತಯ್ಯನ ಮಗ ಅಯ್ಯು)

'ಕಾಕನಕೋಟೆ' ಚಿತ್ರದಲ್ಲೂ 'ಸೋ ಎನ್ನಿರೆ, ಸೋಬಾನೆ ಎನ್ನಿರೆ ......' ಎಂಬ ಸೊಲ್ಲನ್ನು ಅಳವಡಿಸಿಕೊಳ್ಳಲಾಗಿದೆ.

ಮೇಲಿನ ಹಾಡಿನಲ್ಲಿ ಮದುವೆಯ ಸಂದರ್ಭದಲ್ಲಿ ಸೋದರಮಾವ ಧಾರೆಗೆ ಮದುಮಗಳನ್ನು ಕರೆತರುವ ಸಂಪ್ರದಾಯವನ್ನೂ ವಧೂವರರು ಪರಸ್ಪರರ ಬಾಯಲ್ಲಿ ಹೆಸರು ಹೇಳುವ ಸಂಪ್ರದಾಯವನ್ನೂ ಸೇರಿಸಲಾಗಿದೆ.

ಕಂಸಾಳೆ ಪದ

ಕೋಲುಮಂಡೆ ಜಂಗಮದೇವರು
ಗುರುವೆ ಕೋರಣ್ಯಕೆ ದಯಮಾಡವ್ರೆ
ಕೋರಣ್ಯ ನೀಡವ್ವ ಕೋಡುಗಲ್ಲ ಮಾದೇವನಿಗೆ
ಕೊಡುವಾಗ್ನೆಲ್ಲ ಕೊಡ್ತಾನೋ ನಮ್ಮಪ್ಪ ಶಿವ
ಅವ್ನು ಒಲುದ್ರೆ ಕೊರಡು ಕೊನರಿ ಬಂಗಾರ ಬಾಳವ್ವ
ಅಕ್ಕರೆ ಮಾತಾಯಿ ಭಿಕ್ಷೆ ಹಾಕು ಅಂದವ್ನೆ ಮಾದೇವ ||ಕೋಲು....
ತಾಯಿ ಅಂದ್ರೆ ತಾಯಿ ಆಗ್ಬೇಕಿಲ್ಲ ತಾಯಿ
ಹೆಣ್ಮಗಳು ಅಂದ್ರೆ ಲಗ್ನ ಆಗ್ದೇಯಿರೊ ತಾಯಿ
ಭಿಕ್ಷೆ ನೀಡುದ್ರೆ ಬಾಳು ಬಂಗಾರ ತಾಯಿ ...... (ಜನುಮದ ಜೋಡಿ)

ದಕ್ಷಿಣ ಕರ್ನಾಟಕದ ಅದರಲ್ಲೂ ಮೈಸೂರು, ಮಂಡ್ಯ ಪ್ರಾಂತ್ಯಗಳಲ್ಲಿ ಹುಟ್ಟಿ ಬೆಳೆದುಬಂದ 'ಬೀಸು ಕಂಸಾಳೆ' ಎಂಬ ಜನಪದ ವೀರಕಲೆ ಅಥವಾ ವೀರಕುಣಿತ ಈ ಚಿತ್ರದ ಮೂಲಕ ಕನ್ನಡನಾಡಿನಾದ್ಯಂತ ಅತ್ಯಂತ ಜನಪ್ರಿಯತೆಯನ್ನು ಪಡೆಯಿತು.

ಬೀರಪ್ಪನ ಸಂಪ್ರದಾಯದ ಡೊಳ್ಳಿನ ಹಾಡು

ಕರಿಯ ಕಂಬಳಿ ಗದ್ದಿಗೆ ಮಾಡಿ
ವೀರಡೊಳ್ಳು ತಂದಿಡಿದಿಹೆವೊ
ವೀರಡೊಳ್ಳಿನ ನಾದವ ಕೇಳಿ
ಹುಟ್ಟಿಬಂದರಪ್ಪ ಶಿವಶರಣರು (ಬಂಗಾರದ ಪಂಜರ)

ಮಾರಿಹಬ್ಬವನ್ನು ಚಲನಚಿತ್ರಗಳಲ್ಲಿ ಬಳಸಿಕೊಂಡಿರುವ ಉದಾಹರಣೆ :

ಮಾರಿಯೆ ಗತಿಯೆಂದು ಮನ್ನಿಸು ತಪ್ಪೆಂದು
ಮಕ್ಕಳು ನಾವು ಬಂದೇವು
ಎಲ್ಲಾ ಕಾಣಿಕೆ ತಂದೇವು ನಿನ್ನ ನಂಬಿ ಬಾಳೇವು...
ತಾಯಿಯ ದಯೆಗಾಗಿ ಬಂದೆವು ತಲೆಬಾಗಿ

ಬ್ಯಾನೆ ಬರದಂತೆ ಶ್ಯಾನೆ ನಗುವಂತೆ
ಹೆತ್ತೋವ್ರ ದಿಕ್ಕಾಗಿ ಕಾಪಾಡು ಎಂದೇವು
ಬೆಟ್ಟಾದ ತಾಯಿ ಸಿಟ್ಟಾಗದಂತೆ ಕಟ್ಟುನಿಟ್ಟಾಗಿ ನಡೆದೇವು
ಸಿಟ್ಟಾಗಿ ವರವಾ ಕೊಡಳು ಎಂದು ಗಟ್ಟಾಗಿ ಪಾದ ಹಿಡಿದೇವು
|| ತಾಯಿಯ ....||

ಬರಗಾಲ ಪೀಡೆ ಬರದೇನೆ ಇರಲು
ಸೋಂಕು ರೋಗವು ಪಾರಾಗಲು
ಕೊಯ್ಲಾದ ಕೊಯ್ಲು ಸಂಕ್ರಾಂತಿ ತರಲು
ಮಾರಮ್ಮ ನೀನೇ ಬೆಂಗಾವಲು || ತಾಯಿಯ ....||
(ಭೂತಯ್ಯನ ಮಗ ಅಯ್ಯು)

ಜನಪದ ಗೀತೆಯ ಶೈಲಿಯಿರುವ ಚಿತ್ರಗೀತೆ :

ಗೆದಿಯಬೇಕು ಮಗಳಾ ನೀನು ಗೆದಿಯಬೇಕು
ಗೆದಿಯ ಮೊದಲು ಮನಸಾ ನೀನು
(ನಾಗಮಂಡಲ)

ಉತ್ತರ ಕರ್ನಾಟಕ ಪ್ರಾಂತ್ಯದ ಜನಪ್ರಿಯ ಗೀಗೀ ಪದದ ಮಟ್ಟನ್ನು ಉಪಯೋಗಿಸಿಕೊಂಡು ಅತ್ಯಂತ ಸಮರ್ಥವಾಗಿ ಮೂಡಿಬಂದಂಥ ಗೀತೆ 'ಪಾಪ ಪುಣ್ಯ' ಚಿತ್ರದ್ದು.

ಹರ ಹರ ಹರಾ.......ಹರೆ
ಗೀಯ ಗೀಯ ಗಾಗಿಯ ಗೀಯ
ನಾವು ಬಂದೇವ ನಾವು ಬಂದೇವ ನಾವು ಬಂದೇವ ಶ್ರೀಶೈಲ ನೋಡಲಿಕ್ಕ
ಸ್ವಾಮಿ ಸೇವಾ ಮಾಡಿ ಮತ್ತ ಹೋಗೋದಕ್ಕ || ನಾವು ಬಂದೇವ.......||
ಅರೆ ಗೀಯ ಗೀಯ.......
ಬೆಟ್ಟದ ಮೇಲೇರಿ ಶಿವಾ ಯಾಕ ಕುಂತಾ
ಅವನಿಗೇನ ಬಂತಾ ಅಂಥಾದವನಿಗೇನು ಬಂತಾ
ಕೆಟ್ಟ ಜನರ ಮುಖ ನೋಡಬಾರದಂತಾ ... || ಗೀಯ ಗೀಯ ||
ಹಣ್ಣುಕಾಯಿ ಧೂಪದೀಪ ಇಡತಾರಂತ
ಯಾಕವಾ ? ಪುಣ್ಯ ಬರಲಿ ಅಂತಾ ......
ಬೆಟ್ಟ ಏರಿ ಬಂದಿದ್ರೂ ಕೆಟ್ಟ ಗುಣ ಹೋಗಲಿಲ್ಲ........
ಹುಟ್ಟು ಗುಣ ಸುಟ್ಟಾರೂ ಹೋಗಲಿಲ್ಲ........

ಈ ಹಾಡಿನಲ್ಲಿ ಮಾನವ ಸ್ವಭಾವವನ್ನು ಟೀಕೆಗೊಳಪಡಿಸಿ ಹೇಳಲಾಗಿದೆ.

ಜನಪದ ಕ್ರೀಡೆಯಾದ ಕೋಳಿಜಗಳವನ್ನು ಗೀತೆಯೊಂದರ ಮೂಲಕ ಅಭಿವ್ಯಕ್ತಿಸಿರುವ ರೀತಿ :

ವಹರೆ ಮೇರಾ ಮುರುಗ ವಹರೆ ಮೇರ ರಂಗ
ಯಾರಿಗಿಲ್ಲಿ ಸಾಟಿ ಇವ ಭಲೇ ಕಿಲಾಡಿ ರಂಗ
ಬಾಜಿ ಕಟ್ಟಿ ನೋಡು ಬಾರೊ ಮೀಸೆ ಮಾವ

ವಹರೆ ಮೇರಾ ಮುರುಗ ವಹರೆ ನನ್ನ ಸಿಂಗ
ಸಿಂಗನ ಮುಂದೆ ರಂಗನು ಎಂದು ಇಂಗು ತಿಂದ ಮಂಗ
ಬಾಜಿ ಕಟ್ಟಲೆಂದು ಬಂದೆ ಗಂಡುಬೀರಿ ಹೆಣ್ಣೆ

ಅರೆ ಭೋಡೋ ಅರೆ ದೇಖೋ.....
ಸವಾಲು ನಂದು ಜವಾಬು ನಿಂದು
ನೋಡುವೆ ಏಕೆ ಹಿಂದುಮುಂದು
ಜಟಾಪಟಿ ಕಾಳಗವ ಮಾಡು ಮಾಡು
ಪೋಟಾಪೋಟಿ ಹೋರಾಟವ ನೋಡುನೋಡು
ಪೋಟಾಪೋಟಿ ಗಂಡಾಗುಂಡಿ ಹೆದರೋಳಲ್ಲ ನಾನು ಭಂಡಿ ॥ ಬಾಜಿ .....॥

(ಸಿಪಾಯಿ ರಾಮು)

ಶಿಶುಪ್ರಾಸಗಳನ್ನು ಚಿತ್ರಗೀತೆಗಳಲ್ಲಿ ಬಳಸಿರುವ ಸಂದರ್ಭಗಳಿಗೇನೂ ಕೊರತೆಯಿಲ್ಲ. ಶಿಶುಪ್ರಾಸದ ಮೊದಲ ಸಾಲುಗಳನ್ನು ಬಳಸಿಕೊಂಡಿರುವ ಅಥವಾ ಇಡೀ ಶಿಶುಪ್ರಾಸವನ್ನೇ ಸಾಂದರ್ಭಿಕವಾಗಿ ಅಳವಡಿಸಿಕೊಂಡಂಥ ಹಾಡುಗಳು ಇವೆ.

ಅವಲಕ್ಕಿ ಪವಲಕ್ಕಿ ಕಾಂಚಿಣ ಮಿಣಮಿಣ
ಡಾಂ ಡೂಂ ಡಸ್ಸ ಬುಸ್ಸ ಕೊಂಯ್ ಕೊಠಾರ್.... (ಗೌರಿ)

ರತ್ತೋ ರತ್ತೋ ರಾಯನ ಮಗಳೆ ರತ್ತೋ ರತ್ತೋ ಬಾ
ಹದಿನಾರಾಮ್ಮೆಯ ಕಾಯೋಕೆ ನಾನೇ ಬರಬೇಕೇನು
ಬಿತ್ತೋ ಬಿತ್ತೋ ಭೀಮನ ಮಗಳೆ ಬಿತ್ತೋ ಬಿತ್ತೋ ಬಾ
ಹದಿನೇಳೆಕರೆ ಬೆಳಿಯೋಕೆ ಬುತ್ತಿಯ ತರಬೇಕೇನು
ಹೇ ಹುಡುಗಿ ಅಲ್ಲೇ ನಿಲ್ಲೆ ಸ್ವಲ್ಪ...... (ಅವ್ಳೇ ನನ್ ಹೆಂಡ್ತಿ)

'ಆನೆ ಬಂತೊಂದಾನೆ..... ' ಶಿಶುಪ್ರಾಸನವನನ್ನೂ 'ಸೂರ್ಯವಂಶ' ಚಿತ್ರದಲ್ಲಿ ಬಳಸಿಕೊಳ್ಳಲಾಗಿದೆ.

ಚಲನಚಿತ್ರಗಳಲ್ಲಿ ಒಗಟುಗಳನ್ನು ಬಳಸಿಕೊಂಡ ಸಂದರ್ಭಗಳಿವೆ. ಪ್ರಚಲಿತವಿರುವ ಒಗಟುಗಳು ಅಥವಾ ಒಗಟುಗಳನ್ನು ಹೊಸದಾಗಿ ಹೆಣೆದು ಹಾಡುಗಳಾಗಿ ಪರಿವರ್ತಿಸಿರುವ ಉದಾಹರಣೆಗಳು ಹಲವಾರಿವೆ. 'ಕಂಡೆ ಕಂಡೇನೊ ಬಸವ ನನ್ ಜಾಣತನವ.....' ಎಂಬ ಪಲ್ಲವಿಯನ್ನೊಳಗೊಂಡ 'ಭಲೇ ಬಸವ' ಚಿತ್ರದ ಪ್ರಶ್ನೋತ್ತರ ರೂಪದ ಒಗಟು ಮತ್ತು 'ಜನುಮದ ಜೋಡಿ' ಚಿತ್ರದ ಇದೇ ಬಗೆಯ ಹಾಡನ್ನು ನೋಡೋಣ.

ಒಬ್ಬನ್ಗೆ ಕೈಕೊಟ್ಟೆ ಒಬ್ಬನ್ಗೆ ಕಾಲ್ಕೊಟ್ಟೆ
ಒಬ್ಬನ್ಗೆ ಸೀರೆಯನ್ನೆ ಬಿಚ್ಚಿಕೊಟ್ಟೆ ಚೆಲುವಾ.....

ಯಾವೊನ್ಗೆ ಕೈಕೊಟ್ಟೆ ಯಾವೊನ್ಗೆ ಕಾಲ್ಕೊಟ್ಟೆ
ಯಾವೊನ್ಗೆ ಸೀರೆಯನ್ನು ಬಿಚ್ಚಿಕೊಟ್ಟೆ ಚೆಲುವೇ.....

ಬಳೆಗಾರ್ಗೆ ಕೈಕೊಟ್ಟೆ ಕಂಚ್ಗಾರ್ಗೆ ಕಾಲ್ಕೊಟ್ಟೆ
ಮಡಿವಾಳ್ಗೆ ಸೀರೆಯನ್ನು ಬಿಚ್ಚಿಕೊಟ್ಟೆ ಬಸವಾ....

ಒಬ್ಬನ್ನ ಹಾಸಿದ್ದೆ ಒಬ್ಬನ್ನ ಹೊದ್ದಿದ್ದೆ
ಒಬ್ಬನ್ನ ಎಳಕೊಂಡು ಮಲಗಿದ್ದೆ ಬಸವಾ......

ಯಾವೊನ್ನ ಹಾಸಿದ್ದೆ ಯಾವೊನ್ನ ಹೊದ್ದಿದ್ದೆ
ಯಾವೊನ್ನ ಎಳಕೊಂಡು ಮಲಗಿದ್ದೆ ಚೆಲುವೇ....

ಹಾಸಿಗೆ ಹಾಸಿದ್ದೆ ಕಂಬಳಿ ಹೊದ್ದಿದ್ದೆ
ತಲೆದಿಂಬ ಎಳಕೊಂಡು ಮಲಗಿದ್ದೆ ಚೆಲುವಾ......

(ಭಲೇ ಬಸವಾ)

ಮಣಿ ಮಣಿ ಮಣಿ ಮಣಿ ಮಣಿಗೊಂದು ದಾರ
ದಾರದ ಜೊತೆ ಮಣಿ ಸೇರಿ ಚಂದದೊಂದು ಹಾರ

ನಿನ್ನ ಹೆಸರೇನೋ ಮಣಿ ಅಂತ ಗೊತ್ತಾಯ್ತು
ಆದ್ರೆ ಮಣಿ ಜೊತೆಯಿರೋ ದಾರದ ಹೆಸರೇ ಗೊತ್ತಾಗ್ಲಿಲ್ವಲ್ಲೇ.......
ಮಣಿ ಜೊತೆ ದಾರ ಇರಲ್ಲ ದಾರದಲ್ಲಿ ಮಣಿ ಇರತ್ತೆ
ಅಂತಾ ಹೇಳೇ ಮಣಿ.... ಗೊತ್ತಾಯ್ತು ಗೊತ್ತಾಯ್ತು.......

(ಜನುಮನದ ಜೋಡಿ)

ಒಗಟುಗಳಲ್ಲಿ ದ್ವಂದ್ವಾರ್ಥವುಳ್ಳ ಪದಗಳು ಅಥವಾ ಪದಪುಂಜಗಳಿರುತ್ತವೆ. ಮೇಲುನೋಟಕ್ಕೆ ಅಶ್ಲೀಲ ಎನ್ನಬಹುದಾದರೂ ಒಗಟು ಒಡೆದಾಗ ಅದರ ಅರ್ಥ ಅಥವಾ ಉತ್ತರ ಬೇರೆಯದೇ ಆಗಿರುತ್ತದೆ. ಅನೇಕ ಚಲನಚಿತ್ರಗಳಲ್ಲಿ ಈ ಬಗೆಯ ಒಗಟುಗಳನ್ನು ಬಳಸಿಕೊಳ್ಳಲಾಗಿದೆ.

ಮಹಾಕಾವ್ಯ ಮತ್ತು ಲಾವಣಿ

ಕನ್ನಡದಲ್ಲಿ ಅನೇಕ ಜನಪದ ಮಹಾಕಾವ್ಯಗಳು ಮತ್ತು ಲಾವಣಿಗಳಿವೆ. ಕೆರೆಗೆಹಾರ, ಕಿತ್ತೂರು ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ಟಿಪ್ಪೂಸುಲ್ತಾನ ಇತ್ಯಾದಿ ಲಾವಣಿಗಳು, ಪಿರಿಯಾಪಟ್ಟಣದ ಕಾಳಗ, ಮಲೆಯ ಮಾದೇಶ್ವರ, ಮಂಟೇಸ್ವಾಮಿ ಮುಂತಾದ ಹತ್ತಾರು ಮಹಾಕಾವ್ಯಗಳು ಇವೆ. ಇವು ಕಥೆಯ ರೂಪದಲ್ಲಿ, ಹಾಡಿನ ರೂಪದಲ್ಲಿ, ಆಶಯಗಳ ರೂಪದಲ್ಲಿ ಚಲನಚಿತ್ರಗಳಲ್ಲಿ ಕಂಡುಬರುತ್ತವೆ.

'ಕಿತ್ತೂರು ಚೆನ್ನಮ್ಮ' ಐತಿಹಾಸಿಕ-ಜಾನಪದೀಯ ಚಲನಚಿತ್ರವಾಗಿ ಅತ್ಯಂತ ಯಶಸ್ಸು ಗಳಿಸಿತು. ಮಲೆಯ ಮಾದೇಶ್ವರ, ಮಂಟೇಸ್ವಾಮಿ ಕಾವ್ಯಗಳು ಪಾರ್ಶ್ವಿಕವಾಗಿ ಅನೇಕ ಚಲನಚಿತ್ರಗಳಲ್ಲಿ ಬಳಕೆಗೊಂಡಿರುವುದು ಸರ್ವವಿದಿತ.

ಜನಪದ ಕಥೆಯನ್ನು ಆಧರಿಸಿ ಬಂದಂಥ ಅನೇಕ ಚಲನಚಿತ್ರಗಳಿವೆ. ಹೀಗೆ ಜನಪದ ಕಥೆಯನ್ನು ಆಧರಿಸಿ ಬಂದಂಥ ಮೊಟ್ಟಮೊದಲ ಕನ್ನಡ ಚಲನಚಿತ್ರ ಸದಾರಮೆ (೧೯೪೪). ಕನ್ನಡ ಲೇಖಕರ ಸೃಜನಾತ್ಮಕ ರಚನೆಗಳ ಮೂಲಕ ಜನಪದ ಕಥೆಗಳು ಚಲನಚಿತ್ರಗಳಾದ ಅನೇಕ ಉದಾಹರಣೆಗಳು ನಮ್ಮ ಮುಂದಿವೆ. ಸಂಗ್ಯಾ-ಬಾಳ್ಯಾ, ಬಾಲನಾಗಮ್ಮ, ಗುಣಸುಂದರಿ, ಸಿಂಗಾರವ್ವ ಮತ್ತು ಅರಮನೆ, ಗುರುಶಿಷ್ಯರು, ನಾಗಮಂಡಲ ಇತ್ಯಾದಿ.

ಶ್ರೀಶೈಲ ಮಹಾತ್ಮೆ, ಹೇಮರೆಡ್ಡಿ ಮಲ್ಲಮ್ಮ ಮುಂತಾದವು ಜನಪದ ಪುರಾಣ ಮತ್ತು ಐತಿಹ್ಯಗಳನ್ನೇ ಆಧಾರವಾಗಿಟ್ಟುಕೊಂಡಂಥವು.

ಗ್ರಾಮೀಣ ಪರಿಸರದ ಕಥಾವಸ್ತುವನ್ನುಳ್ಳ ಸಾಮಾಜಿಕ ಚಿತ್ರಗಳಾದ 'ಭೂತಯ್ಯನ ಮಗ ಅಯ್ಯು', 'ಕೂಡಿ ಬಾಳಿದರೆ ಸ್ವರ್ಗಸುಖ' ಗಳಲ್ಲಿ ಹಳ್ಳಿಯ ಬದುಕನ್ನು ಯಥಾವತ್ತಾಗಿ ಚಿತ್ರಿಸಿ ಆ ಮೂಲಕ ಜನಪದರ ಸಾರ್ವತ್ರಿಕ ಬದುಕನ್ನು ಹಿಡಿದಿಡಲಾಗಿದೆ. ಗ್ರಾಮೀಣರ ಮದುವೆ, ಆಚರಣೆ, ಸಂಪ್ರದಾಯ, ಹಬ್ಬ, ಉತ್ಸವ, ಜಾತ್ರೆ, ಜನಪದ ಕಲೆ ಇತ್ಯಾದಿಗಳೆಲ್ಲ ಇಂಥ ಚಿತ್ರಗಳಲ್ಲಿ ದಾಖಲೆಗೊಂಡು ಕಥೆಗೆ ಪೂರಕವಾಗಿ ಚಿತ್ರದಲ್ಲಿ ಮಿಲನಗೊಂಡಿವೆ.

ಕೃಷಿಯನ್ನೇ ಜೀವಾಳವಾಗುಳ್ಳ 'ಬಂಗಾರದ ಮನುಷ್ಯ', 'ಬೆಳುವಲದ ಮಡಿಲಲ್ಲಿ' ಮುಂತಾದ ಚಿತ್ರಗಳು ಸಾಮಾಜಿಕ ಚಿತ್ರಗಳಾಗಿ ಅತ್ಯಂತ ಯಶಸ್ಸನ್ನು ಕಂಡು, ಅನೇಕರ ಮನಃಪರಿವರ್ತನೆಗೆ ಕಾರಣವಾಗಿವೆ.

ಜನಪದ ಕಥೆಯೊಂದನ್ನು ಹಾಡಾಗಿ ಮಾರ್ಪಡಿಸಿದಂಥ 'ಸುವರ್ಣ ಸೇತುವೆ' ಚಿತ್ರದ ಸನ್ನಿವೇಶ ಅತ್ಯಂತ ಮನೋಜ್ಞವಾಗಿ ಮೂಡಿಬಂದಿದೆ.

ಮಲ್ನಾಡಿನ್ ಮೂಲೇನಾಗೇ ಇತ್ತೊಂದು ಸೋಮ್ನಹಳ್ಳಿ
ಆ ಹಳ್ಳಿ ಎಲ್ಲಾ ಜನರು ಲೋಕಾನೇ ಗೊತ್ತಿಲ್ಲೋರು
ಅವರಲ್ಲಿ ಮುದುಕಿ ಒಬ್ಬು ದೌಲಿಂದ್ಲೇ ಮೆರೀತಿದ್ಲು
ಅವ್ಳಂತು ಭೋ ಘಾಟಿ ಜಂಬಗಾತಿ

ಆ ಮುದುಕಿ ಚೆಂದದ್ ಕೋಳಿ ಸಾಕಿರಲು
ಆ ಕೋಳಿ ಉರಿಯೋ ಸೂರ್ಯ ಮೂಡ್ಸೈತೆಂದು
ಅದ್ರಿಂದ್ಲೇ ಊರು ಬೆಳಕು ಕಾಣ್ತೈತೆಂದು
ತನ್ನಿಂದ್ಲೇ ಹಳ್ಳಿ ಎಲ್ಲಾ ತಾನಿಲ್ದೆ ಬದುಕೇ ಇಲ್ಲ
ಅಂತಂದು ಸೊಕ್ಕಿಂದ್ಲೇ ಬದುಕ್ತಿದ್ಲು

ಊರೋರ್ಗೆ ತನ್ನ ಗುಟ್ಟು ತೋರಿಸ್ಬೇಕೆಂತಂದು
ಕಂಕ್ಳಾಗೆ ತನ್ನ ಕೋಳಿ ಬಚ್ಚಿಟ್ಕಂಡು
ಕತ್ಲಾಗೆ ಒಂದೊಂದೆ ಹೆಜ್ಜೆ ಇಟ್ಕಂಡು
ಕಾಡ್ನಾಗೆ ಸೇರ್ಕೊಂಡ್ಳು ಹೊತ್ ನೋಡ್ಕಂಡು

ಬೆಳಗಾಯ್ತು ಯಾವೊತ್ನಂಗೆ ಪೆಚ್ಚಾದ್ಲು ಮುದ್ಕಿ ಅಂಗೆ
ನಡೀತಾಯ್ತೆ ಈ ಲೋಕ ಮಾಮೂಲ್ನಂಗೇ

ತನ್‌ಕೋಳಿ ಕೂಗಿದ್ರೇನೆ ಬೆಳಗಾಗ್ತೆಂದು
ನಂಬ್ಕೊಂಡ ಮುದುಕಿ ಗರ್ವ ಇಳ್ದೋಯ್ತೆಂದು

ಸೊಕ್ಕಿಲ್ದೆ ಸೂರ್ಯಚಂದ್ರ ಬೆಳಕ ಕೊಡ್ತಾರೆ
ಈ ಭೂಮಿ ಮಂದಿ ಮಾತ್ರ ಬಿಂಕ ಪಡ್ತಾರೆ
ತಿಳ್ಕೊಂಡು ಒಳ್ಳೇ ನೀತಿ ತಿದ್ಕೊಂಡು ಬಾಳಿನ್ ರೀತಿ
ಎಲ್ಲಾರು ಮೆಚ್ಕೋ ಹಾಗೆ ನಡ್ಕೋಬೇಕು

ಪ್ರಕೃತಿಯಲ್ಲಾಗುವ ಕ್ರಿಯೆಗಳಿಗೆ ಮಾನವ ಕಾರಣನಲ್ಲ ಎಂಬ ನೀತಿಯನ್ನು ಹೇಳುವಲ್ಲಿ ಯಶಸ್ವಿಯಾಗಿದೆ ಈ ಹಾಡು.

ಜನಪದ ಕಥೆಯನ್ನು ನೇರವಾಗಿ ಸ್ವೀಕರಿಸದಿದ್ದರೂ ಅದೇ ಮಾದರಿಯ ಅದೇ ಮಾರ್ಗದ ಕಥೆಯನ್ನು ಸೃಷ್ಟಿಸಿ ಬಳಸಿಕೊಂಡಿರುವುದೂ ಉಂಟು.

ಗಾದೆಗಳನ್ನು ಕುರಿತು ಹೇಳುವುದಾದರೆ 'ಆಡುಮುಟ್ಟದ ಸೊಪ್ಪಿಲ್ಲ' ಎಂಬಂತೆ ಗಾದೆಗಳನ್ನು ಬಳಸಿಕೊಳ್ಳದ ಅಥವಾ ಗಾದೆಗಳಿಲ್ಲದ ಚಲನಚಿತ್ರವೇ ಇಲ್ಲ. ದೈನಂದಿನ ಬದುಕಿನಲ್ಲಿ ಬಳಸುವಂತೆಯೇ ಪ್ರತಿಯೊಂದು ಚಲನಚಿತ್ರದಲ್ಲೂ ಗಾದೆಗಳು ಇದ್ದೇ ಇರುತ್ತವೆ.

ಇತ್ತೀಚಿನ ಚಿತ್ರಗಳಲ್ಲಿ ಸಾಂದರ್ಭಿಕವಾಗಿ ಜನಪದ ಭಾಷೆಯ ಬಳಕೆ ಹೆಚ್ಚಾಗಿ ಕಂಡುಬರುತ್ತಿದೆ. 'ಜಿಂಕೆಮರಿ ಓಡ್ತಾಯ್ತೆ ನೋಡ್ಲಾ ಮಗಾ, ಕಂಡು ಕಾಣ್ದಂಗೆ ಹಾಳಾಗವ್ನೆ ನಮ್ಮೂರ್ ಹುಡ್ಗಾ' ಮುಂತಾದ ಹಾಡಿನ ತುಣುಕುಗಳನ್ನು ಅಥವಾ ಗ್ರಾಮೀಣ ಪರಿಸರದ ಪಾತ್ರಗಳ ಸಂಭಾಷಣಾ ಶೈಲಿಯಲ್ಲಿ ಇಂಥ ಭಾಷೆಯ ಬಳಕೆಯನ್ನು ಕಾಣುತ್ತಿದ್ದೇವೆ. ನುಡಿಗಟ್ಟುಗಳು, ಜನಪದ ಸಂಭಾಷಣಾ ಶೈಲಿ, ಜನಪದ ಛಂದಸ್ಸು ಇತ್ಯಾದಿಗಳಿಲ್ಲದ ಚಲನಚಿತ್ರಗಳೇ ಇಲ್ಲ ಎಂದರೆ ಅತಿಶಯೋಕ್ತಿಯಾಗಲಾರದು. ಹಳೆಯ ಚಿತ್ರಗಳಲ್ಲಾಗಲಿ, ಹೊಸ ಅಲೆಯ ಚಿತ್ರಗಳಲ್ಲಾಗಲಿ ಇವು ಇಲ್ಲದೆ ನಡೆಯುವುದೇ ಇಲ್ಲ. ಗಾದೆ, ಒಗಟುಗಳ ಬಳಕೆಯಿಂದ ಸಂಭಾಷಣೆ ಸೊಗಸಾಗುತ್ತದೆ; ಅರ್ಥಪೂರ್ಣವಾಗುತ್ತದೆ. ಜನಪದ ಮಟ್ಟುಗಳು, ಧಾಟಿಗಳು ಮನಸ್ಸಿಗೆ ಮುದನೀಡಿ, ಉಲ್ಲಾಸದಿಂದ ಕುಣಿಯುವಂತೆ ಮಾಡುತ್ತವೆ. ಒಟ್ಟಿನಲ್ಲಿ ಜನಪದ ಸಾಹಿತ್ಯದಿಂದ ಚಲನಚಿತ್ರ ಮಾಧ್ಯಮಕ್ಕೆ ತುಂಬಾ ಪ್ರಯೋಜನವಂತೂ ಆಗಿದೆ. ಹಾಗೆಯೇ ಜನಪದ ಸಾಹಿತ್ಯ ಈ ಮಾಧ್ಯಮದ ಮೂಲಕ ಅಜರಾಮರವಾಗಿ ಉಳಿಯುವಂತೆ ದಾಖಲಾಗಿರುವುದು ಸಂತಸದ ವಿಚಾರ.

ಚಲನಚಿತ್ರ ಎಂಬ ಸೃಜನಶೀಲ ಹಾಗೂ ಯಂತ್ರತಂತ್ರ ಮಾಧ್ಯಮಗಳ ಸಂಗಮ ಜನರಲ್ಲೇ ಹುಟ್ಟಿ ಬೆಳೆಯುವ ಸಾಹಿತ್ಯ ಮಾಧ್ಯಮವನ್ನು ಹೇಗೆ ಬಳಸಿಕೊಳ್ಳುತ್ತದೆ ಎಂಬುದರ ಚಿತ್ರ ಮೇಲೆ ನೀಡಿರುವ ವಿವರಣೆಯಿಂದ ವಿದಿತವಾಗುತ್ತದೆ. ಜನಪದ ಸಾಹಿತ್ಯ ಎಂಬುದು ಜನಸಮೂಹದಲ್ಲೇ ಹುಟ್ಟಿ, ಅವರಲ್ಲೇ ಪ್ರಸಾರವಾಗುವ ಒಂದು ಸಹಜ, ಸುಂದರ

ಮಾಧ್ಯಮ. ಅದು ತನ್ನನ್ನು ತಾನೇ ಸೃಷ್ಟಿಸಿಕೊಳ್ಳುವುದರಿಂದ ಅದರ ತಂತ್ರ ಜನಸಮೂಹದ ನಡುವಣ ಸಂವಹನಕ್ಕೆ ತಕ್ಕಂತೆ ರೂಪುಗೊಳ್ಳುತ್ತಿರುತ್ತದೆ. ಅದರಿಂದಲೇ ಚಲನಚಿತ್ರದಂಥ ಮಾಧ್ಯಮಗಳಿಂದಲೂ ಜನಪದ ಸಾಹಿತ್ಯ ಸ್ಫೂರ್ತಿಯನ್ನು ಪಡೆದು ಮರುಹುಟ್ಟನ್ನು ಪಡೆಯುತ್ತಲೇ ಇರುತ್ತದೆ. ಆದರೆ ಚಲನಚಿತ್ರದ ವಿಷಯದಲ್ಲಿ ಇದು ಭಿನ್ನ ಆಯಾಮದಲ್ಲಿ ಪ್ರಭಾವ ಬೀರುತ್ತದೆ. ಚಲನಚಿತ್ರ ಮಾಧ್ಯಮ ಜನಪ್ರಿಯತೆಗಾಗಿ ಹಾಗೂ ವ್ಯಾಪಾರಾಭಿವೃದ್ಧಿಗಾಗಿ ರೂಪುಗೊಳ್ಳುವುದರಿಂದ ಜನಪ್ರಿಯ ತಂತ್ರಗಳ ಬಳಕೆ ಅನಿವಾರ್ಯವಾಗುತ್ತದೆ. ಇದನ್ನು ಮನಗಂಡ ನಿರ್ಮಾಪಕರು ತಮ್ಮ ಅನ್ವೇಷಣೆಯಲ್ಲಿ ಜನಪದ ಸಾಹಿತ್ಯವನ್ನು ಪ್ರಮುಖ ವಿಷಯವಾಗಿ ಮಾಡಿಕೊಂಡಿರುವುದು ಚಲನಚಿತ್ರ ನಿರ್ಮಾಣದ ಇತಿಹಾಸದುದ್ದಕ್ಕೂ ಕಂಡುಬರುತ್ತದೆ. ಇದನ್ನು ಅಂದಿನ 'ಸದಾರಮೆ'ಯೂ ಖಚಿತಗೊಳಿಸಿದೆ. ಇಂದಿನ 'ಜನುಮದ ಜೋಡಿ'ಯೂ ಸಾಬೀತುಪಡಿಸಿದೆ.

ಜನಪದರ ಶ್ರದ್ಧಾಕೇಂದ್ರಗಳು

ಡಾ. ಬಿ.ವಿ. ವಸಂತಕುಮಾರ್

ಪ್ರತಿಯೊಂದು ಸಮಾಜ ಸಂಸ್ಕೃತಿ ತನ್ನನ್ನು ಪ್ರೇರೇಪಿಸುವ, ಚೈತನ್ಯಶೀಲಗೊಳಿಸುವ ಕೆಲವು ಶ್ರದ್ಧಾಕೇಂದ್ರಗಳನ್ನು ಹೊಂದಿರುತ್ತದೆ. ಅವು ಆ ಜೀವನದ ಚಿಂತನೆಯನ್ನು ರೂಪಿಸಿ ದೃಷ್ಟಿಕೋನವನ್ನು ಕಟ್ಟಿರುತ್ತವೆ. ಕನ್ನಡದ ಜನಪದ ತ್ರಿಪದಿಗಳಲ್ಲಿ ಕಂಡುಬರುವ ಕೆಲವು ಶ್ರದ್ಧಾಕೇಂದ್ರಗಳನ್ನು ಗ್ರಹಿಸುವ ಪ್ರಯತ್ನವಿಲ್ಲಿದೆ.

ಜನಪದರೆಂದರೆ ಅವರು ನಿಸರ್ಗದ ಒಕ್ಕಲು. ಅವರ ಬದುಕಿನ ಎಲ್ಲ ಇತಿಮಿತಿಗಳನ್ನೂ ಪ್ರೀತಿ-ಭೀತಿಗಳನ್ನೂ ನಿಸರ್ಗವೇ ರೂಪಿಸಿದೆ ಹಾಗೂ ನಿಯಂತ್ರಿಸುತ್ತಾ ಬಂದಿದೆ. ಆ ಜೀವನ ದೃಷ್ಟಿಯಲ್ಲಿ ವಿಶಿಷ್ಟ ನೋಟಗಳಿವೆ. ನಮ್ಮ ಜನಪದರ ಬಹು ಮುಖ್ಯವಾದ ಪ್ರಮುಖವಾದ ಶ್ರದ್ಧಾಕೇಂದ್ರವೆಂದರೆ ದೇವರು ಮತ್ತು ಧರ್ಮ. ಅವರ ದೃಷ್ಟಿಯಲ್ಲಿನ ದೇವರು ಮತ್ತು ಧರ್ಮ ಬಹಳ ವಿಶಿಷ್ಟವಾದದ್ದು. ಅವರ ದೇವರು "ಹೂವಿನಾಗ ಹುದುಗ್ಯಾನ, ಮಾಲ್ಯಾಗ ಮಲಗ್ಯಾನ, ಮೊಗ್ಗ್ಯಾಗ ಕಣ್ಣು ತೆರೆದಾನ". ಹೀಗೆ ನಿಸರ್ಗ ಹೂವಿನಲ್ಲಿ ಅದರ ಅರಳುವಿಕೆಯಲ್ಲಿ ದೇವರನ್ನು ಗ್ರಹಿಸುವ ರೀತಿಯು ಅದ್ಭುತವಾದದ್ದು. ಆ ದೇವರಿಗೆ ನಡೆಯುವ ಪೂಜೆಯಾದರೂ ಎಂಥದ್ದೆಂದರೆ

" ಆಕಾಶದಡವ್ಯಾಗ ಧೂಪದ ಹೊಗೆಯೆದ್ದು
ಆಯ್ತು ಮಲ್ಲಯ್ಯನ ಶಿವಪೂಜೆ । ಆಗಾಗ
ಆಕಾಶದ ಘಂಟೆ ಘಳಲೆಂದು" ಎನ್ನುವಂಥದ್ದು. "ಆಕಾಶದ ಘಂಟೆ" ಎನ್ನುವ ಪರಿಕಲ್ಪನೆಯೇ ಭೂಮವಾದದ್ದು. ಅದನ್ನು ಬಾರಿಸುವ ಭಕ್ತನ ಸಾಮರ್ಥ್ಯವಾದರೂ ಎಂಥದ್ದಿರಬೇಕೆಂಬ ಪ್ರಶ್ನೆಯೇ ಮೂಕವಿಸ್ಮಿತರನ್ನಾಗಿಸುತ್ತದೆ.

ಹೀಗೆ ನಮ್ಮ ಜನಪದರಿಗೆ ನಿಸರ್ಗವೇ ದೇವರು. ಭೂಮಿ, ಆಕಾಶ, ಮಳೆ, ನದಿ, ಗಿಡ, ಮರ, ಬೆಟ್ಟ, ಕಾಡು, ಕಡೆಗೆ ಈ ನಾಡಿನ ಸಚರಾಚರ, ಅಣುತೃಣಕಾಷ್ಠಾದಿಗಳಲ್ಲೂ ಅವನಿದ್ದಾನೆ. ಚೇತನವಾಗಿ, ಕುಕ್ಕೇಲೇ ರಾಗಿ ಬೆಳೆಸಬಲ್ಲವನಾಗಿದ್ದಾನೆ. ಆ ದೇವರ ಗುಡಿಗೆ ಇವರು "ಹೊತ್ತು ಮುಳುಗಿದರೇನು, ಕತ್ತಲಾದರೇನು" ಯಾವ ಭಯವೂ ಆಲಸವೂ ಇಲ್ಲದಂತೆ ಪ್ರೀತಿಯಿಂದ ಓಡಿಬರುತ್ತಾರೆ. ಬಂದವರು ದೇವರಲ್ಲಿ ಬೇಡುವುದೇನನ್ನು? ಅದೂ ಯಾವ ರೀತಿಯೆಂದರೆ –

"ಕರುಣ ಬಂದರೆ ಕಾಯೊ ಮರಣ ಬಂದರೆ ಒಯ್ಯೊ ।
ಕರುಣೆ ಕಲ್ಯಾಣ ಬಸವಣ್ಣ । ಕಾಶಿಲಿಂಗ
ಕಡೆತನಕ ಕಾಯೊ ಅಭಿಮಾನ"

ಅವರು ದೇವರಲ್ಲಿ ಬೇಡುವುದು ಅಭಿಮಾನವನ್ನ, ಮಾನವನ್ನ ! ಹಾಗಾಗಿ ನಮ್ಮ ಜನಪದರ ಸಂಸ್ಕೃತಿ ಶ್ರಮ ಸಂಸ್ಕೃತಿ ಹಾಗೂ ಮಾನ ಸಂಸ್ಕೃತಿ. ಅವರು ಇಂದಿಗೂ ಪ್ರಾಣಬೇಕಾದರೆ ಬಿಡುತ್ತಾರೆ ಮಾನ ಬಿಡಲು ತಯಾರಿಲ್ಲ. ಅದು ಅವರ ಶ್ರೇಷ್ಠ ಪರ, ಆದರ್ಶವಾಗಿದೆ.

ದೇವರಲ್ಲಿ ಕಡೆತನಕ ಕಾಯೊ ಅಭಿಮಾನ ಎಂದು ಬೇಡುವ ಜನಪದರ ಮತ್ತೊಂದು ಶ್ರದ್ಧಾ ಕೇಂದ್ರವೆಂದರೆ ರಾಜ. ಅವರ ಕಲ್ಪನೆಯ ರಾಜ ಸಾವ ಕೆಡುವ ಮನುಜನಲ್ಲ. ಅವರ ನಂಬಿಕೆಯ ರಾಜ ಯಾರೆಂಬುದನ್ನು ಈ ತ್ರಿಪದಿ ಕಟ್ಟಿಕೊಡುತ್ತದೆ.

"ರಾಗಿ ಬಣ್ಣದ ಕುದುರಿ ರಾಜೇಕ ದೊಡ್ಡದು
ರಾಜರೊಳು ರಾಜ ಮಳೆರಾಜ । ಬರುವಾಗ
ರಾಜೇವ ಕೈಯ್ಯ ಮುಗಿದಾವ"

ಇಲ್ಲಿ ರಾಜರೊಳು ರಾಜ ಮಳೆರಾಜ. ಅವನು ಬರುವಾಗ ರಾಜನನ್ನೂ ಸೇರಿ ರಾಜ್ಯವೇ ಕೈಯ ಮುಗಿಯುತ್ತದೆ. ಇಂಥ ಸ್ವಾಭಿಮಾನಿ ಜನರಿಗೆ ಈ ಮನುಷ್ಯ ರಾಜರ ಬಗ್ಗೆ ಎಂಥ ತಿರಸ್ಕಾರವೆಂದರೆ "ರಾಮ ರಾಜ್ಯವಾಳಿದ್ರೂ ರಾಗಿ ಬೀಸೋದು ತಪ್ಪಲ್ಲ" ಎಂಬ ನಿಲುವಿಗೆ ಬರುವಂಥದ್ದು. ಈ ಧೋರಣೆಯೇ ಅವರ ಸೌಮ್ಯ ಪ್ರತಿಭಟನೆಯ ಪ್ರತೀಕ. ಅವರ ರಾಜ ಮಳೆರಾಜ. ಅವನು ಬರದಿದ್ದರೆ ಇವರು ತಲ್ಲಣಗೊಳ್ಳುತ್ತಾರೆ. ಅವನಲ್ಲಿ ತಮ್ಮ ಬರದ ಬೇಗೆಯನ್ನು ಎದೆಕರಗುವಂತೆ ಆರ್ತತೆಯಿಂದ ಮೊರೆಯಿಡುತ್ತಾರೆ.

"ಬಣ್ಣದ ಗುಬ್ಯಾರು ಮಳಿರಾಜಾ । ಅವರು
ಮಣ್ಣಾಗಿ ಹೋದರು ಮಳಿರಾಜಾ
ಬಣ್ಣದ ಗುಬ್ಯಾರು ಮಣ್ಣಾಗಿ ಹೋದರು
ಅನ್ನದ ದಿನ ಬಂದು ಮಳಿರಾಜಾ"

ಎಂಬಲ್ಲಿ "ಬಣ್ಣದ ಗುಬ್ಯಾರು" ಎನ್ನುವ ಚಿತ್ರಣ ಜಾಗತೀಕರಣ, ಕಂಪ್ಯೂಟರ್ ಯುಗದ ಬಣ್ಣದ ಬದುಕಿನ, ಗಟ್ಟಿಯಲ್ಲದ ಎಲುಬು ಮಾಂಸದ ಟೊಳ್ಳುಮನುಷ್ಯರನ್ನ ಕುರಿತ ಅದ್ಭುತ ಮಾತೂ ಆಗಬಲ್ಲಷ್ಟು ಸಾರ್ವಕಾಲಿಕವಾದದ್ದಾಗಿದೆ. ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂವು ಕಟ್ಟಿಕೊಂಡು ಆಧುನಿಕ ಅದ್ಭುತ ಪ್ರಗತಿಯ ಆರ್ಥಿಕಲೋಕದಲ್ಲಿ ೨೦೦೩-೨೦೦೪ ನೆಯ ಈ ವರ್ಷದಲ್ಲಿ ಕರ್ನಾಟಕದಲ್ಲಿ ೮೦೦ ಜನ, ಭಾರತದಲ್ಲಿ ೧೨೦೦೦ ಜನ ರೈತರು ಆತ್ಮಹತ್ಯೆ ಮಾಡಿಕೊಂಡಿರುವುದು, ನೀರಿಗಾಗಿ ಸಾವಿರಾರು ಅಡಿ ಬೋರು ಕೊರೆಸಿ ನೀರಿಲ್ಲದೆ ಅಡಕೆ ತೋಟಗಳನ್ನು ಕಡಿಯುತ್ತಿರುವಲ್ಲಿ "ಬಣ್ಣದ ಗುಬ್ಯಾರು ಅನ್ನದ ದಿನ ಬಂದು ಮಣ್ಣಾಗಿ ಹೋಗುತ್ತಿರುವುದೆಂದು" ಬರೆದಿರುವುದು ಇಂದಿನ ವರ್ತಮಾನಕ್ಕೆ ಬರೆದ ಮುನ್ನುಡಿಯೇನೋ ಎನ್ನುವಂತಿದೆ. ವರ್ತಮಾನವನ್ನು ಗಾಢವಾಗಿ ತಟ್ಟುವ ಸಾಹಿತ್ಯವೇ ಭವಿಷ್ಯವನ್ನು ರೂಪಿಸುವ

ಸಾಮರ್ಥ್ಯವನ್ನು ಪಡೆದಿರುತ್ತದೆ. ಚಂದ್ರನನ್ನು ತಿಂಗಳಮಾಮ ಎಂದು ಕರೆಯುವ ಈ ಜನ ಮಳೆಯನ್ನು ಮಳೆರಾಜ ಮಳೆರಾಯ ಎಂದೇ ಕರೆಯುತ್ತಾರೆ, ಗೌರವಿಸುತ್ತಾರೆ, ಉಪಚರಿಸುತ್ತಾರೆ. ಅವನೊಡನೆ ಪ್ರೀತಿಯಿಂದ, ಸಲಿಗೆಯಿಂದ, ಆಪ್ತ ಅಧಿಕಾರದಿಂದ ವರ್ತಿಸುತ್ತಾರೆ. "ಹೊಯ್ಯೊ ಹೊಯ್ಯೊ ಮಳೆರಾಯ ಹೂವಿನ ತೋಟಕೆ ನೀರಿಲ್ಲ" ಎಂದು ಆದೇಶಿಸುತ್ತಾರೆ. ಇದು ಅವರ ಮತ್ತು ರಾಜನ ನಡುವಿನ ಸಂಬಂಧದ ರೀತಿ. ಆ ಮಳೆರಾಜ ಬಂದಾಗ ಮೈಮರೆತು ಮುದದಿಂದ ಕುಣಿಯುವುದು ಅಲ್ಲಿನ ಪ್ರೀತಿ.

ಮೂರನೆಯದಾಗಿ 'ತಾಯಿ' ನಮ್ಮ ಜನಪದರ ಪ್ರಮುಖ ಶ್ರದ್ಧಾಕೇಂದ್ರ. 'ತಾಯಿ' ಎಂದರೆ ಏಕಕಾಲದಲ್ಲಿ ಹೆತ್ತತಾಯಿ ಹಾಗೂ ಹೊತ್ತ ಭೂಮಿತಾಯಿಯೂ ಆಗುತ್ತಾಳೆ.

"ಏಳುತಲೆ ಎದ್ದು ಯಾರ್ಯಾರ ನೆನೆಯಲಿ
ಎಳ್ಳು ಜೀರಿಗೆ ಬೆಳೆಯೋಳೆ । ಭೂಮಿತಾಯಿ ।
ಎದ್ದೊಂದು ಗಳಿಗೆ ನೆನೆವೇನು "

ಎಂದು ಭೂಮಿತಾಯಿಯ ಮೇಲಿನ ಶ್ರದ್ಧೆಯನ್ನು ಪ್ರಕಟಿಸಿದ್ದಾರೆ. ಆ ಭೂಮಿ ತಾಯಿ ಎಳ್ಳು ಜೀರಿಗೆ ಬೆಳೆಯೋಳು ಅರ್ಥಾತ್ ಸಾವು ಹುಟ್ಟುಗಳನ್ನು ಬೆಳೆಯುತ್ತಾಳೆ. ಎಳ್ಳು ಸಾವಿನ ಸಂದರ್ಭದಲ್ಲಿ ಎಳ್ಳುನೀರು ಬಿಡು ಎಂಬಲ್ಲಿ ಬರುವ ಸಾವಿನ ನೆನಪಾದರೆ ಜೀರಿಗೆ ಮಕ್ಕಳು ಹುಟ್ಟಿದಾಗ ಬಳಸುವ ಪರಿಮಳದ ಧಾನ್ಯ. ಅದು ಹುಟ್ಟಿನ ನೆನಪು. ಹೀಗೆ ಎಳ್ಳು ಜೀರಿಗೆ ಬೆಳೆಯೋಳಿಗೆ ಎದ್ದೊಂದು ಗಳಿಗೆ ತನ್ನ ನಮನಗಳನ್ನು ನೆನಪುಗಳನ್ನು ಅರ್ಪಿಸುತ್ತಾರೆ.

"ಗಂಗಾದೇವಿ ನನ್ನ ಹಡೆದವ್ವ । ನೆನೆದರ
ಮಾಸೀದ ತಲೆಯು ಮಡಿಯಾಯ್ತು"

ಎಂಬ ಮಾತಲ್ಲಿ 'ಮಾಸೀದ ತಲೆಯ ಮಡಿ ಮಾಡುವ' ತಾಯ ಹಂಬಲ ಹೃದಯಸ್ಪರ್ಶಿಯಾಗಿದೆ. ಆ ಹಡೆದವ್ವ 'ಬ್ಯಾಸಗಿ ದಿವಸಕ ಬೇವಿನ ಮರ ತಂಪ । ಭೀಮರತಿಯೆಂಬ ಹೊಳಿತಂಪ' ಎನ್ನುವಂತೆ ತಂಪಿನ ಪ್ರತೀಕವಾಗಿದ್ದಾಳೆ. ಇಂಥ ಸಾವಿರಾರು ಮಾತುಗಳು 'ತಾಯಿ' ಎಂಬ ವಾತ್ಸಲ್ಯದ ಸತ್ಯದ ಸುತ್ತ ದೀಪಗಳಾಗಿ ಬೆಳಗುತ್ತಿವೆ.

'ಕಾಯಕ' ಅವರ ಮತ್ತೊಂದು ಶ್ರದ್ಧಾಕೇಂದ್ರ. ಮಾಡಿದ್ದುಣ್ಣೊ ಮಹಾರಾಯ, ಆಳಾಗಿ ದುಡಿ ಅರಸಾಗಿ ಉಣ್ಣು, ಕುಂತು ಉಣ್ಣೋನಿಗೆ ಕುಡಿಕೆ ಹೊನ್ನು ಸಾಲ್ದು. ಇಂಥ ನೂರಾರು ಗಾದೆ ಮಾತುಗಳಲ್ಲಿ ದುಡಿಮೆಯ ಮಹತ್ವವನ್ನು ಸಾರಿದ್ದಾರೆ. ಅವರ ಜೀವನ ಸಾಹಿತ್ಯ, ಸಂಸ್ಕೃತಿಗಳೆಲ್ಲವೂ ವ್ಯೆಮನಸ್ಸುಗಳ ದುಡಿಮೆಯ ಫಲ. ಕಾಯಕವೇ ಕೈಲಾಸವೆಂಬುದು ನಮ್ಮ ಜನಪದರ ಜೀವನದ ಉಸಿರು. ಆದರೆ ವಾಸ್ತವವಾಗಿ ಆಳಾಗಿ ದುಡಿಯುವವರು ದುಡಿಯುತ್ತಲೇ ಇದ್ದಾರೆ ಉಣ್ಣಲು ಸಿಗದೆ ಒದ್ದಾಡುತ್ತ ಅರಸಾಗಿ ಉಣ್ಣುವವರು ಉಣ್ಣುತ್ತಲೇ ಇದ್ದಾರೆ ದುಡಿಯದೆ. ಹೊಟ್ಟೆ ಬಿರಿಯುವಂಥ ಕಂಡವರ ಹೊಟ್ಟೆ ಉರಿಯುವಂತೆ ಉಬ್ಬಿಸಿಕೊಂಡು ಮನುಷ್ಯಾಕಾರವನ್ನೇ ಕಳೆದುಕೊಂಡಿದ್ದಾರೆ. ಶಾರೀರಿಕವಾಗಷ್ಟೇ ಅಲ್ಲದೆ ಮಾನಸಿಕವಾಗಿಯೂ! ದುಡಿಯುವ ಶ್ರಮಜೀವಿ ಯೋಗಿಯಂತೆ

ಎಲುಬಿನ ಗೂಡಾಗಿದ್ದಾನೆ, ಸಾವಿಗೆ ಶರಣಾಗಿದ್ದಾನೆ ಎಂಬುದು ಕ್ರೂರ ವಿಪರ್ಯಾಸ. ಆದರೆ ನಮ್ಮ ಜನಪದರು ಕಾಯಕವನ್ನೇ ಉಂಡು ಸುಖಿಸುತ್ತಾರೆ. ಅದರ ಫಲವನ್ನಲ್ಲ. ಅವರು ಕಾಯಕದಿಂದ ಕೈಲಾಸ ಕಾಣುವುದಿಲ್ಲ. ಕಾಯಕದಲ್ಲೇ ಕೈಲಾಸ ಪಡೆಯುತ್ತಾರೆ. ರೈತನಿಗೆ ಹೊಲದ ತುಂಬ ಬೆಳೆದು ನಿಂತು ಗಾಳಿಗೆ ತೊನೆದಾಡುವ ಬೆಳೆ ದಿನವಿಡೀ, ದಿನನಿತ್ಯ ನೀಡಿದ ಸಂತೋಷವನ್ನು ಖಂಡಿತ ದಲ್ಲಾಳಿ ಮಂಡಿಯ ಆ ತಕ್ಕಡಿಯ ಮುಳ್ಳು. ಸಾಲಕಟ್ಟಲೂ ಸಾಲದ ಬೆಲೆ ಸಂತೋಷ ನೀಡಲಾರದು. ಆದರೂ ಕಾಯಕದ ಬಗೆಗಿನ ಅವನ ಶ್ರದ್ಧೆ ಎಂಥದ್ದೆಂದರೆ

"ಕಸವ ಹೊಡೆದ ಕೈಯು ಕಸ್ತೂರಿ ನಾತಾವ
ಬಸವಣ್ಣ ನಿನ್ನ ಸಗಣೀಯ । ಬಳೆದ ಕೈ
ಎಸಳ ಯಾಲಕ್ಕಿ ಗೊನಿನಾತ" ಎನ್ನುವಂಥದ್ದು. ಆ ಕಾಯಕದ ಶ್ರದ್ಧೆ ಪಲಾಯನವಾದಿಯದಲ್ಲ ಬದ್ಧತೆಯ ಪರಮಾವಧಿಯದು. ಅದನ್ನು

"ಕಲ್ಲು ಬಿಡ್ತೀನಂತ ಸಿಟ್ಯಾಕೆ ಸರಸತಿಯೆ
ಕುಕ್ಕೇಲಿ ರಾಗೀ ಬೆಳೆಯಾಲಿ । ತಕ್ಕೊಂಡು
ಮತ್ತೆ ರಾತ್ರೀಗೆ ಬರುತೀನಿ" ಎಂದು ಅಭಿವ್ಯಕ್ತಿಸಿದ್ದಾರೆ.

ರಾಗಿ ಬೀಸುವ ಗರತಿಯೊಬ್ಬಳು ಬೀಸೋ ಕಲ್ಲಿನೊಂದಿಗೆ ಸರಸತಿಯನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾಳೆ. ಅವಳಿಗೆ ಸಿಟ್ಟಾಗಬೇಡೆಂದು ಸಂತೈಸುತ್ತಲೇ "ಕುಕ್ಕೇಲಿ ರಾಗಿ ಬೆಳೆಯಾಲಿ" ಎಂಬ ವರವನ್ನು ಬೇಡುತ್ತಾಳೆ. ಕುಕ್ಕೇಲಿ ರಾಗಿ ಬೆಳೆಯುತ್ತಾ ಹೋದರೆ ಹೇಗೆ ಬೀಸೋಣವೆಂದು ಚಿಂತಿಸಲಿಲ್ಲ. ಅವೆಷ್ಟೇ ಬೆಳೆಯುತ್ತಾ ಹೋದರೂ ಕೊನೆಗೆ "ಆದಾವ ನಮ ಜೋಳ ಉಳಿದಾವ ನಮಹಾಡು" ಎನ್ನುವುದೇ ಅಂತಿಮ ಮಾತಾಗುತ್ತದೆ. ದುಡಿಮೆಯಿಂದ ಹುಟ್ಟಿದ ಹಾಡು ಕಾಯದ ಕಷ್ಟವ ಮರೆಸಿ ಕಾಯಕವನ್ನು ಇಷ್ಟವಾಗುವಂತೆ ಮಾಡುತ್ತಿದ್ದ ಮಾಂತ್ರಿಕ ಶಕ್ತಿಯಾಗಿತ್ತು. ಹಾಗಾಗಿಯೇ ಅಲ್ಲಿ ಕಸ ಹೊಡೆದವನ ಕೈ ಕಸ್ತೂರಿನಾತ ಪಡೆಯುತ್ತೆ. ಕೈ ಕೆಸರಾದರೆ ಬಾಯಿ ಮೊಸರಾಗುತ್ತೆ.

ಹೀಗೆ ದುಡಿದಿದ್ದನ್ನ "ಹಂಚುವುದು" ಅವರ ಮತ್ತೊಂದು ಶ್ರದ್ಧಾಭಾಗ. ಅದೇ ದಾಸೋಹ. ಹಣ್ಣನ್ನು ಹಂಚಿ ತಿನ್ನಬೇಕು. ಹೂವನ್ನು ಹಂಚಿ ಮುಡಿಯಬೇಕು ಎನ್ನುವ ಮಾತಾಗಲೀ ಸುಗ್ಗಿ ಹಬ್ಬದ ಕಣಪೂಜೆ ರಾಶಿಪೂಜೆ ಸಂದರ್ಭಗಳಲ್ಲಿ ಧಾನ್ಯವನ್ನು ಮನೆಗೆ ಹೊಯ್ಯುವ ಮೊದಲು ಮಾಡುವ ದಾನವಾಗಲಿ, ಹೊಲದಲ್ಲಿ ಬುತ್ತಿ ಉಣ್ಣುವ ಮೊದಲು ನಾಲ್ಕೂ ದಿಕ್ಕಿಗೆ ಒಲಿಗ್ಯಾ ಎಂದು ಅನ್ನ ರೊಟ್ಟಿ ಮುದ್ದೆ ಹಂಚುವುದಾಗಲೀ ಅಥವಾ ಸಂಕ್ರಾಂತಿಯ ಎಳ್ಳುಬೆಲ್ಲ, ಯುಗಾದಿಯ ಬೇವುಬೆಲ್ಲ ಹೀಗೆ ನಾನಾ ಕಾರಣಕ್ಕಾಗಿ ನಾನಾ ರೀತಿಯ ಹಂಚುವಿಕೆ ಸಮುದಾಯದ, ಸಮಷ್ಟಿಯ ಹಿತದ ಆಶಯವನ್ನು ಗರ್ಭೀಕರಿಸಿಕೊಂಡಿದೆ.

"ಅಂಟಿಗೆ ಪಂಟಿಗೆ" ಯಲ್ಲಂತೂ ದೀಪಾವಳಿಯ ಬೆಳಕನ್ನು ಹಂಚುತ್ತಾ ಸಾಗುವಾಗ ಅವರು ಹಾಡುವ ರೀತಿ ತಾತ್ವಿಕ ಎತ್ತರಕ್ಕೆ ಸಾಕ್ಷಿಯಾಗಿದೆ.

"ಕಲ್ಲು ಮುಳ್ಳಿದ್ದರೆ ಹುಲ್ಲಂತ ತಿಳಿದೇವು
ಸೊಲ್ಲೇರಿಸಿ ಹಾಡಿ ನಡೆದೇವು- ಭಗವಂತ
ಸುಳ್ಳಾಡೆವು ದಾರಿ ಬಿರುಸಂತ" ಎಂಬಲ್ಲಿ ಹಂಚುವವರ ಅರ್ಹತೆಯನ್ನು ತಿಳಿಸಿದ್ದಾರೆ. ಹಂಚುವವರಿಗೆ, ದಾನ ಮಾಡುವವರಿಗೆ ಯಾವ ಅರ್ಹತೆಯಿದೆ ಎಂಬುದನ್ನು ಗಮನಿಸಬೇಕಾದದ್ದು ತೀರಾ ಅಗತ್ಯ. ಅವರ ಅರ್ಹತೆ ಎಂಥದ್ದೆಂದರೆ ಕಷ್ಟಗಳನ್ನೆಲ್ಲ ಹುಲ್ಲಂತೆ ತಿಳಿದು ತುಳಿಯುವ ಧೀರತೆ. ದನಿ ಎತ್ತಿ ಹಾಡುವ ಸಹೃದಯತೆ.

ಜೀವನದ ದಾರಿ ಕಠಿಣವೆಂದ ಮಾತ್ರಕ್ಕೆ ಎಂದೂ ಸುಳ್ಳಾಡದ ಪ್ರಾಮಾಣಿಕತೆ ಅಂಥ ಜನಪದರು ಈ ಲೋಕದ ಜನರನ್ನು ಪ್ರೀತಿಯಿಂದ ಕೂಗಿ ಕರೆಯುತ್ತಾರೆ.

"ಮಳ್ಳಾಗೆ ಕಲ್ಲಾಗೆ ಬಂದೇವಯ್ಯ
ತಂದೀವಿ ದೀಪಾನ ಕೊಳ್ಳಿರಯ್ಯ
ಕತ್ತಲು ಹಾದ್ಯಾಗೆ ಬಂದೇವಯ್ಯ
ಗುಡ್ಡ ಬೆಟ್ಟವ ಹತ್ತಿ ಬಂದೇವಯ್ಯ
ತಂದೇವಿ ದೀಪಾನ ಕೊಳ್ಳಿರಯ್ಯ"

ಎಂದು ನಡೆದು ಬಂದ ಕಷ್ಟವನ್ನು ಕತ್ತಲಸ್ಥಿತಿಯನ್ನು, ಸಾಹಸದ ಕಥೆಯನ್ನು ಹೇಳುತ್ತ ಬೆಳಕನ್ನು ಹಂಚುತ್ತಾರೆ. ಕತ್ತಲನಾಡಿನಲ್ಲಿ ಹೊಟ್ಟೆ ಬತ್ತಿಸಿಕೊಂಡು ನೆತ್ತಿ ಹೊತ್ತಿಸಿಕೊಂಡು ಬೆಳಕಾಗಬೇಕಾದವರು ಅಗತ್ಯ. ಜನಪದರು ಅಂಥ ಬೆಳಕುಗಳು. ಅವರು ಅದನ್ನು ಹಂಚುತ್ತ ಪಡೆವವರಿಗೆ

"ಬಾಗಿಲು ತೆಗೆದ ಕೈಗೆ ಭಾಗ್ಯದ ಮಳೆ ಬಂದು
ದೀಪ ಕೊಂಡವರಿಗೆ ದೊರೆ ಪದವಿ - ದೊರೆಯಲಿ
ದೀಪ ದೇವರ ಕರುಣಿಸಲಿ" ಎಂದು ಹರಸುತ್ತಾರೆ.

ಇಲ್ಲಿ ಬಾಗಿಲು ತೆಗೆವ ಸಹೃದಯಿ ಕೈಗೆ ಭಾಗ್ಯದ "ಮಳೆ" ಬರಬೇಕು. ಆ ಮಳೆ ಬಂದಲ್ಲಿ ದೊರೆ ಪದವಿ. ಹಾಗಾಗಿ ದೀಪ ಪಡೆದವರಿಗೆ ದೊರೆ ಪದವಿ ದೊರೆಯಲಿ ಎನ್ನುವುದರ ಜೊತೆಗೆ "ದೀಪ"ವು ದೇವರನ್ನು ಕರುಣಿಸಲಿ ಎಂಬ ಮಾತಂತೂ ಅನುಭಾವದ ತುತ್ತತುದಿ. ದೇವರು ದೀಪವನ್ನು ಕರುಣಿಸುವುದಲ್ಲ. ದೀಪವು ದೇವರನ್ನ ಕರುಣಿಸುವ ಕಲ್ಪನೆಯೇ ಪಂಚುವ, ಬೆಳಕನ್ನು ಹಂಚುವ ಈ ಜೀವನ ರೀತಿಯೇ ಎಲ್ಲ ಶಿಷ್ಟ ಜನರ, ನಾಗರಿಕತೆಯ ಶ್ರದ್ಧಾ ಕೇಂದ್ರವಾಗಬೇಕು. ಕತ್ತಲು, ಕಷ್ಟ, ದಾರಿದ್ರ್ಯ ಹಂಚುವ ದುಷ್ಟ ಶಿಷ್ಟರಿಗೆ ಬೆಳಕನ್ನು, ಸುಖವನ್ನು, ಸಮೃದ್ಧಿಯನ್ನು ಹಂಚಬಯಸುವ ಅಶಿಷ್ಟರ ಸುಪುಷ್ಟ ಬುದ್ಧಿಶ್ರದ್ಧೆಯ ಬೇರಾಗಬೇಕು.

ದೇವರು, ರಾಜ, ತಾಯಿ, ಕಾಯಕ, ದಾನ, ದಯೆಗಳ ಜೊತೆಗೆ ಕುಟುಂಬ, ದಾಂಪತ್ಯ, ಮಕ್ಕಳು, ಗೆಳೆತನ, ಪ್ರೀತಿಗಳೂ ನಮ್ಮ ಜನಪದರ ಜೀವನವನ್ನು ಹೆಚ್ಚೆಚ್ಚು ಸಹ್ಯಗೊಳಿಸಿರುವ ಮಾನ್ಯಗೊಳಿಸಿರುವ ಶ್ರದ್ಧಾಕೇಂದ್ರಗಳಾಗಿವೆ.

ಸನ್ಯಾಸಿ ಜಪ ಮರೆಸುವ ಮಕ್ಕಳು

ನಮ್ಮ ಜನಪದರ ಮುತ್ತು, ರತ್ನ, ವಜ್ರ, ವೈಢೂರ್ಯ, ಮಾಣಿಕ್ಯ ಎಲ್ಲವೂ ತಾವು ಹೊತ್ತು ಹೆತ್ತ ಮಕ್ಕಳಾಗಿದ್ದಾರೆ. ಅದನ್ನು "ಅಳುವ ಕಂದನ ತುಟಿಯು ಹವಳದ ಕುಡಿಯಂಗಿ"ದ್ದರೆ, ತೊಟ್ಟಿಲಿದಾಗೊಂದು ತೊಳೆದ ಮುತ್ತಿನ" ಮಗುವನ್ನು ಕಾಣುತ್ತಾರೆ. "ಮಾಣಿಕದಂಥ ಮಗ ಮುಂದ ಮಲಗಿದರೆ ಮಾರಾಯ್ರ ಗೊಡವೆ ನನಗೇನ" ಎಂದು ಹೇಳುವಲ್ಲೆಲ್ಲ ಮಕ್ಕಳೇ ನಮ್ಮ ಆಸ್ತಿ ಎಂಬ ಹಾಗೂ ಆ ಮಕ್ಕಳಿಂದ ಜೀವನೋತ್ಸಾಹವನ್ನು ತುಂಬಿಕೊಳ್ಳುವ ರೀತಿಯೇ ಅನುಕರಣೀಯವಾದದ್ದು.

"ನನ್ನಯ್ಯನಂಥೋರು ಹನ್ನೆರಡು ಮಕ್ಕಳು
ಹೊನ್ನೇಯ ಮರದ ನೆರಳಲಿ । ಆಡುವಾಗ
ಸನ್ಯಾಸಿ ಜಪವ ಮರೆತಾನು" ಎಂಬಲ್ಲಿ ನನ್ನ ಮಕ್ಕಳಷ್ಟೇ ಅಲ್ಲ ನನ್ನಯ್ಯನಂತೋರು ಹನ್ನೆರಡು ಜನ ಆಟವಾಡುವಾಗ ಸನ್ಯಾಸಿ ಜಪವನ್ನೇ ಮರೆತಿದ್ದಾನೆ. ಅಂಥ ಚೆಲುವಿನ ಒಲವಿನ ಮಕ್ಕಳ ಸಾಹಿತ್ಯ ಸಂಗೀತದ ಸಂಸ್ಕಾರ ಪ್ರಾರಂಭವಾಗುವುದೇ ತೊಟ್ಟಿಲಲ್ಲಿ. ಜೋಗುಳದ ಹಾಡಿನೊಂದಿಗೆ. ಆ ಹಾಡು ಕೇಳಿದ ಮಗು ಹಾಲ ಹಂಬಲವ ಮರೆಯುತ್ತದೆ. ಅದಕ್ಕೆ ಜೋಗುಳವೇ ಅತಿಮುದ್ದಾಗುತ್ತದೆ.

"ಜೋಗುಳ ಹಾಡಿದರೆ ಆಗಲೆ ಕೇಳ್ಯಾನು
ಹಾಲ ಹಂಬಲವ ಮರೆತಾನು । ಕಂದಯ್ಗೆ
ಜೋಗುಳದಾಗೆ ಅತಿ ಮುದ್ದು"

ಹೀಗೆ ಜೋಗುಳದ ಮುದ್ದಿನಲ್ಲಿ ಬೆಳೆದ ಮಕ್ಕಳ ಎದೆಯಲ್ಲಿ ಅರಳಿದ ಸಾಹಿತ್ಯವೇ ಜನಪದ ಸಾಹಿತ್ಯ. ಅಂಥ ಜೀವನ ಭಾವನೆಗಳ ಸಾಹಿತ್ಯದ ಹುಟ್ಟಿಗೆ ಕಾರಣವಾದದ್ದು ಆ ಕಂದನ ಮುದ್ದು ಮುಖ. ಮುದ್ದೇ ಜೀವನದ ಎಲ್ಲ ರೋಗಗಳ ನಿವಾರಕ ಮದ್ದು.

ಶ್ರದ್ಧೆಯನ್ನು ಕಳೆದುಕೊಂಡು ಮಾನಸಿಕವಾಗಿ ಅಸ್ವಸ್ಥರಾಗಿರುವ, ಮಾನವೀಯ ಸಂಬಂಧಗಳೆಲ್ಲ ಚೂರು ಚೂರಾಗುತ್ತಿರುವ ಇಂದಿನ ಸಂದರ್ಭದಲ್ಲಿ ನಮ್ಮ ಪರಂಪರೆಯ ದೀಪಸ್ತಂಭಗಳಂತಿರುವ ಪ್ರಜ್ಞಾಪೂರ್ವಕ ಶ್ರದ್ಧಾಕೇಂದ್ರಗಳನ್ನು ಶೋಧಿಸಿಕೊಳ್ಳಬೇಕಾಗಿದೆ. ಆ ರೀತಿ ಜನಪದ ಶ್ರದ್ಧಾಕೇಂದ್ರಗಳನ್ನೇ ತನ್ನ ಚಳುವಳಿಯ ಪ್ರೇರಣಾ ಭಾಗವಾಗಿಸಿಕೊಂಡದ್ದು ವಚನ ಚಳುವಳಿ. ಜನಪದ ಸಾಹಿತ್ಯದ ಶಿಷ್ಟ ಹಾಗೂ ಅತಿ ಸ್ಪಷ್ಟವಾದ ರೂಪವೇ ವಚನ ಚಳುವಳಿ. ಹಾಗಾಗಿಯೇ ಅವು ಕನ್ನಡ ಸಾಹಿತ್ಯ ಚರಿತ್ರೆಯನ್ನು, ಸಂಸ್ಕೃತಿಯ ಚಾರಿತ್ರ್ಯವನ್ನು, ಜೀವನದ ಯಾತ್ರೆಯನ್ನು ರೂಪಿಸುತ್ತಾ ಬಂದಿರುವ ಬೇರು ಮತ್ತು ಪರಿಮಳಗಳಾಗಿವೆ. ಶ್ರದ್ಧೆಯನ್ನು ಕಳೆದುಕೊಂಡ ಬುದ್ಧಿ ಅಪಾಯಕಾರಿ. ಬುದ್ಧಿಯನ್ನು ಕಳೆದುಕೊಂಡ ಶ್ರದ್ಧೆ ಅಪ್ರಯೋಜಕ. ನಮ್ಮಲ್ಲಿಂದು ಬುದ್ಧಿ ಪ್ರಖರಾವಸ್ಥೆಗೆ ತಲುಪಿದೆ. ಆದರೆ ಅದನ್ನು ಮಾನವೀಯಗೊಳಿಸುವ, ಜೀವಪೂರ್ಣವಾಗಿಸುವ ಶ್ರದ್ಧೆಯ ಉಸಿರುಬೇಕು.

ಬೇಲೂರಿನ ಸ್ಥಳನಾಮ ಐತಿಹ್ಯಗಳು

ಸರೋಜ ಎಚ್.ಟಿ.

ಹಾಸನ ಜಿಲ್ಲೆಯ ಆಡಳಿತಕ್ಕೆ ಒಳಪಟ್ಟ ಬೇಲೂರು ಇತಿಹಾಸದಲ್ಲಿ ತನ್ನದೇ ಆದ ವಿಶೇಷತೆಯನ್ನು ಹೊಂದಿದೆ. ಕರ್ನಾಟಕವನ್ನಾಳಿದ ದಕ್ಷ ರಾಜಮನೆತನಗಳಲ್ಲಿ ಒಂದಾದ ಹೊಯ್ಸಳರ ರಾಜಧಾನಿಯಾಗಿ ಮೆರೆದ ಹೆಗ್ಗಳಿಕೆ ಬೇಲೂರಿನದು. ಹೀಗಾಗಿ ಬೇಲೂರಿನ ಸುತ್ತಮುತ್ತ ಹಲವಾರು ಐತಿಹ್ಯಗಳು ನಮಗೆ ಲಭ್ಯವಾಗುತ್ತವೆ.

ಸ್ಥಳನಾಮಗಳು ಮಾನವನ ಹುಟ್ಟಿನೊಂದಿಗೆ ಬೆಳೆದುಕೊಂಡು ಬಂದಿವೆ ಎಂದರೆ ತಪ್ಪಾಗಲಾರದು. ಆದಿಮಾನವ ಅಲೆಮಾರಿ ಜೀವನ ತ್ಯಜಿಸಿ ನೀರು ನೆರಳಿರುವ ಕಡೆ ನೆಲಸಲಾರಂಭಿಸಿದಂಥ ಸಂದರ್ಭದಲ್ಲಿ ಪರಿಸರದಲ್ಲಿ ಸಿಗುತ್ತಿದ್ದ ಸಂಪನ್ಮೂಲಗಳನ್ನೇ ಉಪಯೋಗಿಸಿಕೊಂಡು ಬದುಕುವುದನ್ನು ಕಲಿತ. ಹೀಗಾಗಿ ಮಾನವ ತಾನು ನೆಲಸಿದ ಜಾಗವನ್ನು ಗುರ್ತಿಸಿಕೊಳ್ಳುವ ನಿಟ್ಟಿನಲ್ಲಿ ಒಂದು ಹೆಸರನ್ನು ಇಟ್ಟುಕೊಳ್ಳಲಾರಂಭಿಸಿದನು. ಹೀಗೆ ಇಟ್ಟ ಹೆಸರಿನ ಹಿಂದೆ ಆ ಸ್ಥಳಕ್ಕೆ ಅನ್ವಯವಾಗುವಂಥ ಕೆಲವು ಕಲ್ಪನಾತ್ಮಕ ಕಥೆಗಳನ್ನು ಹುಟ್ಟುಹಾಕಿದ. ಈ ಕಲ್ಪನೆಯ ಕಥೆಯ ಜೊತೆಗೆ ಸತ್ಯಾಂಶಗಳು ಸೇರ್ಪಡೆಯಾಗಿವೆ ಎಂಬುದರಲ್ಲಿ ಅನುಮಾನವಿಲ್ಲ.

'ಒಂದು ಸ್ಥಳ, ವ್ಯಕ್ತಿ ಅಥವಾ ಘಟನೆಯ ಬಗೆಗೆ ವಾಸ್ತವವಾಗಿ ನಡೆಯಿತೆಂದು ಹೇಳುವ ಜನಪದ ಕಥೆಯೇ ಐತಿಹ್ಯ. ಈ ಐತಿಹ್ಯಗಳಲ್ಲಿ ಸತ್ಯವಾಗಿಯೂ ಆ ಘಟನೆ ನಡೆಯಿತೆಂದು ಹೇಳಿದರೂ ಅದರಲ್ಲಿ ಕಲ್ಪನೆ ಹಾಗೂ ಅದ್ಭುತ ಶಕ್ತಿಗಳು ಮೇಳೈಸಿರುವುದನ್ನು ಕಾಣಬಹುದು. ಈ ಐತಿಹ್ಯಗಳಲ್ಲಿ ವ್ಯಕ್ತಿ, ದೇವರು, ಪ್ರಕೃತಿ, ಇತಿಹಾಸ ಮತ್ತು ಜಾನಪದ ಹಿನ್ನೆಲೆಯಲ್ಲಿ ಹುಟ್ಟಿಕೊಂಡಿರುತ್ತವೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಬೇಲೂರು ವ್ಯಾಪ್ತಿಗೆ ಒಳಪಡುವ ಕೆಲವು ಸ್ಥಳನಾಮ ಐತಿಹ್ಯಗಳನ್ನು ಮಾತ್ರ ಇಲ್ಲಿ ಚರ್ಚೆಗೆ ಎತ್ತಿಕೊಳ್ಳಲಾಗಿದೆ.

ಬೇಲೂರಿಗೆ ವೇಲಾಪುರ, ವೇಲೂರು, ಬೇಲಹೂರು, ಬೇಲೂರು ಮೊದಲಾದ ಹೆಸರುಗಳಿರುವುದು. ಕ್ರಿ.ಶ. ೧೧೦೩ ಮತ್ತು ಕ್ರಿ.ಶ. ೧೧೧೭ ಕಾಲದ ಶಾಸನಗಳಿಂದ ತಿಳಿದುಬರುತ್ತದೆ. ಆದರೂ ಇಲ್ಲಿನ ಜನಪದರಲ್ಲಿ ಆ ಊರಿಗೆ ಹೆಸರು ಬರಲು ಕಾರಣವಾದ ಕೆಲವು ಐತಿಹ್ಯಗಳು ನಮಗೆ ಲಭ್ಯವಾಗುತ್ತವೆ. ಆ ಐತಿಹ್ಯಗಳು ಹೀಗಿವೆ.

ಬೇಲೂರು ಮತ್ತು ಚನ್ನಕೇಶವ: ಊರಿಗೆ 'ಬೇಲೂರು' ಎಂತಲೂ ಮತ್ತು ಅಲ್ಲಿಯ ದೇವರಿಗೆ 'ಚನ್ನಕೇಶವ' ಎಂಬ ಹೆಸರು ಬರಲು ಕಾರಣವಾದ ಐತಿಹ್ಯವೊಂದು ಈ ರೀತಿಯಿದೆ.

ಕ್ರಿ.ಶ. ೧೧೧೭ರಲ್ಲಿ ವಿಷ್ಣುವರ್ಧನ ತಲಕಾಡನ್ನು ಗೆದ್ದ ವಿಜಯದ ನೆನಪಿಗಾಗಿ ತನ್ನ ರಾಜಧಾನಿಯಾದ ಬೇಲೂರಿನಲ್ಲಿ ದೇವಾಲಯವೊಂದನ್ನು ಕಟ್ಟುವ ಯೋಚನೆ ಮಾಡಿ, ತನ್ನ ಗುರುಗಳಾದ ರಾಮಾನುಜಾಚಾರ್ಯರಿಗೆ ವಿಷಯ ತಿಳಿಸುತ್ತಾನೆ. ಅದಕ್ಕೆ ಒಪ್ಪಿಗೆಯಿತ್ತ ಗುರುಗಳು ಆದಿಕರ್ನಾಟಕ ಜನರು ವಾಸಿಸುತ್ತಿದ್ದ ಜಾಗದಲ್ಲಿ ದೇವಾಲಯ ನಿರ್ಮಿಸುವಂತೆ ಅಪ್ಪಣೆ ನೀಡುತ್ತಾರೆ. ಅವರ ಆದೇಶದ ಮೇರೆಗೆ ದೇವಾಲಯದ ಕೆಲಸ ಆರಂಭವಾಗುತ್ತದೆ. ತಾವು ವಾಸಿಸುವ ಜಾಗಕ್ಕೆ ಕುತ್ತೊದಗಿತ್ತೆಂದು ಭಾವಿಸಿದ ಆದಿಕರ್ನಾಟಕ ಜನರು ತಮ್ಮ ಜಾತಿಯ ಮುಖಂಡರಾದ 'ವೇಲಾ' ಮತ್ತು 'ಚನ್ನರ' ಗಮನಕ್ಕೆ ಈ ವಿಷಯ ತರುತ್ತಾರೆ. ಆಗ ಜನರೆಲ್ಲ ಒಟ್ಟಾಗಿ ತಮ್ಮ ಮುಖಂಡರ ನೇತೃತ್ವದಲ್ಲಿ ದೇವಾಲಯ ನಿರ್ಮಿಸದಂತೆ ರಾಜನಲ್ಲಿ ಮನವಿ ಮಾಡಿಕೊಳ್ಳುತ್ತಾರೆ. ದೇವಾಲಯ ಕಟ್ಟಲು ಈ ಜಾಗ ಬಿಟ್ಟುಕೊಟ್ಟರೆ ನಿಮ್ಮ ಹೆಸರು ಭೂಮಿಯ ಮೇಲೆ ಶಾಶ್ವತವಾಗಿ ಉಳಿಯುವಂತೆ ಮಾಡುತ್ತೇನೆಂದು ಹೇಳುವುದರ ಮೂಲಕ ರಾಮಾನುಜರು ಅವರ ಮನ ಒಲಿಸುತ್ತಾರೆ. ಅವರ ಮಾತಿಗೆ ಮರುಮಾತಾಡದ ಜನರು ಜಾಗ ತೆರವು ಮಾಡಿಕೊಡುತ್ತಾರೆ. ಹೀಗಾಗಿ ಆ ಜಾತಿಯ ಮುಖಂಡರ ನೆನಪಿಗಾಗಿ ದೇವರಿಗೆ 'ಚನ್ನ'ನ ಹೆಸರಿನಲ್ಲಿ ಚನ್ನಕೇಶವ ಎಂಬುದಾಗಿಯೂ ಅದರ ಸುತ್ತ ನಿರ್ಮಾಣಗೊಂಡ ಊರಿಗೆ 'ವೇಲಾ'ನ ಹೆಸರಿನಲ್ಲಿ 'ವೇಲಾಪುರ' ಎಂಬುದಾಗಿ ನಾಮಕರಣ ಮಾಡುತ್ತಾರೆ. ಕಾಲಾನಂತರದಲ್ಲಿ ಜನರ ಆಡುಭಾಷೆಯಲ್ಲಿ ವೇಲಾಪುರ>ವೇಲೂರು>ಬೇಲೂರು ಹೀಗೆ 'ವ'ಕಾರಕ್ಕೆ ಬದಲಾಗಿ 'ಬ'ಕಾರ ಸೇರಿ 'ಪುರ' ಎಂಬ ಪದದ ಬದಲಿಗೆ 'ಊರು' ಎಂಬ ಪದ ಸೇರಿ 'ಬೇಲೂರು' ಎಂಬ ಹೆಸರೇ ಸ್ಥಿರವಾಗಿ ಉಳಿದುಕೊಂಡಿದೆ.

ಇದು ಸತ್ಯಕ್ಕೆ ಹತ್ತಿರವಾಗಿದ್ದು ಬಹಳ ಗಮನಾರ್ಹ ಐತಿಹ್ಯವಾಗಿದೆ. ಕ್ರಿ.ಶ. ಹನ್ನೆರಡನೆಯ ಶತಮಾನದಲ್ಲಿ ರಾಮಾನುಜಾಚಾರ್ಯರು ಸಾಮಾಜಿಕ ಸುಧಾರಣೆಯ ನೆಪದಲ್ಲಿ ಮತಪ್ರಚಾರ ಮಾಡಿದ್ದು ಇತಿಹಾಸದಿಂದ ತಿಳಿಯುತ್ತದೆ. ವೈಷ್ಣವ ಧರ್ಮವನ್ನು ಹೆಚ್ಚು ಪ್ರಚಾರ ಮಾಡುವ ದೃಷ್ಟಿಯಿಂದ ವಿಷ್ಣುವರ್ಧನನಿಂದ ವಿಷ್ಣುದೇವಾಲಯಗಳನ್ನು ನಿರ್ಮಾಣ ಮಾಡಿಸುವ ಕೆಲಸದಲ್ಲಿ ತೊಡಗಿದರು ಎಂಬುದರಲ್ಲಿ ಎರಡು ಮಾತಿಲ್ಲ. ಇದಕ್ಕೆ ವಿಷ್ಣುವರ್ಧನನೇ ನಿದರ್ಶನವಾಗುತ್ತಾನೆ. ಇಲ್ಲೂ ಕೂಡ ಅವರು ಅದೇ ಕೆಲಸ ಮಾಡಿರುವುದು ಸೂಕ್ಷ್ಮವಾಗಿ ನಮ್ಮ ಗಮನ ಸೆಳೆಯುತ್ತದೆ. ಬೇಲೂರಿನ ಸಂಪದ್ಭರಿತವಾದ ನೆಲದಲ್ಲಿ ವಾಸಿಸುತ್ತಿದ್ದ ಆದಿಕರ್ನಾಟಕ ಜಾತಿ ಜನರನ್ನು ಕುರಿತು ' ನೀವ್ಯಾರು ಕೀಳಲ್ಲ, ನಾವ್ಯಾರು ಮೇಲಲ್ಲ' ಎಲ್ಲರೂ ಸಮಾನರು. ಹಾಗಾಗಿ ನೀವು ಕೂಡ ವೈಷ್ಣವ ಧರ್ಮಕ್ಕೆ ಶರಣಾಗಿ, ದೀಕ್ಷೆ ಪಡೆದುಕೊಂಡು ಶ್ರೀಹರಿಯ ಪರಮಭಕ್ತರಾಗಿ ಎಂಬುದಾಗಿ ಹೇಳುವುದರ ಮೂಲಕ ಆಸೆ ತೋರಿಸಿ ಅವರನ್ನು ಅಲ್ಲಿಂದ ಎತ್ತಂಗಡಿ ಮಾಡಿಸಿ ದೇವಾಲಯ ಕೆಲಸ ಆರಂಭಿಸುತ್ತಾರೆ. ಹೀಗೆ ಅಲ್ಲಿ ನೆಲಸಿದ್ದ ಜನರಿಗೆಲ್ಲ ದೀಕ್ಷೆ ಕೊಟ್ಟು ವೈಷ್ಣವ ಮತಕ್ಕೆ ಶರಣರನ್ನಾಗಿಸಿ ದೇವಾಲಯಕ್ಕೆ ಪ್ರವೇಶ ನೀಡುತ್ತಾರೆ ಎಂಬುದು ಕೂಡ ಸತ್ಯ. ಹಾಗೆಯೇ ದೇವರ ಹೆಸರಿನಲ್ಲಿ ಮತಾಂತರ ಪ್ರಕ್ರಿಯೆ ನಡೆದಿದೆ ಎಂಬುದು ಕೂಡ ಅಷ್ಟೇ ಸತ್ಯ.

ಇಲ್ಲಿ ಗಮನಿಸಬೇಕಾದ ಇನ್ನೊಂದು ಮುಖ್ಯ ಅಂಶವೆಂದರೆ ವಿಷ್ಣುವರ್ಧನ ಮುಖ್ಯವಾಗಿ ಕಟ್ಟಿದ್ದು ವಿಜಯನಾರಾಯಣ ದೇವಾಲಯವನ್ನೇ ಹೊರತು ಚನ್ನಕೇಶವ ದೇವಾಲಯವನ್ನಲ್ಲ. ವಿಜಯದ ಸಂಕೇತವಾಗಿ ಕಟ್ಟಿದ್ದು ವಿಜಯನಾರಾಯಣ ದೇವಾಲಯವನ್ನು. ಹಾಗಾಗಿ ಕೊಟ್ಟ ಮಾತಿಗೆ ತಪ್ಪಬಾರದೆಂಬ ಉದ್ದೇಶದಿಂದ ವಿಜಯನಾರಾಯಣ ಗುಡಿಯ ಬಲಬದಿಯಲ್ಲಿ ಇನ್ನೊಂದು ಗುಡಿ ಕಟ್ಟಿ ಅದಕ್ಕೆ ಚನ್ನಕೇಶವ ದೇವಾಲಯ ಎಂಬುದಾಗಿ ಹೆಸರಿಡುತ್ತಾನೆ. ಈ ಎರಡೂ ದೇವಾಲಯಗಳ ನಿರ್ಮಾಣದ ಕೆಲಸವನ್ನು ಒಂದೇ ಶುಭಗಳಿಗೆಯಲ್ಲಿ ಆರಂಭಿಸಲಾಯಿತು ಎಂಬುದಕ್ಕೆ ನಮಗೆ ಶಾಸನಾಧಾರಗಳು ಸಿಗುತ್ತವೆ.

ಹೀಗೆ ನಿರ್ಮಾಣಗೊಂಡ ದೇವಾಲಯಗಳೆರಡಕ್ಕೂ ಒಂದೇ ಸಮನಾದ ಪೂಜೆಪುರಸ್ಕಾರಗಳು ನಡೆಯುತ್ತಿದ್ದವು. ಆದರೆ, ಹೊಯ್ಸಳರ ಆಳ್ವಿಕೆಯ ನಂತರ ಚನ್ನಕೇಶವನ ಗುಡಿಗೆ ಪೂಜೆಪುರಸ್ಕಾರಗಳು ಸ್ಥಗಿತಗೊಂಡವು. ಮತಭೇದಕ್ಕೆ ಹೆಸರಾದ ವಿಜಯನಗರ ಕಾಲದಲ್ಲಿ ಬ್ರಾಹ್ಮಣ ಪುರೋಹಿತನೊಬ್ಬ ಆದಿಕರ್ನಾಟಕ ಜಾತಿಯವನ ಹೆಸರಿನಲ್ಲಿ ಕಟ್ಟಲ್ಪಟ್ಟ ಮೂರ್ತಿಗೆ ಪೂಜೆ ಸಲ್ಲಿಸಲು ಸಾಧ್ಯವೇ. ಹೀಗಾಗಿ ಚನ್ನಕೇಶವ ಮೂರ್ತಿಯ ಹೊಕ್ಕುಳದಲ್ಲಿ ಮರಳು, ನೀರು, ಕಪ್ಪೆಗಳಿರುವುದಾಗಿಯೂ ಅದು ಪೂಜೆಗೆ ಅನರ್ಹವೆಂದು ಹೇಳಿ ಕಥೆಯೊಂದನ್ನು ಹುಟ್ಟುಹಾಕಿ ಗುಡಿಯ ಬಾಗಿಲಿಗೆ ಬೀಗ ಹಾಕಿ 'ಕಪ್ಪೆ ಚನ್ನಿಗರಾಯ ಗುಡಿ' ಎಂಬುದಾಗಿ ನಾಮಕರಣ ಮಾಡಿಬಿಡುತ್ತಾರೆ.

ಏಕ ಶಿಲಾ ಮೂರ್ತಿಯಿಂದ ಚನ್ನಕೇಶವನ ಹೊಕ್ಕುಳದಲ್ಲಿ ಮರಳು, ನೀರು, ಕಪ್ಪೆ ಸೇರಲು ಸಾಧ್ಯವೇ ಎಂಬುದನ್ನು ವಿವೇಚನೆ ಮಾಡದ ಮೂಢರು ಅದನ್ನು ನಂಬಿದರು. ಹೀಗೆ ಪಟ್ಟಭದ್ರಹಿತಾಸಕ್ತಿಗಳಾದ ಪುರೋಹಿತಶಾಯಿಗಳು ತಾವು ಅಂದುಕೊಂಡದ್ದನ್ನು ಸಾಧಿಸಿಯೇ ಬಿಟ್ಟರು. ಆದರೆ ಈಗ್ಗೆ ಕೆಲವು ವರ್ಷಗಳ ನಂತರ ವರ್ಷಕ್ಕೊಮ್ಮೆ ಅಂದರೆ ಚನ್ನಕೇಶವ ರಥೋತ್ಸವದಂದು ಆ ಗುಡಿಯ ಬಾಗಿಲು ತೆರೆದು ಪೂಜೆ ಸಲ್ಲಿಸಿದರೂ ಉಳಿದ ದಿನಗಳಲ್ಲಿ ಬೀಗಹಾಕಲಾಗಿರುತ್ತದೆ. ಹೀಗಾಗಿ ವಿಜಯನಾರಾಯಣ ಗುಡಿಯನ್ನೇ ಚನ್ನಕೇಶವನ ಗುಡಿಯೆಂದು ತಿಳಿದ ಜನರು ವಿಜಯನಾರಾಯಣನನ್ನೇ ಚನ್ನಕೇಶವನೆಂದು ಕರೆಯುವುದು ವಾಡಿಕೆಯಾಯಿತು. ವೈರುಧ್ಯವೆಂಬಂತೆ ಇಂದು ವಿಜಯನಾರಾಯಣ ಎಂಬ ಹೆಸರು ಗೌಣವಾಗಿ ಚನ್ನಕೇಶವ ಎಂಬ ಹೆಸರೇ ಸ್ಥಿರವಾಗಿ ಉಳಿದುಕೊಂಡು ಬಂದಿದೆ. ಹೀಗಾಗಿ "ತಾನೊಂದು ಬಗೆದರೆ ದೈವವೊಂದು ಬಗೆದಾನು" ಎಂಬ ಮಾತಿನಂತೆ ಯಾವ ದೇವರನ್ನು ಪೂಜೆ ಪುರಸ್ಕಾರಗಳಿಂದ ದೂರ ಇಟ್ಟಿದ್ದರೋ ಆ ದೇವರ ಹೆಸರಿನಲ್ಲಿಯೇ ಇಂದು ಪೂಜೆ ಪುರಸ್ಕಾರ, ರಥೋತ್ಸವಗಳೆಲ್ಲ ನಡೆಯುತ್ತಿರುವುದು ವಿಪರ್ಯಾಸವೇ ಸರಿ. ಹೀಗಾಗಿ ಇಂದಿನ ಚನ್ನಕೇಶವನ ಮೂಲ ಹೆಸರು ವಿಜಯನಾರಾಯಣ ಎಂಬುದು ಹೆಚ್ಚಿನ ಜನರಿಗೆ ತಿಳಿದಿರಲಾರದು. ಮತಭೇದ ಎಂಬುದು ಇತಿಹಾಸವನ್ನೇ ಮರೆಸಿ ಹೊಸ ಇತಿಹಾಸವನ್ನು ಸೃಷ್ಟಿಸಬಲ್ಲದು ಎಂಬುದು ಮೇಲಿನ ಐತಿಹ್ಯದಿಂದ ಸ್ಪಷ್ಟವಾಗುತ್ತದೆ.

'ಬೇಲೂರ' ಎಂಬ ಸ್ಥಳಕ್ಕೆ ಸಂಬಂಧಿಸಿದ ಐತಿಹ್ಯವೊಂದು ಹೀಗಿದೆ. ಒಮ್ಮೆ ವಿಷ್ಣುವರ್ಧನ ತನ್ನ ಸೇವಕನೊಡನೆ ಬೇಟೆಗೆಂದು ಹೋದ ಸಂದರ್ಭದಲ್ಲಿ

ದಣಿವಾರಿಸಿಕೊಳ್ಳುವ ಸಲುವಾಗಿ ಸಮುದ್ರದ ಬಳಿ ಕುಳಿತುಕೊಳ್ಳುತ್ತಾನೆ. ಆಗ ಕುಷ್ಠರೋಗಿಯೊಬ್ಬ ಆ ಸಮುದ್ರದಲ್ಲಿ ಸ್ನಾನ ಮಾಡಿ ರೋಗದಿಂದ ಮುಕ್ತಿ ಪಡೆಯುತ್ತಾನೆ. ಅದನ್ನು ಕಂಡ ರಾಜ ಇದೊಂದು ಪುಣ್ಯಸ್ಥಳವೆಂದು ಭಾವಿಸಿ ದೇವಾಲಯವೊಂದನ್ನು ಕಟ್ಟಲು ನಿರ್ಧರಿಸುತ್ತಾನೆ. ಅಂದು ರಾತ್ರಿ ಚನ್ನಕೇಶವ ವಿಷ್ಣುವರ್ಧನನ ಕನಸಿನಲ್ಲಿ ಕಾಣಿಸಿಕೊಂಡು, ತಾನು ಚಂದ್ರದ್ರೋಣ ಪರ್ವತದಲ್ಲಿರುವುದಾಗಿಯೂ ತನ್ನನ್ನು ಬೇಲೂರಿನಲ್ಲಿ ಪ್ರತಿಷ್ಠಾಪಿಸಬೇಕೆಂದು ಕೇಳಿಕೊಳ್ಳುತ್ತಾನೆ. ಅದರಂತೆ ವಿಷ್ಣುವರ್ಧನನು ರಾಮಾನುಜಾಚಾರ್ಯ ಮತ್ತು ಕೆಲವು ವೈಷ್ಣವರೊಂದಿಗೆ ಬಾಬಾಬುಡನ್‌ಗಿರಿಗೆ ಹೋಗಿ ಅಲ್ಲಿದ್ದ ಋಷಿಗಳ ಮುಖಂಡತ್ವದಲ್ಲಿ ಚನ್ನಕೇಶವನನ್ನು ಅಭಿಷೇಕ ಮಾಡಿಸಿಕೊಂಡು ಬರುತ್ತಾನೆ. ನಂತರ ವಿಶ್ವಕರ್ಮಾಂಶದಲ್ಲಿ ಹುಟ್ಟಿದ ಬಡಗಿಯಿಂದ ಏಳು ದಿನಗಳಲ್ಲಿ ದೇವಾಲಯ ನಿರ್ಮಿಸಿ ಮೂರ್ತಿಯನ್ನು ಅಲ್ಲಿ ಪ್ರತಿಷ್ಠಾಪಿಸುತ್ತಾನೆ. ನಂತರ ಆ ದೇವಾಲಯದ ಸುತ್ತ ನಿರ್ಮಾಣವಾದ ಪಟ್ಟಣವು ಭಗವಂತನ ಐಭೋಗಕ್ಕೂ ಸಕಲಸಂಪತ್ತಿಗೂ ವೇಲೆ (ಗಡಿ) ಯಂತೆ ಕಂಡುಬಂದುದರಿಂದ ಆ ಊರಿಗೆ ವೇಲಾಪುರ ಎಂದು ಹೆಸರಿಟ್ಟರು. ಕ್ರಮೇಣ ಜನರ ಬಾಯಲ್ಲಿ ಬೇಲೂರಾಗಿ ಪರಿವರ್ತನೆ ಹೊಂದಿದೆ ಎಂಬುದು ಇಲ್ಲಿಯ ಜನರ ನಂಬಿಕೆ.

ಮೇಲಿನ ಐತಿಹ್ಯವನ್ನು ಗಮನಿಸಿದಾಗ ಇದೊಂದು ಕಲ್ಪನೆಯ ಕಥೆಯೆಂದೇ ಹೇಳಬಹುದು. ಇಲ್ಲಿ ದೇವರಿಗೆ ಒಂದು ಮೂಲ ನೆಲೆಯನ್ನು ಒದಗಿಸುವ ಪ್ರಯತ್ನವಾಗಿದೆ. ದೇವತೆಗಳ ವಾಸಸ್ಥಳ ಗಿರಿ ಎಂಬುದು ಜನರ ನಂಬಿಕೆ. ಹೀಗಾಗಿ ಇಲ್ಲಿ ಚನ್ನಕೇಶವನನ್ನು ಚಂದ್ರದ್ರೋಣ ಪರ್ವತದಿಂದ ತಂದು ಬೇಲೂರಿನಲ್ಲಿ ಪ್ರತಿಷ್ಠಾಪಿಸಲಾಯಿತು ಎಂಬ ಕಲ್ಪನೆಯನ್ನು ಹುಟ್ಟುಹಾಕಲಾಗಿದೆ. ಅಲ್ಲದೆ ದೇವಾಲಯ ಇರುವ ಜಾಗ ಪುಣ್ಯದ ಹಾಗೂ ಸತ್ಯದ ಸ್ಥಳ ಎಂಬುದನ್ನು ಜನರ ಮನಸ್ಸಿನಲ್ಲಿ ಹುಟ್ಟುಹಾಕುವ ನಿಟ್ಟಿನಲ್ಲಿ ಕುಷ್ಠರೋಗ ನಿವಾರಣೆಯ ದೃಷ್ಟಾಂತ ತಂದಿರುವ ಸಾಧ್ಯತೆಗಳಿವೆ. ಅಂತೆಯೇ ಬಡಗಿಯೊಬ್ಬನು ಏಳು ದಿನಗಳಲ್ಲಿ ದೇವಾಲಯ ನಿರ್ಮಿಸಿದ ಎಂದು ಹೇಳುವಲ್ಲಿ ಶಿಲ್ಪಿಯಲ್ಲಿ ಅಡಗಿರುವ ಶಕ್ತಿ ಯುಕ್ತಿ ಮತ್ತು ಕಲಾಕೌಶಲ್ಯವನ್ನು ಎತ್ತಿ ತೋರುವ ಉದ್ದೇಶವಿದೆ.

ಸ್ಥಳನಾಮಕ್ಕೆ ಸಂಬಂಧಿಸಿದ ಇನ್ನೊಂದು ಐತಿಹ್ಯ ಹೀಗಿದೆ. ಒಮ್ಮೆ ಗರುಡ ತನ್ನ ತಾಯಿಯನ್ನು ಸೆರೆಯಿಂದ ಬಿಡಿಸಿಕೊಂಡು ಬರಲು ಅಮೃತ ಬಿಂದುವನ್ನು ತೆಗೆದುಕೊಂಡು ಹೋಗುತ್ತಿದ್ದಾಗ ಆಕಸ್ಮಿಕವಾಗಿ ಒಂದು ಹನಿ ಅಮೃತ ಬಿದ್ದುದರಿಂದ ಅಲ್ಲಿ ಒಂದು ಸಮುದ್ರ ಉದ್ಭವವಾಯಿತು. ಒಮ್ಮೆ ವಿಷ್ಣುವರ್ಧನನ ಮಗಳಿಗೆ ದೆವ್ವ ಹಿಡಿದಂಥ ಸಂದರ್ಭದಲ್ಲಿ ರಾಮಾನುಜಾಚಾರ್ಯರು ಆ ಸಮುದ್ರದ ನೀರನ್ನು ತರಿಸಿ ಸ್ನಾನ ಮಾಡಿಸಿದ್ದುದರ ಫಲವಾಗಿ ದೆವ್ವ ಬಿಟ್ಟುಹೋಯಿತಂತೆ. ಇದನ್ನು ಕಂಡ ರಾಮಾನುಜರು ಆ ಜಾಗವನ್ನು ಪುಣ್ಯಕ್ಷೇತ್ರವನ್ನಾಗಿ ಮಾಡುವುದಾಗಿ ವಿಷ್ಣುವರ್ಧನನಿಗೆ ಹೇಳುತ್ತಾರೆ. ಕಾಡಿನಿಂದ ಕೂಡಿ ಸಮೃದ್ಧವಾಗಿದ್ದ ಆ ಜಾಗದಲ್ಲಿ ಆದಿಕರ್ನಾಟಕ ಜಾತಿಯವರು ನೆಲಸಿದ್ದರು. ಅವರನ್ನು ಹೆದರಿಸಿ ಬೇರೆಕಡೆಗೆ ಕಳುಹಿಸಿ, ಅಲ್ಲಿ ಚನ್ನಕೇಶವ ದೇವಾಲಯ ನಿರ್ಮಿಸುತ್ತಾರೆ. ಹೀಗಾಗಿ ಕಾಡಿನ ಸೆರಗಿನಲ್ಲಿದ್ದ ಆ ಊರಿಗೆ ವೇಲಾಪುರ ಎಂಬುದಾಗಿ ನಾಮಕರಣ ಮಾಡಲಾಗುತ್ತದೆ.

ಈ ಐತಿಹ್ಯದಲ್ಲೂ ಕೂಡ ಕಾಲ್ಪನಿಕ ಅಂಶಗಳ ಜೊತೆಗೆ ಚಾರಿತ್ರಿಕ ಅಂಶಗಳು ಮೇಳೈಸಿವೆ. ಇಲ್ಲಿಯೂ ಸಹ ಸ್ಥಳದ ಮಹತ್ವವನ್ನು ಹೇಳುವ ಸಲುವಾಗಿಯೇ ಅಮೃತಬಿಂದು ಸಮುದ್ರದ ನೀರಿನಿಂದ ದೆವ್ವ ಬಿಟ್ಟುಹೋಯಿತು ಎಂಬ ದೃಷ್ಟಾಂತ ತರಲಾಗಿದೆ. ಅಷ್ಟಲ್ಲದೆ ವೈಷ್ಣವ ಧರ್ಮದ ಶ್ರೇಷ್ಠತೆಯನ್ನು ಎತ್ತಿಹಿಡಿಯುವ ಕೆಲಸ ಕೂಡ ಇದಾಗಿದೆ. ಇವೆಲ್ಲದರ ಜೊತೆಗೆ ಮೇಲ್ಜಾತಿಯ ಜನರು ಕೆಳಜಾತಿ ಜನರ ಮೇಲೆ ನಡೆಸಿರುವ ದಬ್ಬಾಳಿಕೆ ದೌರ್ಜನ್ಯಗಳು ಕೂಡ ಸೂಕ್ಷ್ಮವಾಗಿ ಗಮನ ಸೆಳೆಯುತ್ತವೆ. ಜಾತಿ, ವರ್ಗಗಳ ಕಿತ್ತಾಟ, ಅಂದಿನಿಂದಲೂ ನಡೆದುಕೊಂಡು ಬಂದಿದೆ ಎಂಬುದಕ್ಕೆ ಈ ಐತಿಹ್ಯ ಸಾಕ್ಷಿಯಾಗಿ ನಿಲ್ಲುತ್ತದೆ. ಇತಿಹಾಸಕ್ಕೆ ಸಂಬಂಧಿಸಿದ ಐತಿಹ್ಯವೊಂದು ಹೀಗಿದೆ. ಸಕಲೇಶಪುರವನ್ನು ಆಳುತ್ತಿದ್ದಂಥ ದುದ್ದರಸ ಮತ್ತು ದಯಸಿಂಹರು ಹಾಲೇಬೇಲೂರನ್ನು ತಮ್ಮ ಆಡಳಿತ ಕೇಂದ್ರಬಿಂದುವನ್ನಾಗಿ ಮಾಡಿಕೊಂಡಿದ್ದರು. ಹೊಯ್ಸಳ ದೊರೆ ಸಳ ಅವರನ್ನು ಸೋಲಿಸಿ, ಅವರ ಆಡಳಿತ ಪ್ರದೇಶವನ್ನೆಲ್ಲ ತನ್ನ ಹಿಡಿತಕ್ಕೆ ತೆಗೆದುಕೊಂಡನು. ಕೆಲವಾರು ವರ್ಷಗಳ ಕಾಲ ಅಲ್ಲಿಯೇ ರಾಜ್ಯಾಡಳಿತ ನಡೆಸಿದನಾದರೂ ಕಾರಣಾಂತರಗಳಿಂದ ತನ್ನ ಆಡಳಿತವನ್ನು ಹಾಲೇಬೇಲೂರಿನಿಂದ ಬೇರೆಡೆಗೆ ಸ್ಥಳಾಂತರಿಸಿದನು. ಈ ಕಾರಣದಿಂದಾಗಿ ಹಾಲೇಬೇಲೂರಿನ ನೆನಪಿಗಾಗಿ ತಾನು ನೆಲೆಸಿರುವ ಜಾಗಕ್ಕೆ 'ಬೇಲೂರು' ಎಂಬುದಾಗಿ ಕರೆದುಕೊಂಡಿದ್ದಲ್ಲದೆ, ದುದ್ದರಸ ಕಟ್ಟಿಸಿದ್ದ ಚನ್ನಕೇಶವ ದೇವಾಲಯದ ನೆನಪಿಗಾಗಿ ಬೇಲೂರಿನಲ್ಲಿ ಚನ್ನಕೇಶವ ದೇವಾಲಯವನ್ನು ಕಟ್ಟಿಸಿದನಂತೆ.

ಮೇಲಿನ ಐತಿಹ್ಯ ಇತಿಹಾಸಕ್ಕೆ ಸಂಬಂಧಿಸಿದ್ದಾದರೂ ಹುರುಳಿಲ್ಲದ್ದಾಗಿದೆ. ಕ್ರಿ.ಶ. ೧೮೦೫ ರ ಸುಮಾರಿನಲ್ಲಿ ಕದಂಬ ವಂಶದ ದುದ್ದರಸ ಮತ್ತು ದಯಸಿಂಹರು ಸಕಲೇಶಪುರವನ್ನು ಆಳುತ್ತಿದ್ದ ಸಂದರ್ಭದಲ್ಲಿ ಬೇಲೂರು ನೃಪಕಾಮನ ಆಳ್ವಿಕೆಗೆ ಒಳಪಟ್ಟಿತ್ತು. ಅಲ್ಲದೆ ವಿಷ್ಣುವರ್ಧನ (ಕ್ರಿ.ಶ. ೧೧೦೪-೧೧೪೧) ಆಡಳಿತಕ್ಕೆ ಬರುವ ವೇಳೆಗಾಗಲೇ ಬೇಲೂರು ಒಳ್ಳೆಯ ಆಡಳಿತ ಕೇಂದ್ರವಾಗಿ ರೂಪುಗೊಂಡಿತ್ತು. ಕಾರಣ ಸಕಲೇಶಪುರ ವಿಷ್ಣುವರ್ಧನನ ಆಡಳಿತಕ್ಕೆ ಒಳಪಟ್ಟಿತ್ತೇ ವಿನಃ ಅದನ್ನು ಆಡಳಿತ ಕೇಂದ್ರವನ್ನಾಗಿ ಮಾಡಿಕೊಂಡಿದ್ದ ಎಂಬ ಉಲ್ಲೇಖಿತಗಳು ಎಲ್ಲೂ ಕಂಡುಬರುವುದಿಲ್ಲ ಮತ್ತು ಬೇಲೂರಿನ ಚನ್ನಕೇಶವ ದೇವಾಲಯವನ್ನು ಕಟ್ಟಿಸಿದವನು ವಿಷ್ಣುವರ್ಧನನೇ ವಿನಃ ಸಳನಲ್ಲ. ಸಕಲೇಶಪುರದ ಚನ್ನಕೇಶವ ದೇವಾಲಯದ ವಾಸ್ತುಶಿಲ್ಪವನ್ನು ಅನುಸರಿಸಿ ಬೇಲೂರಿನ ದೇವಾಲಯ ನಿರ್ಮಿಸಿರಬಹುದೆಂದು ಹೇಳಬಹುದೇ ಹೊರತು ಅದರ ನೆನಪಿಗಾಗಿ ಕಟ್ಟಿಲ್ಲ ಮತ್ತು ಅದರ ಬಗ್ಗೆ ಉಲ್ಲೇಖಗಳು ಕೂಡ ಎಲ್ಲೂ ಲಭ್ಯವಿಲ್ಲ.

ವಿಷ್ಣುಸಮುದ್ರ ಅಥವಾ ಬಿಷ್ಟಮ್ಮನ ಕೆರೆ

ಹೊಯ್ಸಳ ದೊರೆಯಾದ ಬಿಟ್ಟಿದೇವ ಅಥವಾ ವಿಷ್ಣುವರ್ಧನ ಕಟ್ಟಿಸಿದ ಕೆರೆಯೇ ವಿಷ್ಣುಸಮುದ್ರ. ಇದು ಸಾಮಾನ್ಯ ಕೆರೆಗಿಂತ ವಿಸ್ತೀರ್ಣದಲ್ಲಿ ದೊಡ್ಡದಾಗಿರುವುದರಿಂದ ಬಹುಶಃ ಸಮುದ್ರವನ್ನು ನೋಡಿರದ ಜನ ಇದನ್ನೇ ಸಮುದ್ರವೆಂದು ತಿಳಿದಿರಬಹುದು. ಬೇಲೂರು ತಾಲ್ಲೂಕಿನ ಸಿಂಗಾಪುರದ ೧೯೪ನೆಯ ಶಾಸನ ಕ್ರಿ.ಶ. ೧೬೫೫ ನೆಯ ಸಾಲಿಗೆ

ಸೇರಿದ್ದಾಗಿದ್ದು ಇದರಲ್ಲಿ ವಿಷ್ಣುಸಮುದ್ರಕ್ಕೆ ಸಂಬಂಧಿಸಿದ ಉಲ್ಲೇಖಗಳು ಸಿಗುತ್ತವೆ. ಅಲ್ಲದೆ ೧೧೩೩ನೆಯ ಸಾಲಿಗೆ ಸೇರಿದ ೩೪೪ನೆಯ ಬಸ್ತಿಹಳ್ಳಿ ಶಾಸನ ಮತ್ತು ೧೧೩೬ ರ ಅವಧಿಯ ೩೨೪ನೆಯ ಹಳೇಬೀಡಿನ ಶಾಸನಗಳು ಕೂಡ ವಿಷ್ಣುವರ್ಧನನೇ ವಿಷ್ಣುಸಮುದ್ರ ಕಟ್ಟಿಸಿದ ಎಂಬ ವಿಷಯವನ್ನು ಉಲ್ಲೇಖಿಸುತ್ತವೆ. ಹೀಗಾಗಿ ವಿಷ್ಣುವರ್ಧನನೇ ಈ ಕೆರೆ ಕಟ್ಟಿಸಿದವನು ಎಂಬುದು ಮನದಟ್ಟಾಗುತ್ತದೆ. ಇದಕ್ಕೆ ನಿದರ್ಶನವೆಂಬಂತೆ ಕೆರೆಯ ದಂಡೆಯಲ್ಲಿ ಆತನ ಪ್ರತಿಮೆ ಕೂಡ ಇದೆ. ಆದರೂ ಕಾಲಾನಂತರದಲ್ಲಿ ಸಾಮಾನ್ಯರ ಆಡುಭಾಷೆಯಲ್ಲಿ ವಿಷ್ಣುಸಮುದ್ರದ ಬದಲಾಗಿ ಬಿಷ್ಣಮ್ಮನ ಕೆರೆ ಎಂಬುದಾಗಿದೆ. ವಿಷ್ಣುವರ್ಧನ ಎಂಬುದು ಬಿಟ್ಟಿದೇವ ಶಬ್ದದ ಪರ್ಯಾಯ ರೂಪ. ವಿಷ್ಣು>ಬಿಷ್ಣ>ಬಿಟ್ಟ>ಬಿಟ್ಟಿ ಎಂದು ಈ ಶಬ್ದದ ವ್ಯತ್ಯಾಸಗಳನ್ನು ಗುರ್ತಿಸಬಹುದು. ಅಮ್ಮ ಶಬ್ದಕ್ಕೆ ಅಪ್ಪ ಎಂಬ ಅರ್ಥವಿದೆ. 'ನೀನಕ್ಕೆ ನಿನ್ನಮ್ಮನಕ್ಕೆ' ಎಂಬ ಪ್ರಯೋಗ ಗದಾಯುದ್ಧದಲ್ಲಿಯೇ ದೊರೆಯುತ್ತದೆ. ಹಾಗಾಗಿ ಅಮ್ಮ ಪದ ಅಪ್ಪ ಎಂಬ ಅರ್ಥದಲ್ಲಿ ಬಳಕೆ ತಪ್ಪಿದ ಬಳಿಕ ಬಿಷ್ಣಮ್ಮ ಶಬ್ದದಲ್ಲಿಯ ಅಮ್ಮನನ್ನು ಜನಪದರು ಸ್ತ್ರೀವಾಚಕವಾಗಿ ಸ್ವೀಕರಿಸಿದರು. ಹೀಗಾಗಿ ವಿಷ್ಣುಸಮುದ್ರ ಬಿಷ್ಣಮ್ಮನ ಕೆರೆಯಾಗಿದೆ ಎಂಬುದಾಗಿ ವೈ.ಸಿ. ಭಾನುಮತಿಯವರು 'ಜಾನಪದ ಭಿತ್ತಿ' ಎಂಬ ಕೃತಿಯ 'ಬಿಷ್ಣಮ್ಮನ ಕೆರೆ' ಎಂಬ ಲೇಖನದಲ್ಲಿ ವಿವರವಾಗಿ ಅರ್ಥೈಸಿದ್ದಾರೆ. ಅದಕ್ಕೆ ನಾವು ಕೂಡ ಸಮ್ಮತಿಸಬಹುದಾಗಿದೆ. ಆದರೂ ಬಿಷ್ಣಮ್ಮನ ಕೆರೆ ಎಂಬ ಹೆಸರು ಬರಲು ಕಾರಣವಾದ ಐತಿಹ್ಯವೊಂದು ಬೇಲೂರಿನ ಜನಪದರಲ್ಲಿ ಲಭ್ಯವಿದೆ.

ಗೊಟ್ಟರವಳ್ಳಿ ಮತ್ತು ಬಿಟ್ಟರವಳ್ಳಿಗಳೆರಡೂ ಬೇಲೂರಿನ ಪಕ್ಕದಲ್ಲಿರುವ ಗ್ರಾಮಗಳು. ಗೊಟ್ಟರವಳ್ಳಿಯ ಬಿಷ್ಣಮ್ಮನನ್ನು ಬಿಟ್ಟರವಳ್ಳಿಯ ಮಲ್ಲೇಗೌಡರ ಮಗನಿಗೆ ಕೊಟ್ಟು ಮದುವೆ ಮಾಡಲಾಗಿತ್ತು. ಆಗ ಬಿಷ್ಣಮ್ಮನ ಮಾವ ರಾಜನ ಅನುಮತಿಯಂತೆ ಕೆರೆಯೊಂದನ್ನು ಕಟ್ಟಿಸುತ್ತಾನಾದರೂ ನೀರು ಬರುವುದಿಲ್ಲ. ಕೆರೆ ಬಲಿ ಕೇಳುತ್ತದೆ. ಬಿಷ್ಣಮ್ಮನ ಗಂಡ ಘಟ್ಟಕ್ಕೆ ಹೋದ ಸಂದರ್ಭದಲ್ಲಿ ಆಕೆಯನ್ನು ಕೆರೆಗೆ ಬಲಿಕೊಡಲಾಗುತ್ತದೆ. ಈ ಕಾರಣಕ್ಕಾಗಿಯೇ ಆ ಕೆರೆ 'ಬಿಷ್ಣಮ್ಮನ ಕೆರೆ' ಯಾಯಿತು. ಹೀಗೆ ಬಲಿಕೊಟ್ಟ ಕಾರಣಕ್ಕಾಗಿಯೇ ಇಂದಿಗೂ ಕೂಡ ಬಿಟ್ಟರವಳ್ಳಿ ಮತ್ತು ಗೊಟ್ಟರವಳ್ಳಿಯ ನಡುವೆ ಹೆಣ್ಣು ಕೊಟ್ಟುತರುವ ಸಂಪ್ರದಾಯವಿಲ್ಲ.

ಕೆರೆಗೆ ಬಲಿಯಾದ ಹೆಣ್ಣು ಮಗಳನ್ನು ಕುರಿತಂತೆ ಕಥನ ಗೀತೆಯೊಂದು ಲಭ್ಯವಾಗುತ್ತದೆ ಅದರಲ್ಲಿ ವೈ.ಸಿ. ಭಾನುಮತಿಯವರ ಸಂಗ್ರಹದಲ್ಲಿ ಕೆರೆಗೆ ಬಲಿಯಾಗುವ ಹೆಣ್ಣುಮಗಳು ಹೊನ್ನಮ್ಮ ಆದರೆ, ನಾನು ಸಂಗ್ರಹಿಸಿದ ಗೀತೆಯಲ್ಲಿ 'ಬಿಷ್ಣಮ್ಮ' ಎಂಬ ಹೆಸರು ಕಂಡುಬರುತ್ತದೆ. ಹೀಗಾಗಿ ಭಾನುಮತಿಯವರ ಸಂಗ್ರಹದ ಪ್ರಕಾರ ಬಿಟ್ಟರವಳ್ಳಿಯ ಸೊಸೆ ಹೊನ್ನಮ್ಮ ಬಲಿಯಾದ ಕಾರಣ 'ಹೊನ್ನಮ್ಮ' ಎಂಬ ಹೆಸರಿಗೆ ಬದಲಾಗಿ ಬಿಟ್ಟರವಳ್ಳಿ ಎಂಬ ಹೆಸರಿನ 'ಬಿಟ್ಟ' ಎಂಬ ಪದಕ್ಕೆ 'ಅಮ್ಮ' ಎಂಬ ಪರ್ಯಾಯ ಪದ ಸೇರಿ 'ಬಿಟ್ಟಮ್ಮ'>ಬಿಷ್ಣಮ್ಮ ಆಗಿ ರೂಪುಗೊಂಡಿರಬಹುದು ಎಂಬುದಾಗಿ ಕೂಡ ಹೇಳಬಹುದು. ಈ ತರ್ಕಗಳೇನೇ ಇದ್ದರೂ ಒಟ್ಟಾರೆ ಇಲ್ಲಿ ಕೆರೆ ಕಟ್ಟಿಸಿದ ವ್ಯಕ್ತಿಗಿಂತ, ಕೆರೆಗೆ ಬಲಿಯಾದ ಹೆಣ್ಣುಮಗಳು ಮುಖ್ಯವಾಗಿದ್ದಾಳೆ. ಹೀಗಾಗಿ ಇಲ್ಲಿ ರಾಜನ ಹೆಸರು ಗೌಣವಾಗಿ ಬಲಿಯಾದ ಬಿಷ್ಣಮ್ಮನ ಹೆಸರೇ ಜನಪದರ ಬಾಯಲ್ಲಿ ಶಾಶ್ವತವಾಗಿ ಉಳಿದುಕೊಂಡಿದೆ.

ಕೆರೆಗೆ ಬಲಿಯಾದ ಬಿಷ್ಟಮ್ಮಳ ಹೆಸರಿನಲ್ಲಿ ಆ ಕೆರೆ ಏರಿಯ ಮೇಲೆ ಗುಡಿಯೊಂದನ್ನು ಕಟ್ಟಲಾಗಿದೆ. ಆಕೆ ಸತ್ಯದ ದೇವತೆಯಾಗಿದ್ದಳಂತೆ. ಬದುಕಿದ್ದಾಗ ಹೇಗೋ ಹಾಗೆಯೇ ಸತ್ತನಂತರವೂ ಬಡ ಬಗ್ಗರಿಗೆ ಉಪಕಾರಿಯಾಗಿದ್ದಳಂತೆ ಎಂಬುದಕ್ಕೆ ಐತಿಹ್ಯವೊಂದು ಹೀಗಿದೆ. ಆಕೆ ಪ್ರತಿನಿತ್ಯ ಆ ಏರಿಯ ಮೇಲೆ ತಿರುಗಾಡುವ ಜನರ ಜೊತೆ ಮಾತಾಡುತ್ತಿದ್ದಳಂತೆ. ಮದುವೆ ಮುಂತಾದ ಸಂದರ್ಭದಲ್ಲಿ ಒಡವೆ ವಸ್ತ್ರಗಳನ್ನು ನೀಡುವುದರ ಮೂಲಕ ಬಡವರಿಗೆ ದೀನಬಂಧುವಾಗಿದ್ದಳಂತೆ. ಕುಡುಕನೊಬ್ಬ ಕುಡಿದು ಕೆರೆಯ ಏರಿಮೇಲೆ ಹೋಗುವಾಗ ಒಂದು ದಿನ 'ಬಿಷ್ಟಮ್ಮ' ಎಂಬುದಾಗಿ ಕರೆಯುತ್ತಾನೆ. ಅವನ ಕರೆಗೆ ಪ್ರತಿಯಾಗಿ ಬಿಷ್ಟಮ್ಮ 'ಏನಪ್ಪ' ಎಂದು ಪ್ರತಿಕ್ರಿಯಿಸಿದಳು. ಆಗ ಕುಡಿದ ಅಮಲಿನಲ್ಲಿದ್ದ ಕುಡುಕ 'ನಿನ್ನ ಸೊಲ್ಲು ಇನ್ನೂ ಅಡಗಲಿಲ್ಲವೆ' ಎಂದನಂತೆ. ಕೋಪಗೊಂಡ ಬಿಷ್ಟಮ್ಮ ಅವನಿಗೆ ಕಲ್ಲಾಗುವಂತೆ ಶಾಪ ನೀಡಿ ಅಂದಿನಿಂದ ತಾನು ದಾರಿಹೋಕರ ಜೊತೆಗಿನ ಮಾತು ನಿಲ್ಲಿಸಿದಳಂತೆ. ಇಂದಿಗೂ ಕುಡುಕನದೆಂದು ಹೇಳುವ ಮಾನವನ ಆಕೃತಿಯನ್ನು ಹೋಲುವ ಕಲ್ಲೊಂದು ಬಿಷ್ಟಮ್ಮನ ಕೆರೆ ಏರಿಯ ಮೇಲಿದೆ.

ಹೀಗಾಗಿ ಊರಿನ ಹಿತಕ್ಕಾಗಿ ತನ್ನ ಜೀವನವನ್ನೇ ತ್ಯಾಗ ಮಾಡಿದ ಹೆಣ್ಣುಮಗಳನ್ನು ನೆನಪಿಸಿಕೊಂಡು ಆಕೆಯ ಹೆಸರು ಭೂಮಿಯ ಮೇಲೆ ಶಾಶ್ವತವಾಗಿ ಉಳಿಯಬೇಕೆಂಬ ದೃಷ್ಟಿಯಿಂದ ಆಕೆ ಜೀವಂತವಾಗಿದ್ದಾಗ ಇದ್ದಂಥ ಗುಣಗಳನ್ನು, ಸತ್ತನಂತರವೂ ಆರೋಪಿಸಿ ಆಕೆಯನ್ನು ದೈವದೆತ್ತರಕ್ಕೆ ಏರಿಸಿರುವುದು ಜನಪದರ ದೊಡ್ಡಗುಣ.

ವಿಷ್ಣು ಸಮುದ್ರಕ್ಕೆ ಸಂಬಂಧಿಸಿದ ಇನ್ನೊಂದು ಐತಿಹ್ಯ ಹೀಗಿದೆ : ಹೊಯ್ಸಳ ದೊರೆಯಾದ ನರಸಿಂಹ ಬಲ್ಲಾಳನು ತನ್ನ ಮಗನಾದ ವಿಷ್ಣುವರ್ಧನ ಅಥವಾ ಬಿಟ್ಟಿದೇವನ ಹೆಸರಿನಲ್ಲಿ ಮಂತ್ರಿಯಾದ ಪದ್ಮರಸನ ನೇತೃತ್ವದಲ್ಲಿ ಕೆರೆ ಕಟ್ಟಲು ಆರಂಭಿಸುತ್ತಾನೆ. ಕೆರೆ ಕಟ್ಟುವ ಖರ್ಚಿಗಾಗಿ ಹನ್ನೆರಡು ಸಾವಿರ ಹೊನ್ನುಗಳನ್ನು ಪದ್ಮರಸನಿಗೆ ಕೊಡುತ್ತಾನೆ. ಆಗ ಶಿವನು ಪದ್ಮರಸನ ನಿಷ್ಠೆ ಮತ್ತು ಪ್ರಾಮಾಣಿಕತೆಯನ್ನು ಪರೀಕ್ಷಿಸುವ ಸಲುವಾಗಿ ಜಂಗಮರೂಪದಲ್ಲಿ ಬಂದು ಹೊನ್ನುಗಳನ್ನು ಕೇಳಿ ಪಡೆಯುತ್ತಾನೆ. ಸೇವಕನ ಮೂಲಕ ರಾಜನಿಗೆ ವಿಷಯ ತಿಳಿಯುತ್ತದೆ. ಶಿವನ ಧ್ಯಾನ ಮಾಡುತ್ತ ಬಂದ ಪದ್ಮರಸ ರಾಜನನ್ನು ಕೆರೆ ನೋಡಲು ಕರೆದೊಯ್ಯುತ್ತಾನೆ. ಅವರು ಆ ಜಾಗ ತಲುಪುವಷ್ಟರಲ್ಲಿ ಕೆರೆ ನಿರ್ಮಾಣವಾಗಿ ನೀರು ತುಂಬಿ ತುಳುಕುತ್ತಿರುತ್ತದೆ. ಹೀಗೆ ಶಿವನ ಬಿಟ್ಟಿ ದುಡುಮೆಯಿಂದ ಕಟ್ಟಿದ ಕೆರೆಯಾದ್ದರಿಂದ ಬಿಟ್ಟಿಸಮುದ್ರವಾಯಿತು ಎಂಬ ಐತಿಹ್ಯ ಪದ್ಮರಸನ ಪದ್ಮರಾಜ ಪುರಾಣದಲ್ಲಿ ದೊರೆಯುತ್ತದೆ ಎಂಬುದಾಗಿ ವೈ.ಸಿ. ಭಾನುಮತಿಯವರು 'ಬೇಲೂರು ಬಿಷ್ಟಮ್ಮನ ಕೆರೆ' ಎಂಬ ಲೇಖನದಲ್ಲಿ ಉಲ್ಲೇಖಿಸಿದ್ದಾರೆ. ಒಟ್ಟಾರೆ ಈ ಕಥೆಯು ವಾಸ್ತವಕ್ಕೆ ದೂರವಾಗಿದ್ದು ಪದ್ಮರಸನನ್ನು ಶಿವನ ಪರಮಭಕ್ತನನ್ನಾಗಿ ಮಾಡುವ ಮತ್ತು ವೀರಶೈವ ಧರ್ಮ ಪ್ರಸಾರಕ್ಕೆ ಹೆಚ್ಚಿನ ಒತ್ತು ನೀಡುತ್ತದೆ. ಅಲ್ಲದೆ ಕೆರೆಯನ್ನು ನಿರ್ಮಿಸಿದ ಕೀರ್ತಿ ಪದ್ಮರಸನಿಗೆ ಸಲ್ಲುವಂತೆ ಮಾಡುವ ಹುನ್ನಾರ ಐತಿಹ್ಯದಲ್ಲಿದೆ.

ಕಳಸನ ಕೆರೆ : ಬೇಲೂರಿನಿಂದ ಗೆಂಡೆಹಳ್ಳಿಗೆ ಹೋಗುವ ಮಾರ್ಗಮಧ್ಯದಲ್ಲಿರುವ ಕಳಸನ ಕೆರೆಯು ಚನ್ನಕೇಶವ ದೇವಾಲಯದಿಂದ ಸುಮಾರು ಅರ್ಧ ಕಿಲೋಮೀಟರ್ ದೂರದಲ್ಲಿದೆ. ಈ ಕೆರೆಗೆ ಕಳಸನ ಕೆರೆ ಎಂಬ ಹೆಸರು ಬರಲು ಕಾರಣವಾದ ಐತಿಹ್ಯ ಹೀಗಿದೆ.

ತುಮಕೂರು ಜಿಲ್ಲೆಯ ಗೌಡನೊಬ್ಬನಿಗೆ ಏಳು ಜನ ಹೆಣ್ಣು ಮಕ್ಕಳಿದ್ದರು. ಎಲ್ಲರಿಗೂ ಮದುವೆಯಾಗಿತ್ತು. ಆದರೆ ಕಿರಿಯ ಮಗಳಿಗೆ ಮಾತ್ರ ಮದುವೆಯಾಗಿರಲಿಲ್ಲ. ಆ ಕುಟುಂಬದವರು ಪ್ರತಿ ವರ್ಷ ಗಾಡಿ ಕಟ್ಟಿಕೊಂಡು ಚನ್ನಕೇಶವವನ ಜಾತ್ರೆಗೆ ಬಂದು ಹೋಗುತ್ತಿದ್ದರು. ಒಮ್ಮೆ ಗೌಡನ ಮಗಳು ತನಗೆ ವರ್ಷ ತುಂಬುವುದರೊಳಗೆ ಮದುವೆಯಾದರೆ ಹುಟ್ಟುವ ಮೊದಲ ಮಗುವನ್ನು ರಥದ ಚಕ್ರಕ್ಕೆ ಹರಕೆ ಕೊಡುವುದಾಗಿ ಒಪ್ಪಿಕೊಳ್ಳುತ್ತಾಳೆ. ಹರಕೆಯಂತೆ ವರ್ಷ ತುಂಬುವುದರೊಳಗೆ ಮದುವೆಯಾಗಿ ಮಗು ಕೂಡ ಹುಟ್ಟುತ್ತದೆ. ಆಕೆ ಹರಕೆ ತೀರಿಸುವ ಸಲುವಾಗಿ ಮಗು ಸಮೇತ ಜಾತ್ರೆಗೆ ಬರುತ್ತಾಳೆ. ರಥದ ಚಕ್ರಕ್ಕೆ ಮಗುವನ್ನು ಕೊಡಲು ಆಕೆಯ ಮನಸ್ಸು ಒಪ್ಪುವುದಿಲ್ಲ. ಹರಕೆ ಒಪ್ಪಿಸದಿದ್ದರೆ ಮುಂದೆ ಕಷ್ಟಗಳು ಸಂಭವಿಸಬಹುದೆಂಬ ಭಯದಲ್ಲಿ ಮಗುವನ್ನು ಬಾಳೆ ಎಲೆಯಲ್ಲಿ ಮುಚ್ಚಿ ರಥ ಹರಿಯುವ ಜಾಗದಲ್ಲಿ ಇಡುತ್ತಾಳೆ. ದೂರದಲ್ಲಿ ಬರುತ್ತಿದ್ದ ರಥವು ಮಗುವಿನ ಬಳಿಗೆ ಬಂದ ಕೂಡಲೇ ನಾಲ್ಕೈದು ಅಡಿ ಎತ್ತರಕ್ಕೆ ಹಾರಿ ಹತ್ತಿರದಲ್ಲಿದ್ದ ಕೆರೆಗೆ ಹೋಗಿ ಬೀಳುತ್ತದೆ. ಹೀಗಾಗಿ ರಥದ ಮೇಲಿದ್ದ ಕಳಸ ಕೆಸರಿನಲ್ಲಿ ಹೂತುಹೋಗುತ್ತದೆ. ಆ ಕಾರಣಕ್ಕಾಗಿಯೇ ಆ ಕೆರೆಗೆ 'ಕಳಸನಕೆರೆ' ಎಂಬ ಹೆಸರು ಬಂತು ಎಂದು ಹೇಳಲಾಗುತ್ತದೆ. ಆದರೂ ಚನ್ನಕೇಶವ ದೇವಾಲಯದ ಗೋಪುರದ ಮೇಲಿರುವ ಕಳಸದ ಪ್ರತಿಬಿಂಬ ಈ ಕೆರೆಯಲ್ಲಿ ಕಾಣುತ್ತದೆಯಂತೆ. ಆ ಕಾರಣಕ್ಕಾಗಿಯೂ 'ಕಳಸನಕೆರೆ' ಎಂಬ ಹೆಸರಾಯಿತೆಂಬ ನಂಬಿಕೆಯಿದೆ.

ಮೇಲಿನ ಐತಿಹ್ಯವನ್ನು ಗಮನಿಸಿದಾಗ ದೇವರು ಮತ್ತು ಜನಪದರ ನಡುವಿನ ನಂಬಿಕೆ ಹಾಗೂ ಸಂಬಂಧವನ್ನು ಪ್ರತಿಬಿಂಬಿಸುತ್ತದೆ. ಜನಪದರು ತಮ್ಮ ಒಳಿತಿಗಾಗಿ ತಾವು ಒಪ್ಪಿಕೊಂಡ ಹರಕೆ ಎಷ್ಟೇ ಕಷ್ಟವಾದರೂ ಸರಿ ಆಡಿದ ಮಾತಿಗೆ ತಪ್ಪದೆ ನುಡಿದಂತೆ ನಡೆದುಕೊಳ್ಳಬಯಸುತ್ತಾರೆ. ದೇವರು ನಂಬಿದವರ ಕೈಬಿಡಲಾರ ಎಂಬುದು ಅವರ ತತ್ವ. ದೇವರನ್ನು ನಂಬಿದರೆ ಮೋಸ ಮಾಡಲಾರ ಎಂಬ ಕಲ್ಪನೆಯ ಹಿನ್ನೆಲೆಯಲ್ಲಿ ಈ ಐತಿಹ್ಯ ಹುಟ್ಟಿಕೊಂಡಿದೆ ಎಂದು ಹೇಳಬಹುದಾದರೂ ಕಾರಣಾಂತರಗಳಿಂದ ಕಳಸ ಆ ಕೆರೆಯಲ್ಲಿ ಹೂತುಹೋಗಿರಬಹುದು. ಆ ಕಾರಣಕ್ಕಾಗಿಯೇ ಆ ಹೆಸರು ಬಂದಿರಬಹುದು.

ಶಂಕರ ದೇವರ ಪೇಟೆ : ಶಂಕರಲಿಂಗ ದೇವರು ನೆಲಸಿರುವ ಊರೇ ಶಂಕರ ದೇವರ ಪೇಟೆ. ವಿಷ್ಣುವರ್ಧನನು ತಲಕಾಡನ್ನು ಗೆದ್ದ ನೆನಪಿಗಾಗಿ ಕ್ರಿ.ಶ. ೧೧೧೭ರಲ್ಲಿ ಬೇಲೂರಿನಲ್ಲಿ ಪಂಚಲಿಂಗ ದೇವಾಲಯಗಳನ್ನು ಕಟ್ಟಿಸಿದನು. ಆ ಪಂಚಲಿಂಗ ದೇವಾಲಯಗಳಲ್ಲಿ ಶಂಕರಲಿಂಗ ಕೂಡ ಒಂದು. ಆ ದೇವಾಲಯದ ಸುತ್ತ ನಿರ್ಮಾಣಗೊಂಡ ಊರೇ ಶಂಕರದೇವರ ಪೇಟೆಯಾದರೂ ಜನಪದ ಐತಿಹ್ಯವೊಂದು ಹೀಗಿದೆ.

ಈಗ ಚನ್ನಕೇಶವ ದೇವಾಲಯ ಇರುವ ಜಾಗದಲ್ಲಿ ಶಂಕರಲಿಂಗ ದೇವರು ವಾಸವಾಗಿದ್ದನಂತೆ. ಮುಳ್ಳಯ್ಯನ ಗಿರಿಯಿಂದ ಬೇಲೂರಿಗೆ ಬಂದ ಚನ್ನಕೇಶವನಿಗೆ ನಿಲ್ಲಲು ನೆಲೆ ಇರಲಿಲ್ಲ. ಆಗ ಶಂಕರಲಿಂಗನ ಬಳಿಗೆ ಹೋಗಿ ತನ್ನ ಶಂಕು ಜಾಗಟೆ ಇಟ್ಟುಕೊಳ್ಳಲು ಸ್ವಲ್ಪ ಜಾಗ ಕೊಡೆಂದು ಕೇಳಿದನಂತೆ. ಚನ್ನಕೇಶವನ ಕುತಂತ್ರವನ್ನರಿಯದ ಶಂಕರಲಿಂಗ ಶಂಕು ಜಾಗಟೆ ಇಟ್ಟುಕೊಳ್ಳಲು ಜಾಗ ಕೊಡುತ್ತಾನೆ. ಜಾಗ ಸಿಕ್ಕ ನಂತರ ತಾನು ನೆಲಸಲು

ಇದೇ ಸರಿಯಾದ ಜಾಗವೆಂದು ತಿಳಿದ ಚನ್ನಕೇಶವ ದಿನದಿನಕ್ಕೂ ಸ್ವಲ್ಪಸ್ವಲ್ಪವೇ ಜಾಗ ಆಕ್ರಮಿಸತೊಡಗಿದ. ಜೊತೆಗೆ ಶಂಕರಲಿಂಗನಿಗೆ ಕಿರಿ ಕಿರಿ ಉಂಟುಮಾಡತೊಡಗಿದ. ಇದರಿಂದ ಬೇಸತ್ತ ಶಂಕರಲಿಂಗ ಇವನ ಸಹವಾಸವೇ ಬೇಡವೆಂದು ಊರಿನಿಂದ ಹೊರಗೆ ಹೋಗಿ ನೆಲಸಿದನಂತೆ. ಆತ ನೆಲಸಿದ ಜಾಗದಲ್ಲಿ ನಿರ್ಮಾಣಗೊಂಡ ಊರೇ ಶಂಕರದೇವರ ಪೇಟೆ.

ಈ ಐತಿಹ್ಯವನ್ನು ಗಮನಿಸಿದಾಗ ಚನ್ನಕೇಶವ ಹೊರಗಿನಿಂದ ಬಂದವನೆಂದು ಶಂಕರಲಿಂಗ ಸ್ಥಳೀಯದವನು ಎಂದು ಹೇಳುವ ಉದ್ದೇಶ ಅಡಗಿದ್ದರೂ ಶಂಕರಲಿಂಗ ಗುಡಿ ಊರಿನಿಂದ ಹೊರಗಿರುವ ಕಾರಣಕ್ಕಾಗಿ ಈ ಐತಿಹ್ಯ ಜನ್ಮ ತಾಳಿರಬೇಕು.

ಸನ್ಯಾಸಿಹಳ್ಳಿ : ಇದು ವಿಷ್ಣು ಸಮುದ್ರದಿಂದ ಒಂದೆರಡು ಕಿಲೋಮೀಟರ್ ದೂರದಲ್ಲಿರುವ ಹಳ್ಳಿ. ಹಿಂದೆ ಕುಷ್ಠರೋಗಿಯೊಬ್ಬ ಮನೆಯವರ ತಾತ್ಸಾರಕ್ಕೆ ಒಳಗಾಗಿ ಊರಿನಿಂದ ಹೊರಬಂದು ವಿಷ್ಣುಸಮುದ್ರದ ದಂಡೆಯಲ್ಲಿದ್ದ ಕಾಡಿನ ನಡುವೆ ವಾಸವಾಗಿದ್ದನಂತೆ. ವಯಸ್ಸಾದ ನಂತರ ಆ ವ್ಯಕ್ತಿ ಅಲ್ಲೇ ಕೊನೆಯುಸಿರೆಳೆಯುತ್ತಾನೆ. ಹೀಗಾಗಿ ಒಂಟಿಯಾಗಿದ್ದ ರೋಗಿಯನ್ನು ಜನ ಸನ್ಯಾಸಿಯೆಂದು ಭಾವಿಸುತ್ತಾರೆ. ಹೀಗಾಗಿ ಆ ವ್ಯಕ್ತಿ ವಾಸಿಸುತ್ತಿದ್ದ ಜಾಗದಲ್ಲಿ ನಂತರ ಜನರು ವಾಸಿಸಲಾರಂಭಿಸಿದ ಕಾರಣದಿಂದ ಈ ಹೆಸರು ಬಂದಿರಬಹುದು.

ಕರಗಡ : ಇದು ಬೇಲೂರಿನಿಂದ ಸುಮಾರು ಐದು ಕಿ.ಮೀ. ದೂರದಲ್ಲಿದೆ. ಕರಗಡದಲ್ಲಿ ನೆಲೆಸಿರುವ ಲಕ್ಷ್ಮೀದೇವಿ ಮತ್ತು ಬೇಲೂರಿನ ಚನ್ನಕೇಶವ ಇಬ್ಬರೂ ಅಣ್ಣಾತಂಗಿಯರಂತೆ. ಇವರಿಬ್ಬರೂ ಬಾಬಾಬುಡನ್‌ಗಿರಿಯಿಂದ ಚಿಕ್ಕಮಗಳೂರು ಮಾರ್ಗವಾಗಿ ಬೇಲೂರಿಗೆ ಬರುತ್ತಿದ್ದಾಗ ಮಾರ್ಗಮಧ್ಯದಲ್ಲಿ ಲಕ್ಷ್ಮಿಯ ಕೈನಲ್ಲಿದ್ದ ಕಡಗ ಕಳೆದುಹೋಗುತ್ತದೆ. ಅದನ್ನು ಹುಡುಕುತ್ತ ಲಕ್ಷ್ಮೀದೇವಿ ಅಲ್ಲೇ ನೆಲಸಿದಳಂತೆ. ಲಕ್ಷ್ಮೀದೇವಿಯ 'ಕರಕಡಗ' ಕಳೆದುಹೋದುದರಿಂದ ಆ ಊರಿಗೆ 'ಕರಕಡಗ' ಎಂದು ಹೆಸರಾಯಿತಾದರೂ ಕ್ರಮೇಣ ಉಚ್ಚಾರಣೆಯ ದೋಷದಿಂದಾಗಿ ಜನರ ಬಾಯಲ್ಲಿ 'ಕರಗಡ' ಎಂದಾಯಿತು. ಇಲ್ಲಿ 'ಕ'ಕಾರ ಗೌಣವಾಗಿ 'ಡ' ಮತ್ತು 'ಗ' ಅಕ್ಷರಗಳ ಸ್ಥಾನಪಲ್ಲಟವಾಗಿರುವುದನ್ನು ಗಮನಿಸಬಹುದು.

ಮನುಷ್ಯನಿಗೆ ಆಭರಣಗಳಿರುವಂತೆ ದೇವತೆಗಳಿಗೂ ಆಭರಣಗಳಿಂದ ಅಲಂಕಾರ ಮಾಡಿ ಆನಂದಿಸುವುದು ಜನರ ಸ್ವಭಾವ. ಹಾಗಾಗಿ ಇಲ್ಲಿ ಲಕ್ಷ್ಮೀದೇವಿಯ ಆಭರಣಗಳಲ್ಲಿ ಒಂದಾದ 'ಕರಕಡಗ' ಕಳೆದುಹೋಗಿರಬಹುದು. ಈ ಹಿನ್ನೆಲೆಯಲ್ಲಿ ಆ ಊರಿಗೆ 'ಕರಗಡ' ಎಂಬ ಹೆಸರು ಬಂದಿರಬಹುದಾದರೂ ಚನ್ನಕೇಶವ ಮತ್ತು ಲಕ್ಷ್ಮೀದೇವಿಗೆ ಸಹೋದರ ಸಂಬಂಧ ಕಲ್ಪಿಸುವ ಉದ್ದೇಶವಾಗಿರಬಹುದು.

ಹೀಗೆ ಐತಿಹಾಸಿಕ ಮಹತ್ವ ಪಡೆದಿರುವ ಬೇಲೂರಿನಲ್ಲಿ ಸಾಕಷ್ಟು ಸ್ಥಳ ಪುರಾವೆಗಳು ದೊರೆಯುವ-ಕಾರಣ ಇತಿಹಾಸವನ್ನು ತಿಳಿಯುವುದರ ಜೊತೆಗೆ ಅಂದಿನ ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ತಿಳಿಯಲು ಅನುಕೂಲವಾಗುತ್ತದೆ. ಒಟ್ಟಾರೆಯಾಗಿ ಈ ರೀತಿಯ ಸ್ಥಳನಾಮ ಐತಿಹ್ಯಗಳ ಅಧ್ಯಯನದಿಂದ ಮತಭೇದದ

ಕಾಲಘಟ್ಟದಲ್ಲಿ ರಾಜಕೀಯ ಗರ್ಭದೊಳಗೆ ಹುದುಗಿಹೋದ ಮಹತ್ವದ ಕೆಲವು ವಿಷಯಗಳನ್ನು ಬೆಳಕಿಗೆ ತರಬಹುದಾಗಿದೆ.

ಪರಾಮರ್ಶನ ಗ್ರಂಥಗಳು

೧ ಅನಂತಾಚಾರ್ಯ, ಬೇಲೂರು ಹಳೇಬೀಡುಗಳ ಕೈಪಿಡಿ, ೧೯೫೬, ಶ್ರೀ ಗೋ. ಕುಲಕರ್ಣಿ, ಸಾಧನ ಮುದ್ರಣಾಲಯ, ಧಾರವಾಡ

೨ ಭಾನುಮತಿ ವೈ.ಸಿ., ಜಾನಪದ ಭಿತ್ತಿ, ೧೯೯೯, ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಶಿವರಾಂಪೇಟೆ, ಮೈಸೂರು

೩ ಮಳಲಿ ವಸಂತಕುಮಾರ್, ಹೊಯ್ಸಳ ಸಂಪದ, ೧೯೯೬, ಶ್ರೀ ಶಕ್ತಿ ಎಲೆಕ್ಟ್ರಿಕ್ ಪ್ರೆಸ್, ಜಯನಗರ, ಮೈಸೂರು.

೪ ರಾಜಗೋಪಾಲ್ ಟಿ.ಎನ್., ಬೇಲೂರು, ೧೯೮೩, ಎಚ್.ಎಸ್. ಎನ್. ರಾವ್, ಐಬಿಎಚ್ ಪ್ರಕಾಶನ ಪ್ರಿಂಟರಿ, ಬೆಂಗಳೂರು

೫ ಶ್ರೀಕಂಠಶಾಸ್ತ್ರಿ ಎಸ್., ಹೊಯ್ಸಳ ವಾಸ್ತುಶಿಲ್ಪ, ೧೯೬೫, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಕನ್ನಡ ವ್ಯಾಕರಣ ಕ್ಷೇತ್ರಕ್ಕೆ ಪ್ರಾಚೀನ ಕನ್ನಡ ವೈಯಾಕರಣರ ಕೊಡುಗೆಗಳು

ಡಾ. ಬಿ.ಕೆ. ಸುವರ್ಣಾದೇವಿ

ಕನ್ನಡದಲ್ಲಿ ನಾಗವರ್ಮ, ಕೇಶಿರಾಜ ಮತ್ತು ಭಟ್ಟಾಕಳಂಕರನ್ನು ಪ್ರಾಚೀನ ಕನ್ನಡ ವೈಯಾಕರಣ ಮುನಿತ್ರಯರು ಎಂದು ಪರಿಗಣಿಸಿಕೊಳ್ಳಲಾಗುತ್ತಿದೆ. ಕನ್ನಡ ವ್ಯಾಕರಣ ಕ್ಷೇತ್ರಕ್ಕೆ ಈ ಮುನಿತ್ರಯರ ಕೊಡುಗೆ ಅಮೂಲ್ಯವಾದದ್ದು, ಅಪೂರ್ವವಾದದ್ದು. ಇವರ ಕೊಡುಗೆಯನ್ನು ಪರಿಚಯ ಮಾಡಿಕೊಡುವುದು ಪ್ರಸ್ತುತ ಲೇಖನದ ಮುಖ್ಯ ಉದ್ದೇಶ. ನಾಗವರ್ಮನ ಕರ್ಣಾಟಕ ಭಾಷಾಭೂಷಣ ಮತ್ತು ಕಾವ್ಯಾವಲೋಕನ, ಕೇಶಿರಾಜನ ಶಬ್ದಮಣಿದರ್ಪಣ, ಭಟ್ಟಾಕಳಂಕನ ಕರ್ಣಾಟಕ ಶಬ್ದಾನುಶಾಸನ ಇವು ಪ್ರಾಚೀನ ಕನ್ನಡದ ಅಮೂಲ್ಯವಾದ ವ್ಯಾಕರಣ ಗ್ರಂಥಗಳು.

ನಾಗವರ್ಮನು ಕ್ರಿ.ಶ. ೧೦೪೨ರಲ್ಲಿ ಕನ್ನಡ ಭಾಷೆಯನ್ನು ಶಾಸ್ತ್ರೀಯವಾಗಿ ವಿವೇಚಿಸಿ 'ಕರ್ನಾಟಕ ಭಾಷಾಭೂಷಣ' ಎಂಬ ಕನ್ನಡ ವ್ಯಾಕರಣವನ್ನು ಸಂಸ್ಕೃತದಲ್ಲಿ ಬರೆದನು. ಇದು ಕನ್ನಡ ಭಾಷೆಯ ಸ್ವರೂಪವನ್ನು ಶಾಸ್ತ್ರೀಯವಾಗಿ ತಿಳಿಸುವ ಮೊತ್ತಮೊದಲ ಗ್ರಂಥ. ಇದರ ಜೊತೆಗೆ ನಾಗವರ್ಮನು ಕಾವ್ಯಾವಲೋಕನ ಮತ್ತು ಅಭಿಧಾನ ವಸ್ತುಕೋಶ ಎಂಬ ಗ್ರಂಥವನ್ನು ರಚಿಸಿದ್ದನು. ನಾಗವರ್ಮನ ಕಾವ್ಯಾವಲೋಕನ ಮುಖ್ಯವಾಗಿ ಆಲಂಕಾರಿಕ ಗ್ರಂಥ. ಇದರಲ್ಲಿ ಕವಿರಾಜಮಾರ್ಗದಂತೆ ಅದರ ಆದಿಯಲ್ಲಿ ಶಬ್ದಸ್ಮೃತಿ ಎಂಬ ಅಧ್ಯಾಯವಿದೆ. ಇದರಲ್ಲಿ ಕನ್ನಡದ ವ್ಯಾಕರಣವನ್ನು ಪರಿಚಯ ಮಾಡಿಕೊಡಲಾಗಿದೆ. ಒಂದು ಭಾಷೆಯ ಸಾಹಿತ್ಯದ ಅಧ್ಯಯನಕ್ಕೆ ಭಾಷೆಯ ಜ್ಞಾನ ಅವಶ್ಯಕ ಎಂದು ಭಾವಿಸಿದ ನಾಗವರ್ಮನು ಕನ್ನಡ ತಿಳಿಯದವರಿಗೆ ಕನ್ನಡ ಭಾಷೆಯ ಅರಿವಾಗಲೆಂಬ ಉದ್ದೇಶದಿಂದ ಕರ್ಣಾಟಕ ಭಾಷಾ ಭೂಷಣ ಎಂಬ ವ್ಯಾಕರಣವನ್ನು ಸಂಸ್ಕೃತದಲ್ಲಿ ಬರೆದನು. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಸಂಸ್ಕೃತ ಶಬ್ದಗಳು ಹೇರಳವಾಗಿ ದೊರೆಯುತ್ತಿದ್ದ ಕಾರಣದಿಂದ ಅವುಗಳ ಅರ್ಥವನ್ನು ಕನ್ನಡದಲ್ಲಿ ಸ್ಪಷ್ಟಪಡಿಸಲು ಅಭಿಧಾನ ವಸ್ತುಕೋಶ ಎಂಬ ಗ್ರಂಥವನ್ನು ನಾಗವರ್ಮನು ರಚಿಸಿದನು. ಇವುಗಳ ಜೊತೆಗೆ ನಾಗವರ್ಮನು ಛಂದಶಾಸ್ತ್ರಕ್ಕೆ ಸಂಬಂಧಿಸಿದ ಗ್ರಂಥವೊಂದನ್ನು ಬರೆದಿದ್ದನು ಎಂದು ಕೆಲವರ ಅಭಿಪ್ರಾಯ. ಆದರೆ ಅದು ಇನ್ನೂ ದೊರೆತಿಲ್ಲ.

ನಾಗವರ್ಮ ಎಂಬಾತನ ಹೆಸರಿನಲ್ಲಿ ಇಲ್ಲಿಯವರೆಗೆ ಕರ್ಣಾಟಕ ಕಾದಂಬರಿ,

ಛಂದೋಂಬುಧಿ (ಛಂದಸ್ಸು), ಕಾವ್ಯಾವಲೋಕನ (ಕಾವ್ಯಲಕ್ಷಣ), ಛಂದೋವಿಚಿತಿ (ಛಂದಸ್ಸು), ಅಭಿಧಾನ ವಸ್ತುಕೋಶ (ನಿಘಂಟು), ಕರ್ನಾಟಕ ಭಾಷಾ ಭೂಷಣ (ವ್ಯಾಕರಣ), ಅಭಿಧಾನರತ್ನ ಮಾಲಾ (ಟೀಕು), ಚಂದ್ರಚೂಡಾಮಣಿ ಶತಕ (ಅದ್ವೈತವೇದಾಂತ) ಎಂಬ ಎಂಟು ಗ್ರಂಥಗಳು ದೊರೆಯುತ್ತವೆ. ಇವುಗಳಲ್ಲಿ ಎರಡು ಗ್ರಂಥಗಳನ್ನು ನಾಗವರ್ಮನು ಕ್ರಿ.ಶ. ೯೦೦ರಲ್ಲಿ ಬರೆದನೆಂದು ಕವಿಚರಿತೆಕಾರರು ಹೇಳಿದ್ದಾರೆ. ಈ ಕಾದಂಬರಿಯ ನಾಗವರ್ಮನೇ ಬೇರೆ, ಛಂದೋಂಬುಧಿ ರಚಿಸಿದ ನಾಗವರ್ಮನೇ ಬೇರೆ. ಈ ವಿಚಾರದ ಬಗ್ಗೆ ಖಚಿತವಾದ ಯಾವ ಆಧಾರಗಳು ದೊರೆಯುವುದಿಲ್ಲ. ಕಾವ್ಯಾವಲೋಕನ ಬರೆದ ನಾಗವರ್ಮನೇ ಛಂದೋವಿಚಿತಿ, ಅಲಂಕೃತಿ, ಅಭಿಧಾನ ವಸ್ತುಕೋಶ ಎಂಬ ಕೃತಿಗಳನ್ನು ರಚಿಸಿದವನೇ ಇರಬೇಕೆಂದು ಕೆಲವರ ಅಭಿಪ್ರಾಯ. ಇವುಗಳಲ್ಲಿ ಛಂದೋವಿಚಿತಿ ಎಂಬ ಗ್ರಂಥ ದೊರೆತಿಲ್ಲ. ಅಲಂಕೃತಿ ದೊರೆತಿದೆ. ಕಾವ್ಯಾವಲೋಕನ, ಕರ್ನಾಟಕ ಭಾಷಾಭೂಷಣ ಎಂಬ ಗ್ರಂಥಗಳಲ್ಲಿ ಜಿನಸ್ತುತಿ ಇದೆ. ಕರ್ನಾಟಕ ಶಬ್ದಸೂತ್ರಗಳ ಕೃತಿ ಈ ನಾಗವರ್ಮನಿಂದಲೇ ರಚಿತವಾಗಿರಬೇಕೆಂದು ಹಲವರ ಅಭಿಪ್ರಾಯ. ಇದೇ ನಾಗವರ್ಮನಿಂದಲೇ ಕರ್ನಾಟಕ ಭಾಷಾಭೂಷಣ ಮತ್ತು ಕಾವ್ಯಾವಲೋಕನ ಗ್ರಂಥಗಳು ರಚಿತವಾಗಿರಬೇಕು. ಜನ್ನನ ಒಂದು ಪದ್ಯದ ಆಧಾರದ ಮೇಲೆ ಇವನ ಕಾಲವನ್ನು ಸುಮಾರು ಕ್ರಿ.ಶ. ೧೧೪೫ ಎಂದು ಊಹಿಸಲಾಗಿದ್ದಿತು. ಆತನ ವರ್ಧಮಾನ ಪುರಾಣ ದೊರೆತ ನಂತರ ಆತನ ಕಾಲ ಸುಮಾರು ೧೦೪೨ ಎಂದು ಗುರುತಿಸಿಕೊಳ್ಳಲಾಯಿತು.

ಕರ್ನಾಟಕ ಭಾಷಾಭೂಷಣ ಎಂಬ ಗ್ರಂಥವನ್ನು ರಚಿಸಿದವನು ಎರಡನೆಯ ನಾಗವರ್ಮನೆಂದು ಕೆಲವರು ಅಭಿಪ್ರಾಯ ವ್ಯಕ್ತಪಡಿಸಿದ್ದರೆ, ಮತ್ತೆ ಕೆಲವರು ಇದನ್ನು ರಚಿಸಿದವನು ಮೂರನೆಯ ನಾಗವರ್ಮನೇ ಇರಬೇಕೆಂದು ಊಹಿಸಿದ್ದಾರೆ. ಈತನ ಕಾಲ ಸುಮಾರು ೧೨ನೆಯ ಶತಮಾನ ಎನ್ನುವವರು ಇದ್ದಾರೆ. ಭಾಷಾಭೂಷಣದ ಕರ್ತೃ ಎರಡನೆಯ ನಾಗವರ್ಮನಿಗಿಂತ ಭಿನ್ನನೂ ಆದ ಹಾಗೂ ಜೈನನೂ ಆದ ಮೂರನೆಯ ನಾಗವರ್ಮನೇ ವಿನಃ ಬೇರೆಯಲ್ಲ. ಇದನ್ನು ಶಬ್ದಸ್ಮೃತಿ ಮತ್ತು ಭಾಷಾಭೂಷಣ ವ್ಯಾಕರಣಗಳ ಭಾಷೆಯ ಸ್ವರೂಪದ ತುಲನೆಯಿಂದ ಕೆಲವರು ಸ್ಪಷ್ಟಪಡಿಸಲು ಪ್ರಯತ್ನ ಮಾಡಿದ್ದಾರೆ. ಈ ದಿಸೆಯಲ್ಲಿ ಸಾಕಷ್ಟು ಚರ್ಚೆಗಳು ನಡೆದು ಬೇರೆ ಬೇರೆ ಅಭಿಪ್ರಾಯಗಳು ಹೊರಬಂದಿವೆ.

ಶಬ್ದಸ್ಮೃತಿ ಮತ್ತು ಭಾಷಾಭೂಷಣ ಎಂಬ ಗ್ರಂಥಗಳನ್ನು ರಚಿಸಿದವನು ಒಬ್ಬನೇ ನಾಗವರ್ಮನಲ್ಲ. ಅವರು ಬೇರೆ ಬೇರೆ ನಾಗವರ್ಮರು. ಆ ಗ್ರಂಥಗಳಲ್ಲಿ ಕಂಡುಬರುವ ವ್ಯಾಕರಣಾಂಶಗಳ ವ್ಯತ್ಯಾಸದಿಂದ ಊಹಿಸಲು ಸಾಧ್ಯವಿದೆ ಎಂದು ಕೆಲವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆದರೆ ಇದಕ್ಕೆ ಖಚಿತವಾದ ಯಾವ ಆಧಾರಗಳು ದೊರೆಯುವುದಿಲ್ಲ. ಈ ಎರಡು ಕೃತಿಗಳನ್ನು ರಚಿಸಿದವನು ಒಬ್ಬನೇ ನಾಗವರ್ಮ ಎಂಬ ವಿಚಾರ ಸರ್ವಸಮ್ಮತವಾದ ನಿಲುವಿಗೆ ಬರಲು ಆ ಎರಡು ಗ್ರಂಥಗಳಲ್ಲಿ ಕಂಡುಬರುವ ವ್ಯಾಕರಣಾಂಶಗಳ ವ್ಯತ್ಯಾಸ ಬಾಧಕವಾಗಲಾರದು. ಬೇರೆ ಬೇರೆ ಉದ್ದೇಶಗಳಿಗಾಗಿ ರಚಿತವಾದ ಈ ಗ್ರಂಥಗಳು ಸ್ವರೂಪದಲ್ಲಿ ಹೆಚ್ಚು ಕಡಿಮೆ ಕಾಣಿಸಿಕೊಂಡರೂ ಶಬ್ದಸ್ಮೃತಿ ಕಾವ್ಯಾವಲೋಕನದ ಒಂದು ಅಧ್ಯಾಯ ಮಾತ್ರ. ಇದು ಸ್ವತಂತ್ರವಾದ ಕೃತಿಯಲ್ಲ.

ಭಾಷಾಭೂಷಣ ಸಂಸ್ಕೃತದಲ್ಲಿ ರಚಿತವಾಗಿದೆ. ಇದರ ಕೆಲವು ವಿಚಾರಗಳು ಸಂಸ್ಕೃತದ ಕಾತಂತ್ರ ವ್ಯಾಕರಣವನ್ನು ಅನುಸರಿಸಿದೆ. ವರ್ಧಮಾನ ಪುರಾಣದ ಕೆಲವು ಪದ್ಯಗಳು ಕಾವ್ಯಾವಲೋಕನದ ಒಂದು ಪದ್ಯ ಅಭಿಧಾನ ವಸ್ತುಕೋಶದಲ್ಲಿ ಕಾಣಿಸಿಕೊಳ್ಳುವುದರಿಂದ ಈ ಎರಡು ಕೃತಿಗಳು ಆ ವರ್ಧಮಾನ ಪುರಾಣ ರಚಿತವಾದ ಮೇಲೆಯೇ ರಚಿತವಾಗಿರಬೇಕೆಂದು ಊಹಿಸಲು ಸಾಧ್ಯವಿದೆ.

ನಾಗವರ್ಮನು ಭಾಷಾಭೂಷಣ ಎಂಬ ಗ್ರಂಥವನ್ನು ರಚಿಸಿದ ಮೇಲೆಯೇ ತನ್ನ ಕಾವ್ಯಾವಲೋಕನ ಮತ್ತು ಅಭಿಧಾನ ವಸ್ತುಕೋಶವನ್ನು ರಚಿಸಿರಬೇಕು. ಶಬ್ದಸ್ಮೃತಿಯಲ್ಲಿ ಹೇಳಿರುವ ವಿಚಾರಗಳನ್ನು ಭಾಷಾಭೂಷಣದಲ್ಲಿ ಇನ್ನೂ ವಿಸ್ತಾರವಾಗಿ ಹೇಳಲಾಗಿದೆ. ಭಾಷಾಭೂಷಣದಲ್ಲಿ ವಿಸ್ತಾರವಾಗಿ ಹೇಳಿರುವ ವಿಚಾರಗಳನ್ನು ಶಬ್ದಸ್ಮೃತಿಯಲ್ಲಿ ಸಂಕ್ಷಿಪ್ತವಾಗಿ ಹೇಳಿರಬೇಕು. ಪರಿಸ್ಥಿತಿ ಹೀಗಿರುವಾಗ ಆ ಎರಡು ಕೃತಿಗಳು ಬೇರೆ ಬೇರೆ ನಾಗವರ್ಮರಿಂದ ರಚಿತವಾಗಿರಬೇಕು ಎಂದು ಹೇಳುವುದು ಸಾಧುವಾದುದಲ್ಲ.

ಕನ್ನಡ ವ್ಯಾಕರಣ ಚರಿತ್ರೆಯಲ್ಲಿ ನಾಗವರ್ಮನ 'ಕರ್ನಾಟಕ ಭಾಷಾಭೂಷಣ' ಎಂಬ ವ್ಯಾಕರಣ ಗ್ರಂಥವೇ ಮೊತ್ತಮೊದಲನೆಯದು. ಈ ಕನ್ನಡ ವ್ಯಾಕರಣ ಸಂಸ್ಕೃತದಲ್ಲಿ ರಚಿತವಾಗಿದ್ದರೂ ಇದರಲ್ಲಿ ಕನ್ನಡ ವ್ಯಾಕರಣಕ್ಕೆ ಸಂಬಂಧಿಸಿದ ಎಲ್ಲ ವಿಚಾರಗಳನ್ನು ೨೮೯ ಸೂತ್ರಗಳಲ್ಲಿ ಹತ್ತು ಪರಿಚ್ಛೇದಗಳಲ್ಲಿ ವಿವರಿಸಿಕೊಳ್ಳಲಾಗಿದೆ. ಇದು ಸಂಸ್ಕೃತದ ಸೂತ್ರ ಮತ್ತು ವೃತ್ತಿಗಳ ಮಾದರಿಯಲ್ಲಿ ರಚಿತವಾಗಿದೆ. ಆದರೆ ಇದರಲ್ಲಿ ಕೊಟ್ಟಿರುವ ಕನ್ನಡದ ಉದಾಹರಣೆಗಳು ಸ್ವತಃ ನಾಗವರ್ಮನವೇ ಆದರೂ ಇದರ ಕನ್ನಡದಲ್ಲಿರುವ ಟೀಕು ಬೇರೆ ಯಾರೋ ಬರೆದದ್ದು ಇರಬೇಕು.

ಆಗಿನ ಕಾಲದಲ್ಲಿ ಸಂಸ್ಕೃತ ಸಮಸ್ತ ಭರತಖಂಡದ ಸಂಪರ್ಕಭಾಷೆಯಾಗಿದ್ದಿತು. ದೇಶೀಯ ಪಂಡಿತರು ಇತರ ಭಾಷೆಗಳಲ್ಲಿ ಸಾಹಿತ್ಯ ರಚನೆಯಾಗುವ ಹೊತ್ತಿಗೆ ಸಂಸ್ಕೃತದಲ್ಲಿ ವಿಪುಲವಾದ ಸಾಹಿತ್ಯ ಕೃಷಿ ನಡೆದಿದ್ದಿತು. ಸಮಂತಭದ್ರ, ಪೂಜ್ಯಪಾದ, ಜಿನಸೇನ, ಗುಣಭದ್ರ, ಶಾಕಟಾಯನ, ವೀರಸೇನ, ವಾದಿರಾಜ ಮುಂತಾದವರು ಕನ್ನಡಿಗರು. ಆದರೂ ಇವರೆಲ್ಲರೂ ಸಂಸ್ಕೃತದಲ್ಲಿಯೇ ಗ್ರಂಥ ರಚನೆ ಮಾಡಿದ್ದರು. ಪಂಪ, ರನ್ನ, ಜನ್ನ, ಪೊನ್ನ ಮುಂತಾದ ಪ್ರಾಚೀನ ಕನ್ನಡದ ಕವಿಗಳು ಕೂಡ ಉಭಯ ಭಾಷಾಪಂಡಿತರಾಗಿದ್ದರು. ೧೭ನೆಯ ಶತಮಾನದಲ್ಲಿ ಭಟ್ಟಾಕಳಂಕನು ಸಂಸ್ಕೃತದ ಜಗತ್ತಿಗೆ ಕನ್ನಡದ ಪ್ರತಿಷ್ಠೆಯನ್ನು ಎತ್ತಿತೋರಿಸುವ ಉದ್ದೇಶದಿಂದ ನಾಗವರ್ಮನಂತೆ ಈತನು ಸಂಸ್ಕೃತದಲ್ಲಿಯೇ ಕನ್ನಡ ವ್ಯಾಕರಣವನ್ನು ರಚಿಸಿದನು. ಈ ಪರಿಸ್ಥಿತಿಯೇ ನಾಗವರ್ಮನ ಕಾಲದಲ್ಲಿಯೂ ಇದ್ದಿತೆಂದು ಕಾಣುತ್ತದೆ. ಕನ್ನಡ ಬಾರದವರಿಗೆ ಕನ್ನಡ ಭಾಷೆಯ ಸ್ವರೂಪವನ್ನು ಅದರ ಮಹತ್ವವನ್ನು ಪರಿಚಯ ಮಾಡಿಕೊಡುವುದು ಇವರ ಮುಖ್ಯ ಉದ್ದೇಶವಾಗಿದ್ದ ಕಾರಣ ಕನ್ನಡ ವ್ಯಾಕರಣವನ್ನು ಸಂಸ್ಕೃತದಲ್ಲಿ ರಚಿಸಿದರು ಎಂದು ತೋರುತ್ತದೆ. ಈ ಉದ್ದೇಶವನ್ನು ನಾಗವರ್ಮನು ತನ್ನ ಯಾವ ಕಾವ್ಯದಲ್ಲಿಯೂ ಹೇಳಿಕೊಂಡಿಲ್ಲ.

ಕಾವ್ಯಾವಲೋಕನ ಪೂರ್ಣವಾಗಿ ಒಂದು ಆಲಂಕಾರಿಕ ಗ್ರಂಥವಾದರೂ ಇದರಲ್ಲಿ ವ್ಯಾಕರಣ ವಿಚಾರಗಳನ್ನು ಹೇಳಲಾಗಿದೆ. ಶಬ್ದಸ್ಮೃತಿ ಈ ಕಾವ್ಯಾವಲೋಕನದ ಪ್ರಥಮ

ಅಧ್ಯಾಯ. ಸಂಸ್ಕೃತದಲ್ಲಿ ಭಾಮಹ ಮತ್ತು ವಾಮನರು ತಮ್ಮ ಅಲಂಕಾರ ಗ್ರಂಥಗಳ ಅಂತ್ಯದಲ್ಲಿ ಇಲ್ಲವೇ ಆದಿಯಲ್ಲಿ ಕೆಲವು ವ್ಯಾಕರಣ ವಿಚಾರಗಳನ್ನು ಹೇಳಿರುವಂತೆ, ಕವಿರಾಜ ಮಾರ್ಗದಲ್ಲಿ ಶ್ರೀ ವಿಜಯನು ವ್ಯಾಕರಣ ದೋಷಗಳನ್ನು ವಿವರವಾಗಿ ಹೇಳಿರುವಂತೆ ನಾಗವರ್ಮನು ತನ್ನ ಕಾವ್ಯಾವಲೋಕನದಲ್ಲಿ ಇದೇ ಸಂಪ್ರದಾಯವನ್ನು ಮುಂದುವರಿಸಿದ್ದಾನೆ. ಮಲೆಯಾಳಂ ಭಾಷೆಯ "ಲೀಲಾತಿಲಕಂ" ಎಂಬ ಗ್ರಂಥದಲ್ಲಿ ಇದೇ ಸಂಪ್ರದಾಯವನ್ನು ಅನುಸರಿಸಲಾಗಿದೆ. ನಾಗವರ್ಮ ಈ ಎಲ್ಲ ಕೃತಿಗಳಿಂದ ತನ್ನ ಗ್ರಂಥದ ರಚನೆಗೆ ಸ್ಫೂರ್ತಿ ಪಡೆದಿದ್ದನು ಎಂಬುದು ಇದರಿಂದ ವ್ಯಕ್ತವಾಗುತ್ತದೆ. ಲೀಲಾತಿಲಕಂನ ಸೂತ್ರಗಳು ಸಂಸ್ಕೃತದಲ್ಲಿವೆ. ಇವು ಭಾಷಾಭೂಷಣದ ಮಾದರಿಯಲ್ಲಿಯೇ ರಚಿತವಾಗಿವೆ. ನಾಗವರ್ಮನು ಉಪಯೋಗಿಸಿರುವ ಸಮಾನಾಕ್ಷರ, ಸಂಧ್ಯಕ್ಷರ, ನಾಮಸಂಜ್ಞೆ ಮುಂತಾದವುಗಳನ್ನು ಕಾತಂತ್ರ ಮತ್ತು ಸಾರಸ್ವತ ವ್ಯಾಕರಣಗಳಿಂದ ಪಡೆದಿದ್ದಾನೆ. ಈ ವಿಚಾರದಲ್ಲಿ ಕೇಶಿರಾಜನು ನಾಗವರ್ಮನನ್ನೇ ಅನುಸರಿಸಿದ್ದಾನೆ. ಶಬ್ದಸ್ಮೃತಿ ಮತ್ತು ಭಾಷಾಭೂಷಣಗಳಲ್ಲಿ ವ್ಯಾಕರಣ ವಿಚಾರಗಳು ಏಕಪ್ರಕಾರವಾಗಿವೆ. ಆದರೆ ಭಾಷಾಭೂಷಣದಲ್ಲಿ ಅವ್ಯಯ ಮತ್ತು ನಿಪಾತಗಳನ್ನು ಕುರಿತ ಪ್ರಕರಣಗಳು ವಿಶೇಷವಾಗಿವೆ. ಶಬ್ದಸ್ಮೃತಿಯಲ್ಲಿ ವಿಭಕ್ತಿಕಾರಕ ವಿಧಾನಗಳನ್ನು ನಾಮ ಪ್ರಕರಣದಲ್ಲಿಯೇ ಹೇಳಲಾಗಿದೆಯಾದರೂ ಭಾಷಾಭೂಷಣದಲ್ಲಿ ಇವುಗಳನ್ನು ಬೇರೆ ಬೇರೆ ಪ್ರಕರಣಗಳಲ್ಲಿ ಹೇಳಲಾಗಿದೆ. ನಾಗವರ್ಮನು ಭಾಷಾಭೂಷಣದಲ್ಲಿ ವಿಭಕ್ತಿ ಮತ್ತು ಕಾರಕಗಳನ್ನು ಬಹುಮಟ್ಟಿಗೆ ಪಾಣಿನಿಯನ್ನು ಅನುಸರಿಸಿರುವಂತೆ ಕಂಡುಬರುತ್ತದೆ. ನಾಗವರ್ಮನು ಎಷ್ಟೋ ವ್ಯಾಕರಣ ವಿಚಾರಗಳನ್ನು ಪಾಣಿನಿಯ ಅಷ್ಟಾಧ್ಯಾಯಿಯಿಂದ ಪಡೆದುಕೊಂಡಿದ್ದಾನೆ. ವಿಭಕ್ತಿ ಪಲ್ಲಟವನ್ನು ಕನ್ನಡ ಭಾಷೆಯ ಜಾಯಮಾನಕ್ಕೆ ತಕ್ಕಂತೆ ಹೇಳಿರುವುದು ನಾಗವರ್ಮನ ಸ್ವತಂತ್ರ ದೃಷ್ಟಿಯನ್ನು ತೋರಿಸುತ್ತದೆ. ಕೇಶಿರಾಜನು ಈ ವಿಚಾರಗಳನ್ನು ತನ್ನ ವ್ಯಾಕರಣ ಗ್ರಂಥದಲ್ಲಿ ಇನ್ನೂ ವಿಸ್ತಾರವಾಗಿ ಹೇಳಿದ್ದಾನೆ.

ಕೇಶಿರಾಜನು 'ಶಬ್ದಮಣಿದರ್ಪಣ' ಎಂಬ ಕನ್ನಡ ವ್ಯಾಕಾರಣ ಗ್ರಂಥವನ್ನು ಕ್ರಿ. ಶ. ೧೨೬೦ರಲ್ಲಿ ಬರೆದನು. ಹಳಗನ್ನಡದ ವ್ಯಾಕರಣ ಗ್ರಂಥಗಳಲ್ಲಿ ಈ ಕೇಶಿರಾಜನ ಶಬ್ದಮಣಿದರ್ಪಣ ಬಹಳ ಮುಖ್ಯವಾದದ್ದು. ಇದಕ್ಕೆ ದೊರೆತ ಗೌರವ ಮತ್ತಾವ ಹಳಗನ್ನಡ ವ್ಯಾಕರಣಗಳಿಗೆ ದೊರೆತಿಲ್ಲ. ಪ್ರಾಚೀನ ಕನ್ನಡ ವ್ಯಾಕರಣಗಳಲ್ಲಿ ಕಾಣದ 'ಱ' ಕಾರಯುಕ್ತ ಪದಗಳ ಪಟ್ಟಿ, ಧಾತುಪಾಠ, ಪ್ರಯೋಗಸಾರ ಮುಂತಾದ ವಿಶೇಷ ಪ್ರಕರಣಗಳು ಇದರಲ್ಲಿವೆ. ವ್ಯಾಕರಣಗಳ ಸಮಗ್ರತೆ, ಭಾಷಾ ಪ್ರಜ್ಞೆ, ಪ್ರಯೋಗ ನಿಷ್ಠೆ, ಕಾವ್ಯಾಭಿರುಚಿ ಮುಂತಾದವು ಕೇಶಿರಾಜನ ಶಬ್ದಮಣಿ ದರ್ಪಣದಲ್ಲಿ ಕಂಡುಬರುತ್ತವೆ. ಶಬ್ದಮಣಿದರ್ಪಣ ಸ್ವಂತ ಸಂಶೋಧನೆಯ ಫಲ. ಇದು ಪ್ರಸಿದ್ಧ ಕವಿಗಳ ಪ್ರಯೋಗಗಳ ಆಧಾರದ ಮೇಲೆ ರಚಿತವಾದದ್ದು. ತಮಿಳು ಮತ್ತು ತೆಲುಗು ಭಾಷೆಗಳ ಪ್ರಾಚೀನ ವ್ಯಾಕರಣ ಗ್ರಂಥಗಳಿಗೆ ಇದನ್ನು ಹೋಲಿಸಿದರೆ ಇದು ಬಹುಮಟ್ಟಿಗೆ ಹೆಚ್ಚು ಶಾಸ್ತ್ರೀಯ ವ್ಯಾಕರಣ ಗ್ರಂಥವಾಗಿ ತೋರಿಬರುತ್ತದೆ. ಕೇಶಿರಾಜನ ಶಬ್ದಮಣಿದರ್ಪಣ ಕನ್ನಡಕ್ಕೆ ಮಾತ್ರವಲ್ಲ ಕನ್ನಡದ ಎಲ್ಲ ಭಾಷಾ ರೂಪಗಳನ್ನು ಒಳಗೊಂಡಿರುವ ಏಕಮಾತ್ರ ಗ್ರಂಥವಾಗಿ ಕಾಣಿಸಿಕೊಳ್ಳುತ್ತದೆ.

ಕೇಶಿರಾಜನಿಗೆ ಸಂಬಂಧಿಸಿದ ಅನೇಕ ವಿಚಾರಗಳು ಅವನ ಗ್ರಂಥದಲ್ಲಿಯೇ ದೊರೆಯುತ್ತವೆ. ಕೇಶಿರಾಜನು ತಾನು ಮಲ್ಲಿಕಾರ್ಜುನನ ಮಗನೆಂದು ಹೇಳಿಕೊಂಡಿದ್ದಾನೆ. ಈತನ ಕಾಲ ಸುಮಾರು ಕ್ರಿ.ಶ. ೧೨೬೧ ಇದ್ದಿರಬೇಕು. ಈತನ ಅಜ್ಜ ಸುಮನೋಬಾಣನು ಹೊಯ್ಸಳ ಒಂದನೆಯ ನಾರಸಿಂಹನಲ್ಲಿ ಕಟಕೋಪಾಧ್ಯಾಯನಾಗಿದ್ದನು ಎಂದು ಜನ್ನನು ತನ್ನ ಅನಂತನಾಥಪುರಾಣದಲ್ಲಿ ಹೇಳಿಕೊಂಡಿದ್ದಾನೆ. ಕೇಶಿರಾಜನ ತಂದೆ ಮಲ್ಲಿಕಾರ್ಜುನನು ಹೊಯ್ಸಳ ವೀರಸೋಮೇಶ್ವರನ ಕಾಲದಲ್ಲಿ ಸೋಮೇಶ್ವರ ಅಥವಾ ಹೊಯ್ಸಳ ಮೂರನೆಯ ನಾರಸಿಂಹನಲ್ಲಿ ಕಟಕೋಪಾಧ್ಯಾಯನಾಗಿದ್ದವನು. ಈ ಕಾರಣದಿಂದ ಈತನ ಕಾಲವನ್ನು ಕ್ರಿ.ಶ. ೧೨೫೦ ಎಂದು ಊಹಿಸಲು ಸಾಧ್ಯವಾಗಿದೆ. ಕೇಶಿರಾಜನು ಚೋಳಪಾಲ ಚರಿತೆ ಎಂಬ ಗ್ರಂಥವನ್ನು ಬರೆದಿದ್ದನು ಎಂದು ಹೇಳಲಾಗುತ್ತಿದೆ. ಆದರೆ ಆ ಗ್ರಂಥ ದೊರೆತಿಲ್ಲ.

ಕೇಶಿರಾಜ ಜೈನ ಎಂಬುದಕ್ಕೆ ಕೆಲವು ಆಧಾರಗಳು ದೊರೆಯುತ್ತವೆ. ಈತನನ್ನು ಜನ್ನನ ಸೋದರಳಿಯ ಎಂತಲೂ ಹೇಳಲಾಗುತ್ತಿದೆ. ಆದರೆ ಕೆಲವರು ಕೇಶಿರಾಜನನ್ನು ಸ್ಮಾರ್ತ ಬ್ರಾಹ್ಮಣ ಎನ್ನುವರು. ಶಬ್ದಮಣಿದರ್ಪಣಕ್ಕೆ ಟೀಕು ಬರೆದ ನಿಟ್ಟೂರು ನಂಜಯ್ಯನು ಕೇಶಿರಾಜನನ್ನು ಜೈನ ಎಂದೇ ಹೇಳಿದ್ದಾನೆ. ಕವಿಚರಿತೆಕಾರರು ಕೇಶಿರಾಜನನ್ನು ಸುಮನೋಬಾಣನ ಮೊಮ್ಮಗನೆಂದು ಮಲ್ಲಿಕಾರ್ಜುನನ ಮಗನೆಂದು ಈತನು ಜೈನನೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಜೈನರಾದ ನಾಗವರ್ಮ ಮತ್ತು ಭಟ್ಟಾಕಳಂಕರು ತಮ್ಮ ತಮ್ಮ ಗ್ರಂಥಗಳಲ್ಲಿ ಜಿನಸ್ತುತಿ ಮಾಡಿದ್ದಾರೆ. ಆದರೆ ಆ ಜಿನಸ್ತುತಿ ಕೇಶಿರಾಜನ ಶಬ್ದಮಣಿದರ್ಪಣದಲ್ಲಿಲ್ಲ. ಕೇಶಿರಾಜ ವೈದಿಕ ಮತದವನಾಗಿ ತೋರಿಬರುವುದರಿಂದ ಕೆಲವರು ಕೇಶಿರಾಜನನ್ನು ಬ್ರಾಹ್ಮಣನೆಂದು ಹೇಳಿಕೊಂಡಿದ್ದಾರೆ.

ನಾಗವರ್ಮನು ಭಾಷಾಭೂಷಣ ಮತ್ತು ಶಬ್ದಸ್ಮೃತಿಯಲ್ಲಿ ಹೇಳಿರುವ ವಿಚಾರಗಳನ್ನು ಕೇಶಿರಾಜ ತನ್ನ ಶಬ್ದಮಣಿದರ್ಪಣದಲ್ಲಿ ಸ್ಪಷ್ಟ ಹಾಗೂ ವಿಸ್ತಾರವಾಗಿ ಹೇಳಿದ್ದಾನೆ. ಕೇಶಿರಾಜನು ಅನೇಕ ವಿಚಾರಗಳನ್ನು ಕವಿರಾಜಮಾರ್ಗದಿಂದ ಸ್ವೀಕರಿಸಿದ್ದಾನೆ. ಈತನು ಕಾತಂತ್ರಕಾರನನ್ನು ವಿಶೇಷವಾಗಿ ನೆನೆದಿದ್ದಾನೆ. ಧಾತು ಪಾಠದ ವಿಚಾರದಲ್ಲಿ ಭೀಮಸೇನನ ಮಾದರಿಯನ್ನು ಅನುಸರಿಸಿದ್ದಾನೆ. ನಾಗವರ್ಮನ ಕಾವ್ಯಾವಲೋಕನದಿಂದ ಕೇಶಿರಾಜನು ಅನೇಕ ಪ್ರಯೋಗಗಳನ್ನು ಸ್ವೀಕರಿಸಿದ್ದಾನೆ. ಈ ದೃಷ್ಟಿಯಲ್ಲಿ ಕೇಶಿರಾಜನ ಕೊಡುಗೆ ಹಳಗನ್ನಡಕ್ಕೆ ಅಮೋಘವಾದದ್ದು ಹಾಗೂ ಅಪಾರವಾದದ್ದು. ತನಗಿಂತ ಹಿಂದಿನವರ ಶಬ್ದಪ್ರಯೋಗಗಳನ್ನು ವ್ಯಾಕರಣ ವಿಚಾರಗಳನ್ನು ಕೇಶಿರಾಜನು ತನ್ನ ಶಬ್ದಮಣಿದರ್ಪಣದಲ್ಲಿ ಬಳಸಿಕೊಂಡಿದ್ದಾನೆ. ನಾಗವರ್ಮನು ಗಮನಿಸದೆ ಬಿಟ್ಟುಹೋಗಿದ್ದ ಪ್ರಯೋಗಗಳನ್ನು ಕೇಶಿರಾಜನು ಗಮನಿಸಿದ್ದಾನೆ. ಈ ಕಾರಣದಿಂದ ಪ್ರಾಚೀನ ಕನ್ನಡ ವ್ಯಾಕರಣಗಳಲ್ಲಿ ಶಬ್ದಮಣಿದರ್ಪಣ ಒಂದು ಹೊಸ ಬಗೆಯ ವ್ಯಾಕರಣವಾಗಿ ಕಾಣಿಸಿಕೊಂಡಿದೆ. ಕೇಶಿರಾಜನು ನಾಗವರ್ಮನಿಗೆ ವಿಶೇಷವಾಗಿ ಋಣಿಯಾಗಿದ್ದಾನೆ. ಶಬ್ದಮಣಿದರ್ಪಣದಲ್ಲಿ ಒಟ್ಟು ೩೩೭ ಸೂತ್ರಗಳಿವೆ. ಅವುಗಳಲ್ಲಿ ೧೨೦ ಸೂತ್ರಗಳನ್ನು ಕಾವ್ಯಾವಲೋಕನದ ಶಬ್ದಸ್ಮೃತಿ ಮತ್ತು ಭಾಷಾಭೂಷಣಗಳಿಂದಲೂ ಪಡೆದು ವಿವರಿಸಿಕೊಂಡಿದ್ದಾನೆ. ಶಬ್ದಸ್ಮೃತಿಯಲ್ಲಿ ಸಂಧಿ, ಸಮಾಸ, ನಾಮ, ತದ್ಧಿತ, ಅಖ್ಯಾತ ಎಂಬ

೫ ಪ್ರಕರಣಗಳಿದ್ದರೆ ಕೇಶಿರಾಜನ ಶಬ್ದಮಣಿದರ್ಪಣದಲ್ಲಿ ೫ಕ್ಕೂ ಹೆಚ್ಚು ಪ್ರಕರಣಗಳಿವೆ. ಕೇಶಿರಾಜನು ಕೆಲವು ಪಾರಿಭಾಷಿಕ ಶಬ್ದಗಳನ್ನು ಪಾಣಿನಿಯಿಂದ ಪಡೆದುಕೊಂಡಿದ್ದಾನೆ. ಭಟ್ಟಾಕಳಂಕನಂತೆ ಕೇಶಿರಾಜನು ಗಣಪಾಠವನ್ನು ಪಾಣಿನಿಯ ಗಣಪಾಠಗಳ ಮಾದರಿಯಲ್ಲಿ ರಚಿಸಿಕೊಂಡಿದ್ದಾನೆ. ಗಮಕ, ಸಮಾಸ, ವಿಭಕ್ತಿ ಪಲ್ಲಟ, ಪ್ರಯೋಗಸಾರ, ಸಮಸಂಸ್ಕೃತ ಇವೆಲ್ಲವೂ ಕೇಶಿರಾಜನ ಸ್ವತಂತ್ರ ರಚನೆಗಳು. ಕೇಶಿರಾಜನು ಸಾಮಗ್ರಿಯನ್ನು ಬೇರೆ ಬೇರೆ ಮೂಲಗಳಿಂದ ಸಂಗ್ರಹಿಸಿ ತನ್ನ ಸ್ವಂತ ವಿವೇಚನೆಯಿಂದ ಶಬ್ದಮಣಿದರ್ಪಣದಲ್ಲಿ ಸ್ವಯಂಪಾಕ ಮಾಡಿದ್ದಾನೆ ಎಂದು ಹೇಳಬಹುದು.

ಭಟ್ಟಾಕಳಂಕನು 'ಕರ್ನಾಟಕ ಶಬ್ದಾನುಶಾಸನ' ಎಂಬ ಕನ್ನಡ ವ್ಯಾಕರಣವನ್ನು ಸಂಸ್ಕೃತದಲ್ಲಿ ರಚಿಸಿದನು. ಪ್ರಾಚೀನ ಕನ್ನಡ ವ್ಯಾಕರಣಗಳಲ್ಲಿ ಇದು ಹೆಚ್ಚು ಹೆಸರುವಾಸಿಯಾದದ್ದು. ಶಬ್ದಾನುಶಾಸನದ ಅಂತ್ಯದಲ್ಲಿ ಕೊಟ್ಟಿರುವ ಗದ್ಯಭಾಗದಲ್ಲಿ ಭಟ್ಟಾಕಳಂಕನ ವಿಚಾರವು ತಿಳಿದುಬರುತ್ತದೆ. ಭಟ್ಟಾಕಳಂಕನು ಅಕಳಂಕದೇವನ ಶಿಷ್ಯ. ಅಕಳಂಕದೇವನು ದಕ್ಷಿಣ ಕನ್ನಡ ಜಿಲ್ಲೆಯ ಜೈನಮಠ ಒಂದರಲ್ಲಿ ಗುರುವಾಗಿದ್ದವನು. ಭಟ್ಟಕಳಂಕನ ಕಾಲ, ಮತ ಮುಂತಾದ ವಿಚಾರಗಳು ಅವನ ಶಬ್ದಾನುಶಾಸನದಲ್ಲಿಯೇ ದೊರೆಯುತ್ತದೆ. ಶಬ್ದಾನುಶಾಸನವನ್ನು ಇವನು ಸುಮಾರು ಕ್ರಿ.ಶ. ೧೫೬೨ರಲ್ಲಿ ರಚಿಸಿದನೆಂದು ಹೇಳಲಾಗುತ್ತಿದೆ. ಭಟ್ಟಾಕಳಂಕನು ವಿಜಯನಗರದ ಶ್ರೀರಂಗರಾಜನ (೧೫೭೩-೧೫೮೯) ಕಾಲದಲ್ಲಿದ್ದನೆಂದು ಬಿಳಿಗಿ ಶಾಸನದಿಂದ ತಿಳಿದುಬರುತ್ತದೆ. ಕವಿಚರಿತೆಕಾರರು ಶ್ರೀರಂಗರಾಜನ ಕಾಲದಲ್ಲಿದ್ದ ಭಟ್ಟಾಕಳಂಕನೇ ಬೇರೆ. ಶಬ್ದಾನುಶಾಸನವನ್ನು ರಚಿಸಿದ ಭಟ್ಟಾಕಳಂಕನೇ ಬೇರೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಒಂದು ಪಕ್ಷ ಶ್ರೀರಂಗರಾಜನ ಆಳ್ವಿಕೆಯಲ್ಲಿ ಇದ್ದ ಭಟ್ಟಾಕಳಂಕನೇ ಬೇರೆ ಎನ್ನುವುದಾದರೆ ಶಬ್ದಾನುಶಾಸನವನ್ನು ರಚಿಸಿದವರು ಯಾರು ಎಂಬ ಪ್ರಶ್ನೆ ಏಳುತ್ತದೆ. ಕೆಲವರು ವೆಂಕಟಪತಿರಾಯರ ಆಳ್ವಿಕೆಯಲ್ಲಿದ್ದ ಭಟ್ಟಾಕಳಂಕನೇ ಶಬ್ದಾನುಶಾಸನವನ್ನು ರಚಿಸಿದವನು ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಬಿಳಿಗಿಯ ಶಿಲಾಶಾಸನದಲ್ಲಿ ಭಟ್ಟಾಕಳಂಕನು ನಾನಾಶಾಸ್ತ್ರಗಳಲ್ಲಿ ಪಂಡಿತನಾಗಿದ್ದನು ಎಂದು ಹೇಳಲಾಗಿದೆ. ಕವಿರಾಜಮಾರ್ಗ, ಶಬ್ದಸ್ಮೃತಿ, ಭಾಷಾಭೂಷಣ, ಶಬ್ದಮಣಿದರ್ಪಣ ಮುಂತಾದ ಹಳಗನ್ನಡ ವ್ಯಾಕರಣಗಳ ವಿಚಾರಗಳು ಭಟ್ಟಾಕಳಂಕನಿಗೆ ಕರಗತವಾಗಿದ್ದವು. ಕವಿರಾಜಮಾರ್ಗಕಾರ, ನಾಗವರ್ಮ, ಶಬ್ದಮಣಿದರ್ಪಣಕಾರ ಮುಂತಾದವರನ್ನು ಭಟ್ಟಾಕಳಂಕ ತನ್ನ ಗ್ರಂಥದಲ್ಲಿ ಸ್ಮರಿಸಿಕೊಂಡಿದ್ದಾನೆ. ಪಾಣಿನಿ, ಪತಂಜಲಿ ಮುಂತಾದ ಸಂಸ್ಕೃತದ ವೈಯಾಕರಣರನ್ನು ತನ್ನ ಗ್ರಂಥದಲ್ಲಿ ಉದಾಹರಿಸಿಕೊಂಡಿದ್ದಾನೆ.

ವಿಜಯನಗರ ಸಾಮ್ರಾಜ್ಯ ಕಣ್ಮರೆಯಾದ ಮೇಲೆ ಕನ್ನಡ ಸಾಹಿತ್ಯ ಗ್ರಂಥಗಳ ರಚನೆ ಇಳಿಮುಖವಾಗತೊಡಗಿತು. ಕನ್ನಡನಾಡಿನ ಜೈನ ಸಮಾಜ ಮತ್ತು ಪಂಡಿತ ವರ್ಗದಲ್ಲಿ ಕನ್ನಡದ ಬಗೆಗೆ ತಿರಸ್ಕಾರ ಮನೋಭಾವ ಹುಟ್ಟಿ ಸಂಸ್ಕೃತದ ಪ್ರತಿಷ್ಠೆಯನ್ನು ಎತ್ತಿಹಿಡಿಯುವ ಉದ್ದೇಶದಿಂದ ಭಟ್ಟಾಕಳಂಕನು ಸಂಸ್ಕೃತದಲ್ಲಿ ವ್ಯಾಕರಣವನ್ನು ರಚಿಸಿದನು. ಕನ್ನಡ ಭಟ್ಟಾಕಳಂಕನ ದೃಷ್ಟಿಯಲ್ಲಿ ಸಂಸ್ಕೃತದಷ್ಟೇ ದೈವಭಾಷೆ. ಇದು ಅವನ ಕನ್ನಡದ

ಅಭಿಮಾನವನ್ನು ಎತ್ತಿ ತೋರಿಸುತ್ತದೆ. ಕನ್ನಡ ಸಂಸ್ಕೃತದಷ್ಟೇ ಶ್ರೇಷ್ಠವಾದದ್ದು. ಕನ್ನಡ ವ್ಯಾಕರಣ ವಿಚಾರಗಳನ್ನು ತಿರಸ್ಕಾರ ಮನೋಭಾವದಿಂದ ಕಾಣುತ್ತಿದ್ದ, ಕನ್ನಡ ವ್ಯಾಕರಣ ವಿಚಾರಗಳನ್ನು ತಿಳಿದುಕೊಳ್ಳಲು ಮನಸ್ಸಿಲ್ಲದ ಜನರಿಗಾಗಿ ಭಟ್ಟಾಕಳಂಕನು ಕನ್ನಡದ ವ್ಯಾಕರಣವನ್ನು ಸಂಸ್ಕೃತದಲ್ಲಿ ರಚಿಸಿದನು. ಭಟ್ಟಾಕಳಂಕನು ಶಬ್ದಾನುಶಾಸನ ರಚನೆಗೆ ಪಾಣಿನಿ, ಶರ್ವವರ್ಮ, ಶಾಕಟಾಯನ, ಜೈನೇಂದ್ರ ಮುಂತಾದವರ ಮಾದರಿಯನ್ನು ಅನುಸರಿಸಿದ್ದಾನೆ. ಇದು ಕನ್ನಡದ ವ್ಯಾಕರಣವೋ ಅಥವಾ ಸಂಸ್ಕೃತದ ವ್ಯಾಕರಣವೋ ಎಂಬ ಭ್ರಾಂತಿ ಉಂಟಾಗುವಂತೆ ಕನ್ನಡ ವ್ಯಾಕರಣವನ್ನು ಸಂಸ್ಕೃತದಲ್ಲಿ ರಚಿಸಿಕೊಟ್ಟನು. ಭಟ್ಟಾಕಳಂಕನು ಕೆಲವು ಕಡೆ ನಾಗವರ್ಮನನ್ನು ಯಥಾವತ್ತಾಗಿ ಅನುಸರಿಸಿದ್ದಾನೆ. ಆದರೆ ಇವನು ತನಗಿಂತ ಹಿಂದಿನವರ ವ್ಯಾಕರಣವನ್ನು ಕಣ್ಣುಮುಚ್ಚಿ ಅನುಸರಿಸಿಲ್ಲ. ಕೆಲವು ವೇಳೆ ಕೆಲವು ವ್ಯಾಕರಣ ವಿಚಾರಗಳನ್ನು ತನ್ನ ಅಭಿಪ್ರಾಯಕ್ಕೆ ತಕ್ಕಂತೆ ಪರಿವರ್ತಿಸಿಕೊಂಡಿದ್ದಾನೆ. ಭಟ್ಟಾಕಳಂಕನ ಈ ವ್ಯಾಕರಣ ಎಲ್ಲ ದೃಷ್ಟಿಯಿಂದ ಹೆಚ್ಚು ಶಾಸ್ತ್ರೀಯವೂ, ಕ್ರಮಬದ್ಧವೂ, ವಿವರಣಾತ್ಮಕವೂ ಆಗಿದೆ ಎಂದು ಕೆಲವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಸಂಸ್ಕೃತಕ್ಕೆ ಪಾಣಿನಿಯ ಅಷ್ಟಾಧ್ಯಾಯಿ ಹೇಗೋ ಭಟ್ಟಾಕಳಂಕನ ಶಬ್ದಾನುಶಾಸನವು ಹಾಗೆ. ಈ ವ್ಯಾಕರಣವನ್ನು ಕೆಲವರು ಪತಂಜಲಿಯ ಮಹಾಭಾಷ್ಯಕ್ಕೆ ಹೋಲಿಸಿದ್ದಾರೆ. ನಾಗವರ್ಮನನ್ನು ಅಭಿನವಶರ್ಮನೆಂದು ಕರೆದುಕೊಂಡಂತೆ ಕೇಶಿರಾಜನನ್ನು ಒಂದು ಬಗೆಯಲ್ಲಿ ಪಾಣಿನಿ ಎಂದೂ, ಭಟ್ಟಾಕಳಂಕನನ್ನು ಅಭಿನವ ಪಾಣಿನಿ ಎಂದೂ ಹೆಸರಿಸಿಕೊಳ್ಳಲಾಗುತ್ತಿದೆ.

ಭಟ್ಟಾಕಳಂಕನು ಸೂತ್ರಕಾರನೂ, ವ್ಯಾಖ್ಯಾನಕಾರನೂ, ವೃತ್ತಿಕಾರನೂ ಆಗಿದ್ದನು ಎಂಬುದು ಆತನ ಶಬ್ದಾನುಶಾಸನದಿಂದ ತಿಳಿದುಬರುತ್ತದೆ. ಭಟ್ಟಾಕಳಂಕನು ಕನ್ನಡ ವ್ಯಾಕರಣ ವಿಚಾರಗಳನ್ನು ಆಯ್ಕೆ ಮಾಡಿಕೊಂಡಿದ್ದರೂ ಸಂಸ್ಕೃತ ವ್ಯಾಕರಣ ಪ್ರಕ್ರಿಯೆಗಳನ್ನು ಕನ್ನಡಕ್ಕೆ ಅನ್ವಯವಾಗುವಂತೆ ವಿವರಿಸಿಕೊಂಡಿದ್ದಾನೆ. ಭಟ್ಟಾಕಳಂಕನು ತನ್ನ ಶಬ್ದಾನುಶಾಸನ ರಚನೆಗೆ ಸಂಸ್ಕೃತ ವ್ಯಾಕರಣದ ವಿಧಾನವನ್ನೇ ಅನುಸರಿಸಿದ್ದಾನೆಯಾದರೂ ಈತನು ಪಾಣಿನಿ, ಪತಂಜಲಿ, ಶಾಕಟಾಯನನ ಶಬ್ದಾನುಶಾಸನದಿಂದ ೫೦ಕ್ಕೂ ಹೆಚ್ಚು ಸೂತ್ರಗಳನ್ನು, ಶರ್ವವರ್ಮನ ಕಾತಂತ್ರದಿಂದ ಕೆಲವು ಸೂತ್ರಗಳನ್ನು, ಪಾಣಿನಿಯ ಅಷ್ಟಾಧ್ಯಾಯಿಯಿಂದ ೩೦ಕ್ಕೂ ಹೆಚ್ಚು ಸೂತ್ರಗಳನ್ನು, ಪೂಜ್ಯಪಾದರ ಮತ್ತು ಜೈನೇಂದ್ರರ ವ್ಯಾಕಾರಣಗಳಿಂದ ಕೆಲವು ವಿಚಾರಗಳನ್ನು ಆಯ್ದು ತನ್ನ ಶಬ್ದಾನುಶಾಸನದಲ್ಲಿ ಬಳಸಿಕೊಂಡಿದ್ದಾನೆ. ಇದೇ ರೀತಿ ನರೇಂದ್ರಾಚಾರ್ಯನ ಸಾರಸ್ವತ ವ್ಯಾಕರಣದಿಂದಲೂ ಕೆಲವು ಸೂತ್ರಗಳನ್ನು ಆರಿಸಿಕೊಂಡು ಬಳಸಿಕೊಂಡಿದ್ದಾನೆಂದು ಕೆಲವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಭಟ್ಟಾಕಳಂಕನು ತನ್ನ ಶಬ್ದಾನುಶಾಸನದಲ್ಲಿ ನಾಗವರ್ಮ ಮತ್ತು ಕೇಶಿರಾಜರಿಗಿಂತ ವ್ಯಾಪಕವಾದ ಸಂಸ್ಕೃತದ ಪ್ರಭಾವ ಗೋಚರಿಸುತ್ತದೆ.

ಭಾಷಾಭೂಷಣ ಮತ್ತು ಶಬ್ದಾನುಶಾಸನ ಎಂಬ ಎರಡು ಗ್ರಂಥಗಳು ಸಂಸ್ಕೃತದಲ್ಲಿರುವ ಕನ್ನಡ ವ್ಯಾಕರಣಗಳು. ಇವೆರಡಕ್ಕೂ ಸಾಕಷ್ಟು ವ್ಯತ್ಯಾಸವಿದೆ. ನಾಗವರ್ಮನು ಭಾಷಾಭೂಷಣದಲ್ಲಿ ಕಾತಂತ್ರದ ಸರಳತೆಯನ್ನು ಅನುಸರಿಸಿದ್ದರೆ, ಭಟ್ಟಾಕಳಂಕನು ಪಾಣಿನಿಯ ಪದ್ಧತಿಯನ್ನು ಅನುಸರಿಸಿದ್ದಾನೆ. ಭಟ್ಟಾಕಳಂಕ ಜೈನ

ಪದ್ಧತಿಯನ್ನು ಅನುಸರಿಸಿದ್ದರೂ ಶಬ್ದ, ಲಿಂಗ, ಸಮಾಸ, ಕಾರಕ, ವಿಶೇಷಣ, ವಿಶೇಷ್ಯ ಮುಂತಾದ ವ್ಯಾಕರಣ ವಿಚಾರಗಳ ಪ್ರತಿಪಾದನೆಯಲ್ಲಿ ಪಾಣಿನಿಯನ್ನು ತ್ಯಜಿಸಿ ಕಾತಂತ್ರ ಮಾರ್ಗವನ್ನು ಅನುಸರಿಸಿದ್ದಾನೆ. ಸಂಸ್ಕೃತದ ಕೆಲವು ವ್ಯಾಕರಣ ತತ್ವಗಳನ್ನು ಕನ್ನಡಕ್ಕೆ ಯಾವ ಮಾರ್ಪಾಟು ಇಲ್ಲದೆ ಬಳಸಿಕೊಂಡಿದ್ದಾನೆ. ಕೇಶಿರಾಜ ಮತ್ತು ನಾಗವರ್ಮರಲ್ಲಿ ವಿಷಯ ಪ್ರತಿಪಾದನೆ ಖಚಿತವಾಗಿದ್ದರೆ ಭಟ್ಟಾಕಳಂಕನಲ್ಲಿ ವಿಷಯ ಪ್ರತಿಪಾದನೆ ಶಾಸ್ತ್ರೀಯವಾಗಿದೆ.

ಕೇಶಿರಾಜನು ಕನ್ನಡಕ್ಕೆ ಅನ್ವಯವಾಗದ ಪಾಣಿನಿಯ ಸೂತ್ರಗಳನ್ನು ಕೈಬಿಟ್ಟರೆ, ಭಟ್ಟಾಕಳಂಕನು ಪಾಣಿನಿಯ ಸೂತ್ರಗಳು ಅವು ಕನ್ನಡಕ್ಕೆ ಅನ್ವಯವಾಗಲಿ ಬಿಡಲಿ ಅವುಗಳನ್ನು ಅಷ್ಟಾಧ್ಯಾಯಿಯಿಂದ ಆಯ್ದು ಕನ್ನಡ ವ್ಯಾಕರಣದ ಮೇಲೆ ಹೇರಿದ್ದಾನೆ. ಅಷ್ಟೇ ಅಲ್ಲ, ಎಷ್ಟೋ ವಿಚಾರಗಳಲ್ಲಿ ಈತನು ಪಾಣಿನಿಯನ್ನು ಅನುಸರಿಸಿದ್ದಾನೆ. ಹಾಗೆಯೇ ಕೆಲವನ್ನು ಮಾರ್ಪಾಟು ಮಾಡಿಕೊಂಡು ಬಳಸಿಕೊಂಡಿದ್ದಾನೆ. ಸಮಾಸ, ಕಾರಕ, ತದ್ಧಿತ ಪ್ರಕರಣ ಮುಂತಾದವುಗಳನ್ನು ಸಂದರ್ಭಕ್ಕೆ ತಕ್ಕಂತೆ ಕನ್ನಡ ಪ್ರತ್ಯಯಗಳನ್ನು ಸೇರಿಸಿ ಬಳಸಿಕೊಂಡಿದ್ದಾನೆ. ಭಟ್ಟಾಕಳಂಕನು ಕಾತಂತ್ರ ಇಲ್ಲವೇ ಶಾಕಟಾಯನನ ನಿರೂಪಣಾ ವಿಧಾನಕ್ಕಿಂತ ಹೆಚ್ಚಾಗಿ ಪಾಣಿನಿಯ ನಿರೂಪಣಾ ವಿಧಾನವನ್ನೇ ಅನುಕರಿಸಿದ್ದಾನೆ ಎನ್ನಬಹುದು.

ಈ ವಿಚಾರಗಳು ಏನೇ ಆಗಿದ್ದರೂ ಭಟ್ಟಾಕಳಂಕ ಮತ್ತು ನಾಗವರ್ಮರು ಕನ್ನಡನಾಡಿನಲ್ಲಿ ಸಂಸ್ಕೃತದ ವ್ಯಾಮೋಹ ಅತಿಯಾಗಿದ್ದ ಕಾಲದಲ್ಲಿ ತಮ್ಮ ಉದ್ದೇಶಕ್ಕೆ ಅನುಗುಣವಾಗಿ ಕನ್ನಡ ವ್ಯಾಕರಣವನ್ನು ಸಂಸ್ಕೃತದಲ್ಲಿ ಬರೆದರೆಂದು ತೋರುತ್ತದೆ. ಕೇಶಿರಾಜ ಕನ್ನಡದಲ್ಲಿ ವ್ಯಾಕರಣ ರಚಿಸಿದ್ದರೂ ಕೆಲವು ಸೂತ್ರಗಳನ್ನು ಬಿಟ್ಟರೆ ಉಳಿದೆಲ್ಲ ವಿಚಾರಗಳಲ್ಲಿ ಸಂಸ್ಕೃತದ ಮಾದರಿಯನ್ನೇ ಅನುಸರಿಸಿದ್ದಾನೆ ಎಂಬುದರಲ್ಲಿ ಅನುಮಾನವೇನಿಲ್ಲ. ಭಟ್ಟಾಕಳಂಕನು ತನ್ನ ವ್ಯಾಕರಣದಲ್ಲಿ ಸಂಸ್ಕೃತದ ವ್ಯಾಕರಣ ವಿಚಾರಗಳನ್ನು ಅತಿಯಾಗಿ ಉದಾಹರಿಸಿಕೊಂಡಿದ್ದಾನೆ ಎನ್ನಬಹುದು.

ಭಟ್ಟಾಕಳಂಕನ ಕರ್ನಾಟಕ ಶಬ್ದಾನುಶಾಸನದಲ್ಲಿ ಒಟ್ಟು ೫೯೨ ಸೂತ್ರಗಳಿವೆ. ಇವುಗಳನ್ನು ನಾಲ್ಕು ಅಧ್ಯಾಯಗಳಲ್ಲಿ ಸಂಜ್ಞಾಸೂತ್ರಗಳು, ಪಾರಿಭಾಷಿಕ ಸೂತ್ರಗಳು, ಸಂಧಿ, ಲಿಂಗ, ಸಮಸಂಸ್ಕೃತ, ತದ್ಧಿತ ಪ್ರಕರಣ, ದೇಶ್ಯ, ಲಿಂಗ, ಸ್ತ್ರೀಪ್ರತ್ಯಯ, ವಿಭಕ್ತಿ, ಸಮಾಸ, ದ್ವಿರುಕ್ತಿ, ಪ್ಲುತ, ಧಾತು, ಕೃದಂತ ಮುಂತಾದ ಪ್ರಕರಣಗಳಲ್ಲಿ ವಿಷಯಗಳನ್ನು ವಿವರವಾಗಿ ವಿವರಿಸಿಕೊಳ್ಳಲಾಗಿದೆ. ಕೇಶಿರಾಜನು ೭೫೦ ಪ್ರಯೋಗಗಳನ್ನು ಕನ್ನಡ ಪ್ರಾಚೀನ ಕಾವ್ಯಗಳಿಂದ ಆಯ್ದುಕೊಂಡಿದ್ದರೆ, ಭಟ್ಟಾಕಳಂಕನು ೪೬ ಪ್ರಯೋಗಗಳನ್ನು ಕನ್ನಡದ ಪ್ರಾಚೀನ ಕಾವ್ಯಗಳಿಂದ ಆಯ್ದುಕೊಂಡಿದ್ದಾನೆ. ಒಟ್ಟಿನಲ್ಲಿ ಪ್ರಾಚೀನ ಕನ್ನಡ ವ್ಯಾಕರಣ ಗ್ರಂಥಗಳು ಪಾಣಿನಿಯ ವ್ಯಾಕರಣ ಪದ್ಧತಿಗಿಂತ ಸ್ವಲ್ಪ ಭಿನ್ನವಾಗಿರುವಂತೆ ಕಂಡುಬರುತ್ತದೆ ಎನ್ನಬಹುದು.

ಒಡೆಯರ ಕಾಲದಲ್ಲಿ ಧರ್ಮ (೧೮೮೧-೧೯೪೦)

ಡಾ. ಎನ್. ಸರಸ್ವತಿ

ಪ್ರಸ್ತಾವನೆ

ಕರ್ನಾಟಕವು ಧರ್ಮದ ಕ್ಷೇತ್ರದಲ್ಲಿ ತನ್ನದೇ ಆದ ಸಿದ್ಧಾಂತ ಮತ್ತು ಕೊಡುಗೆಗಳನ್ನು ನೀಡಿದೆ. ಕರ್ನಾಟಕದಲ್ಲಿ ಹಿಂದೂಧರ್ಮ, ಜೈನಧರ್ಮ ಮತ್ತು ಬೌದ್ಧಧರ್ಮಗಳು ಯೋಗ್ಯವಾದ ವಾತಾವರಣವನ್ನು ಕಂಡುಕೊಂಡಿವೆ.

ಪರಕೀಯರ ದಬ್ಬಾಳಿಕೆಗೆ ಒಳಗಾದ ಹಿಂದೂಧರ್ಮದ ರಕ್ಷಣೆಗಾಗಿ ವಿಜಯನಗರ ಸಾಮ್ರಾಜ್ಯ ಅನುಕೂಲಕರ ವಾತಾವರಣವನ್ನು ಸೃಷ್ಟಿಸಿತು. ಬನ್ನಹಟ್ಟಿಯ ಅನಾಹುತದ ಅನಂತರವೂ ವಿಜಯನಗರವು ಹಿಂದೂ ಸಂಸ್ಕೃತಿಯ ವೈವಿಧ್ಯತೆ ಮತ್ತು ಶಕ್ತಿಯ ಸ್ಫೂರ್ತಿಯ ನೆಲೆಯಾಯಿತು. ಇದು ಅದ್ವೈತ, ದ್ವೈತ, ವಿಶಿಷ್ಟಾದ್ವೈತದಂತಹ ತತ್ವಗಳು ಮತ್ತು ಶೈವ, ವೈಷ್ಣವ, ವೀರಶೈವ, ಜೈನ ಮತ್ತು ಇಸ್ಲಾಂನಂತಹ ಮುಖ್ಯ ಪಂಥಗಳ ಸೌಹಾರ್ದಯುತ ಸಹಬಾಳ್ವೆಯ ಕಾಲವಾಗಿತ್ತು. ಅದೇ ಸಂಪ್ರದಾಯವನ್ನು ಮೈಸೂರು ಒಡೆಯರು ಮುಂದುವರಿಸಿದರು. ಈ ರೀತಿಯ ವೈವಿಧ್ಯಮಯ ಧರ್ಮಗಳನ್ನು ಅನುಸರಿಸಿದ ಮೈಸೂರಿನ ಅರಸರು ಮತ್ತು ಜನತೆ ಶಾಂತಿ ಮತ್ತು ಸೌಹಾರ್ದಯುತ ಜೀವನವನ್ನು ನಡೆಸಿದರು.

ಶ್ರೀವೈಷ್ಣವ ಧರ್ಮ

ಕ್ರಿ.ಶ. ೧೫ನೇ ಶತಮಾನದ ಕೊನೆಯ ವೇಳೆಗೆ ಕರ್ನಾಟಕದಲ್ಲಿ ಶ್ರೀವೈಷ್ಣವ ಧರ್ಮ ಜನಪ್ರಿಯವಾಗಿತ್ತು. ವಿಷ್ಣುವಿನ ಅವತಾರಗಳು ಲಕ್ಷ್ಮಿ ಮತ್ತು ಪೃಥ್ವಿಯನ್ನು ಮೊದಲ ಮತ್ತು ಎರಡನೆಯ ಪತ್ನಿಯರಾಗಿ ಪೂಜಿಸುವುದು ಸಾಮಾನ್ಯವಾಗಿತ್ತು. ದಕ್ಷಿಣ ಕರ್ನಾಟಕಕ್ಕೆ ರಾಮಾನುಜಾಚಾರ್ಯರ ಆಗಮನದಿಂದ ವಾಸ್ತುಶಿಲ್ಪದ ಅದ್ಭುತಗಳಾದಂತಹ ವೈಷ್ಣವ ದೇವಾಲಯಗಳ ನಿರ್ಮಾಣಕಾರ್ಯ ಚುರುಕುಗೊಂಡಿತು. ಈ ವೈಷ್ಣವ ದೇವಾಲಯಗಳು ಸಮುದಾಯದ ಕೇಂದ್ರಗಳಾಗಿ ಎಲ್ಲಾ ವರ್ಗದ ಜನರು ಪೂಜೆಯಲ್ಲಿ ಭಾಗವಹಿಸಿ ಸಂಗೀತ ಮತ್ತು ನೃತ್ಯಗಳನ್ನು ಸೇರಿದಂತೆ ಹಬ್ಬ ಆಚರಣೆಗಳನ್ನು ಮಾಡುತ್ತಿದ್ದರು. ವೈಷ್ಣವ ಧರ್ಮವು ಅದರ ಆಚರಣೆಯ ವಿಧಿಗಳಿಂದ ಅದರ ಅನುಯಾಯಿಗಳಿಗೆ ಸತ್ಯಂ ಶಿವಂ ಮತ್ತು ಸುಂದರಂ ಎಂಬ ದೃಷ್ಟಿಯನ್ನೂ ದೇವರ ಸೃಷ್ಟಿಯು ಸಮುದಾಯದ ಏಳ್ಗೆಗಾಗಿಯೇ ಎಂಬುದನ್ನೂ ತಿಳಿಸಿಕೊಟ್ಟಿತು. ರಾಮಾನುಜಾಚಾರ್ಯರು ಪ್ರತಿಪಾದಿಸಿದ ತತ್ವಕ್ಕೆ ವಿಶಿಷ್ಟಾದ್ವೈತವೆಂದೂ ಅದನ್ನು ಅನುಸರಿಸುವ ಗುಂಪಿಗೆ ಶ್ರೀವೈಷ್ಣವರೆಂದೂ ಕರೆಯುತ್ತಿದ್ದರು. ಇದನ್ನು ಶ್ರೀವೈಷ್ಣವ

ಧರ್ಮವೆಂದು ಎರಡು ಕಾರಣಗಳಿಂದ ಕರೆಯುತ್ತಿದ್ದರು. ಅವುಗಳೆಂದರೆ ವಿಷ್ಣುವೇ ಸರ್ವಶ್ರೇಷ್ಠ ದೇವರು ಮತ್ತು ವಿಷ್ಣು ಯಾವಾಗಲೂ ತನ್ನ ಪತ್ನಿಯಾದ ಶ್ರೀ ಅಥವಾ ಲಕ್ಷ್ಮಿಯೊಂದಿಗಿರುತ್ತಾನೆ. ಶ್ರೀವೈಷ್ಣವ ಧರ್ಮವು ಜನಜೀವನದ ಮೇಲೆ ಪ್ರಭಾವಿ ಶಕ್ತಿಯಾಗಿ ಮುಂದುವರಿಯಿತು.

ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನಲ್ಲಿರುವ ಮೇಲುಕೋಟೆಯು ನಾರಾಯಣಸ್ವಾಮಿ ದೇವಸ್ಥಾನದಿಂದ ಪ್ರಖ್ಯಾತಗೊಂಡಿತು. ಇದು ಹಳೆಯ ಮತ್ತು ಸಾಧಾರಣ ದೇವಾಲಯವಾಗಿತ್ತು. ಇದರ ನಿರ್ಮಾಣದ ಕಾಲ ತಿಳಿದಿರಲಿಲ್ಲ. ಶ್ರೀವೈಷ್ಣವ ಸಂತರಾದ ರಾಮಾನುಜಾಚಾರ್ಯರು ತಮಿಳುನಾಡಿನಿಂದ ಮೇಲುಕೋಟೆಗೆ ಬಂದಬಳಿಕ ಮೇಲುಕೋಟೆಯು ಶ್ರೀವೈಷ್ಣವ ಧರ್ಮದ ಪ್ರಮುಖ ಕೇಂದ್ರವಾಯಿತು. ಅನಂತರ ಬೇರೆ ಬೇರೆ ರಾಜರುಗಳಿಂದ ದೇವಾಲಯವು ವಿಸ್ತರಣೆಗೊಂಡು ಅನೇಕ ಅರಸರಿಂದ ದತ್ತಿಯನ್ನು ಪಡೆಯಿತು. ಹೀಗಾಗಿ ಇದು ಶ್ರೀಮಂತ ದೇವಾಲಯವಾಯಿತು.

ಮೊದಲಿಗೆ ಮೈಸೂರು ಒಡೆಯರು ಮೈಸೂರಿನ ಸಮೀಪದ ಹದಿನಾಡು ಮತ್ತು ಕರಗನಹಳ್ಳಿಯಲ್ಲಿ ತಮ್ಮ ಆಳ್ವಿಕೆಯನ್ನು ಆರಂಭಿಸಿದರು. ಆದರೆ ಕ್ರಿ.ಶ. ೧೫೧೩ ರಲ್ಲಿ ಬೆಟ್ಟದ ಚಾಮರಾಜ ಒಡೆಯರು ಆಳ್ವಿಕೆಗೆ ಬಂದನಂತರ ರಾಜಧಾನಿಯನ್ನು ಮೈಸೂರಿಗೆ ಬದಲಾಯಿಸಿ ರಾಜ್ಯ ವಿಸ್ತರಣೆಯಲ್ಲಿ ತೊಡಗಿದರು. ರಾಜಒಡೆಯರು ಮೇಲುಕೋಟೆ ನಾರಾಯಣನ ಪರಮಭಕ್ತರಾಗಿದ್ದರು. ಇವರು ದೇವಾಲಯಕ್ಕೆ ಹಲವಾರು ಕೊಡುಗೆಗಳನ್ನು ನೀಡಿದರು. ಮುಮ್ಮಡಿ ಕೃಷ್ಣರಾಜ ಒಡೆಯರ ಉದಾರತೆಯಿಂದ ಮೇಲುಕೋಟೆ ಹಲವಾರು ಅನುಕೂಲಗಳನ್ನು ಪಡೆಯಿತು. ಹತ್ತನೆಯ ಚಾಮರಾಜ ಒಡೆಯರು ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರು ಮೇಲುಕೋಟೆ ಚಲುವನಾರಾಯಣಸ್ವಾಮಿಯ ಮಹಾಭಕ್ತರಾಗಿದ್ದರು. ಮೈಸೂರು ಒಡೆಯರು ಚಲುವನಾರಾಯಣಸ್ವಾಮಿ ದೇವಾಲಯದ ಪೋಷಕರಾಗಿದ್ದರು. ವಾಸ್ತವವಾಗಿ ಮೇಲುಕೋಟೆಯ ನಾರಾಯಣಸ್ವಾಮಿಯ ಕೃಪೆಯಿಂದಲೇ ಒಡೆಯರು ತಮಗೆ ರಾಜ್ಯ ದಕ್ಕಿತೆಂದು ಗ್ರಹಿಸಿದ್ದರು. ಈ ದೇವಾಲಯಕ್ಕೆ ಹಳ್ಳಿಗಳನ್ನು ದಾನವಾಗಿ ನೀಡಲಾಗಿತ್ತು. ೫ನೆಯ ಚಾಮರಾಜ ಒಡೆಯರು ಮೇಲುಕೋಟೆಯ ಕಲ್ಯಾಣಿಗೆ ಮೆಟ್ಟಿಲುಗಳನ್ನು ಹಾಕಿಸಿದರು. ಇಮ್ಮಡಿ ಕೃಷ್ಣರಾಜ ಒಡೆಯರು ಬ್ರಾಹ್ಮಣರಿಗೋಸ್ಕರ ಒಂದು ಅಗ್ರಹಾರವನ್ನು ಸ್ಥಾಪಿಸಿದರು. ಮುಮ್ಮಡಿ ಕೃಷ್ಣರಾಜ ಒಡೆಯರು ತಮ್ಮ ಕಾಲದಲ್ಲಿ ದೇವಾಲಯ ಮತ್ತು ಪಟ್ಟಣಗಳ ಬೆಳವಣಿಗೆಗೆ ಪ್ರೋತ್ಸಾಹಕರಾಗಿದ್ದರು. ಈ ಕಾಲದಲ್ಲಿ ದೇವಸ್ಥಾನಕ್ಕೆ ಚಿನ್ನ ಮತ್ತು ಬೆಳ್ಳಿಯ ಪಾತ್ರೆಗಳು ಕೊಡುಗೆಗಳಾಗಿ ಬಂದವು.

ಮಂಡ್ಯ ಜಿಲ್ಲೆಯ ತಾಲ್ಲೂಕು ಕೇಂದ್ರವಾದಂತಹ ಶ್ರೀರಂಗಪಟ್ಟಣವು ಕಾವೇರಿ ನದಿಯ ಎರಡು ಕವಲಿನಿಂದ ನಿರ್ಮಿತವಾದ ದ್ವೀಪವಾಗಿದ್ದು ಇಲ್ಲಿ ಶ್ರೀರಂಗನಾಥಸ್ವಾಮಿಯ ದೇವಾಲಯವಿದೆ. ದೇವಾಲಯವು ಶಯನಾವಸ್ಥೆಯಲ್ಲಿರುವ ಮತ್ತು ಲಕ್ಷ್ಮಿಯಿಂದ ಪಾದಸೇವೆ ಮಾಡಿಸಿಕೊಳ್ಳುತ್ತಿರುವ ಬಹುದೊಡ್ಡ ಮೂರ್ತಿಯನ್ನು ಹೊಂದಿದೆ. ಶ್ರೀರಂಗಪಟ್ಟಣವು ಶ್ರೀವೈಷ್ಣವ ಧರ್ಮದ ಮುಖ್ಯ ಕೇಂದ್ರವಾಗಿ ಬೆಳೆಯಿತು. ಮೈಸೂರಿನ ಒಡೆಯರು ಈ ದೇವಾಲಯಕ್ಕೆ ಉದಾರವಾಗಿ ಭೂದತ್ತಿಗಳು, ಚಿನ್ನದ ಆಭರಣಗಳು,

ಬೆಳ್ಳಿಯ ಪಾತ್ರೆಗಳನ್ನು ನೀಡಿದರು. ಹಾಗಾಗಿ ಮೈಸೂರು ಒಡೆಯರ ಆಳ್ವಿಕೆಯಲ್ಲಿ ಮೇಲುಕೋಟೆ ಮತ್ತು ಶ್ರೀರಂಗಪಟ್ಟಣಗಳೆರಡೂ ಶ್ರೀವೈಷ್ಣವ ಧರ್ಮದ ಕೇಂದ್ರಗಳಾಗಿದ್ದವು.

ಶೈವಧರ್ಮ

ಶೈವಧರ್ಮವು ಪ್ರಮುಖ ಧರ್ಮವಾಗಿತ್ತು. ರಾಜರು ಹಾಗೂ ಪ್ರಜೆಗಳು ಶಿವನಿಗೆ ಬೃಹತ್ ದೇವಾಲಯಗಳನ್ನು ನಿರ್ಮಿಸಿದುದೇ ಅಲ್ಲದೆ ಪ್ರತಿದಿನದ ಪೂಜೆಗಾಗಿ ಹಾಗೂ ಕಾಲಕಾಲಕ್ಕೆ ಹಬ್ಬ ಹರಿದಿನಗಳನ್ನು ಆಚರಿಸಲು ಹೇರಳವಾದ ದತ್ತಿಗಳನ್ನು ನೀಡಿದ್ದರು. ಸಾಮಾನ್ಯವಾಗಿ ದೇವಾಲಯಗಳಲ್ಲಿ ಪೂಜೆಮಾಡುವ ಕೆಲಸಕ್ಕೆ ಬ್ರಾಹ್ಮಣರನ್ನು ನೇಮಿಸಲಾಗುತ್ತಿತ್ತು. ವೀರಶೈವ ಧರ್ಮಕ್ಕೆ 'ಷಟ್ಸ್ಥಲ ಸಿದ್ಧಾಂತ' ಎಂದು ಕರೆಯುತ್ತಿದ್ದರು. ಏಕೆಂದರೆ ಶಿವನೇ ಸರ್ವಶ್ರೇಷ್ಠ ದೇವರೆಂದು ಭಾವಿಸಿ ಶಿವನನ್ನು ಲಿಂಗದ ರೂಪದಲ್ಲಿ ಆರಾಧಿಸುತ್ತಿದ್ದರು. ಲಿಂಗವು ಸೃಷ್ಟಿಯ ಮೂಲವಾಗಿತ್ತು. ದೇವನೊಬ್ಬನೆ. ಅವನೇ ಲಿಂಗಸ್ವರೂಪಿ ಮತ್ತು ಮನುಷ್ಯನ ಆಧ್ಯಾತ್ಮಿಕತೆಯ ಮುಖ್ಯ ಉದ್ದೇಶವೇ ಸಾಕ್ಷಾತ್ಕಾರ. ಈ ತತ್ವವು ಆ ಧರ್ಮದ ಸಾರವಾಗಿತ್ತು. ಗುರುಭಕ್ತಿ, ಲಿಂಗಪೂಜೆ, ಜಂಗಮ ಸೇವೆ, ಪಾದೋದಕ ಶುದ್ಧಿ, ಪ್ರಸಾದ, ವಿಭೂತಿಧಾರಣೆ, ರುದ್ರಾಕ್ಷಿಧಾರಣೆ, ಮಂತ್ರಪಠಣ, ಈ ಅಷ್ಟಾವರಣಗಳು ವೀರಶೈವ ಧರ್ಮದಲ್ಲಿ ಪ್ರಮುಖವಾದವು.

ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯವು ಮೈಸೂರಿನಿಂದ ದಕ್ಷಿಣಕ್ಕೆ ೧೫ ಮೈಲಿ ದೂರದಲ್ಲಿದೆ. ಕಪಿಲಾ ನದಿಯ ದಂಡೆಯ ಮೇಲೆ ಈ ದೇವಾಲಯವಿದೆ. ಈ ದೇವಾಲಯವು ೩೮೫ ಅಡಿ ಉದ್ದ, ೧೬೦ ಅಡಿ ಅಗಲವಿದ್ದು ೧೪೭ ಕಂಬಗಳನ್ನೊಳಗೊಂಡಿದೆ. ಮೈಸೂರು ಒಡೆಯಯರು ಈ ದೇವಸ್ಥಾನವನ್ನು ವಿಸ್ತರಿಸಿದರಲ್ಲದೆ ದತ್ತಿಗಳನ್ನು ನೀಡಿದ್ದಾರೆ. ಈ ದೇವಾಲಯವು ಶ್ರೀಕಂಠೇಶ್ವರ ವಿಗ್ರಹವನ್ನೊಳಗೊಂಡಿದ್ದು ಇದನ್ನು 'ನಂಜುಂಡ' ಎಂದೂ ಕರೆಯುತ್ತಾರೆ. ಇಲ್ಲಿ ಅಮ್ಮನವರ ದೇಗುಲ, ಹಲವಾರು ಸಣ್ಣ ದೇವತೆಗಳ ದೇವಾಲಯಗಳು, ಒಡೆಯರ ಅರಸಿಯರ ಹೆಸರುಗಳನ್ನೊಳಗೊಂಡ ಹಲವಾರು ಲಿಂಗಗಳು ಹಾಗೂ ಶಿವಶರಣರ ವಿಗ್ರಹಗಳಿವೆ. ಈ ದೇವಾಲಯವು ಬಹುಸಂಖ್ಯೆಯ ಭಕ್ತಾದಿಗಳನ್ನು ಹೊಂದಿದೆ.

ಚಾಮುಂಡೇಶ್ವರಿ ದೇವಿಯ ಆರಾಧಕರು

ಮೈಸೂರಿನ ಚಾಮುಂಡೇಶ್ವರಿ ದೇವಾಲಯವು 'ಚಾಮುಂಡಿ' ದೇವಿಗೋಸ್ಕರ ಕಟ್ಟಲಾಗಿದೆ. ಈ ಹೆಸರು ಚಂಡ ಮತ್ತು ಮುಂಡ ಎಂಬ ರಾಕ್ಷಸರನ್ನು ದೇವಿ ಕೊಂದಿದ್ದರಿಂದ ಬಂದಿದೆ. ಈ ದೇವಾಲಯವು ಮೈಸೂರಿನ ಆಗ್ನೇಯ ದಿಕ್ಕಿಗೆ ೨೦ ಕಿ.ಮೀ. ದೂರದಲ್ಲಿರುವ ಬೆಟ್ಟದ ಮೇಲಿದೆ. ಮೂಲ ದೇವಾಲಯವು ಕ್ರಿ.ಶ. ೧೬ನೆಯ ಶತಮಾನದಿಂದ ಇದೆ. ಐತಿಹಾಸಿಕ ಪರಂಪರೆಯ ಪ್ರಕಾರ ಕ್ರಿ.ಶ. ೧೫೭೩ರಲ್ಲಿ ಆಗಿನ ರಾಜರಾದಂತಹ ಚಾಮರಾಜ ಒಡೆಯರು ದೇವಿಯ ಪೂಜೆ ಮಾಡುತ್ತಿದ್ದಾಗ ಸಿಡಿಲೊಂದು ಬಡಿದು ಅವರ ಕೂದಲಷ್ಟೇ ಸುಟ್ಟು, ಜೀವಕ್ಕೇನೂ ಅಪಾಯವಾಗಲಿಲ್ಲ. ಇದನ್ನು ಅವರು ದೇವೀ ಕೃಪೆಯೆಂದು ತಿಳಿದರು.

ಈ ದ್ರಾವಿಡ ಶೈಲಿಯ ದೇವಾಲಯಕ್ಕೆ ಗೋಪುರವನ್ನೊಳಗೊಂಡ ಮಹಾದ್ವಾರವನ್ನು ಸ್ಥಾಪಿಸಲು ಕ್ರಿ.ಶ. ೧೬೦೦ರಲ್ಲಿ ರಾಜ ಒಡೆಯರು ನಾಲ್ಕು ಮೂಲೆಗಳಲ್ಲೂ ಕಲ್ಲುಗಳನ್ನು ನಿಲ್ಲಿಸಿದರು. ಅನಂತರ ಮುಮ್ಮಡಿ ಕೃಷ್ಣರಾಜ ಒಡೆಯರು ನಂಜನಗೂಡು ಮತ್ತು ಚಾಮರಾಜನಗರದ ಗೋಪುರಗಳ ರೀತಿಯಲ್ಲೇ ಇಟ್ಟಿಗೆ ಮತ್ತು ಗಾರೆಯಿಂದ ಗೋಪುರವನ್ನು ನಿರ್ಮಿಸಿದರು. ಅಂದಿನಿಂದ ಚಾಮುಂಡೇಶ್ವರಿ ದೇವಿಯು ಮೈಸೂರು ಒಡೆಯರ ಕುಲದೇವತೆಯಾಗಿ ಯಾತ್ರಾರ್ಥಿಗಳನ್ನು ಹಾಗೂ 'ದೇವಾದಾಯ' ದತ್ತಿಗಳನ್ನು ಆಕರ್ಷಿಸಿತು. ಮೈಸೂರಿನ ಒಡೆಯರು ಉದಾರವಾಗಿ ಭೂದತ್ತಿ, ಚಿನ್ನಬೆಳ್ಳಿ ಆಭರಣಗಳನ್ನು, ನಗದನ್ನು ಚಾಮುಂಡೇಶ್ವರಿ ದೇವಿಯ ನಿತ್ಯಪೂಜೆಗೋಸ್ಕರ ನೀಡಿದರು.

ದಾನ

ದಾನ ಎಂದರೆ ಕೊಡುಗೆ. ಮೈಸೂರಿನ ಒಡೆಯರು ವಿಜಯನಗರದ ಸಾಂಸ್ಕೃತಿಕ ಸಂಪ್ರದಾಯಗಳನ್ನು ಮುಂದುವರಿಸಿಕೊಂಡು ಹೋದರು. ಉದಾಹರಣೆಗೆ ಮೈಸೂರಿನಲ್ಲಿ ದಸರಾ ಉತ್ಸವವನ್ನು ಪುನರಾರಂಭಿಸಿದರು. ಇದರ ಜೊತೆಗೆ 'ಬ್ರಹ್ಮದೇಯ' ಗೊತ್ತುವಳಿಗಳನ್ನು ಮತ್ತು ಈ ಪ್ರದೇಶಗಳಲ್ಲಿ ದೇವಾಲಯಗಳ ನಿರ್ಮಾಣ ಜೊತೆಗೆ 'ದೇವಾದಾಯ' ವನ್ನು ಸ್ಥಾಪಿಸಿದರು. ಅವರು ಸಾಂಪ್ರದಾಯಿಕ ವಿದ್ಯಾಭ್ಯಾಸ ಹಾಗೂ ಪೋಷಣೆಗೋಸ್ಕರ ಹಳೆಯ ಅಗ್ರಹಾರಗಳನ್ನು ಜೀರ್ಣೋದ್ಧಾರ ಮಾಡಿದರು.

'ಬ್ರಹ್ಮದೇಯ' ಮತ್ತು 'ದೇವಾದಾಯ' ದಾನಗಳನ್ನು ಮೈಸೂರು ಒಡೆಯರು ಮೇಲುಕೋಟೆಯ ಶ್ರೀವೈಷ್ಣವ ದೇವಾಲಯ, ಶ್ರೀರಂಗಪಟ್ಟಣದ ರಂಗನಾಥಸ್ವಾಮಿ ದೇವಾಲಯ, ನಂಜನಗೂಡಿನ ನಂಜುಂಡೇಶ್ವರ ದೇವಾಲಯ, ಮೈಸೂರಿನ ಚಾಮುಂಡೇಶ್ವರಿ ದೇವಾಲಯ, ತಿರುಪತಿಯ ವೆಂಕಟೇಶ್ವರ ಸ್ವಾಮಿಯ ದೇವಾಲಯ ಹಾಗೂ ಭಾರತ ಮತ್ತು ಕರ್ನಾಟಕದ ಇನ್ನಿತರ ಹಲವಾರು ದೇವಾಲಯಗಳಿಗೆ ನೀಡುತ್ತಿದ್ದರು.

ರಾಜ್ಯದ ಧಾರ್ಮಿಕ ವಿಚಾರಗಳಲ್ಲಿ ಬ್ರಿಟಿಷರು ಯಾವುದೇ ರೀತಿಯಲ್ಲಿ ತಲೆಹಾಕುತ್ತಿರಲಿಲ್ಲ. ದಿವಾನರು ಮತ್ತು ಮೈಸೂರು ರಾಜರುಗಳ ಸಹಾಯದಿಂದ ಧಾರ್ಮಿಕ ಸಂಸ್ಥೆಗಳು ಆರೋಗ್ಯಕರ ಬೆಳವಣಿಗೆಯನ್ನು ಪಡೆದವು.

ತುಲಾಭಾರ ದಾನ

ಮೈಸೂರಿನ ಒಡೆಯರು ದೇವಾಲಯದ ಅಂಗಳಗಳಲ್ಲಿ ತುಲಾಭಾರ ದಾನವನ್ನು ನೀಡುತ್ತಿದ್ದರು. ಅಮೂಲ್ಯ ಮುತ್ತುರತ್ನಗಳು ಮತ್ತು ಲೋಹಗಳನ್ನು ತಮ್ಮ ದೇಹಭಾರದೊಂದಿಗೆ ತೂಗಿ ಬ್ರಾಹ್ಮಣರಿಗೆ ಹಂಚುತ್ತಿದ್ದರು.

ವೈದಿಕ ಆಚರಣೆಗಳು

ಮೈಸೂರು ಒಡೆಯರುಗಳ ಕಾಲದಲ್ಲಿ ವೈದಿಕ ಆಚರಣೆಗಳನ್ನು ಅನುಸರಿಸಲಾಗುತ್ತಿತ್ತು. ಮೈಸೂರಿನ ಒಡೆಯರು ತಮ್ಮ ಆಳ್ವಿಕೆಯುದ್ದಕ್ಕೂ ಬ್ರಾಹ್ಮಣರಿಗೆ ಉದಾರವಾಗಿ ದಾನವನ್ನು ನೀಡುತ್ತಿದ್ದರು. ದಾನವನ್ನು ಪಡೆಯುತ್ತಿದ್ದ ಬ್ರಾಹ್ಮಣರು

ಪವಿತ್ರಗ್ರಂಥಗಳಿಂದ ಪಡೆದಂತಹ ಜ್ಞಾನದಿಂದ ಅದ್ಭುತ ಶಕ್ತಿಗಳನ್ನು ಹೊಂದಿರುವರೆಂದೂ ಮತ್ತು ಅವರು ಮಾಡುವ ಜಪ, ತಪ, ಹೋಮಗಳಿಂದ ನೈಸರ್ಗಿಕ ವಿಕೋಪಗಳನ್ನು ತಡೆಯಬಹುದೆಂದು ಭಾವಿಸಿದ್ದರು. ವಾಜಪೇಯ, ಅಗ್ನಿಸ್ತೋಮ ಮುಂತಾದ ಯಜ್ಞಗಳನ್ನು ಮೈಸೂರು ಒಡೆಯರು ನಡೆಸುತ್ತಿದ್ದರು. ಈ ಸಂದರ್ಭದಲ್ಲಿ ಪುರೋಹಿತ ವರ್ಗಕ್ಕೆ ಉದಾರವಾದ ದಾನಗಳನ್ನು ನೀಡುತ್ತಿದ್ದರು. ಇದರ ಜೊತೆಗೆ ವ್ರತಗಳನ್ನು ಸಹ ಉದಾರವಾಗಿ ಆಚರಿಸುತ್ತಿದ್ದರು.

ಧಾರ್ಮಿಕ ಕಾರ್ಯಗಳು

ಮೈಸೂರು ಒಡೆಯರು ಈ ಕೆಳಗೆ ಕಾಣಿಸಿರುವಂತೆ ಕೆಲವು ಧಾರ್ಮಿಕ ಕಾರ್ಯಗಳನ್ನು ಅನುಸರಿಸುತ್ತಿದ್ದರು.

೧. ಭೂಷಣ ರತ್ನ – ದೇವಾಲಯಗಳಿಗೆ ಕಿರೀಟವನ್ನು ಕೊಡುಗೆ ನೀಡುವುದು.
೨. ಭಕ್ತರತ್ನ – ದೇವಾಲಯಗಳನ್ನು ಕಟ್ಟಿಸುವುದು.
೩. ದೇಶಭಕ್ತ ರತ್ನ – ಚಾಮರಾಜನಗರ ಮತ್ತಿತರ ನಗರಗಳನ್ನು ಸ್ಥಾಪಿಸುವುದು.
೪. ಪ್ರತಿಷ್ಠಾರತ್ನ – ದೇವಾಲಯಗಳ ಗೋಪುರವನ್ನು ಕಟ್ಟಿಸುವುದು.
೫. ಔದಾರ್ಯ ರತ್ನ – ಧರ್ಮಶಾಲೆಗಳನ್ನು ಪವಿತ್ರ ಕ್ಷೇತ್ರಗಳಲ್ಲಿ ಸ್ಥಾಪಿಸುವುದು.
೬. ಜನಹಿತ ರತ್ನ – ಅಣೆಕಟ್ಟು ಮತ್ತು ಸ್ನಾನಘಟ್ಟಗಳನ್ನು ನಿರ್ಮಿಸುವುದು.
೭. ಪ್ರಖ್ಯಾತ ರತ್ನ – ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳನ್ನು ಹೊರಡಿಸುವುದು.
೮. ಭಾಷಾರತ್ನ – ಪವಿತ್ರ ಗ್ರಂಥಗಳ ಭಾಷ್ಯಗಳನ್ನು ಪ್ರಕಟಿಸುವುದು.

ಪೂರ್ವಜರ ಆರಾಧನೆ

ಮೈಸೂರು ಮಹತ್ವದ ಸ್ಥಳವಾಗಿಯೇ ಉಳಿದು ಅಲ್ಲಿನ ಜನ ದೈವಭಕ್ತರಾಗಿದ್ದರು. ದಸರಾ ಉತ್ಸವದ ಸಂದರ್ಭವು ಎಲ್ಲಾ ರೀತಿಯ ಜನರನ್ನು ಒಗ್ಗೂಡಿಸುತ್ತಿತ್ತು. ಇದು ಪೂರ್ವಜರ ಆರಾಧನೆಯ ಸಮಯವಾಗಿತ್ತು.

ದಸರಾ ಮಹೋತ್ಸವ

ದಸರಾ ಹತ್ತು ರಾತ್ರಿಗಳ ಹಬ್ಬವಾಗಿತ್ತು. ಮೈಸೂರಿನಲ್ಲಿ ದಸರಾ ಹಬ್ಬವನ್ನು ಒಂದು ಧಾರ್ಮಿಕ ಹಬ್ಬವಾಗಿ ಸೆಪ್ಟೆಂಬರ್-ಅಕ್ಟೋಬರ್ ತಿಂಗಳಿನಲ್ಲಿ ಆಚರಿಸಲಾಗುತ್ತಿತ್ತು. ದಕ್ಷಿಣ ಭಾರತದಲ್ಲಿ ಮೊದಲ ಒಂಬತ್ತು ದಿನಗಳನ್ನು 'ನವರಾತ್ರಿ' ಎಂದೂ ಹತ್ತನೆಯ ದಿನವನ್ನು 'ವಿಜಯದಶಮಿ' ಎಂದೂ ಕರೆಯುತ್ತಾರೆ. ಒಂಬತ್ತನೆಯ ದಿನವನ್ನು 'ಆಯುಧಪೂಜೆ'ಯ ದಿನವನ್ನಾಗಿ ಆಚರಿಸಿ ಆಯುಧಗಳನ್ನು ಶುಚಿಗೊಳಿಸಿ ಯುದ್ಧದಲ್ಲಿ ವಿಜಯ ಭರವಸೆಯನ್ನು ಕೊಡುವಂತೆ ಪೂಜಿಸಲಾಗುತ್ತಿತ್ತು. ಹತ್ತನೆಯ ದಿನ ರಾಜನು ತನ್ನ ಸೈನ್ಯದೊಡನೆ ವಿಜಯ ಸಾಧನೆಗೋಸ್ಕರ (ಅಂದರೆ ವಿಜಯದಶಮಿ) ಹೊರಡುತ್ತಿದ್ದರು. ಮನೆಗಳಲ್ಲಿ ದುರ್ಗಾ, ಲಕ್ಷ್ಮೀ, ಸರಸ್ವತಿ ಮೊದಲಾದ ದೇವತೆಗಳ ಗೊಂಬೆಗಳನ್ನು ಇಟ್ಟು ಪ್ರದರ್ಶಿಸುತ್ತಿದ್ದರು. ವೈವಿಧ್ಯಮಯವಾದ ಬೊಂಬೆಗಳನ್ನು ಪ್ರತಿಯೊಂದು ಮನೆಗಳಲ್ಲಿ ಜೋಡಿಸಿ

ಪೂಜಿಸುತ್ತಿದ್ದುದರಿಂದ ದಸರಾ ಹಬ್ಬವನ್ನು 'ಬೊಂಬೆಗಳ ಹಬ್ಬ'ವೆಂದು ಕರೆಯುತ್ತಾರೆ. ದಸರಾ ವೇಳೆಯಲ್ಲಿ ಪಟ್ಟದ ಕುದುರೆ, ಪಟ್ಟದ ಹಸು, ಪಟ್ಟದ ಆನೆ ಪೂಜೆ ನಡೆಯುತ್ತಿದ್ದವು. ಅಲ್ಲದೆ ದುರ್ಗಾದೇವಿಯ ರೂಪವಾದ ಚಾಮುಂಡೇಶ್ವರಿ ಅಂದರೆ ಅಂಧಕಾಸುರನ ಸಂಹಾರದಲ್ಲಿ ಶಿವನೊಂದಿಗಿದ್ದ ಪಾರ್ವತಿಯ ಪ್ರತಿರೂಪವನ್ನು ಸಹ ದಸರಾ ಸಂದರ್ಭದಲ್ಲಿ ಪೂಜಿಸುವರು. ಶ್ರೀಮನ್ಮಹಾರಾಜರು ನವರಾತ್ರಿಯ ಮೊದಲ ದಿನದಂದು ಕುಲದೇವತೆಯಾದ ಚಾಮುಂಡೇಶ್ವರಿಗೆ ಮತ್ತು ಗಣೇಶನಿಗೆ ಪೂಜಿಸಿದ ನಂತರ ತಮ್ಮ ಬಲಗೈಗೆ ರೇಷ್ಮೆ ಕಂಕಣವನ್ನು ಧರಿಸುತ್ತಾರೆ ಮತ್ತು ನವಗ್ರಹಗಳ ಪೂಜೆ ಮಾಡಿ, ರಾಜಸಿಂಹಾಸನ ಮತ್ತು ಪಟ್ಟದ ಕತ್ತಿಗೆ ಪೂಜೆಯನ್ನರ್ಪಿಸಿ ಸಿಂಹಾಸನಾರೂಢರಾಗುತ್ತಾರೆ. ದರ್ಬಾರಿನಲ್ಲಿ ನೆರೆದಿದ್ದ ರಾಜ್ಯದ ಪ್ರಮುಖ ಅಧಿಕಾರಿಗಳಿಂದ 'ಮುಜರ್' ಮತ್ತು 'ನಜರ್' ಗಳನ್ನು ಸ್ವೀಕರಿಸುತ್ತಾರೆ. ತದನಂತರ ಪಟ್ಟದ ಆನೆ ಮತ್ತು ಪಟ್ಟದ ಕುದುರೆಗಳು ಗೌರವವನ್ನು ಸಲ್ಲಿಸಿ ಹೊರಡುತ್ತವೆ. ಆಯುಧ ಪೂಜೆಯ ದಿನದಂದು ಚಾಮುಂಡೇಶ್ವರಿಗೆ 'ಚಾಮುಂಡಿಹೋಮ'ವನ್ನು ಮಾಡಿ ಶ್ರೀಮನ್ಮಹಾರಾಜರು ರೇಷ್ಮೆ ಕಂಕಣವನ್ನು ಬಿಚ್ಚುತ್ತಿದ್ದರು. ೧೦ನೆಯ ದಿನದಂದು ರಾಜಮೆರವಣಿಗೆಯು ಅರಮನೆಯಿಂದ ಆರಂಭಗೊಂಡು ಬನ್ನಿಮಂಟಪವನ್ನು ತಲುಪಿದ ಬಳಿಕ ಬನ್ನಿಮರವನ್ನು ಪೂಜಿಸಲಾಗುತ್ತದೆ.

ಇತರ ದೇವಾಲಯಗಳು

ಮೈಸೂರಿನ ಒಡೆಯರು ದಾನಗಳ ಜೊತೆಗೆ ಕಂಚಿನ ದೇವದೇವತೆಗಳ ವಿಗ್ರಹಗಳನ್ನು ಕೊಡುಗೆಯಾಗಿ ಅರಮನೆ ಆವರಣದಲ್ಲಿರುವ ಲಕ್ಷ್ಮೀರಮಣ ದೇವಾಲಯ, ತ್ರಿನಯನೇಶ್ವರ ದೇವಾಲಯ, ಗಣೇಶ ದೇವಾಲಯ, ಆಂಜನೇಯ ದೇವಾಲಯ, ಪ್ರಸನ್ನಕೃಷ್ಣ ದೇವಾಲಯ ಮತ್ತು ಮೇಲುಕೋಟೆ, ಶ್ರೀರಂಗಪಟ್ಟಣ, ಗಂಜಾಂ ಹಾಗೂ ನಂಜನಗೂಡಿನ ದೇವಾಲಯಗಳಿಗೆ ನೀಡಿದ್ದಾರೆ.

ಮೈಸೂರು ಒಡೆಯರು ದೇವತೆಗಳಾದ ಮಾವತ್ತೂರಮ್ಮ, ಮಾಸ್ತಮ್ಮ, ಮೂಗೂರು ತ್ರಿಪುರಸುಂದರಿಯಮ್ಮ ಮೊದಲಾದ ಶಕ್ತಿ ದೇವತೆಗಳನ್ನು ಆರಾಧಿಸುತ್ತಿದ್ದರು.

೧೦ನೆಯ ಚಾಮರಾಜ ಒಡೆಯರು ತಮ್ಮ ಪೂರ್ವಿಕರು ಅನುಸರಿಸುತ್ತಿದ್ದ ಸಂಪ್ರದಾಯಗಳನ್ನು ಮುಂದುವರೆಸಿ ಜನತೆಯ ಕ್ಷೇಮಕ್ಕೋಸ್ಕರ ಎಲ್ಲಾ ಧರ್ಮಗಳನ್ನು ಪೋಷಿಸಿ ದೇವಾಲಯಗಳನ್ನು ಕಟ್ಟಿಸಿ ಪ್ರತಿದಿನದ ಪೂಜೆಗೆ ಅಪಾರವಾದ ದತ್ತಿಗಳನ್ನು ನೀಡುತ್ತಿದ್ದರು. ಇವರು ಮೇಲುಕೋಟೆಯ ದೇವಾಲಯ, ಶ್ರೀರಂಗಪಟ್ಟಣ, ನಂಜನಗೂಡು ಮತ್ತು ಚಾಮುಂಡೇಶ್ವರಿ ದೇವಾಲಯಗಳಿಗೆ ಭೂದತ್ತಿ, ಆಭರಣಗಳು ಮತ್ತು ಬೆಳ್ಳಿಯ ಪಾತ್ರೆಗಳನ್ನು ಕೊಡುಗೆಯಾಗಿ ನೀಡಿದ್ದರು. ಇವರು ಧಾರ್ಮಿಕ ಸಹಿಷ್ಣುತೆಯ ನೀತಿಯನ್ನು ಅನುಸರಿಸಿದರು.

ನಾಲ್ವಡಿ ಕೃಷ್ಣರಾಜ ಒಡೆಯರು ಒಬ್ಬ ಧಾರ್ಮಿಕ ವ್ಯಕ್ತಿಯಾಗಿದ್ದರು. ಇವರು ಭಾರತದ ಪ್ರಮುಖ ಹಿಂದೂ ಪವಿತ್ರ ಕ್ಷೇತ್ರಗಳಿಗೆ ಭೇಟಿ ನೀಡಿದ್ದರು. ಇವರ ಆಳ್ವಿಕೆಯ ಕಾಲದಲ್ಲಿ ಹಿಂದೂಗಳು, ಮುಸಲ್ಮಾನರು, ಜೈನರು ಮತ್ತು ಕ್ರೈಸ್ತರು ಶಾಂತಿಯುತ ಜೀವನ

ನಡೆಸುತ್ತಿದ್ದರು. ಇವರು ದೇವಾಲಯಗಳಿಗೆ ಮತ್ತು ಬ್ರಾಹ್ಮಣರಿಗೆ ಉದಾರವಾಗಿ ಕೊಡುಗೆಗಳನ್ನು ನೀಡಿದ್ದರು. ೧೯೧೮ರಲ್ಲಿ ಇವರು ಅಮರನಾಥಕ್ಕೆ ಭೇಟಿ ನೀಡಿದ್ದರು. ೧೯೨೫ರಲ್ಲಿ ಇವರು ಬದರೀನಾಥ, ಶ್ರೀನಗರ, ಉತ್ತರಾಂಚಲ, ಹಿಮಾಲಯ ಪರ್ವತ ಶ್ರೇಣಿಯ ಘರ್‌ವಾಲ್‌ನಲ್ಲಿರುವ ಶಿವನ ಪವಿತ್ರ ಕ್ಷೇತ್ರವಾದ ಕೇದಾರನಾಥಕ್ಕೆ ಭೇಟಿಕೊಟ್ಟರು. ೧೯೨೫ರಲ್ಲಿ ನೈನಿತಾಲ್‌ಗೆ ಭೇಟಿ ನೀಡಿ ೧೩ ದಿನಗಳಲ್ಲಿ ೧೫೦ ಕಿ.ಮೀ. ದೂರವನ್ನು ಕಾಲ್ನಡಿಗೆಯಲ್ಲಿ ಕ್ರಮಿಸಿದರು. ೧೯೩೧ರಲ್ಲಿ ಜನತೆಯ ಕ್ಷೇಮಕ್ಕೋಸ್ಕರ ಕೈಲಾಸೇಶ್ವರಕ್ಕೆ ಭೇಟಿಕೊಟ್ಟರು.

ಮುಸಲ್ಮಾನರು

ಶ್ರೀರಂಗಪಟ್ಟಣದಿಂದ ಬಂದ ಮುಸ್ಲಿಂ ಸಮುದಾಯದ ಅನುಕೂಲತೆಗೋಸ್ಕರ ಮುಮ್ಮಡಿ ಕೃಷ್ಣರಾಜ ಒಡೆಯರು ಮೈಸೂರಿನಲ್ಲಿ ಜುಮ್ಮಾ ಮಸೀದಿಯನ್ನು ಕಟ್ಟಿಸಿದರು. ಇವರು ಬಡ ಮುಸಲ್ಮಾನರಿಗೋಸ್ಕರ ಲಾಂಗರ್‌ಖಾನ ಎಂಬ ವಸತಿ ವಿಭಾಗವನ್ನು ಸೇರಿಸಿದರು. ಮುಸಲ್ಮಾನರ ಜನಸಂಖ್ಯೆ ವೃದ್ಧಿಯಾದ್ದರಿಂದ ಜುಮ್ಮಾ ಮಸೀದಿಯನ್ನು ದೊಡ್ಡ ಮತ್ತು ಸುಂದರ ಮಸೀದಿಯನ್ನಾಗಿ ಪರಿವರ್ತಿಸಿ ಅದಕ್ಕೆ ಮುಸಾಫರ್‌ಖಾನವನ್ನು ಜೋಡಣೆ ಮಾಡಿದರು. ಮೈಸೂರಿನ ಚಾಮರಾಜ ಜೋಡಿ ರಸ್ತೆಯಲ್ಲಿರುವ ಮೀರ್ ಮಹಮ್ಮದ್ ಮಸೀದಿಯನ್ನು ಪ್ರಾರ್ಥನೆಯನ್ನು ಸಲ್ಲಿಸುವ ಸಲುವಾಗಿ ಮತ್ತು ಶಾಂತಿ ಸಹಬಾಳ್ವೆಯಿಂದ ಜೀವನ ನಡೆಸಲು ಕಟ್ಟಿಸಿದರು.

ಕ್ರೈಸ್ತಧರ್ಮ

ಮೈಸೂರು ನಗರದಲ್ಲಿ 'ಅಬ್ಬೆದುಬ್ಬೆ'ರವರು ರಾಜ್ಯದ ಸಹಯೋಗದೊಂದಿಗೆ ಒಂದು ರೋಮನ್ ಕ್ಯಾಥೋಲಿಕ್ ಮಿಷನ್‌ಅನ್ನು ಸ್ಥಾಪಿಸಿದರು. ೧೯೩೩ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರು ಗೋಥಿಕ್ ಶೈಲಿಯ ಸೇಂಟ್ ಫಿಲೋಮಿನಾ ಚರ್ಚಿನ ಶಿಲಾನ್ಯಾಸವನ್ನು ಮಾಡಿದರು. ಮೈಸೂರಿಗೆ ಬರುವವರನ್ನು ಸ್ವಾಗತ ಮಾಡುವ ಸುಂದರ ಅವಳಿ ಗೋಪುರಗಳುಳ್ಳ ಚರ್ಚಿನ ನಿರ್ಮಾಣವಾಯಿತು. ಈ ಕಾರ್ಯ ಮೊದಲ ಬಿಷಪ್‌ರಾದಂತಹ ಫಾದರ್ 'ಪುಗ' ಮತ್ತು ಮೈಸೂರಿನ ಡಯೋಸಿಸ್‌ನ ಸದಸ್ಯರುಗಳ ಪ್ರಯತ್ನದ ಫಲವಾಗಿತ್ತು. ಈ ಗೋಪುರದ ಎತ್ತರವು ೧೭೫ ಅಡಿಗಳು. ಕ್ರೈಸ್ತರ ಜನಸಂಖ್ಯೆ ಕಡಿಮೆಯಾದರೂ ಒಡೆಯರ ಆಳ್ವಿಕೆಯಲ್ಲಿ ಇತರ ಸಮುದಾಯಗಳೊಂದಿಗೆ ಶಾಂತಿಯುತ ಜೀವನ ನಡೆಸಿದರು.

ಜೈನಧರ್ಮ

ಶ್ರವಣಬೆಳಗೊಳದಲ್ಲಿರುವ ಎರಡು ಶಾಸನಗಳಿಂದ ಚಾಮರಾಜ ಒಡೆಯರ್‌ರವರು ಜೈನರಿಗೆ ಮಾಡಿದ ಸೇವಾಕಾರ್ಯಗಳು ತಿಳಿದುಬರುತ್ತವೆ. ಕೆಲವು ಜೈನ ವರ್ತಕರ ಒತ್ತೆಯಿಂದ ಶ್ರವಣಬೆಳಗೊಳವನ್ನು ಮುಕ್ತಿಗೊಳಿಸಿ, ಮತ್ತೊಮ್ಮೆ ಅವರ ಹಿಡಿತಕ್ಕೆ ಸಿಗದಂತೆ ನೋಡಿಕೊಂಡರೆಂಬ ಬಗ್ಗೆ ಶಾಸನದಲ್ಲಿ ಉಲ್ಲೇಖವಿದೆ. ಈ ಕಾಲದಲ್ಲಿ ಅಳಿವಿನ

ಅಂಚಿನಲ್ಲಿದ್ದ ಜೈನಧರ್ಮಕ್ಕೆ ಇದೊಂದು ಮಹತ್ತರವಾದ ಸೇವೆಯಾಗಿದೆ. ಜಯದೇವನೆಂಬುವವನು ಚಾರುಕೀರ್ತಿ ಪಂಡಿತಾಚಾರ್ಯರನ್ನು ಬೆಳಗೊಳದಿಂದ ಓಡಿಸಿದ. ಆದರೆ ಚಾಮರಾಜರು ಕರುಣೆಯಿಂದ ಚಾರುಕೀರ್ತಿ ಪಂಡಿತಾಚಾರ್ಯರನ್ನು ಅವರ ಸ್ಥಾನಕ್ಕೆ ಪುನರ್‌ಸ್ಥಾಪಿಸಿ ಜಯದೇವನನ್ನು ಹೊರಹಾಕಿದರು.

ಚಿಕ್ಕದೇವರಾಜ ಒಡೆಯರು ತಮ್ಮ ಆಳ್ವಿಕೆಯಲ್ಲಿ ಮಲೆನಾಡನ್ನು ಹೊರತುಪಡಿಸಿ ಸಂಪೂರ್ಣ ಮೈಸೂರು ರಾಜ್ಯವನ್ನು ಹಿಡಿತಕ್ಕೆ ತೆಗೆದುಕೊಂಡರು. ಇದರಲ್ಲಿ ಆಸಕ್ತಿ ತರುವ ವಿಚಾರವೆಂದರೆ ಚಿಕ್ಕದೇವರಾಯರ ರಾಜ್ಯ ವಿಸ್ತರಣೆಯ ಕಾರ್ಯದಲ್ಲಿ ಅವರ ಜೈನಗುರು ಯಳಂದೂರಿನ ವಿಶಾಲಾಕ್ಷಿ ಪಂಡಿತರ ಸಹಾಯ ಪಡೆದುದು ಹಾಗೂ ಚಿಕ್ಕಣ್ಣ ಪಂಡಿತನೆಂಬ ಜೈನ ಸಾಹಿತಿ ವೈದ್ಯ ನಿಘಂಟುಸಾರವನ್ನು ರಚಿಸಿದುದು.

ಹೀಗೆ ಮೈಸೂರು ಒಡೆಯರು ಹಲವಾರು ದೇವಾಲಯಗಳನ್ನು ಕಟ್ಟಿಸಿ ಅವನ್ನು ಪೋಷಿಸಿದರು. ದೇವಾಲಯಗಳಿಗೆ ರಕ್ಷಣೆಯನ್ನು ನೀಡಿದರು. ಜನತೆಯ ಯಾವುದೇ ಪಂಗಡದ ಜನರ ಭಾವನೆಗಳಿಗೆ ಧಕ್ಕೆ ಬಾರದ ರೀತಿಯಲ್ಲಿ ನೋಡಿಕೊಂಡರು. ಇದು ಸಮಾಜದಲ್ಲಿ ಶಕ್ತಿ ಸಮತೋಲನವನ್ನು ಕಾಪಾಡಲು ಸಾಂಪ್ರದಾಯಿಕ ರಾಜ್ಯನೀತಿಯ ಪಾಲನೆಯಾಗಿತ್ತು.

ಆಧಾರ ಗ್ರಂಥಗಳು

೧. ಭಂಡಾರ್ಕರ್ ಆರ್.ಜಿ. – "ವೈಷ್ಣವಿಸಂ, ಶೈವಿಸಂ ಅಂಡ್ ಮೈನರ್ ರಿಲೀಜಿಯಸ್ ಸಿಸ್ಟಂ, ೧೯೩೦
೨. ಹಯವದನರಾವ್ ಸಿ. – 'ಹಿಸ್ಟರಿ ಆಫ್ ಮೈಸೂರು, ಸಂಪುಟ ೩, ಬೆಂಗಳೂರು, ೧೯೪೩-೪೮
೩. ಶಾಮರಾವ್ ಎಂ. – 'ಆಧುನಿಕ ಮೈಸೂರು', ಬೆಂಗಳೂರು, ೧೯೩೬
೪. ಥಾಮ್ಸನ್ ಇ.ಡಬ್ಲು. – "ರಿಲೀಜಿಯಸ್ ಇನ್ ಮೈಸೂರು ಸ್ಟೇಟ್",
ಸಂ. ೧ ಪು. ೧೨೬
೫. ಡಾ. ಎಂ. ಪ್ರಸನ್ನಕುಮಾರ್ – "ದಾನ", ಇನ್ ದಿ ಹಿಸ್ಟರಿ ಆಫ್ ಮೈಸೂರು, ೨೦೦೦, ಮಂಗಳೂರು

ಬರ್ಟ್ರೆಂಡ್ ರಸೆಲ್

ಡಾ. ಎಂ.ಪಿ. ರಮೇಶ್

ಬರ್ಟ್ರೆಂಡ್ ಆರ್ಥರ್ ವಿಲಿಯಮ್ ರಸೆಲ್ ಮಹಾಮಾನವತಾವಾದಿ, ಖ್ಯಾತ ತತ್ವಶಾಸ್ತ್ರಜ್ಞ, ಗಣಿತಜ್ಞ, ಸಮಾಜ ಚಿಂತಕ, ಹೆಸರಾಂತ ಕಾದಂಬರಿಕಾರ, ಅರ್ಥಶಾಸ್ತ್ರಜ್ಞ, ಸೃಜನಶೀಲ ಲೇಖಕ, ವಿಚಾರವಾದಿ, ಶಿಕ್ಷಣತಜ್ಞ, ಅಚಲ ಹೋರಾಟಗಾರ.

ರಸೆಲ್ ೧೮-೦೫-೧೮೭೨ ರಂದು ವೇಲ್ಸ್ ಪ್ರಾಂತದ ಟ್ರೆಲೆಕ್ ಹತ್ತಿರ ರಾವೆನ್‌ಸ್ಕ್ರಾಫ್ಟ್ ಎಂಬಲ್ಲಿ ಜನಿಸಿದರು. ತಂದೆ ವೈಕೌಂಟ್ ಆಂಬರ್ಲಿ, ತಾಯಿ ಕಾಥರೀನ್ ಆಂಬರ್ಲಿ. ರಸೆಲ್‌ಗೆ ಮೂರು ವರ್ಷವಾದಾಗ ತಂದೆ ತಾಯಿಯರನ್ನು ಕಳೆದುಕೊಂಡರು. ರಸೆಲ್ ಅಜ್ಜಿಯ ಆಶ್ರಯದಲ್ಲಿ ಬೆಳೆದರು. ಅಜ್ಜಿಯು ರಸೆಲ್‌ನನ್ನು ಶಾಲೆಗೆ ಕಳುಹಿಸದೆ ಮನೆಯಲ್ಲಿಯೇ ಶಿಕ್ಷಣಕ್ಕೆ ಏರ್ಪಾಟು ಮಾಡಿದರು. ಅವನನ್ನು ಬೇರೆ ಯಾವುದೇ ಹುಡುಗರ ಸಹವಾಸಕ್ಕೂ ಕಳುಹಿಸದೇ ತುಂಬಾ ಜಾಗರೂಕರಾಗಿ ಬೆಳೆಸಿದರು. ಹಾಗಾಗಿ ಅವರು ಏಕಾಂಗಿಯಾಗಿಯೇ ಬೆಳೆದರು. ಚಿಕ್ಕವಯಸ್ಸಿನಿಂದಲೂ ರಸೆಲ್‌ಗೆ ಗಣಿತದ ಬಗ್ಗೆ ತುಂಬಾ ಒಲವು. ಅವನಿಗೆ ಹದಿಮೂರು ವರ್ಷವಾಗುವಾಗಲೇ ಗಣಿತದ ಜ್ಞಾನ ಸಾಕಷ್ಟು ವೃದ್ಧಿಸಿತ್ತು. ರಸೆಲ್ ಮುಂದೆ ೧೮೯೦-೧೮೯೪ ರವರೆಗೆ ಕೇಂಬ್ರಿಡ್ಜ್‌ನ ಟ್ರಿನಿಟಿ ಕಾಲೇಜಿನಲ್ಲಿ ಗಣಿತ ಮತ್ತು ನೀತಿಶಾಸ್ತ್ರಗಳಲ್ಲಿ ವಿದ್ಯಾಭ್ಯಾಸ ಮುಂದುವರೆಸಿದರು. ಅಲ್ಲಿದ್ದ ಅವಧಿಯಲ್ಲಿಯೇ ತತ್ವಶಾಸ್ತ್ರದಲ್ಲಿಯೂ ಆಸಕ್ತಿ ಬೆಳೆಯಿತು. ರಸೆಲ್ ೧೮೯೪ರಲ್ಲಿ ಗಣಿತ ಮತ್ತು ನೀತಿಶಾಸ್ತ್ರಗಳಲ್ಲಿ ಪ್ರಥಮ ದರ್ಜೆಯಲ್ಲಿ ಪದವಿ ಪಡೆದರು. ಮುಂದೆ ಗಣಿತದಲ್ಲಿ ರ್‍ಯಾಂಗ್ಲರ್ ಆದರು ಮತ್ತು ತತ್ವಶಾಸ್ತ್ರದಲ್ಲಿ ಪ್ರತಿಭಾನ್ವಿತರೆಂಬ ಮನ್ನಣೆ ಪಡೆದರು. ರಸೆಲ್‌ರವರ ವಿದ್ಯಾಭ್ಯಾಸ ಮುಗಿದ ಬಳಿಕ ಅವರು ಪ್ಯಾರಿಸ್‌ನ ಬ್ರಿಟಿಷ್ ರಾಯಭಾರ ಕಾರ್ಯಾಲಯದಲ್ಲಿ ಕಾರ್ಯ ನಿರ್ವಹಿಸಿದರು. ಅಲ್ಲಿಂದ ಜರ್ಮನಿಗೆ ಹೋಗಿ ಅರ್ಥಶಾಸ್ತ್ರ ಮತ್ತು ರಾಜ್ಯಶಾಸ್ತ್ರ ವಿಷಯಗಳಲ್ಲಿ ಲಂಡನ್ ಸ್ಕೂಲ್ ಆಫ್ ಇಕಾನಮಿಕ್ಸ್ ಸಂಸ್ಥೆಯಲ್ಲಿ ಉಪನ್ಯಾಸಕರಾದರು. ಅಲ್ಲಿ ಅವರ 'ಜರ್ಮನ್ ಸೋಷಿಯಲ್ ಡೆಮಾಕ್ರಸಿ' ಎಂಬ ಕೃತಿಯು ೧೮೮೬ರಲ್ಲಿ ಪ್ರಕಟವಾಯಿತು. ಅನಂತರ ತಮ್ಮ ' ಎನ್ ಎಸ್ಸೇ ಅನ್ ದಿ ಫೌಂಡೇಷನ್ಸ್ ಆಫ್ ಜಾಮಿಟ್ರಿ' ಎಂಬ ಪ್ರೌಢ ಪ್ರಬಂಧಕ್ಕೆ ಟ್ರಿನಿಟಿಯ ಫೆಲೋಷಿಪ್ ಪಡೆದರು. ಮುಂದೆ ೧೯೦೦ ರಲ್ಲಿ 'ದಿ ಫಿಲಾಸಫಿ ಆಫ್ ವೈಟ್ನಿಸ್', ೧೯೦೩ರಲ್ಲಿ 'ದಿ ಪ್ರಿನ್ಸಿಪಲ್ಸ್ ಆಫ್ ಮ್ಯಾಥೆಮ್ಯಾಟಿಕ್ಸ್' ಪ್ರಕಟಗೊಂಡವು. ಈ ಗ್ರಂಥವನ್ನು ಎ.ಎನ್.ವೈಟ್‌ಹೆಡ್ ಅವರೊಂದಿಗೆ ಕೂಡಿ ೧೯೧೦ ರಲ್ಲಿ ಪರಿಷ್ಕಾರ ಮಾಡಿ 'ಪ್ರಿನ್ಸಿಪಿಯ ಮ್ಯಾಥೆಮ್ಯಾಟಿಕ' ಎಂದು ಮೂರು ಸಂಪುಟಗಳನ್ನು

ಹೊರತಂದರು. ಇದು ಅಂದು ಹೆಚ್ಚು ಮನ್ನಣೆಗಳಿಸಿತು. ಅವರು ೧೯೦೮ರಲ್ಲಿ ರಾಯಲ್ ಸೊಸೈಟಿಗೆ ಸೇರಿದರು. ಅದೇ ವೇಳೆಯಲ್ಲಿ ಟ್ರಿನಿಟಿಯ ಕಾಲೇಜಿನಲ್ಲಿ ಉಪನ್ಯಾಸಕರಾದರು. ೧೯೧೦ರಲ್ಲಿ 'ಫಿಲಾಸಫಿಕಲ್ ಎಸ್ಸೇಸ್' ಎಂಬ ಗ್ರಂಥವನ್ನು ಹೊರತಂದರು. ' ಎ ಹಿಸ್ಟರಿ ಆಫ್ ವೆಸ್ಟರನ್ ಫಿಲಾಸಫಿ' ಎಂಬ ಅವರ ಶ್ರೇಷ್ಠ ಕೃತಿಯು ೧೯೪೫ರಲ್ಲಿ ಪ್ರಕಟಿತವಾಯಿತು. ಅವರು ಸಾಮಾಜಿಕ ಹಾಗೂ ಮಾನವಿಕ ವಿಜ್ಞಾನಗಳಿಗೆ ಸಂಬಂಧಿಸಿದಂತೆ ಎಪ್ಪತ್ತಕ್ಕಿಂತ ಹೆಚ್ಚು ಗ್ರಂಥಗಳನ್ನೂ ನೂರಾರು ಲೇಖನಗಳನ್ನೂ ಹೊರತಂದಿದ್ದಾರೆ. ಅವರ ಮಹಾಸಾಧನೆಯಿಂದ ತತ್ವಶಾಸ್ತ್ರಕ್ಕೆ ಒಂದು ಮೆರಗು ಬಂದಿತು.

ರಸೆಲ್‌ರು ಸಾಹಿತಿಗಳೊಂದಿಗೆ, ಅರ್ಥಶಾಸ್ತ್ರಜ್ಞರೊಂದಿಗೆ, ಚಿತ್ರಕಾರರೊಡನೆ ನಾನಾ ವಿಷಯಗಳ ಬಗ್ಗೆ ಚರ್ಚಿಸುತ್ತಿದ್ದ ಕಾರಣ ಅವರನ್ನು 'ಲಂಡನ್ನಿನ ಬ್ಲೂಮ್ಸ್‌ಬರಿ ಗ್ರೂಪ್' ಎಂದು ಹೇಳುತ್ತಿದ್ದರು. ಅವರು ನೀತಿ, ನಡವಳಿಕೆ, ಚಿಂತನೆಗಳಲ್ಲಿ ಸಾಂಪ್ರದಾಯಿಕ ರೀತಿಗಿಂತ, ವೈಯಕ್ತಿಕ ಆಲೋಚನೆಯಿಂದ ಮೂಡಿಬಂದ ಜೀವನರೀತಿಗೆ ಹೆಚ್ಚು ಪ್ರಾಮುಖ್ಯ ನೀಡುವವರಾಗಿದ್ದರು. ರಸೆಲ್‌ರು ಹಿಂದಿನಿಂದ 'ಸ್ಕೆಪ್ಟಿಕ್' ಯಾವುದನ್ನೂ ಒಪ್ಪಿಕೊಳ್ಳುವ ವ್ಯಕ್ತಿಯಾಗಿರಲಿಲ್ಲ. ಎಲ್ಲವನ್ನೂ ಪ್ರಶ್ನೆ ಮಾಡುತ್ತಿದ್ದರು. ಅವರು ಆಜ್ಞೇಯತವಾದಿಯಾಗಿದ್ದರಿಂದ ಅವರ ಮಕ್ಕಳನ್ನು ಅದೇ ವಾತಾವರಣದಲ್ಲಿ ಬೆಳೆಸಿದರು. ಅವರು ಮಹಾ ಮಾನವತಾವಾದಿಯಾಗಿದ್ದರು. ಆದ್ದರಿಂದಲೇ ಯುದ್ಧದ ವಿರುದ್ಧ ನಿಂತರು. ಅವರ 'ಮ್ಯಾರೇಜ್ ಅಂಡ್ ಮಾರೆಲ್ಸ್' ಕೃತಿಗೆ ನೋಬೆಲ್ ಪ್ರಶಸ್ತಿ ಸಂದಿದೆ. 'ಎ ಹಿಸ್ಟರಿ ಆಫ್ ವೆಸ್ಟರ್ನ್ ಫಿಲಾಸಫಿ' ಕೃತಿಯು ಹೊರಬಂದ ನಂತರ ರಸೆಲ್‌ರ ಕೀರ್ತಿ ಎಲ್ಲಾ ಕಡೆಯೂ ಹರಡಿತು. ಅಂದಿನ ದಿನಗಳಲ್ಲಿ ಅವರು ಬಿ.ಬಿ.ಸಿ.ಗೆ ಉಪನ್ಯಾಸಗಳನ್ನು ನೀಡುತ್ತಿದ್ದ ಕಾರಣ ಅವರ ಘನತೆಯನ್ನು ಸಾಮಾನ್ಯ ಜನರಲ್ಲಿಯೂ ತಿಳಿಯುವಂತಾಯಿತು.

ಅವರು ಬ್ರಿಟಿಷ್ ಸರಕಾರದಿಂದ ಮೊದಲ್ಗೊಂಡು ವಿವಿಧ ಸಂಘಸಂಸ್ಥೆಗಳಿಂದಲೂ ಗೌರವಕ್ಕೆ ಪಾತ್ರರಾದರು. ಅವರು ಎಂಬತ್ತನೆಯ ಇಳಿವಯಸ್ಸಿನಲ್ಲಿ ಎಡಿಸನ್‌ಫಿಂಚ್ ಎಂಬಾಕೆಯನ್ನು ವಿವಾಹವಾದರು. ರಸೆಲ್‌ರವರು ಅವರ ಜೀವನಕ್ಕೆ ಸಂಬಂಧಿಸಿದಂತೆ ಮೂರು ಸಂಪುಟಗಳಲ್ಲಿ ಯಾವ ಮುಚ್ಚುಮರೆಯಿಲ್ಲದೆ ಅವರ ಜೀವನ ವೃತ್ತಾಂತವನ್ನು ಎಳೆಎಳೆಯಾಗಿ ಬಿಡಿಸಿದ್ದಾರೆ. ರಸೆಲ್‌ರು ಸಮಾಜವಾದಿ ಎಂಬುದು ಅವರ ವ್ಯಕ್ತಿತ್ವದಲ್ಲಿಯೇ ಅಡಗಿತ್ತು. ಅವರು ತಮ್ಮ ಜೀವನಕ್ಕೆ ಪಿತ್ರಾರ್ಜಿತ ಆಸ್ತಿಯನ್ನು ನಂಬಿದವರಲ್ಲ. ಅವರ ಕಾಲ ಮೇಲೆ ಅವರು ನಿಂತವರು. ರಸೆಲ್ ಸಮಾಜವಾದಿ ಮನೋಭಾವದವರಾದ್ದರಿಂದ ಅವರ ಆಸ್ತಿಯನ್ನೆಲ್ಲ ವಿವಿಧ ಉದ್ದೇಶಗಳಿಗೆ ಬಳಸಲು ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯದಂತಹ ಸಂಸ್ಥೆಗಳಿಗೆ ದತ್ತಿಗಳನ್ನು ನೀಡಿದರು. ಅವರ ಜೀವನ ಸರಳವಾಗಿತ್ತು.

ಅವರಿಗೆ ೧೯೫೫ರಲ್ಲಿ ಪಿಯರ್ಸ್ ಎನ್‌ಸೈಕ್ಲೋಪೀಡಿಯಾ ಬಹುಮಾನ ದೊರೆಯಿತು. ೧೯೫೮ರಲ್ಲಿ ವಿಜ್ಞಾನವನ್ನು ಜನಪ್ರಿಯಗೊಳಿಸಿದ ಕಾರಣಕ್ಕೆ ಕಳಿಂಗ ಪ್ರಶಸ್ತಿ ಬಂದಿತು. ೧೯೬೦ರಲ್ಲಿ ಯೂರೋಪ್, ೧೯೬೩ರಲ್ಲಿ ಜರ್ಮನಿ ಮತ್ತು ಅಮೆರಿಕಾ ಸರಕಾರಗಳು ನಾನಾ ರೀತಿಯ ಪ್ರಶಸ್ತಿಗಳನ್ನು ನೀಡಿ ಗೌರವಿಸಿವೆ. ರಸೆಲ್‌ಗೆ ಎಷ್ಟು ಗೌರವ

ಪ್ರಶಸ್ತಿಗಳಿತ್ತೋ ಅಷ್ಟೇ ವಿರೋಧವೂ ಇತ್ತು. ಏಕೆಂದರೆ ಸರಕಾರದ ಆಡಳಿತವನ್ನು ವಿರೋಧಿಸಿ ಅನೇಕ ಲೇಖನಗಳನ್ನು ಬರೆಯುತ್ತಿದ್ದರು. ಅವರು ದಿನಕ್ಕೆ ಮೂರು ಸಾವಿರಕ್ಕೂ ಹೆಚ್ಚು ಪದಗಳ ಬರವಣಿಗೆಯನ್ನು ಮಾಡುತ್ತಿದ್ದರು.

ರಸೆಲ್‌ರವರ ಬರವಣಿಗೆಯು ಮಾನವ ಕಲ್ಯಾಣದ, ಕಷ್ಟನಿವಾರಣೆ ಮತ್ತು ಸೌಖ್ಯವರ್ಧನೆಗಳ ಬಗ್ಗೆ ಚಿಂತನೆಗಳಾಗಿದ್ದವು. ಅವರು "ಅಣುಯುಗದಲ್ಲಿ ಜೀವಿಸುವುದು" ಎಂಬ ವಿಷಯದ ಬಗ್ಗೆ ಮಾಡಿದ ಪ್ರಸಾರ ಭಾಷಣಗಳು, "ಮುಂದೆ ಬದಲಾಗುತ್ತಿರುವ ಜಗತ್ತಿಗಿರುವ ಹೊಸ ಭರವಸೆಗಳು" ಎಂಬ ಪುಸ್ತಕವಾಗಿ ಪ್ರಕಟವಾಯಿತು. ಈ ಪುಸ್ತಕದಲ್ಲಿ, ಇಂದಿನ ಮನುಷ್ಯನ ಮುಂದೆ ಎದುರಾಗುವ ಮೂರು ಸಂಘರ್ಷಗಳ ಬಗೆಯನ್ನು ರಸೆಲ್‌ರವರು ಚರ್ಚಿಸಿದ್ದಾರೆ. ಅವು, ಮಾನವ-ಪ್ರಕೃತಿಗಳ ನಡುವಣ ಸಂಘರ್ಷ, ಮಾನವನು ಇತರ ಮಾನವರೊಂದಿಗೆ ಎದುರಿಸುವ ಸಂಘರ್ಷ ಮತ್ತು ಮಾನವ ತನ್ನೊಡನೆಯೇ ಎದುರಿಸಬೇಕಾದ ಸಂಘರ್ಷ. ಅಂದಿನ ಕಾಲದಲ್ಲಿಯೇ ರಸೆಲ್‌ರವರು ಶಿಕ್ಷಣತಜ್ಞರಾಗಿದ್ದರೆಂಬುದಕ್ಕೆ ಅವರ ಶೈಕ್ಷಣಿಕ ಬರಹಗಳೇ ಸಾಕ್ಷಿಯಾಗಿವೆ. ಮಗುವಿನ ಶಿಕ್ಷಣಕ್ಕೆ ಸಂಬಂಧಿಸಿದಂತೆ ೧. ಮಗುವಿನ ವ್ಯಕ್ತಿತ್ವವನ್ನು ರೂಪಿಸುವಿಕೆ, ೨. ಅದರ ಬೌದ್ಧಿಕ ಬೆಳವಣಿಗೆ. ಈ ಎರಡು ಅಂಶಗಳು ಮುಖ್ಯವೆಂದು ಹೇಳಿದ್ದಾರೆ. ಇದಲ್ಲದೆ ಮಗುವಿನ ಆದರ್ಶವನ್ನು ರೂಪಿಸಲು ನಾಲ್ಕು ಮುಖ್ಯ ಕಾರಣಗಳನ್ನು ನೀಡಿದ್ದಾರೆ. ಚೈತನ್ಯ, ಧೈರ್ಯ, ಸಂವೇದನಾಶೀಲತೆ, ಬುದ್ಧಿಶಕ್ತಿ. ಈ ಅಂಶಗಳು ಮಗುವನ್ನು ಉತ್ತಮ ರೀತಿಯಲ್ಲಿ ಬೆಳೆಸಲು ಹಿರಿಯರು ಅನುಸರಿಸಬೇಕಾದ ಮಾರ್ಗಗಳು ಎಂದಿದ್ದಾರೆ.

ರಸೆಲ್‌ರವರು ಮಗುವನ್ನು ಮುಂದೆ ವಿಶ್ವಪ್ರಜೆಯಾಗುವಂತೆ ಮಾಡುವ ಹೊಣೆಗಾರಿಕೆ ಪೋಷಕರಲ್ಲಿರಬೇಕೆಂದು ಹೇಳಿದ್ದಾರೆ. ಮಗು ಚಿಕ್ಕಂದಿನಿಂದಲೂ ವಿಶಾಲ ದೃಷ್ಟಿಗೆ ಒಳಗಾಗುವಂತೆ ಮಾಡಬೇಕು ಮತ್ತು ಮಕ್ಕಳ ಬೌದ್ಧಿಕವೃದ್ಧಿಗೆ ನೈಸರ್ಗಿಕದ ಅರಿವನ್ನು ಪಡೆಯುವಂತೆ ಪ್ರೇರೇಪಿಸಬೇಕೆಂದು ಸಲಹೆಯಿತ್ತಿದ್ದಾರೆ. ಹಾಗೆಯೇ ರಸೆಲ್‌ರವರು ಉನ್ನತ ವ್ಯಾಸಂಗದಲ್ಲೂ ಅನುಸರಿಸಬೇಕಾದ ನಿಯಮಗಳನ್ನು ಹೇಳುತ್ತಾ ಅಲ್ಲಿ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳೆಲ್ಲರೂ ಜ್ಞಾನ ಸಂಪಾದನೆ ಮತ್ತು ಸಂಶೋಧನೆಗಳಲ್ಲಿ ಹೆಚ್ಚಿನ ರೀತಿಯಲ್ಲಿ ತೊಡಗಿಸಿಕೊಳ್ಳಬೇಕೆಂದು ಸಲಹೆಯಿತ್ತಿದ್ದಾರೆ.

ಬರ್ಟ್ರೆಂಡ್ ರಸೆಲ್ ಅದಮ್ಯ ಹೋರಾಟಗಾರರಾಗಿದ್ದು, ವ್ಯಕ್ತಿ ಸ್ವಾತಂತ್ರ್ಯದ ಉಳಿವಿಗಾಗಿ ಮತ್ತು ಮಾನವಕುಲದ ಶ್ರೇಯಸ್ಸಿಗಾಗಿ ಕೊನೆತನಕ ಹೋರಾಡಿದ ಮಹಾವ್ಯಕ್ತಿ. ಮಾನವನ ಬದುಕು ಹಸನಾಗಬೇಕು, ಈ ಜೀವನವು ಸುಖಪ್ರದವಾಗಬೇಕು. ಮಾನವನ ಶ್ರೇಯೋಭಿವೃದ್ಧಿಗೆ ನೆರವಾಗಬೇಕೆಂದು ಅವರ ಅದಮ್ಯ ಆಸೆ.

ಪಾಶ್ಚಾತ್ಯ ದಿಗ್ಗಜಗಳ ದೃಷ್ಟಿಯಲ್ಲಿ ಸತ್ಯಾನ್ವೇಷಣೆ

ಎಂ. ಅನುಸೂಯ

ಸತ್ಯಾನ್ವೇಷಣೆ, ಸತ್ಯ ಸಾಪೇಕ್ಷವೇ ತತ್ವಶಾಸ್ತ್ರದ ಜೀವಾಳ. ಈ ಜಗತ್ತು, ಜಗತ್ತಿನ ವೈವಿಧ್ಯಮಯ ಆಕಾರ-ವಿಕಾರಗಳು, ವರ್ಣಿಸಲು ಅಸಾಧ್ಯವಾದ ವೈಚಿತ್ರ್ಯಗಳು, ಅರ್ಥವಾಗುವ ಮತ್ತು ಅರ್ಥವಾಗದ ನೂರಾರು ವಿಸ್ಮಯಗಳು. ಈ ವಿಸ್ಮಯ ವೈಚಿತ್ರ್ಯಗಳ ಹಿಂದಿರುವ ಶಕ್ತಿ ಯಾವುದು ? ಈ ಮಹಾನಾಟಕದ ಹಿನ್ನೆಲೆ ಮತ್ತು ಅರ್ಥ ಏನು ? ಎಂಬುದರ ಬಗ್ಗೆ ಪೌರ್ವಾತ್ಯ ಮತ್ತು ಪಾಶ್ಚಾತ್ಯ ಎಂಬ ಎರಡು ದಿಕ್ಕುಗಳಲ್ಲೂ ಬಹಳ ಹಿಂದಿನಿಂದಲೂ ಸತತವಾದ ಅನ್ವೇಷಣೆ ನಡೆಯುತ್ತಾ ಬಂದಿದೆ.

ವಿಶ್ವದ ಈ ನಿಗೂಢತೆಯನ್ನು ಅರಿಯುವ ಮೊದಲ ಪ್ರಯತ್ನ ಪ್ರಥಮವಾಗಿ ಭಾರತದಲ್ಲಿ ನಡೆಯಿತು ಎನ್ನಬಹುದು. ಉಪನಿಷತ್ತಿನ ಶ್ವೇತಾಶ್ವತರೋಪನಿಷತ್ತಿನ ಒಂದು ಶ್ಲೋಕದಲ್ಲಿ ವಿಶ್ವಸೃಷ್ಟಿಯ ಕಾರ್ಯಕಾರಣ, ಸೃಷ್ಟಿಯ ವೈಚಿತ್ರ್ಯ, ಜೀವನದ ಮೂಲ ಹಾಗೂ ಉದ್ದೇಶ, ಮೃತ್ಯುವಿನ ನಂತರ ಮಾನವನ ಅಸ್ತಿತ್ವ ಇತ್ಯಾದಿ ಮೂಲ ಸಮಸ್ಯೆಗಳ ಬಗ್ಗೆ ಉಲ್ಲೇಖವಿದೆ.

"ಬ್ರಹ್ಮವಾದಿನೋ ವದಂತಿ
ಕಿಂ ಕಾರಣಂ ಬ್ರಹ್ಮಕುತಃಸಂಜಾತಾ
ಜೀವಾಮ ಕೇನ ಕ್ವಚಸಂಪ್ರತಿಷ್ಠಾಃ
ಅಧಿಷ್ಠಿತಾಃ ಕೇನ ಸುಖೇತರೇಷು
ವರ್ತಾಮಹೇ ಬ್ರಹ್ಮವಿದೋ ವ್ಯವಸ್ಥಾಮ್"

ಅನೇಕ ಶತಮಾನಗಳ ಅನಂತರ ಸಾಕ್ರಟಿಸ್, ಪ್ಲೇಟೋ ಮತ್ತಿತರ ತತ್ವಜ್ಞಾನಿಗಳು ಸಮಾಜದಲ್ಲಿ ಮಾನವನ ಸ್ಥಾನಮಾನವೇನು ? ಅವನ ಕರ್ತವ್ಯಗಳೇನು ? ಮತ್ತು ಮಾನವನ ನೈಜ ಸ್ವರೂಪವೇನು ? ಎಂಬ ಮಾನವ ಪ್ರಧಾನ ವಿಷಯಗಳ ಬಗ್ಗೆ ಚಿಂತನೆ ನಡೆಸಿದರು. ಜಗತ್ತಿನ ವಿವಿಧೆಡೆಗಳಲ್ಲಿ ನಡೆದ ಈ ರೀತಿಯ ತಾತ್ವಿಕ ಚಿಂತನೆಗಳು ನಾನಾ ಮುಖವಾದರೂ ಇವುಗಳೆಲ್ಲದರ ಭಾವನೆಗಳು "ಅಖಂಡತ್ವದ ನಿತ್ಯಸತ್ಯತೆಯೆಡೆಗೆ" ಕೈಮಾಡಿ ತೋರಿಸುತ್ತಿವೆ. ಆದ್ದರಿಂದ ಸ್ವಯಂ ಪ್ರಜ್ಞೆಯುಳ್ಳ ಜಾಗೃತ ಶಕ್ತಿಯೇ ಇವುಗಳೆಲ್ಲದರ ಕೇಂದ್ರಬಿಂದು. "ಸತ್ ಚಿತ್ ಆನಂದ" ಎಂದು ವೇದಾಂತ ದರ್ಶನದಲ್ಲಿ ಕರೆದರೆ ತತ್ವಜ್ಞಾನಿಯಾದ ಪ್ಲೇಟೋ ಈ ವಿಶ್ವದ ಅರ್ಥವು 'ಪರಮಶ್ರೇಯ' ಅಥವಾ ಒಳ್ಳೆಯದರ ಸಾಕ್ಷಾತ್ಕಾರದಲ್ಲಿದೆ ಎಂದಿದ್ದಾರೆ.

ಜಗತ್ತಿನ ಹಾಗೂ ಮಾನವನ ಬದುಕಿನ ಅರ್ಥವನ್ನು ತಿಳಿದುಕೊಳ್ಳಲು ನಡೆಸಿದ ಸತತವಾದ ಪ್ರಯತ್ನ ಮಾನವ ಜೀವಿತದಷ್ಟೇ ಪುರಾತನವಾದುದು. ಸತ್ಯದ ಅನ್ವೇಷಣೆಯಲ್ಲಿ ಪಾಶ್ಚಾತ್ಯ ಚಿಂತಕರಿಗೂ ಬಹಳ ಮಹತ್ತರವಾದ ಸ್ಥಾನವಿದೆ. ಮಹಾತತ್ವಜ್ಞಾನಿಗಳಾದ ಹೆಗಲ್, ವೈಟ್‌ಹೆಡ್ ಮೊದಲಾದವರ ಸತ್ಯ ವಸ್ತುವಿನ ತಿಳಿವಳಿಕೆಯು 'ಜ್ಞಾನಸಾಗರಕ್ಕೆ' ವಿಶಿಷ್ಟ ಕಾಣಿಕೆ ನೀಡಿದ್ದಾರೆ. ವೈದಿಕತತ್ವದಷ್ಟೇ ಸಾರ್ವಕಾಲಿಕವಾಗಿದೆ. ಇವು ಜ್ಞಾನದ ವಿವಿಧ ಮಜಲುಗಳ ಪರಿಚಯವನ್ನು ಮಾಡಿಕೊಡುತ್ತವೆ. ವಿಷಯಗಳ ಸ್ಪಷ್ಟ ವಿವೇಚನೆ, ನ್ಯಾಯಬದ್ಧವಾದ, ತರ್ಕಬದ್ಧವಾದ, ವಾದಸರಣಿ – ಇತ್ಯಾದಿಗಳ ದೃಷ್ಟಿಯಿಂದ ಅಮೂಲ್ಯವಾದುದಾಗಿದೆ. ಅಷ್ಟೇ ಅಲ್ಲ, ಸತ್ಯದ ಅನ್ವೇಷಕನ ಮನಸ್ಸನ್ನು ಪರಿಶುದ್ಧಗೊಳಿಸಿ ಮೇಲೆತ್ತುವುದರಲ್ಲಿ ಸಂಶಯವಿಲ್ಲ.

ಆದರೆ ಪಾಶ್ಚಾತ್ಯರು ಸತ್ಯದ ಅನ್ವೇಷಣೆಯಲ್ಲಿ ಅನುಸರಿಸುವ ಮಾರ್ಗ ಪೌರ್ವಾತ್ಯಕ್ಕಿಂತಲೂ ವಿಭಿನ್ನವಾದುದು. ಆದರೆ ಪೌರ್ವಾತ್ಯರಾದರೂ ಅಂತಃಸ್ಫೂರ್ತಿ ಅಂತಃದೃಷ್ಟಿ ಇಲ್ಲದೆ ಸತ್ಯದ ಸಾಕ್ಷಾತ್ಕಾರ ಅಸಾಧ್ಯವೆಂದು ನಂಬಿದ್ದರೆ, ಬುದ್ಧಿಶಕ್ತಿಯ ಜ್ಞಾನದ ಎಲ್ಲೆಯನ್ನು ದಾಟಿನೋಡಲು ಪಾಶ್ಚಾತ್ಯರು ಸಿದ್ಧರಿಲ್ಲ. "ತರ್ಕಸಮ್ಮತವಾದಕ್ಕೆ" ಇವರು ಬಹಳ ಹೆಸರಾದವರು.

ಪರಮತತ್ವದ ಶೋಧನೆಯಲ್ಲಿ ಪಾಶ್ಚಾತ್ಯರ ಪ್ರಯತ್ನಕ್ಕೆ ಪ್ರಥಮ ತಿರುವಿತ್ತ ಕೀರ್ತಿ ಕಾಂಟ್‌ನದು. ಕಾಲ ಮತ್ತು ದೇಶದ ಮಿತಿಗೆ ಮಾನವನ ಇಂದ್ರಿಯಗಳು ಒಳಪಟ್ಟಿರುವುದರಿಂದ ಸತ್ಯವಸ್ತುವನ್ನು ನೋಡುವುದು ಮಾನವನಿಗೆ ಅಸಾಧ್ಯ. ಮಾನವನ ಮನಸ್ಸು ಗುಣ, ಪರಮಾಣು, ವರ್ಗಗಳ ಸೀಮಿತ ಕ್ಷೇತ್ರದಲ್ಲಿ ಕೆಲಸ ಮಾಡುವುದರಿಂದ ಮಾನವನ ತರ್ಕ ಮತ್ತು ಬುದ್ಧಿಶಕ್ತಿಗಳು ಪರಮತತ್ವವನ್ನು ಅರಿಯಲು ಅಸಮರ್ಥವೆಂದು ಸ್ಪಷ್ಟಪಡಿಸಿದನು. ಲೋಕೋತ್ತರ ವಸ್ತುಗಳನ್ನು ತಿಳಿಯಲು, ನೋಡಲು ಸಹಾಯಕವಾಗುವಂತಹ ಇಂದ್ರಿಯಗಳು, ಮಾನವನಿಗೆ ಯಾವುದೂ ಇಲ್ಲ. ಆದುದರಿಂದ ದೇಶ, ಕಾಲ, ಭಾವನೆಗಳು ಮುಂತಾದ ಸೀಮಿತ ವರ್ಗಗಳಿಗೆ, ಮಿತಿಗಳಿಗೆ, 'ಮೀರಿದ' ಅವುಗಳ ಹಿಡಿತಕ್ಕೆ ಒಳಗಾದ ಸ್ವತಂತ್ರ "ಬೌದ್ಧಿಕ ಅಂತರ್‌ಜ್ಞಾನದ" ಶಕ್ತಿ ಮಾನವನಿಗೆ ಕೊಡಲ್ಪಟ್ಟಿದ್ದರೆ ಸತ್ಯದ ಅರಿವನ್ನು ಮಾಡಿಕೊಳ್ಳಬಹುದಾಗಿತ್ತು ಎಂಬ ಅಭಿಪ್ರಾಯವನ್ನು ಕಾಂಟ್ ವ್ಯಕ್ತಪಡಿಸುತ್ತಾನೆ.

ದೇವರ ಅಸ್ತಿತ್ವದ ಬಗ್ಗೆ ಸಂಶಯವನ್ನು ವ್ಯಕ್ತಪಡಿಸುವುದಿಲ್ಲ. ಆದರೆ ಸೀಮಿತ ಸಾಮರ್ಥ್ಯವುಳ್ಳ ಇಂದ್ರಿಯಗಳ ಮೂಲಕ ದೇವರನ್ನು ಅರಿಯುವುದು ನೋಡುವುದು ಅಸಾಧ್ಯವೆಂದು, ಮಾನವರಲ್ಲಿ ಮೂಡುವ ಪರಿಪೂರ್ಣತೆಯ ಅಪೇಕ್ಷೆ, ನೈತಿಕ ಆಕಾಂಕ್ಷೆಗಳ ತಳದಲ್ಲಿ ದೈವತ್ವ 'ಸ್ವಯಂವೇದ್ಯ' ಎಂದು ಕಾಂಟ್ ಅಭಿಪ್ರಾಯಪಡುತ್ತಾನೆ.

ಪ್ರಪಂಚದ ಮತ್ತೊಬ್ಬ ಅದ್ವಿತೀಯ ಚಿಂತಕನೆಂದರೆ ಹೆಗಲ್. ಆತನ ದೃಷ್ಟಿಕೋನ ವೈಶಾಲ್ಯ ಅಲೌಕಿಕವಾದುದು. ಇಡೀ ವಿಶ್ವವನ್ನು ಅನಿರ್ಬಂಧಿತ ಸಂಪೂರ್ಣ ಏಕಮೇವಾ ಪರಿಪೂರ್ಣತೆಯ ಎಲ್ಲೆಯೊಳಗೆ ಅಳವಡಿಸಲು ಪ್ರಯತ್ನಿಸಿದ್ದಾನೆ. ವಿಶ್ವದಲ್ಲಿರುವ ಪ್ರತಿಯೊಂದು ಮಾರ್ಗಕ್ಕೂ ವಿರೋಧವಾದ ಪ್ರತಿ ವರ್ಗಗಳಿವೆ. ಪ್ರತಿಯೊಂದು

ಪ್ರತಿಪಾದನೆಗೂ ಪ್ರತಿಯಾದ ವಿರೋಧ ಪ್ರತಿಪಾದನೆಯಿದೆ. ಏಕೆಂದರೆ ಇಲ್ಲಿರುವ ಎಲ್ಲಾ ಭಾಗಗಳು ಹಾಗೂ ಎಲ್ಲಾ ಅಂಶಗಳೂ ಕೂಡ ಪರಿಪೂರ್ಣತೆಯನ್ನು ಪಡೆದಿವೆ.

ಪ್ರತಿಪಾದನೆ ಹಾಗೂ ಪ್ರತಿರೋಧಗಳು ಪರಮತತ್ವದಲ್ಲಿ ಐಕ್ಯಗೊಳ್ಳುತ್ತವೆ. ಹೀಗೆ ಹೆಗಲ್‌ನಿಂದ ಈ ತಾರ್ಕಿಕ ಭಾವವಾದವು ಪ್ರತಿಪಾದಿಸಲ್ಪಟ್ಟಿತು. ಅಲ್ಲದೆ ಅತ್ಯಂತ ಪರಿಪೂರ್ಣ ಸ್ಥಿತಿಯಾದ ಪರಮ ಸತ್ಯವನ್ನು ತಲುಪುವವರೆಗೂ ಮುಂದುವರೆಯುತ್ತದೆ. ಪ್ರತಿಯೊಂದು ವಸ್ತುವೂ ಅಪೂರ್ಣ ಹಾಗೂ ಅತೃಪ್ತವಾಗಿದ್ದು ಆ ಪ್ರತಿಯೊಂದು ಅವಸ್ಥೆಯಲ್ಲೂ 'ನಿತ್ಯಸತ್ಯದ' ವಿವಿಧ ಅವಸ್ಥೆ ಆಗಿದೆಯೆಂಬುದು ಹೆಗಲ್ ತಾತ್ವಿಕನ ಅನಿಸಿಕೆಯಾಗಿದೆ. ಎಲ್ಲ ವಸ್ತುಗಳು ಮತ್ತು ಎಲ್ಲಾ ಜೀವಿಗಳೂ ಪರಮಾತ್ಮನ ಅಂಶವೇ ಆಗಿದ್ದು ಐಕ್ಯತೆಯಿಂದ ಒಗ್ಗೂಡುತ್ತವೆ. ಹಾಗಾಗಿ ದ್ವೇಷ, ಯುದ್ಧ, ಮತ್ಸರ, ಈರ್ಷ್ಯೆ ಮೊದಲಾದುವನ್ನು ದೂರೀಕರಿಸಿ ಸಮಸ್ಥಿತಿಯಲ್ಲಿ ಪ್ರೇಮವನ್ನು ಬಿತ್ತುತ್ತದೆ.

ಹೆಗಲ್‌ನ ಈ ಸಾಪೇಕ್ಷ ಸಿದ್ಧಾಂತವನ್ನು ವಿಜ್ಞಾನಿ ಹಾಗೂ ತಾತ್ವಿಕನಾದ ವೈಟ್‌ಹೆಡ್ ಸಮಗ್ರರೀತಿಯಲ್ಲಿ ತಾತ್ವಿಕ ದರ್ಶನವನ್ನು ನೂತನ ರೀತಿಯಲ್ಲಿ ಮುಂದುವರಿಸಿದ್ದಾನೆ. ನಿರೀಶ್ವರವಾದಿಗಳ ಮಧ್ಯದಲ್ಲಿದ್ದು ಈಶ್ವರವಾದವನ್ನು ಪ್ರಬಲವಾಗಿ ಮಂಡಿಸಿ ತನ್ನ ಅಪೂರ್ವವಾದಗಳಿಂದ ಪ್ರಖ್ಯಾತನಾಗಿದ್ದಾನೆ.

ವಿಶ್ವದ ಸೃಷ್ಟಿ, ವಿಕಾಸ ಇವಕ್ಕೆ ಪ್ರೇರಕ ಶಕ್ತಿ ಅಮರವಾದ ಭಾವಾತ್ಮಕ ಕೇಂದ್ರಗಳಾಗಿದ್ದು, ಅವುಗಳೇ ಎಲ್ಲಾ ಕ್ರಿಯೆಗಳಿಗೂ ಮೂಲ ಪ್ರೇರಣೆಯಾಗಿದೆ. ಇವು ಹೊಸದಾಗಿ ಹುಟ್ಟುತ್ತಿರಬಹುದು ಅಥವಾ ಲಯಗೊಳ್ಳುತ್ತಿರಬಹುದು. ಯಾವುದೂ ಶೂನ್ಯದಿಂದ ಅಸ್ತಿತ್ವಕ್ಕೆ ಬರದೆ ಈ ಚಿರಂತನವಾದ ಭಾವಾತ್ಮಕ ಕೇಂದ್ರಗಳಿಂದ ಬರುತ್ತದೋ ಅದು ಬರುವಾಗ ಬೇಕಾದುದ್ದನ್ನು ಆಯ್ದು ಬೇಡವಾದುದ್ದನ್ನು ನಿಷೇಧಿಸುವ ಸ್ವಾತಂತ್ರ್ಯವನ್ನು ಪಡೆದಿರುವುದಲ್ಲದೆ ಪೂರ್ಣವಾಗಿ ಸಂಸರ್ಗಿಸುವ ಅಂಶಗಳನ್ನು ಸಂವೇದನೆಗೊಳಿಸುತ್ತದೆ. ಈ ಬೇಕು – ಬೇಡಗಳನ್ನು ನಿರ್ಧರಿಸುವುದು ಅರಿವಿಲ್ಲದೆ ಅಜ್ಞಾತವಾಗಿ ನಡೆಯುತ್ತದೆ. ಇವು ಸ್ವಯಂ ಪ್ರೇರಕಶಕ್ತಿಯಲ್ಲ. ಇದಕ್ಕೆ ಆಧಾರಭೂತವಾದ ಮೂಲ ಪ್ರೇರಕ ಭಾವಾತ್ಮಕ ಕೇಂದ್ರಬಿಂದು ಇರಲೇಬೇಕು. ಇಲ್ಲವಾದಲ್ಲಿ ಸೃಷ್ಟಿಯೆಲ್ಲವೂ ಉದ್ದೇಶರಹಿತವಾಗಿ ಅಥವಾ ಕಾರಣಹೀನವಾದ ಆಕಸ್ಮಿಕವೆನಿಸುತ್ತದೆ ಎಂದು ಈಶ್ವರನ ಆಧಾರವನ್ನು ಸಿದ್ಧಗೊಳಿಸುತ್ತಾನೆ. ಈ ಕಾರ್ಯ ಮಾತ್ರ ಅವಿರತ ಅವಿಚ್ಛಿನ್ನವಾಗಿ ನಡೆಯುತ್ತಲೇ ಇರುತ್ತದೆ. ಆದ್ದರಿಂದ ಈ ಆಧಾರಭೂತ ಅಮರಶಕ್ತಿಗೆ 'ದೇವರು' ಎಂದು ಹೆಸರಿಸುತ್ತಾನೆ. ಇತರದರಿಂದ ಹುಟ್ಟುವ ಭಾವಾತ್ಮಕ ಕೇಂದ್ರಗಳು ಅನಿತ್ಯವಾದರೂ ಅವುಗಳ ಮೂಲದಿಂದ ಸಾಮಗ್ರಿಯನ್ನು ಪಡೆದು ಮೂರ್ತಗೊಳ್ಳುವ ಕ್ರಿಯೆಗೆ "ಕಾಂಕ್ರಿಸೆನ್ಸ್" ಎಂದು ಹೆಸರಿಸುತ್ತಾನೆ. ಹೀಗೆ ವರ್ಗಾಯಿಸಲ್ಪಡುವ ಭಾವಾಂಶಗಳನ್ನು ಸಂಸರ್ಗ ಭಾವಗಳು ನೂತನ ರೂಪವನ್ನು ಪಡೆಯಬಲ್ಲವು. ಇವುಗಳ ಬಗ್ಗೆ ಹೀಗೆ ಪ್ರೇರಕವಾಗುವ ಅಂಶಗಳ ಬಗ್ಗೆ ವಿವರ ಕೊಡುತ್ತಾ ಕೆಂಪಿನ ಅಸ್ತಿತ್ವದ ಉದಾಹರಣೆ ನೀಡುತ್ತಾನೆ. ಕೆಂಪಿನ ಸಾಧ್ಯತೆ ಇರಬೇಕಾದರೆ ಅದಕ್ಕೊಂದು ತಾತ್ವಿಕ ಮೂಲನೆಲೆಗಟ್ಟು ಇರಲೇಬೇಕು. ಈಗ ನಾವೆಷ್ಟು ಸೂರ್ಯಚಿತ್ರವನ್ನು ರಚಿಸಬೇಕಾದರೆ ಅದಕ್ಕೆ ಪ್ರೇರಕವಾದ ಮೂಲ ಆಧಾರಭೂತ ಸತ್ಯವಾದ ಅಥವಾ

ಅಸ್ತಿತ್ವದಲ್ಲಿರುವ ಸೂರ್ಯನನ್ನು ನೋಡಿರಲೇಬೇಕು. ಆದ್ದರಿಂದಲೇ ಇಲ್ಲಿ ಪ್ರತಿಬಿಂಬವನ್ನು ರಚಿಸಲು ಸಾಧ್ಯವಾಗುತ್ತದೆ. ಭಾವನಾಕೇಂದ್ರಗಳಿಗೆ ಒಂದು ವೈಶಿಷ್ಟ್ಯ ಮೂಲಭೂತ ಭಾವನಾ ಕೇಂದ್ರ ಇರಲೇಬೇಕು ಎಂದು ಪ್ರತಿಪಾದಿಸುತ್ತಾನೆ. ಅದರಂತೆ ಎಲ್ಲಾ ಕ್ರಿಯೆಗೂ ರಚನಾತ್ಮಕ ಕಾರ್ಯಕ್ಕೂ ಮೂಲ ಪ್ರೇರಕ ಭಾವನಾಕೇಂದ್ರ ಇರಲೇಬೇಕು ಎಂಬುದೇ ಇವನ ವಾದದ ತಿರುಳಾಗಿದೆ. ಅದು ಬಹುಮಟ್ಟಿಗೆ ಮೂಲಭೂತ ಅಂಶಗಳನ್ನೂ ಹೋಲುವಂತಹ ಪರಂಪರೆ ಅಂಶಗಳನ್ನು ಮೈಗೂಡಿಸಿಕೊಂಡಿರುತ್ತದೆ. ಹೀಗೆ ಸತತವಾಗಿ ಪ್ರಕಟವಾಗುವ ತಾತ್ವಿಕ ಸಾಧ್ಯತೆಗಳಿಗೊಂದು ಸ್ಥಿರವಾದ ನೆಲೆ ಅಗತ್ಯ. ದೇವರೆ ತನ್ನ ಆದಿಸ್ವರೂಪದಲ್ಲಿ (Primordial nature) ಇನ್ನೂ ಅಸ್ತಿತ್ವಕ್ಕೆ ಬಾರದ ಧ್ಯೇಯರೂಪದಲ್ಲಿನ Ideal formನಲ್ಲಿ ನೆಲೆಯಾಗಿರುತ್ತದೆ ಎಂದು ತಾತ್ವಿಕ ಸಾಧ್ಯತೆಗಳನ್ನೂ external object ಎಂದು ಮೂಲ ಭಾವನಾತ್ಮಕ ಕೇಂದ್ರದಲ್ಲಿ ಅವುಗಳ ವಾಸ್ತವಿಕ ಪ್ರಕಟಣೆಯನ್ನು Ingression ಎಂದು ಹೆಸರಿಸುತ್ತಾನೆ.

ಹೀಗೆ ಸ್ವೀಕಾರಾರ್ಹವಾಗಿ, ವಾಸ್ತವಿಕವಾಗಿ ಪ್ರಕಟಗೊಳ್ಳುವಾಗ ಪೂರ್ವಭಾವಿಯಾದ ಅಂಶಗಳನ್ನು ಸ್ವೀಕರಿಸುವುದರೊಡನೆ ಕೆಲವು ಅಂಶಗಳಲ್ಲಿ ಮಾರ್ಪಾಡುಗಳನ್ನು ಮಾಡಿಕೊಂಡರೂ ಮೂಲಭೂತ ಅಂಶಗಳಲ್ಲಿ ಪೂರ್ತಿಯಾದ ಸಾಧ್ಯತೆಗಳಿರುವುದಿಲ್ಲ. ಮೂಲಭೂತ ಅಂಶಗಳು ಹೋಲಿಕೆಯನ್ನು ಉಳಿಸಿಕೊಂಡು ಚಿಕ್ಕಪುಟ್ಟ ಬದಲಾವಣೆ ಇರಬಹುದೇ ವಿನಃ ಪೂರ್ಣ ಕೆಂಪು ಬೇರೆಯಾಗಿಯೇ ಹಳದಿಯ ಸಾಧ್ಯತೆಯನ್ನು ಅಲ್ಲಗಳೆಯುತ್ತದೆ. ಹೀಗೆ ರಚನಾತ್ಮಕ ಮಾರ್ಪಾಡುಗಳು ಕಂಡುಬಂದರೂ ಮೂಲಭೂತ ಅವಸ್ಥೆಯಲ್ಲಿ ಒಂದು ಕ್ರಮಬದ್ಧತೆ, ಬೇಡವಾದುದ್ದನ್ನು ನಿರಾಕರಿಸುವ ಸ್ವಾತಂತ್ರ್ಯ ಪಡೆದು ಚಿರನೂತನ ಹುಟ್ಟು ಪಡೆಯುತ್ತದೆ. ಈ ಅರ್ಥದಲ್ಲಿ ನವೀನತೆಗೂ Noveltyಗೂ ದೇವರು ಕಾರಣೀಭೂತನಾಗಿರುತ್ತಾನೆ. ಇದು ಇವನ ವಿಶಿಷ್ಟ ದೃಷ್ಟಿ.

ಇನ್ನೂ ಕೆಲವು ವಿಶೇಷಾಂಶಗಳನ್ನು ವೈಟ್‌ಹೆಡ್‌ನ ತತ್ವಜ್ಞಾನದಲ್ಲಿ ಕಾಣಬಹುದಾಗಿದೆ. ಅದೆಂದರೆ ಭಾವನಾತ್ಮಕ ಕೇಂದ್ರವು ಕೆಲವು ಸ್ವೀಕರಿಸಿದ ಅನುಭವಗಳನ್ನು ಪೂರ್ಣವಾಗಿ ಮುಂದುವರೆಸಿಕೊಂಡು ಹೋಗದೆ ಅಲ್ಪಾಂಶವನ್ನು ಮುಂದುವರೆಸಿದರೂ ಕೆಲವಂಶ ನಾಶ ಹೊಂದುತ್ತದೆ. ಕೆಲವಂಶ ನವೀನವೆನಿಸುವಾಗ ಕೆಲವಂಶ ಸಾಯುವುದು ಅನಿವಾರ್ಯವಾಗುತ್ತದೆ. ಪತಂಗದ ಜೀವನ ಕ್ರಮದಲ್ಲಿ ಗಂಡು ಹೊಸ ಸೃಷ್ಟಿಗೆ ಕಾರಣವಾದೊಡನೆ ಮೃತ್ಯು ಅನಿವಾರ್ಯವೆಂಬಂತೆ. ಆದರೆ ಬರಿಯ ಸಾವಲ್ಲ. ಅದು ಕೆಲವು ಮೌಲ್ಯಗಳನ್ನು ಚಿರಂಜೀವಿಯಾಗುವಂತೆ ಮಾಡಿಯೇ ಮರಣ ಹೊಂದುತ್ತದೆ. ಅದರ ಮೌಲ್ಯ ನಿತ್ಯವಾಗಿ ಉಳಿಯುತ್ತದೆ. ಹೀಗೆ ನಿತ್ಯವಾಗಿ ಉಳಿಯುವುದು ಕೂಡ ದೇವರ ಮತ್ತೊಂದು ಸ್ವರೂಪದಲ್ಲಿ ಉಳಿಯುವ ಇದನ್ನು ವೈಟ್‌ಹೆಡ್ 'ಪರಿಣಾಮ ಸ್ವರೂಪ' ಎಂದು ಕರೆದಿದ್ದಾನೆ. ಹೀಗೆ ಜಗತ್ತಿನಲ್ಲಿ ಪ್ರತಿಯೊಂದು ಘಟನೆಯು ಪರಿಣಾಮ ಸ್ವರೂಪದಲ್ಲಿ ಅಲ್ಪಶಃ ನಾಶವಾಗಿದ್ದರೂ ಮೂಲಸ್ವರೂಪದಲ್ಲಿ ಶಾಶ್ವತವಾಗುತ್ತದೆ. ಹೀಗೆ ಭಾವನಾ ಕೇಂದ್ರಗಳು ಬದಲಾವಣೆ ಸ್ವಲ್ಪ ನಾಶ ಹೊಂದಿದ್ದರೂ ಮೌಲ್ಯಗಳನ್ನು ಉಳಿಸಿ ಪರಿಣಾಮ ಸ್ವರೂಪದಲ್ಲಿ ಉಳಿದರೂ ಸುಪ್ತವಾಗಿ ಹಳೆಯ ಸಾಮಗ್ರಿಗಳನ್ನು ಸುರಕ್ಷಿತವಾಗಿ ರಕ್ಷಿಸಿ

ಸಂವಹನಗೊಳಿಸುವುದು ದೇವರ ಪ್ರಮುಖ ಕಾರ್ಯಗಳಲ್ಲಿ ಒಂದೆಂದು ವೈಟ್‌ಹೆಡ್ ಭಾವಿಸುತ್ತಾನೆ ಹಾಗೂ ವಿಶ್ವದ ಪೂರ್ವಭಾವಿ ಅಂಶಗಳನ್ನು ಮುಂಬರುವ ವಿಶ್ವರಚನೆಗಾಗಿ ಕಾದಿರಿಸುವುದು ಅವನ ಕಾರ್ಯದಲ್ಲೊಂದು ಎಂದು ವೈಟ್‌ಹೆಡ್ ಮನಗಂಡಿದ್ದಾನೆ.

ಹೀಗೆ ವೈಟ್‌ಹೆಡ್ ಭಾವಾತ್ಮಕ ಕೇಂದ್ರಗಳ ಉತ್ಪತ್ತಿ, ಸಂವಹನ, ಸಂಸ್ಕರಣ, ಜನನ- ನಾಶ, ಮೌಲ್ಯೀಕರಣ- ಸತ್ಯತೆ ಇವುಗಳಿಂದ ದೈವಿಕ ಸತ್ಯವನ್ನು ಕಂಡಿದ್ದಾನೆ ಮತ್ತು ದೇವರು ಪೂರ್ಣನಲ್ಲ. ಇನ್ನೂ ಹೊಸ ಹೊಸ ಪ್ರಾಯೋಗಿಕ ಯುಗದಲ್ಲಿಯೂ ಕ್ಷಣಕ್ಷಣದಲ್ಲೂ ಈ ಸತ್ಯ ನಾನಾರೂಪ, ಪರಿವರ್ತನೆ, ಪರಿಣಾಮ ಇವನ್ನು ಹೊಂದುವ ಬಾಹ್ಯರೂಪಕ್ಕೆ ಕಾರಣವಾದ ನಿತ್ಯ, ಶಾಶ್ವತ ಸತ್ಯಗಳ ಬೆಳಕಾಗಿರುತ್ತದೆ. ಆದ್ದರಿಂದ ವೈಟ್‌ಹೆಡ್ ದೇವರಿಗೂ ವಿಶ್ವಕ್ಕೂ ಇರುವ ಅತಿ ನಿಕಟ ಸಂಬಂಧವನ್ನು 'ದೇವರ ಪರಿಣಾಮ' ಎಂದಿದ್ದಾರೆ.

ಈ ಸಂಚಿಕೆಯ ಲೇಖಕರು

೧ ಎನ್. ಬಾಲಸುಬ್ರಹ್ಮಣ್ಯ
೧೫೫೨, ವಾಣೀವಿಲಾಸ ರಸ್ತೆ
ಮೈಸೂರು-೫೭೦ ೦೦೪

೨ ಡಾ. ಎಚ್. ಜಯಕುಮಾರ
ಉಪನ್ಯಾಸಕರು,
ವಿದ್ಯಾವರ್ಧಕ ಕಾನೂನು ಕಾಲೇಜು
ಮೈಸೂರು-೫೭೦ ೦೦೧

೩ ಪ್ರೊ. ಗೀತಾ ನಾವಲ್
ಕನ್ನಡ ವಿಭಾಗ,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ

೪ ಪ್ರೊ. ಅಂಬಳಿಕೆ ಹಿರಿಯಣ್ಣ
ಜಾನಪದ ವಿಭಾಗ,
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು-೫೭೦ ೦೦೬

೫ ಡಾ. ಆರ್. ರಾಮಕೃಷ್ಣ
ಪ್ರವಾಚಕ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು-೫೭೦ ೦೦೬

೬ ಡಾ. ಅಕ್ಕಮಹಾದೇವಿ
ಸಂಶೋಧನ ಸಹಾಯಕಿ,
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ,
ಮೈಸೂರು-೫೭೦,೦೦೬

೭ ಡಾ. ಬಿ.ವಿ. ವಸಂತಕುಮಾರ್
ಹಿರಿಯ ಶ್ರೇಣಿ ಕನ್ನಡ ಉಪನ್ಯಾಸಕ,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಕಡೂರು-೫೭೭ ೫೪೮, ಚಿಕ್ಕಮಗಳೂರು ಜಿಲ್ಲೆ

೮ ಎಚ್.ಟಿ. ಸರೋಜ
೧೧೪, ಕೆಸರೆ ಮೂರನೆಯ ಹಂತ,
ಆರ್.ಎಸ್. ನಾಯ್ಡು ನಗರ
ಮೈಸೂರು-೫೭೦ ೦೦೭

೯ ಡಾ. ಬಿ.ಕೆ. ಸುವರ್ಣಾದೇವಿ
೫೨೭, ೧೫ನೆಯ ಮುಖ್ಯ ರಸ್ತೆ,
ಸರಸ್ವತೀಪುರಂ, ಮೈಸೂರು-೫೭೦ ೦೦೯

೧೦ ಡಾ. ಎನ್. ಸರಸ್ವತಿ
ಪ್ರವಾಚಕರು, ಇತಿಹಾಸ ವಿಭಾಗ
ಮಾನಸಗಂಗೋತ್ರಿ, ಮೈಸೂರು-೫೭೦ ೦೦೬

೧೧ ಡಾ. ಎಂ.ಪಿ. ರಮೇಶ್
ಉಪನ್ಯಾಸಕರು, ತತ್ವಶಾಸ್ತ್ರ ಸ್ನಾತಕೋತ್ತರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ-೫೮೦ ೦೦೩

೧೨ ಎಂ. ಅನುಸೂಯ
ಸಂಶೋಧನಾ ವಿದ್ಯಾರ್ಥಿನಿ, ತತ್ವಶಾಸ್ತ್ರ ವಿಭಾಗ
ಮಾನಸಗಂಗೋತ್ರಿ, ಮೈಸೂರು-೫೭೦ ೦೦೬

ಕೆ.ಸಂ. ೮೧೭೭ - ಎಂ.ಯು.ಪಿ.ಎಂ. - ೨೦೦ ಪ್ರತಿಗಳು - ೧೬-೮-೨೦೦೪